ಗುರುವಾರ, ಫೆಬ್ರುವರಿ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 46 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಂಖ್ಯೆ-ಸುದ್ದಿ
ಅಡುಗೆ ಎಣ್ಣೆ ಬಳಕೆ ಕುಸಿಯುತ್ತಿದೆಯೇ?

ಚಿನ್ನದ ದರ ₹750, ಬೆಳ್ಳಿ ₹1,400 ಇಳಿಕೆ 11
ಕನ್ನಡ: ನೌಕರರಿಗೆ ವೇತನ ಬಡ್ತಿಗೆ ಸೂಚನೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,822 ▲	21,840 ▲	₹63,500 (ಬೆಂಗಳೂರು) ▼	₹71,100 (ಬೆಂಗಳೂರು) ▼	83.02 ▲

ವಿಧಾನ ಪರಿಷತ್ತಿನ ಜಂಟಿ ಪರಿಶೀಲನಾ ಸಮಿತಿಯಿಂದ 27 ಶಿಫಾರಸು

ಮತ್ತೆ ರೈತಸ್ನೇಹಿ ಎಪಿಎಂಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಗೆ ತಂದಿದ್ದ ತಿದ್ದುಪಡಿಯಿಂದಾಗಿ ಕಳೆಗುಂದಿದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಗಳಿಗೆ ಮರುಜೀವ ನೀಡುವ ಸಾಧ್ಯತೆ ಬಹುತೇಕ ನಿಚ್ಚಳವಾಗಿದೆ. ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ ವಿಧಾನ ಪರಿಷತ್ ರಚಿಸಿದ್ದ ಪರಿಶೀಲನಾ ಸಮಿತಿಯ ವರದಿಯನ್ನು ಬುಧವಾರ ಸದನದಲ್ಲಿ ಮಂಡಿಸಲಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಪ್ರಾಂಗಣಗಳ ಸುಧಾರಣೆ, ರೈತಸ್ನೇಹಿ ಮಾರುಕಟ್ಟೆ ವ್ಯವಸ್ಥೆ, ಕೈಗಾರಿಕೆಗಳಿಗೆ ಪೂರಕವಾದ ಕೆಲವು ನೀತಿಗಳ ಅನುಸರಣೆ ಸೇರಿದಂತೆ 27 ಶಿಫಾರಸುಗಳನ್ನು ಸಮಿತಿ ಮಾಡಿದೆ. ಕಾಯ್ದೆ ತಿದ್ದುಪಡಿಗೆ ವಿರೋಧಿಸಿದ್ದ ಬಿಜೆಪಿ, ಜೆಡಿಎಸ್ ಸದಸ್ಯರೂ ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಮಸೂದೆಗೆ ಒಪ್ಪಿಗೆ ನೀಡಿರುವುದಾಗಿಯೂ ವರದಿ ಉಲ್ಲೇಖಿಸಿದೆ. ಹೀಗಾಗಿ, ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತರುವ ದಾರಿ ಈಗ ತೆರೆದುಕೊಂಡಂತಾಗಿದೆ.

ರೈತರಿಗೆ ಸಂಬಂಧಿಸಿದ ಮೂರು ಪ್ರಮುಖ ಕಾಯ್ದೆಗಳಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತಿದ್ದುಪಡಿ ತಂದಿತ್ತು.

10ನೇ ಪುಟ ನೋಡಿ

ಪ್ರಮುಖ ಶಿಫಾರಸುಗಳು

- ರೈತರೇ ಸಂಘಟಿತರಾಗಿ ಕೃಷಿ ಮಾರುಕಟ್ಟೆ ಪ್ರಾಂಗಣದ ಒಳಗೆ ನೇರವಾಗಿ ಮಾರಾಟ–ಖರೀದಿ ಮಾಡಲು ಪ್ರೋತ್ಸಾಹಿಸಬೇಕು. ರೈತ ಉತ್ಪಾದಕ ಸಂಘಗಳಿಗೆ ಅವಕಾಶ ಕಲ್ಪಿಸಬೇಕು
- ಮಾರುಕಟ್ಟೆ ಪ್ರಾಂಗಣದ ವಹಿವಾಟು ಹೆಚ್ಚಿಸಲು ಪ್ರೋತ್ಸಾಹದಾಯಕ ಕ್ರಮಗಳನ್ನು ಕೈಗೊಳ್ಳುವ ಮೂಲಕ ಮಾರುಕಟ್ಟೆ ಹೊರಗಿನ ವಹಿವಾಟನ್ನು ಗಣನೀಯವಾಗಿ ತಗ್ಗಿಸಬೇಕು. ಅದಕ್ಕಾಗಿ ಉಪ ಮಾರುಕಟ್ಟೆಗಳ ಸಂಖ್ಯೆ ಹೆಚ್ಚಿಸಬೇಕು. ದುರ್ಬಲ ಎಪಿಎಂಸಿಗಳನ್ನು ಇತರೆ ಮಾರುಕಟ್ಟೆಗಳ ಒಳಗೆ ವಿಲೀನ ಮಾಡಬೇಕು
- ಎಪಿಎಂಸಿ ಒಳಗಿನ ಆಸ್ತಿಗಳಿಗೆ ಸ್ಥಳೀಯ ಸಂಸ್ಥೆಗಳು ವಿಧಿಸುವ ತೆರಿಗೆ ಹೊರೆ ತಪ್ಪಿಸಲು ಮುನ್ಸಿಪಲ್ ಕಾಯ್ದೆಗೆ ತಿದ್ದುಪಡಿ ತರಬೇಕು. ಆಸ್ತಿಗಳ ವರ್ಗೀಕರಣ ಮಾಡಿ ಕಡಿಮೆ ಆಸ್ತಿ ತೆರಿಗೆ ನಿಗದಿ ಮಾಡಬೇಕು
- ರೈತರಿಂದ ನೇರವಾಗಿ ಭತ್ತ ಖರೀದಿಸುವ ಅಕ್ಕಿ ಗಿರಣಿ ಘಟಕಗಳನ್ನು ಎಪಿಎಂಸಿಯ ಉಪ ಮಾರುಕಟ್ಟೆ ಎಂದು ಪರಿಗಣಿಸಬೇಕು. ಪರವಾನಗಿ ಪಡೆದ ಎಪಿಎಂಸಿ ಹೊರಗಿನ ಅಧಿಸೂಚಿತ ಉತ್ಪನ್ನಗಳ ಸಂಸ್ಕರಣಾ ಘಟಕಗಳಿಗೆ ಶುಲ್ಕ ರಿಯಾಯಿತಿ ನೀಡಬೇಕು
- ಎಪಿಎಂಸಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ತ್ವರಿತಗತಿಯಲ್ಲಿ ಸಿಬ್ಬಂದಿ ನೇಮಕ ಮಾಡಬೇಕು. ವಿಳಂಬವಾದಲ್ಲಿ ಮೀಸಲಾತಿ, ಅರ್ಹತೆ ಆಧಾರದಲ್ಲಿ ಹೊರಗುತ್ತಿಗೆ ಸಿಬ್ಬಂದಿ ನೇಮಿಸಬೇಕು
- ವ್ಯವಹಾರದ ಪಾರದರ್ಶಕತೆ, ತ್ವರಿತ ನಿರ್ವಹಣೆಗಾಗಿ ಮಾರುಕಟ್ಟೆಯ ಎಲ್ಲ ಚಟುವಟಿಕೆಗಳನ್ನೂ ಆನ್‌ಲೈನ್ ಮೂಲಕವೇ ನಡೆಸಬೇಕು
- ಮಾರುಕಟ್ಟೆಗಳ ಮೂಲಸೌಕರ್ಯ ಅಭಿವೃದ್ಧಿಗೆ ಪ್ರತ್ಯೇಕ ನಿಧಿ ಸ್ಥಾಪಿಸಬೇಕು. ಸರ್ಕಾರ ಆರ್ಥಿಕ ಸಹಾಯ ಒದಗಿಸಬೇಕು. ಇಡೀ ಮಾರುಕಟ್ಟೆ ವ್ಯವಸ್ಥೆಯನ್ನು ಪುನರ್‌ರಚಿಸಬೇಕು
- ಬೇಡಿಕೆ ಆಧಾರದ ಮೇಲೆ ಹೊಸ ಗೋದಾಮುಗಳನ್ನು ನಿರ್ಮಿಸಬೇಕು. ಹಣ್ಣು, ತರಕಾರಿಗಳಿಗೆ ಅಗತ್ಯ ಶೈತ್ಯಾಗಾರ ನಿರ್ಮಿಸಬೇಕು. ರೈತರಿಗೆ ಶೇ 50ರಷ್ಟು ರಿಯಾಯಿತಿ ದರದಲ್ಲಿ ಒದಗಿಸಬೇಕು. ಪರವಾನಗಿ ಪ್ರಕ್ರಿಯೆ ಸರಳೀಕರಣಗೊಳಿಸಬೇಕು
- ಎಪಿಎಂಸಿ ಒಳಗೆ ಸೌರಶಕ್ತಿ ಉತ್ಪಾದನೆ, ಬಯೊ–ಸಿಎನ್‌ಜಿ ಘಟಕ, ಇ–ಚಾರ್ಜಿಂಗ್ ಕೇಂದ್ರ, ಪೆಟ್ರೋಲ್ ಬಂಕ್ ತೆರೆಯಬೇಕು
- ಎಪಿಎಂಸಿ ಕಾರ್ಮಿಕರಿಗೆ ವಿಶ್ರಾಂತಿ ಗೃಹಗಳು, ಆರೋಗ್ಯ ಯೋಜನೆ, ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು
- ದೇವನಹಳ್ಳಿ ಬಳಿ ಸುಸಜ್ಜಿತ, ಆಧುನಿಕ ಅಂತರರಾಷ್ಟ್ರೀಯ ಹೂವಿನ ಮಾರುಕಟ್ಟೆ ಸ್ಥಾಪನೆ. ಇತರೆ ಹೂವುಗಳಿಗೂ ಅಗತ್ಯವಾದ ಮಾರುಕಟ್ಟೆ ಸ್ಥಾಪನೆಗೆ ಕ್ರಮ ಕೈಗೊಳ್ಳಬೇಕು
- ಕೃಷಿ ಮಾರುಕಟ್ಟೆ ಹಂತದಲ್ಲಿನ ವಿವಾದಗಳನ್ನು ಬಗೆಹರಿಸಲು ಕೃಷಿ ಮಾರಾಟ ನಿರ್ದೇಶಕರ ಅಧ್ಯಕ್ಷತೆಯಲ್ಲಿ ವಿವಾದ ಪರಿಶೀಲನಾ ಸಮಿತಿ ರಚನೆ ಮಾಡಬೇಕು

ರಾಜ್ಯಸಭೆ: ನಾಸಿರ್ ಹುಸೇನ್, ಚಂದ್ರಶೇಖರ್‌ಗೆ ಮತ್ತೆ 'ಅದೃಷ್ಟ'

ರಾಜ್ಯದಿಂದ ಮಾಕನ್ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮಾಕನ್ ನಾಸಿರ್ ಹುಸೇನ್ ಚಂದ್ರಶೇಖರ್

ನವದೆಹಲಿ: ರಾಜ್ಯಸಭಾ ಚುನಾವಣೆಗೆ ಕರ್ನಾಟಕದಿಂದ ಅಜಯ್ ಮಾಕನ್, ಸಯ್ಯದ್ ನಾಸಿರ್ ಹುಸೇನ್ ಹಾಗೂ ಜಿ.ಸಿ.ಚಂದ್ರಶೇಖರ್ ಅವರನ್ನು ಪಕ್ಷದ ಅಭ್ಯರ್ಥಿಗಳನ್ನಾಗಿ ಕಾಂಗ್ರೆಸ್ ಬುಧವಾರ ಆಯ್ಕೆ ಮಾಡಿದೆ. ಜೊತೆಗೆ, ರಾಜಸ್ಥಾನದಿಂದ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಹಿಮಾಚಲ ಪ್ರದೇಶದಿಂದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹಾಗೂ ಬಿಹಾರದಿಂದ ಅಖಿಲೇಶ್ ಪ್ರಸಾದ್ ಸಿಂಗ್ ಅವರನ್ನು ಕಣಕ್ಕೆ ಇಳಿಸಿದೆ.

ನವದೆಹಲಿಯ ನಿವಾಸಿಯಾಗಿರುವ ಮಾಕನ್ ಅವರು ಕಾಂಗ್ರೆಸ್ ಪಕ್ಷದ ಖಜಾಂಚಿ. ಅವರು ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಆಪ್ತರು. ಕಳೆದ ಸಲ ಹರಿಯಾಣದಿಂದ ರಾಜ್ಯಸಭಾ ಚುನಾವಣೆಗೆ ಸ್ಪರ್ಧಿಸಿದ್ದರು. ಪಕ್ಷದ ಶಾಸಕರು ಅಡ್ಡ ಮತದಾನ ಮಾಡಿದ್ದರಿಂದ ಸೋತಿದ್ದರು. ಕಾಂಗ್ರೆಸ್, ಈ ಸಲ ಅವರನ್ನು ರಾಜ್ಯದಿಂದ ಕಣಕ್ಕೆ ಇಳಿಸಿದೆ. ಸೋನಿಯಾ ಗಾಂಧಿ, ಅಭಿಷೇಕ್ ಮನು ಸಿಂಘ್ವಿ ಅಥವಾ ರಘುರಾಮ್ ರಾಜನ್ ರಾಜ್ಯದಿಂದ ಸ್ಪರ್ಧಿಸಲಿದ್ದಾರೆ ಎಂಬ ವದಂತಿಗಳು ಹರಡಿದ್ದವು.

ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ನಿರಂತರ ದ್ರೋಹ ಎಸಗಿದೆ ಹಾಗೂ ಉತ್ತರದ ರಾಜ್ಯಗಳಿಗೆ ಹೆಚ್ಚಿನ ಅನುದಾನ ಹಂಚಿಕೆ ಮಾಡಿದೆ ಎಂದು ಆರೋಪಿಸಿ ರಾಜ್ಯದ ಕಾಂಗ್ರೆಸ್ ಸರ್ಕಾರವು 'ನನ್ನ ತೆರಿಗೆ ನನ್ನ ಹಕ್ಕು' ಹೆಸರಿನಲ್ಲಿ ಚಳವಳಿ ನಡೆಸುತ್ತಿದೆ. ಅದೇ ಹೊತ್ತಿನಲ್ಲಿ, ಉತ್ತರದ ಪ್ರಭಾವಿ ನಾಯಕರೊಬ್ಬರನ್ನು ರಾಜ್ಯದಲ್ಲಿ ಪಕ್ಷದ ಹುರಿಯಾಳುವನ್ನಾಗಿ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ.

ರಾಜ್ಯದಿಂದ ಆಯ್ಕೆಯಾಗಿದ್ದ ನಾಸಿರ್ ಹುಸೇನ್, ಜಿ.ಸಿ. ಚಂದ್ರಶೇಖರ್ ಹಾಗೂ ಎಲ್. ಹನುಮಂತಯ್ಯ ಏಪ್ರಿಲ್‌ನಲ್ಲಿ ನಿವೃತ್ತರಾಗುತ್ತಿದ್ದಾರೆ. ದಲಿತ (ಎಡಗೈ) ಸಮುದಾಯದ ಎಲ್.ಹನುಮಂತಯ್ಯ ಬದಲು ಮಾಕನ್ ಅವರಿಗೆ ಅವಕಾಶ ನೀಡಲಾಗಿದೆ. ಹನುಮಂತಯ್ಯ ಅವರು ಈ ಹಿಂದೆ ವಿಧಾನ ಪರಿಷತ್ ಸದಸ್ಯ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು.

5ನೇ ಪುಟ ನೋಡಿ

ಎಚ್‌ಎಸ್‌ಆರ್‌ಪಿ ಗಡುವು: ಮತ್ತೆ 3 ತಿಂಗಳು ವಿಸ್ತರಣೆ

ಬೆಂಗಳೂರು: ವಾಹನಗಳಿಗೆ ಅತಿ ಸುರಕ್ಷತಾ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸಲು ನಿಗದಿ ಮಾಡಿದ್ದ ಗಡುವನ್ನು ಮತ್ತೆ ಮೂರು ತಿಂಗಳು ವಿಸ್ತರಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಆದೇಶದಂತೆ 2019ರ ಏಪ್ರಿಲ್ ನಂತರ ನೋಂದಣಿಯಾದ ವಾಹನಗಳಿಗೆ ಸುರಕ್ಷತಾ ನೋಂದಣಿ ಫಲಕ ಅಳವಡಿಸಲಾಗುತ್ತಿದೆ. ವಾಹನಗಳನ್ನು ಬಳಸಿಕೊಂಡು ಎಸಗುವ ಅಪರಾಧಗಳನ್ನು ತಡೆಯಲು, ವಾಹನಗಳನ್ನು ಖಚಿತವಾಗಿ ಗುರುತಿಸಲು ಈ ಫಲಕಗಳು ಸಹಕಾರಿಯಾಗಿವೆ ಎಂದರು.

ಫಲಕ ಅಳವಡಿಕೆಗೆ ನೀಡಿದ್ದ ಅವಧಿ ಇದೇ ಫೆ.17ಕ್ಕೆ ಕೊನೆಗೊಳ್ಳಲಿದ್ದು, ಮತ್ತೆ ವಿಸ್ತರಿಸಲು ನಿರ್ಧರಿಸಲಾಗಿದೆ. ನಂತರ ದಂಡ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಹೇಳಿದರು.

ಭಕ್ತರಿಗೆ ತೆರೆದ ಅಬುಧಾಬಿ ಮಂದಿರ

ಅಬುಧಾಬಿ: ಪ್ರಧಾನಿ ನರೇಂದ್ರ ಮೋದಿ ಅವರು ಅಬುಧಾಬಿಯಲ್ಲಿ ಬೋಚಾಸನವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆಯ (ಬಿಎಪಿಎಸ್) ಹಿಂದೂ ದೇವಾಲಯವನ್ನು ಸ್ವಾಮಿನಾರಾಯಣ ಪಂಥದ ಆಧ್ಯಾತ್ಮಿಕ ನಾಯಕರ ಸಮ್ಮುಖದಲ್ಲಿ ಬುಧವಾರ ಉದ್ಘಾಟಿಸಿದರು. 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಜಾವಾಣಿ
ಗುರುವಾರ
ಫೆಬ್ರುವರಿ 15, 2024

ಒಪಿಎಸ್, ಆರೋಗ್ಯ ವಿಮೆ ಸೌಲಭ್ಯ ಜಾರಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಸುಗಮ ಕಾರ್ಯಕ್ಕಾಗಿ ಫ್ರೀ ಜೋನ್ ರೂಪಿಸುವ ಆದ್ಯತೆ

ಶಿಕ್ಷಕ ಬಂಧುಗಳ ಕಷ್ಟಕಾಲದ ಆಪ್ತಬಂಧು ಪುಟ್ಟಣ್ಣ

ಪುಟ್ಟಣ್ಣ: ಹೋರಾಟದ ಹೆಜ್ಜೆ...

ವೃತ್ತಿಪರ ಶಿಕ್ಷಕರಿಗೆ ವೇತನಾನುದಾನ

2002ರಿಂದ ವೃತ್ತಿಪರ ಕೋರ್ಸ್ (ಜೆಒಸಿ) ಶಿಕ್ಷಕರು ವೇತನಾನುದಾನಕ್ಕೆ ಒಳಪಡದೆ ಸಂಕಷ್ಟದಲ್ಲಿದ್ದವರ ಹೋರಾಟಕ್ಕೆ ಕೈಜೋಡಿಸಿದ ಪುಟ್ಟಣ್ಣ, ಶಿಕ್ಷಕರನ್ನು ವೇತನಾನುದಾನಕ್ಕೆ ಒಳಪಡಲು ಶ್ರಮಿಸಿದರು. ಮೇಲಿನ ಹಂತದ ಅಧಿಕಾರಿಗಳ ತಪ್ಪಿನಿಂದಾಗಿ 15 ವೃತ್ತಿಪರ ಕೋರ್ಸ್‌ಗಳನ್ನು ಸ್ಥಗಿತ ಮಾಡಲಾಗಿತ್ತು. ಈ ಸಂಬಂಧ ಅಂದಿನ ಶಿಕ್ಷಣ ಸಚಿವರೊಂದಿಗೆ ಸಮಾಲೋಚನೆ ನಡೆಸಿ, ಎಲ್ಲ ಜೆಒಸಿ ಕೋರ್ಸ್ ಪುನರಾರಂಭಿಸಲು ಶ್ರಮಿಸಿದ್ದರು. ಐಟಿಐ ಕಾಲೇಜುಗಳ ಉಪನ್ಯಾಸಕರ ಸಮಸ್ಯೆಗಳನ್ನು ಪರಿಹರಿಸಿದರು.

ದೈಹಿಕ ಶಿಕ್ಷಣ ಶಿಕ್ಷಕರ ಸಮಸ್ಯೆಗೆ ಪರಿಹಾರ

ದೈಹಿಕ ಶಿಕ್ಷಣ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ 2006ರಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಸಮಾವೇಶ ಸಂಘಟಿಸಿದ್ದರು. ಆಗ 1 ಲಕ್ಷ ಶಿಕ್ಷಕರು ಪಾಲ್ಗೊಂಡಿದ್ದರು. ದೈಹಿಕ ಶಿಕ್ಷಣವನ್ನು ಪಠ್ಯವಾಗಿಸಲು ಪ್ರೊ. ವೈದ್ಯನಾಥನ್ ಸಮಿತಿ ವರದಿ ಹಂತ ಹಂತವಾಗಿ ಜಾರಿಗೊಳ್ಳಲು ಕಾರಣರಾದರು.

ಆರ್ಥಿಕ ಮಿತವ್ಯಯ ತೆರವು

2009–10ನೇ ಸಾಲಿನಲ್ಲಿ ಆರ್ಥಿಕ ಮಿತವ್ಯಯ ಸರ್ಕಾರ ಹೇರಿದ್ದರಿಂದಾಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಹುದ್ದೆಗಳಿಗೆ ಭರ್ತಿಗೆ ತೊಡಕಾಗಿತ್ತು. ಆಗಿನ ಮುಖ್ಯಮಂತ್ರಿ, ಅಧಿಕಾರಿಗಳ ಜತೆಗೆ ಚರ್ಚಿಸಿ ತಡೆ ತೆರವುಗೊಳಿಸಲಾಯಿತು. 2010–11ನೇ ಸಾಲಿನಲ್ಲಿ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿನ ಶಿಕ್ಷಕರು, ಉಪನ್ಯಾಸಕರಿಗೆ ಬಡ್ತಿ ನೀಡಲು ಇದ್ದ ನಿಯಮಾವಳಿಗಳ ತೊಡಕು ನಿವಾರಿಸಲು ಕಾರಣರಾಗಿದ್ದರು.

ವೇತನಾನುದಾನ ಕೊಡಿಸುವಲ್ಲಿ ಪಾತ್ರ

1995–96ರಿಂದ 2004–05ನೇ ಸಾಲಿನ ಅವಧಿಗೆ ಪ್ರಾರಂಭವಾಗಿರುವ ಕನ್ನಡ ಮಾಧ್ಯಮ ಶಾಲೆಗಳಿಗೆ ವೇತನಾನುದಾನವನ್ನು ಕೊಡಿಸುವುದು.

ವಜಾಗೊಂಡಿದ್ದ 2,500 ಶಿಕ್ಷಕರಿಗೆ ನ್ಯಾಯ

2001–02ನೇ ಸಾಲಿನಲ್ಲಿ ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹೆಚ್ಚುವರಿ ಶಿಕ್ಷಕರನ್ನು ವಜಾಗೊಳಿಸಲಾಗಿತ್ತು. ಈ ಸಂದರ್ಭದಲ್ಲಿ ಸುಮಾರು 2,500 ಶಿಕ್ಷಕರು ಹಾಗೂ ಉಪನ್ಯಾಸಕರು ಸಂಕಷ್ಟಕ್ಕೆ ಸಿಲುಕಿದ್ದರು. ಹೋರಾಟ ನಡೆಸಿದ ಪುಟ್ಟಣ್ಣ, ವಜಾ ತೆರವುಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

4 ಸಾವಿರ ಶಿಕ್ಷಕರು ಸಂಕಷ್ಟದಿಂದ ಪಾರು

2003–04ನೇ ಸಾಲಿನಲ್ಲಿ ಸರ್ಕಾರದ ಅನುಮತಿಯಿಲ್ಲದೆ ನೇಮಕಾತಿಯಾಗಿದ್ದ ಖಾಸಗಿ ಅನುದಾನಿತ ಶಿಕ್ಷಕರಿಗೆ ಹಣಕಾಸು ವಿಭಾಗದ ಅನುಮತಿ ಸಿಗದ ಪರಿಣಾಮ ವೇತನ ಸ್ಥಗಿತವಾಗಿತ್ತು. 4 ಸಾವಿರ ಶಿಕ್ಷಕರು ಹಾಗೂ ಉಪನ್ಯಾಸಕರು ಸಂಕಷ್ಟಕ್ಕೆ ಸಿಲುಕಿದ್ದರು. ಆರು ತಿಂಗಳು ಪುಟ್ಟಣ್ಣ ಧರಣಿ ನಡೆಸಿದರು. ಪರಿಣಾಮ 1 ವರ್ಷ 6 ತಿಂಗಳು ವೇತನ ಇಲ್ಲದೆಯೇ ಸಂಕಷ್ಟಕ್ಕೆ ಸಿಲುಕಿದ ಶಿಕ್ಷಕರಿಗೆ ನ್ಯಾಯಸಿಕ್ಕಿತು.

ಮುಖ್ಯಮಂತ್ರಿ, ಶಿಕ್ಷಣ ಸಚಿವರ ಕಚೇರಿಗೆ ಬೀಗ ಜಡಿದಿದ್ದರು!

ಹೋರಾಟದ ವಿಷಯ ಬಂದಾಗ ಪುಟ್ಟಣ್ಣ ಜಗ್ಗುವವರಲ್ಲ. ಹಿಂದೊಮ್ಮೆ ವಿಧಾನಸೌಧದಲ್ಲಿ ಹೋರಾಟ ನಡೆದಾಗ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರ ಕಚೇರಿಗೆ ಬೀಗ ಜಡಿಯಲು ಹಿಂಜರಿದಿರಲಿಲ್ಲ. ರಾಜ್ಯದ ಇತಿಹಾಸದಲ್ಲಿ ಶಿಕ್ಷಕರ ವಿಚಾರವಾಗಿ ಈ ರೀತಿ ಪ್ರತಿಭಟನೆ ನಡೆಸಿದವರು ಇವರೇ ಮೊದಲಿಗರು.

ಶಾಲೆಗಳಿಗೆ ಅನುದಾನ ದೊರಕಿಸಿಕೊಡುವ ಸಂದರ್ಭದಲ್ಲಿ ಹಣಕಾಸು ಇಲಾಖೆ ಕಾರ್ಯದರ್ಶಿ ಅವರ ಕಚೇರಿಗೂ ಬೀಗ ಹಾಕಿ ಪ್ರತಿಭಟನೆ ನಡೆಸಿದ್ದರು. 2016–17ನೇ ಸಾಲಿನಲ್ಲಿ ಶಿಕ್ಷಕರ ಕ್ಷೇತ್ರ ಪ್ರತಿನಿಧಿಸುವ ಎಲ್ಲ ಸದಸ್ಯರನ್ನು ಒಗ್ಗೂಡಿಸಿ, ಮಹಾತ್ಮಾಗಾಂಧಿ ಪ್ರತಿಮೆ ಬಳಿ 11 ದಿನ ಕಾಲ ಅಹೋರಾತ್ರಿ ಧರಣಿ ನಡೆಸಿದ್ದರು. ಮುಖ್ಯಮಂತ್ರಿ ಸೇರಿದಂತೆ ಇಡೀ ಸರ್ಕಾರವು ಶಿಕ್ಷಕರು, ಉಪನ್ಯಾಸಕರು ಮತ್ತು ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು.

3 ಅವಧಿಯಲ್ಲಿ ಪುಟ್ಟಣ್ಣ ಅವರು ಸಾಧಿಸಿರುವ ಕಾರ್ಯಗಳು, ನಡೆಸಿರುವ ಹೋರಾಟಗಳು ಒಂದೆರಡಲ್ಲ. ಶಿಕ್ಷಕರ ಪ್ರತಿನಿಧಿ ಎಂದರೆ ಹೀಗಿರಬೇಕು ಎಂದು ಎಲ್ ಶ್ಲಾಘಿಸುವವರೇ. ಟೀಕೆಗಳಿಗೆ ಹೆದರದೆ, ಗುರಿಸಾಧನೆಗೆ ಮಾತ್ರ ಅವರ ಗಮನ. ಅದುವೇ ಇವರ ಯಶಸ್ಸಿನ ಮೂಲಮಂತ್ರ. ಅದಕ್ಕೆಂದೇ, ವಿದ್ಯಾ ರ್ಥಿಗಳು ಬೋಧಕರು, ವಿದ್ಯಾಸಂಸ್ಥೆಗಳ ಹಿತಕ್ಕಾಗಿ ಶ್ರಮಿಸಲು ಪುಟ್ಟಣ್ಣ ಅವರಿಗೆ ಸಾಧ್ಯವಾಗಿದೆ.

ಸಮಾಜದಲ್ಲಿ ಶಿಕ್ಷಕರ ಸಮುದಾಯ ಹಾಗೂ ಬಳಗ ದೊಡ್ಡದು. ಸಮಾಜ ರೂಪಿಸುವಲ್ಲಿ ಈ ವರ್ಗದ ಪಾತ್ರವು ದೊಡ್ಡದು. ಹಾಗೇ ವರ್ಗದ ಬೇಡಿಕೆಗಳು, ಎದುರಿಸುತ್ತಿರುವ ಸಮಸ್ಯೆಗಳು ದೊಡ್ಡವೇ ಆಗಿವೆ. ಈ ವರ್ಗದ ಪರವಾಗಿ ಸರ್ಕಾರದಲ್ಲಿ ದನಿ ಎತ್ತಲು ದೊಡ್ಡ ಅರ್ಥಾತ್ ಬಲವಾದ ದನಿಯೇ ಬೇಕು. ಈ ನಿಟ್ಟಿನಲ್ಲಿ ಶಿಕ್ಷಕರ ದೃಢವಾದ ದನಿಯಾಗಿ ಗುರುತಿಸಿಕೊಂಡಿರುವವರು ಪುಟ್ಟಣ್ಣ.

ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿ ವಿಧಾನ ಪರಿಷತ್ತಿನಲ್ಲಿ ಯಶಸ್ವಿಯಾಗಿ ಮೂರು ಅವಧಿ ಪೂರೈಸಿದ್ದಾರೆ. ಈಗ ನಾಲ್ಕನೇ ಬಾರಿಗೆ ಪರಿಷತ್ತಿಗೆ ಪ್ರವೇಶ ಪಡೆಯಲು ಸಜ್ಜಾಗುತ್ತಿದ್ದಾರೆ. ಒಟ್ಟಾಗಿ ಇದು ಅವರ 5ನೇಚುನಾವಣೆ. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಅವರೀಗ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ.

ಮೂರು ಅವಧಿಯಲ್ಲಿ ಶಿಕ್ಷಕರ ಕಷ್ಟಗಳಿಗೆ ಸ್ಪಂದಿಸಿದ್ದೇದೆ. ಶಿಕ್ಷಕ ಸಮುದಾಯದ ಶಕ್ತಿಯನ್ನು ನಂಬಿಕೊಂಡೇ ಈಗ ಅವರ ಮುಂದೆ ಹೋಗುತ್ತಿದ್ದೇನೆ ಎನ್ನುತ್ತಾರೆ ಪುಟ್ಟಣ್ಣ. ಶಿಕ್ಷಕರು, ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಸಮಸ್ಯೆಗಳು, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ತಾವು ಹಾಕಿಕೊಂಡಿರುವ ಆದ್ಯತೆಗಳನ್ನು ಕುರಿತ ಅವರ ಅನಿಸಿಕೆಗಳು ಹೀಗಿವೆ.

- **ಹೋರಾಟ ಹಿನ್ನೆಲೆಯ ಪುಟ್ಟಣ್ಣರೆಂದರೆ ಶಿಕ್ಷಕರಿಗೆ ಅಭಿಮಾನ. ಈ ಬಾಂಧವ್ಯದ ಬಗ್ಗೆ ಏನು ಹೇಳುವಿರಿ?**

ವಿದ್ಯಾರ್ಥಿ ದೆಸೆಯಿಂದ ನಾನು ಹೋರಾಟದಿಂದಲೇ ಬಂದವನು. ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯನಾಗಿದ್ದ ಅವಧಿಯಿಂದ ಪರಿಷತ್ ಸದಸ್ಯನಾಗಿ ವಿವಿಧ ಹಂತದಲ್ಲಿ ಶಿಕ್ಷಕರ ಜೊತೆಗೆ ಅವಿನಾಭಾವ ಬಾಂಧವ್ಯ ಹೊಂದಿದ್ದೇನೆ. ಸೆನೆಟ್ ಸದಸ್ಯನಾಗಿದ್ದಾಗ ನೇಮಕವಾದವರು, ಇತ್ತೀಚೆಗೆ ನೇಮಕವಾದ ಸೇರಿ ಎಲ್ಲರ ಜೊತೆಗೆ ಸಂಪರ್ಕವಿದೆ. ನನ್ನೀ ಬಳಗದಲ್ಲಿ ಲಕ್ಷಾಂತರ ಶಿಕ್ಷಕರು, ಸಿಬ್ಬಂದಿ ಇದ್ದಾರೆ. ಪ್ರಾಥಮಿಕ, ಶಾಲೆ, ಪ್ರೌಢಶಾಲಾ ಶಿಕ್ಷಕರ ವಿವಿಧ ವರ್ಗಗಳಿವೆ. ಒಂದು ರೂಪಾಯಿ ಪಡೆಯದೇ, ಜಾತಿ, ಧರ್ಮ ಕೇಳದೆ ಕೆಲಸ ಮಾಡುತ್ತಿದ್ದೇನೆ, ಮಾಡುತ್ತೇನೆ. ಇದೇ ನಮ್ಮ ಬಾಂಧವ್ಯದ ನಂಟು.

- **ನಾಲ್ಕು ಅವಧಿಯಲ್ಲಿ ಶಿಕ್ಷಕರ ಕ್ಷೇತ್ರದ ಪ್ರತಿನಿಧಿಯಾಗಿ ಹಲವು ಸಾಧನೆಗಳಾಗಿವೆ. ತೃಪ್ತಿಕೊಟ್ಟ ಸಾಧನೆ ಯಾವುದು?**

ಸಾಧನೆಗಳು ಆಗಿವೆ. ಇನ್ನೂ ಸಾಕಷ್ಟು ಆಗಬೇಕಾಗಿದೆ. ನನ್ನ ಮೇಲೆ ನಂಬಿಕೆ ಇಟ್ಟಿರುವವರಿಗೆ ತೃಪ್ತಿಯಾಗಿದೆ ಎಂಬುದು ನನ್ನ ಸಮಾಧಾನ. ನನ್ನ ಮತದಾರರಾದ ಶಿಕ್ಷಕರು ಹಾಗೂ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಸಮಸ್ಯೆಗಳು ಇಲ್ಲವಾಗಬೇಕು. ಒಂದು ಮಾದರಿ ಇಲಾಖೆಯಾಗಿ, ಭ್ರಷ್ಟಾಚಾರ ಮುಕ್ತವಾದ ಇಲಾಖೆಯನ್ನು ರೂಪುಗೊಂಡಾಗಲೇ ತೃಪ್ತಿ ಎಂಬುದು ಸಿಗುತ್ತದೆ.

- **ಮುಖ್ಯಮಂತ್ರಿ, ಶಿಕ್ಷಣ ಸಚಿವರ ಕಚೇರಿಗೇ ಬೀಗ ಹಾಕಿಸಿ, ಹೋರಾಟ ನಡೆಸಿದವರು ನೀವು. ಈ ಬಾರಿ ಆಡಳಿತ ಪಕ್ಷದಿಂದಲೇ ಸ್ಪರ್ಧಿಸುತ್ತಿದ್ದೀರಿ. ಮತದಾರರಿಗೆ ನೀಡುವ ಭರವಸೆಗಳೇನು?**

ಸಮಸ್ಯೆಗಳಿಗೆ, ನೋವುಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸುತ್ತೇನೆ. ನನಗೆ ಪಕ್ಷಕ್ಕಿಂತಲೂ ಶಿಕ್ಷಕ ಸಮುದಾಯ ಮುಖ್ಯ. ಶಿಕ್ಷಣ ಸಂಸ್ಥೆಗಳಿಗೆ ಎಲ್ಲರೂ ಬರುತ್ತಾರೆ. ಎಲ್ಲರೂ ಇರುತ್ತಾರೆ. ಎಲ್ಲರನ್ನು ಒಟ್ಟಾಗಿ ನೋಡುತ್ತೇನೆ. ಒಟ್ಟಾಗಿ ಮುಂದೆ ಕರೆದೊಯ್ಯುತ್ತೇನೆ. ನೋವುಗಳಿಗೆ ಒಟ್ಟಾಗಿ ಸ್ಪಂದಿಸುವ ಅಭಯ ನೀಡುತ್ತೇನೆ.

ಹಿಂದೆ, ಬಿಜೆಪಿ ಸರ್ಕಾರವಿದ್ದಾಗ ಒಪಿಎಸ್ ಜಾರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಶಿಕ್ಷಕರು 145 ದಿನ ಧರಣಿ ಮುಷ್ಕರ ನಡೆಸಿದರು. ಒಬ್ಬರು ರೈಲಿಗೆ ಸಿಕ್ಕು ಸತ್ತರು. ಒಂದೇ ದಿನ ಮೂವರು ಆತ್ಮಹತ್ಯೆಗೆ ಯತ್ನಿಸಿದರು. ಇಬ್ಬರು ಮೃತರಾದರೆ, ಒಬ್ಬರು ಅಪಾಯದಿಂದ ಪಾರಾದರು. ಆಗಿನ ಸಂದರ್ಭದಲ್ಲಿ ಸರ್ಕಾರ ನೇರವಾಗಿ ಸ್ಪಂದಿಸಲಿಲ್ಲ. ನಾನು ಸ್ವತಃ, ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಹಾಗೂ ಶಿಕ್ಷಣ ಸಚಿವರಾಗಿದ್ದ ಸುರೇಶ್ ಕುಮಾರ್ ಅವರನ್ನು ನೇರವಾಗಿ ಭೇಟಿಯಾಗಿ ಮನವಿ ಮಾಡಿದರೂ ಸ್ಪಂದಿಸಲಿಲ್ಲ. ಆ ದಿನವೇ ನಾನು ಪಕ್ಷ ಬಿಡುವುದಾಗಿ ತಿಳಿಸಿದ್ದೆ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಲು ಆಗದಿದ್ದರೆ ಇದ್ದೇನು ಪ್ರಯೋಜನ ಎನಿಸಿತು. ಅಂದೇ ರಾತ್ರಿ ಆಗಿನ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾದೆ. ಪ್ರಣಾಳಿಕೆಯಲ್ಲಿ ಒಪಿಎಸ್ ಅಂಶ ಸೇರಿಸಿ, ಸರ್ಕಾರ ಬಂದರೆ ಸ್ಪಂದಿಸುತ್ತೇವೆ ಎಂಬ ಭರವಸೆಯನ್ನು ನೀಡಿ ಎಂದು ಮನವಿ ಮಾಡಿದೆ. ಅವರು ಸ್ಪಂದಿಸಿದರು. ಮಾರನೇ ದಿನವೇ ಡಿ.ಕೆ.ಶಿ ಅವರು ಆಗ ಧರಣಿ ನಡೆಸುತ್ತಿದ್ದ ಶಿಕ್ಷಕರ ಸಂಘದ ಅಧ್ಯಕ್ಷ ಹನುಮಂತಪ್ಪ ಅವರನ್ನು ಭೇಟಿಯಾಗಿ ಭರವಸೆ ನೀಡಿದರು. ಮುಂದೆ ಈ ವಿಷಯವನ್ನು ಪಕ್ಷದ ಪ್ರಣಾಳಿಕೆಯಲ್ಲೂ ಸೇರಿಸಿದರು.

- **ಈ ಬೆಳವಣಿಗೆಯೇ ಪಕ್ಷ ಬದಲಾಗಲೂ ಕಾರಣವಾಯಿತೇ?**

ಒಂದು ರೀತಿ ಹೌದು. ಮುಂದೊಂದು ದಿನ ನೀವು ವಿಧಾನಸಭೆಗೆ ಸ್ಪರ್ಧಿಸಬೇಕು ಎಂದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಸಾಹೇಬರೇ ನನಗೆ ಸಲಹೆ ಮಾಡಿದರು. ಹೀಗಾಗಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದೆ. ಅದೂ ಅವರ ಮಾತಿಗೆ ಗೌರವ ಕೊಟ್ಟು ನಿಂತದ್ದು. ನನ್ನ ಒಲವು ಶಿಕ್ಷಕರ ಕ್ಷೇತ್ರದತ್ತಲೇ. ಮುಂದೆಯೂ ಶಿಕ್ಷಕರ ಕ್ಷೇತ್ರ ಹೊರತುಪಡಿಸಿ ಬೇರಾವುದೇ ಚುನಾವಣೆಗೆ ನಿಲ್ಲುವುದಿಲ್ಲ. ಜೀವನಪೂರ್ತಿ ಈ ಕ್ಷೇತ್ರಕ್ಕಾಗಿಯೇ ಮುಡಿಪುಡಿತ್ತೇನೆ. ಜೀವಿತಾವಧಿ ಶಿಕ್ಷಕರಿಗಾಗಿಯೇ ಕೆಲಸ ಮಾಡುತ್ತೇನೆ.

- **ಈ ಬಾರಿ ಅಧಿಕಾರದಲ್ಲಿ ಇರುವ ಪಕ್ಷದ ಅಭ್ಯರ್ಥಿಯಾಗಿಯೇ ಸ್ಪರ್ಧೆ ಮಾಡುತ್ತಿದ್ದೀರಿ. ಮತದಾರರಿಗೆ ನೀಡುವ ಭರವಸೆ ಏನು?**

ಪಕ್ಷ ಯಾವುದೇ ಇರಲಿ. ನನ್ನ ಹೋರಾಟ ಮುಂದುವರಿಯಲಿದೆ.ಹೋರಾಟದಿಂದ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ. ಒಪಿಎಸ್ ಜಾರಿ, ಅನುದಾನಿಕ ಸಂಸ್ಥೆಗಳಲ್ಲಿ ಶಿಕ್ಷಕರ ಖಾಲಿ ಹುದ್ದೆಗಳ ಭರ್ತಿ, ಅನುದಾನರಹಿತ ಶಾಲೆಗಳ ಶಿಕ್ಷಕರಿಗೂ ಆರೋಗ್ಯ ವಿಮೆ ಸೌಲಭ್ಯ, ಮುಖ್ಯವಾಗಿ ಖಾಸಗಿ ಶಿಕ್ಷಣಸಂಸ್ಥೆಗಳು ಸುಗಮವಾಗಿ, ಯಾವುದೇ ಅಡಡೆತಡೆಯಿಲ್ಲದೇ ಕಾರ್ಯನಿರ್ವಹಿಸಲು ಆಗುವಂತೆ ಮುಕ್ತವಾದ ವಾತಾವರಣವನ್ನು ಸೃಷ್ಟಿಸುವುದು ನನ್ನ ಆದ್ಯತೆ. ಅನುದಾನರಹಿತಶಿಕ್ಷಣ ಸಂಸ್ಥೆಗಳಿಗೆ ಅನುದಾನ ಇರುವುದಿಲ್ಲ. ಅಧಿಕಾರಿಗಳು ಇಲ್ಲದ ನೆಪದಲ್ಲಿ ಸುಮ್ಮನೆ ಭೇಟಿ ನೀಡುವುದು ಸುಗಮವಾಗಿ ಕಾರ್ಯನಿರ್ವಹಿಸಲು ಆಗದಂತೆ ತೊಡಕು ಉಂಟು ಮಾಡುವುದು ಸರಿಯಲ್ಲ. ಹಾಗೆಂದೂ ಕಡಿವಾಣವೇ ಇರಬಾರದು ಎಂದು ನಾನು ಹೇಳುತ್ತಿಲ್ಲ. ಕಡಿವಾಣ ಇರಲಿ. ಆದರೆ, ಒಂದು ಸ್ಪಷ್ಟ ನಿಯಮ, ಕಾಯ್ದೆ ರೂಪಿಸಲಿ. ಅದರಂತೆ ನಡೆದುಕೊಳ್ಳೋಣ. ಉದಾಹರಣೆಗೆ, ಫೈರ್ ಸೇಫ್ಟಿ, ಬಿಲ್ಡಿಂಗ್ ಸೇಫ್ಟಿ ಎಂದೆಲ್ಲಾ ಪರಿಶೀಲನೆ ನಡೆಸುತ್ತಾರೆ. ಇದು ಸರಿಯಲ್ಲ ಎಂಬುದು ನನ್ನ ನಿಲುವು. ಈ ಎಲ್ಲವೂ ಹಣ ವಸೂಲಿಯ ಮಾರ್ಗಗಳು, ಅನಗತ್ಯ ಹರ್ಡಲ್ಸ್‌ಗಳು, ಇದು ಬೇಡ ಎಂಬುದು ನನ್ನ ಬೇಡಿಕೆ.

- **ಡಿಡಿಪಿಐ, ಬಿಇಒ ಕಚೇರಿಗಳೇ ಭ್ರಷ್ಟಾಚಾರದ ಕೇಂದ್ರಗಳಾಗಿವೆ ಎಂಬ ದೂರುಗಳಿವೆಯಲ್ಲ?**

ಹೌದು, ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು ಎಂಬುದೇ ನನ್ನ ಮೂಲ ಆಧ್ಯತೆ. ಫ್ರಿ ಜೋನ್ ರೂಪಿಸಬೇಕು ಎಂಬುದೇ ಇದರ ಉದ್ದೇಶ. ಅನುದಾನವನ್ನೇ ಕೊಡದ ಮೇಲೆ ಇಲ್ಲದ ನಿಯಮಗಳನ್ನು ಉಲ್ಲೇಖಿಸಿ ತೊಂದರೆ ಕೊಡುವುದು ಏಕೆ. ಅಧಿಕಾರಿಗಳು ಎಷ್ಟು ಸರ್ಕಾರಿ ಕಾಲೇಜು, ಶಾಲೆಗಳಿಗೆ ಹೋಗಿ ಸೌಲಭ್ಯಗಳನ್ನು, ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಿದ್ದಾರೆ.? ಅನಗತ್ಯ ಕ್ಯಾತೆ ತಪ್ಪಿಸಿ ಭ್ರಷ್ಟಾಚಾರ ರಹಿತ ಇಲಾಖೆಯಾಗಿ ರೂಪಿಸುವುದೇ ನನ್ನ ಪ್ರಮುಖ ಗುರಿ, ಉದ್ದೇಶ, ಆದ್ಯತೆ.

- **ಕೋವಿಡ್ ಸಂದರ್ಭದಲ್ಲಿ ಶಿಕ್ಷಕರು, ಮುಖ್ಯವಾಗಿ ಖಾಸಗಿ ಶಾಲೆಯವರಿಗೆ ಸಮಸ್ಯೆಯಾಯಿತು. ಈ ಬಗ್ಗೆ?**

ಆರೋಗ್ಯ ವಿಮೆ ಸೌಲಭ್ಯ ಜಾರಿ ಇಂಥ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿದೆ. ಕೋವಿಡ್ ವೇಳೆ ನಮ್ಮ ಹೋರಾಟದ ಫಲವಾಗಿಯೇ ತಾತ್ಕಾಲಿಕಪರಿಹಾರ ಒದಗಿಸಲು ₹ 105 ಕೋಟಿ ಬಿಡುಗಡೆ ಆಯಿತು. ಆ ಶಿಕ್ಷಕರಿಗು ಫುಡ್ ಕಿಟ್ ನೀಡಬೇಕು ಎಂದು ಬಲವಾಗಿ ಒತ್ತಾಯಿಸಿದ್ದೆ. ಆದರೆ, ಮುಖ್ಯಮಂತ್ರಿಗಳೇ ಹೇಳಿದ್ದರೂ, ಆಗಿನ ಶಿಕ್ಷಣ ಮಂತ್ರಿ ಮನಸ್ಸು ಮಾಡಲಿಲ್ಲ. ಇದರ ಹೊರತಾಗಿ, ನಾನು ವೈಯಕ್ತಿಕವಾಗಿ 6,500 ಶಿಕ್ಷಕರಿಗೆ ಫುಡ್ ಕಿಟ್ ನೀಡಿದ್ದೆ.

- **ಬದಲಾದ ರಾಜಕೀಯ ಪರಿಸ್ಥಿತಿ?**

ಶಿಕ್ಷಕರ ಹಿತಾಸಕ್ತಿ ರಕ್ಷಣೆ, ಕ್ಷೇತ್ರದ ಅಭಿವೃದ್ಧಿ ಮುಖ್ಯವಾಗಲಿದೆ. ಹಿಂದೂಗಳು, ಕ್ರೈಸ್ತರು, ಮುಸಲ್ಮಾನರು ಎಲ್ಲರೂ ಶಿಕ್ಷಣ ಸಂಸ್ಥೆಗಳಿಗೆ ಬರುತ್ತಾರೆ. ಇದು, ಎಲ್ಲರ ಪಾಲಿನ ದೇವಾಲಯ. ಇಲ್ಲಿ ಪಕ್ಷ ಮುಖ್ಯವಾಗುವುದಿಲ್ಲ. ಈ ಶಿಕ್ಷಣ ಕ್ಷೇತ್ರದ ಮಹತ್ವವನ್ನು ಕಾಯ್ದಿಟ್ಟುಕೊಳ್ಳುವುದು ನಮ್ಮ ಎಲ್ಲರ ಆದ್ಯತೆ.

- **ಅಂತಿಮವಾಗಿ ಮತದಾರರಿಗೆ ನೀಡುವ ಭರವಸೆ ಏನು?**

ಒಪಿಎಸ್ ಜಾರಿ, ಆರೋಗ್ಯ ವಿಮೆ ಸೌಲಭ್ಯ ಒದಗಿಸುವುದು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಮುಕ್ತವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ಫ್ರೀ ಜೋನ್ ನಿರ್ಮಾಣ ಮಾಡುವುದು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ನೇರ ಮಾತು, ನಿಷ್ಠುರ ನಡೆ, ಹೋರಾಟವೇ ಅಸ್ತ್ರ

ಹೋರಾಟದ ಕೆಚ್ಚು, ಶಿಕ್ಷಕರ ಸಮಸ್ಯೆಗಳಿಗೆ ನ್ಯಾಯ ಒದಗಿಸುವ ತುಡಿತ, ಸಮಾಜದ ಉನ್ನತಿಗೆ ನಿರಂತರ ದುಡಿತ... ಇಂತಹ ಮೌಲ್ಯಗಳು ಒಟ್ಟುಗೂಡುವುದು ಅಪರೂಪ. ಪುಟ್ಟಣ್ಣ ಈಗುಣಗಳಿರುವ ವ್ಯಕ್ತಿ. ಹೆಸರು ಪುಟ್ಟಣ್ಣ ಆಗಿದ್ದರೂ, ಶಿಕ್ಷಕರಿಗೆ, ಉಪನ್ಯಾಸಕರಿಗೆ, ವಿದ್ಯಾಸಂಸ್ಥೆಗಳ ಸಮಸ್ಯೆಗಳಿಗೆ ಸ್ಪಂದನ,ಹೋರಾಟದ ಪ್ರಶ್ನೆ ಬಂದಾಗ ಇವರು ದೊಡ್ಡಣ್ಣ, ಹೋರಾಟದ ವಿಷಯದಲ್ಲಿ ಪುಟ್ಟಣ್ಣನವರು ನಿಜವಾಗಿ ಸೋಲಿಲ್ಲದ ಸರದಾರ.

ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ 1966 ಆಗಸ್ಟ್ 20ರಂದು ಜನಿಸಿದ ಪುಟ್ಟಣ್ಣ ಅವರು ವಿದ್ಯಾರ್ಥಿ ದೆಸೆಯಿಂದಲೇ ಹೋರಾಟದ ಮನೋವೃತ್ತಿ ಬೆಳೆಸಿಕೊಂಡವರು. ಎಂ.ಎ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು ವರ್ತಮಾನದ ಸಮಸ್ಯೆಗಳಿಗೂ ಪರಿಣಾಮಕಾರಿಯಾಗಿ ಸ್ಪಂದಿಸುತ್ತಿದ್ದಾರೆ ಎಂಬುದು ವಿಶೇಷ. ವಿದ್ಯಾರ್ಥಿ ಜೀವನದಲ್ಲೇ ಪುಟ್ಟಣ್ಣನವರ ನಾಯಕತ್ವ ಗುಣಗಳು ಅನಾವರಣಗೊಂಡು, ಸೇವೆಯ ಹಲವು ಅವಕಾಶಗಳು ಲಭಿಸಿದವು. 1988-89ರಲ್ಲಿ ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದ ಪುಟ್ಟಣ್ಣ ಗಮನ ಸೆಳೆಯುವ ವ್ಯಕ್ತಿತ್ವದಿಂದ ಹೊಸ ಹುದ್ದೆಗಳನ್ನು ಅಲಂಕರಿಸಿದರು.1989-1990ರಲ್ಲಿ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ, 1990-91ರಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಲೇ ಯುವಜನರ ಗೆದ್ದುಕೊಂಡರು. ಆಗಲೇ ಇವರ ಸಹಪಾಠಿಗಳು, ಅಧ್ಯಾಪಕರು ಪುಟ್ಟಣ್ಣ ಅವರಲ್ಲಿ ನಾಯಕನನ್ನು ಗುರುತಿಸಿದ್ದರು. .

ಸಂಘಟನಾ ಶಕ್ತಿಯ ಒಂದೊಂದೇ ಮೆಟ್ಟಿಲುಗಳನ್ನು ಯಶಸ್ವಿಯಾಗಿ ಹತ್ತುತ್ತ ಬಂದ ಇವರು, 1993ರಿಂದ 94ರವರೆಗೆ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ವಿದ್ಯಾರ್ಥಿ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದರು. ಈ ಮೂಲಕ ವಿಶ್ವವಿದ್ಯಾಲಯದಲ್ಲಿ ಹೊಸ ಸಂಚಲನವನ್ನೇ ಸೃಷ್ಟಿಸಿದರು. 1994ರಿಂದ 95ರವರೆಗೆ ಇದೇ ವಿದ್ಯಾರ್ಥಿ ಯೂನಿಯನ್‌ನ ಅಧ್ಯಕ್ಷರಾಗಿದ್ದು ಇವರ ಕಾರ್ಯಕುಶಲತೆಗೆ ಸಾಕ್ಷಿ. ವಿದ್ಯಾರ್ಥಿ ನಾಯಕನ ಸ್ಥಾನದಿಂದ ಆಡಳಿತ ಸುಧಾರಣೆಗಳ ನಾಯಕನಾಗಿ ಬಡ್ತಿ ಪಡೆದಿದ್ದು ಇದೇ ಸಮಯದಲ್ಲಿ. ಸಾಮಾನ್ಯ ಪದವೀಧರರ ಮತಕ್ಷೇತ್ರದಿಂದ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಆಯ್ಕೆಯಾದ ಪುಟ್ಟಣ್ಣ ಅವರು 1995ರಿಂದ 99ರವರೆಗಿನ ಅವಧಿಯಲ್ಲಿ ಹಲವು ಸುಧಾರಣೆಗಳಿಗೆ ಮುನ್ನುಡಿ ಬರೆದರು. ಜತೆಗೆ 1996ರಿಂದ 1999ರವರೆಗೆ ಸಿಂಡಿಕೇಟ್ ಸದಸ್ಯರಾಗಿ ಅತ್ಯಂತ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿದರು. ಇದರ ಪರಿಣಾಮವಾಗಿ, 1999ರಲ್ಲಿ ಎರಡನೇ ಬಾರಿಗೆ ಸಾಮಾನ್ಯ ಪದವೀಧರ ಕ್ಷೇತ್ರದಿಂದ ಸೆನೆಟ್ ಸದಸ್ಯರಾಗಿ ಆಯ್ಕೆಯಾದರು.

ಹೀಗೆ ಕಾರ್ಯವ್ಯಾಪ್ತಿ ಹೆಚ್ಚುತ್ತ ಸಾಗಿದಂತೆಲ್ಲ ಪುಟ್ಟಣ್ಣನವರ ಸಾಮರ್ಥ್ಯವೂ ಅನಾವರಣಗೊಳ್ಳತೊಡಗಿತು. 2000ರಿಂದ 2001ನೇ ಸಾಲಿನವರೆಗೆ ಬೆಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್‌ನ ಹಣಕಾಸು ಸಮಿತಿಯ ಸದಸ್ಯರಾಗಿ, 2001ರಿಂದ 2002ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಕಾರ್ಯನಿರ್ವಹಿಸಿದ ಪರಿ ಇವರ ಬಗೆಗಿನ ಭರವಸೆಯನ್ನು ಇನ್ನಷ್ಟು ಹೆಚ್ಚಿಸಿತು. ಈ ಕಾರ್ಯಾನುಭವದ ಬಲ ಪುಟ್ಟಣ್ಣನವರ ಬದುಕಿನಲ್ಲಿ ಹೊಸ ತಿರುವು ತಂದಿತು. ಹೌದು, ವಿದ್ಯಾರ್ಥಿ ನಾಯಕ, ಶೈಕ್ಷಣಿಕ ಸುಧಾರಣೆಗಳ ಸಮರ್ಥಕ ಪುಟ್ಟಣ್ಣ ಮೊದಲಬಾರಿಗೆ ವಿಧಾನಪರಿಷತ್ತಿಗೆ ಆಯ್ಕೆಯಾದರು. 2002ರಲ್ಲಿ ಬೆಂಗಳೂರು ಶಿಕ್ಷಕರ ಮತಕ್ಷೇತ್ರದಿಂದ ವಿಧಾನ್ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಇವರು 2008ರವರೆಗೆ ಶಿಕ್ಷಕರ ಹಿತಕ್ಕಾಗಿ ಶ್ರಮಿಸಿದರು. ಈ ಅವಧಿಯಲ್ಲಿ ಎಂಥ ಸವಾಲುಗಳು ಎದುರಾದರೂ ಎದೆಗುಂದದೆ ಮುನ್ನುಗ್ಗಿದರು.

ಕೆಲಸವನ್ನೇ ಮಂತ್ರವಾಗಿಸಿಕೊಂಡ ಪುಟ್ಟಣ್ಣ 2008ರಲ್ಲಿ 2ನೇ ಅವಧಿಗೆ ವಿಧಾನ್ ಪರಿಷತ್ತಿಗೆ ಆಯ್ಕೆ ಆಗಿ, ಶಿಕ್ಷಕರ ಸಮಸ್ಯೆಗಳಿಗೆ ದನಿಯಾದರು. ಹಲವು ಹೋರಾಟಗಳಿಗೆ ಶಕ್ತಿ ತುಂಬಿದರು. ಹೋರಾಟ ಹೇಗೆ ನಡೆಸಬೇಕು ಎಂದರೆ ಪುಟ್ಟಣ್ಣನವರಂತೆ ಎನ್ನುವಷ್ಟು ಜನರ ಮನಸ್ಸುಗಳಿಗೆ ಹತ್ತಿರವಾಗಿ ಬಿಟ್ಟರು. ಈ ಪಯಣದ ನಡುವೆಯೇ ಮತ್ತಷ್ಟು ಜವಾಬ್ದಾರಿಗಳನ್ನು ಇವರು ಸಮರ್ಥವಾಗಿ ನಿಭಾಯಿಸುವುದನ್ನು ಮರೆಯಲಿಲ್ಲ. ಕರ್ನಾಟಕ ಒಕ್ಕಲಿಗರ ಸಂಘದ ನಿರ್ದೇಶಕರಾಗಿ 2003ರಿಂದ 2006ರವರೆಗೆ, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ 2006ರಿಂದ 2008ರವರೆಗೆ ಇವರು ಕಾರ್ಯನಿರ್ವಹಿಸಿದರು. ವಿಧಾನ್ ಪರಿಷತ್ ಸದಸ್ಯರಾಗಿ ಮೊದಲ ಎರಡು ಅವಧಿಯಲ್ಲಿ ಖಾಸಗಿ ಅನುದಾನಿತ ಖಾಸಗಿ ಶಾಲಾ ಶಿಕ್ಷಕರ, ಸರ್ಕಾರಿ ಶಿಕ್ಷಕರ ಹಲವು ಸಮಸ್ಯೆ ಬಗೆಹರಿಸಿದ್ದಲ್ಲದೆ, ಸೌಲಭ್ಯಗಳನ್ನು ಒದಗಿಸಲು ಒತ್ತು ನೀಡಿದರು. ಇದು ಪುಟ್ಟಣ್ಣ ಗೆಲುವಿನಲ್ಲಿ ಹ್ಯಾಟ್ರಿಕ್ ಗೆಲುವಿಗೆ ಕಾರಣವಾಯಿತು. 2014ರಲ್ಲಿ ಮತ್ತೊಮ್ಮೆ ವಿಧಾನ್ ಪರಿಷತ್ ಪ್ರವೇಶಿಸಿದರು. ಆ ಮೂಲಕ ಶಿಕ್ಷಕರ ಅತ್ಯಂತ ಸಮರ್ಥ ನಾಯಕರಾಗಿ ರೂಪುಗೊಂಡರು. ಶಿಕ್ಷಕರಿಗೆ ಅನ್ಯಾಯವಾಗಿದೆ ಎಂದು ತಿಳಿದಾಗ ಯಾವುದೇ ಮುಲಾಜಿಲ್ಲದೆ ಆಡಳಿತ ಪಕ್ಷದ ವಿರುದ್ಧವೇ ಹೋರಾಟ ನಡೆಸಿದರು. ಈ ಹೋರಾಟವನ್ನು ಅವರನ್ನು ಶಿಕ್ಷಕ ಬಳಗವನ್ನು ಹೆಚ್ಚಿಸಿದೆ. ಅವರಿಗೆ ಹತ್ತಿರವಾಗಿಸಿದೆ.

ಪುಟ್ಟಣ್ಣ ಅವರು ನಡೆದು ಬಂದ ಹಾದಿ

- **1988-89:** ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಸಹ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ
- **1989-1990:** ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಣೆ
- **1990-91:** ಬೆಂಗಳೂರು ಸರ್ಕಾರಿ ಕಲಾ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಸೇವೆ
- **1993-94:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ
- **1994-95:** ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಸೇವೆ
- **1995-96:** ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯನಿರ್ವಹಣೆ
- **1996-1999:** ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಣೆ
- **1999-2000:** ಎರಡನೇ ಬಾರಿಗೆ ಸಾಮಾನ್ಯ ಪದವೀಧರ ಕ್ಷೇತ್ರದಿಂದ ಸೆನೆಟ್ ಸದಸ್ಯರಾಗಿ ಆಯ್ಕೆ
- **2000-2001:** ಬೆಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್‌ನಿಂದ ಹಣಕಾಸು ಸಮಿತಿಯ ಸದಸ್ಯರಾಗಿ ಸೇವೆ
- **2001-2002:** ಬೆಂಗಳೂರು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಕಾರ್ಯನಿರ್ವಹಣೆ
- **2002-2008:** ಬೆಂಗಳೂರು ಶಿಕ್ಷಕರ ಮತಕ್ಷೇತ್ರದಿಂದ ವಿಧಾನ್ ಪರಿಷತ್ ಸದಸ್ಯರಾಗಿ ಕಾರ್ಯನಿರ್ವಹಣೆ
- **2003-2006:** ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಣೆ
- **2006-2008:** ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಕಾರ್ಯ
- **2008-2014:** ಬೆಂಗಳೂರು ಶಿಕ್ಷಕರ ಮತಕ್ಷೇತ್ರದಿಂದ ವಿಧಾನ್ ಪರಿಷತ್ ಸದಸ್ಯರಾಗಿ ಎರಡನೇ ಬಾರಿ ಕಾರ್ಯನಿರ್ವಹಣೆ
- **2014-2020:** ಬೆಂಗಳೂರು ಶಿಕ್ಷಕರ ಮತಕ್ಷೇತ್ರದಿಂದ ವಿಧಾನ್ ಪರಿಷತ್ ಸದಸ್ಯರಾಗಿ ಮೂರನೇ ಬಾರಿ ಕಾರ್ಯ
- **2024:** ನಾಲ್ಕನೇ ಬಾರಿಗೆ ವಿಧಾನಪರಿಷತ್ ಪ್ರವೇಶಿಸಲು ಶಿಕ್ಷಕ ಬಂಧುಗಳ ಆಶೀರ್ವಾದ ಪಡೆಯಲು ಸಿದ್ಧತೆ. ಒಟ್ಟಾಗಿ, ಪುಟ್ಟಣ್ಣ ಅವರಿಗೆ ಇದು ಐದನೇ ಚುನಾವಣೆ.

ಬಿಡಿಎ: ತಿಂಗಳಾದರೂ ಆರಂಭವಾಗದ ತೆರವು ಕಾರ್ಯಾಚರಣೆ; 27 ಸಾವಿರ ನಿವೇಶನ ಅಕ್ರಮ

ನಗರದಲ್ಲಿ 279 ಅನಧಿಕೃತ ಬಡಾವಣೆ

● ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ 279 ಅನಧಿಕೃತ ಬಡಾವಣೆಗಳಿರುವುದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಗುರುತಿಸಿ ತಿಂಗಳು ಕಳೆದರೂ, 'ರಾಜಕೀಯ ಪ್ರಭಾವ'ದಿಂದ ಅವುಗಳ ತೆರವು ಕಾರ್ಯಕ್ಕೆ ಚಾಲನೆ ಸಿಕ್ಕಿಲ್ಲ.

ಪರಿಷ್ಕೃತ ಮಾಸ್ಟರ್ ಪ್ಲಾನ್ ಪ್ರಕಾರ (ಆರ್‌ಎಂಪಿ–2015), ಭೂ ಉಪಯೋಗದ ಉದ್ದೇಶವನ್ನು 'ಬಡಾವಣೆ ನಿರ್ಮಾಣ' ಎಂದು ಪರಿವರ್ತನೆ ಮಾಡಿಸಿಕೊಳ್ಳದೆ ಬೃಹತ್ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದೆ.

ಒಟ್ಟಾರೆ ಈ ಬಡಾವಣೆಗಳಲ್ಲಿ ಸುಮಾರು 27 ಸಾವಿರಕ್ಕೂ ಹೆಚ್ಚು ನಿವೇಶನಗಳಿವೆ ಎಂದು ಅಂದಾಜಿಸಲಾಗಿದೆ. ಕಾಂಕ್ರೀಟ್ ರಸ್ತೆ, ಚರಂಡಿ, ವಿದ್ಯುತ್ ಕಂಬ, ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಮಣ್ಣಿನ ರಸ್ತೆ, ಡಾಂಬರು ರಸ್ತೆ, ಜಲ್ಲಿ ಕಲ್ಲು ರಸ್ತೆಗಳನ್ನೂ ನಿರ್ಮಿಸಲಾಗಿದೆ.

ಈ ಬಡಾವಣೆಗಳು ನಿರ್ಮಾಣವಾಗಿರುವ ಪ್ರದೇಶವನ್ನು 'ಆರ್‌ಎಂಪಿ–2015ರಲ್ಲಿನ ಭೂ ಉಪಯೋಗ ಉದ್ದೇಶ'ದಲ್ಲಿ ವ್ಯವಸಾಯ, ಕೈಗಾರಿಕೆ, ಸಾರಿಗೆ –ಸಂಪರ್ಕ, ವಾಣಿಜ್ಯ, ಕಣಿವೆ ಬಫರ್ ಝೋನ್, ಅರಣ್ಯ ವಲಯ ಎಂದು ನಮೂದಾಗಿದೆ.

'ಅಧಿಕಾರಿಗಳು ಸಮಗ್ರವಾಗಿ ಪರಿಶೀಲನೆ ನಡೆಸಿ, ಅನಧಿಕೃತ ಬಡಾವಣೆಗಳನ್ನು ಗುರುತಿಸಿದ್ದಾರೆ. ಯಾವ ತಾಲ್ಲೂಕು, ಹೋಬಳಿ, ಗ್ರಾಮ, ಸರ್ವೆ ನಂಬರ್‌ಗಳಲ್ಲಿ ಈ ಅನಧಿಕೃತ ಬಡಾವಣೆಗಳು ನಿರ್ಮಾಣವಾಗುತ್ತಿವೆ ಎಂಬುದನ್ನು ದಾಖಲೆ ಸಹಿತ ವರದಿಯನ್ನು ಸಿದ್ಧಪಡಿಸಿದ್ದಾರೆ. ಇವುಗಳನ್ನು ತೆರವು ಮಾಡಲು ಎಂಜಿನಿಯರಿಂಗ್ ವಿಭಾಗಕ್ಕೆ ಕಡತ ಸಲ್ಲಿಸಿ ಒಂದು ತಿಂಗಳಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಬಿಡಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಸೂಕ್ತ ಶುಲ್ಕ ಪಾವತಿಸಿ, ಕ್ರಮಬದ್ಧವಾಗಿ ಆರ್‌ಎಂಪಿ–2015ರಲ್ಲಿರುವ ಭೂ ಬಳಕೆ ಉದ್ದೇಶವನ್ನು ಬದಲಿಸಿಕೊಳ್ಳಲು ಅವಕಾಶವಿದೆ. ಇದರ ಸಂಪೂರ್ಣ ಉಲ್ಲಂಘನೆಯಾಗಿದೆ. ಇಂತಹ ಭೂಮಿಯನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ, ಈ ಬಡಾವಣೆಗಳಲ್ಲಿರುವ ರಸ್ತೆ, ಒಳಚರಂಡಿ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ತೆರವು ಮಾಡಬಹುದು. ಲಕ್ಷಾಂತರ ರೂಪಾಯಿ ನೀಡಿ ಅನಧಿಕೃತ ಬಡಾವಣೆಯಲ್ಲಿ ನಾಗರಿಕರು ನಿವೇಶನ ಖರೀದಿಸುವುದನ್ನು ತಪ್ಪಿಸಬಹುದು' ಎಂದರು.

ಎಲ್ಲೆಲ್ಲಿ ಅನಧಿಕೃತ ಬಡಾವಣೆ?

ಪೂರ್ವ ತಾಲ್ಲೂಕು

ಬಿದರಹಳ್ಳಿ ಹೋಬಳಿ: ಯರಪ್ಪನಹಳ್ಳಿ, ಕಾಡ ಅಗ್ರಹಾರ, ಬಂಡೆ ಬೊಮ್ಮಸಂದ್ರ, ಅಣಗಲಪುರ, ವಡೇರಹಳ್ಳಿ, ರಾಂಪುರ, ಆದೂರು, ಬಿದರಹಳ್ಳಿ, ಬೈಯಪ್ಪನಹಳ್ಳಿ, ದೊಡ್ಡೇನಹಳ್ಳಿ, ನಾಡಗೌಡಗೊಲ್ಲಹಳ್ಳಿ, ಚಿಕ್ಕಗುಬ್ಬಿ, ಹೂವಿನಣೆ, ಕಾಡುಸೊಣ್ಣಪ್ಪನಹಳ್ಳಿ, ಮಿಟ್ಟಗಾನಹಳ್ಳಿ, ಬೆಳತ್ತೂರು, ಬಿದರೆ ಅಗ್ರಹಾರ, ದೊಡ್ಡಬನಹಳ್ಳಿ, ಕಾಡುಗೋಡಿ, ಕುಂಬೇನ ಅಗ್ರಹಾರ, ಕುರುಡುಸೊಣ್ಣೇನಹಳ್ಳಿ, ಶೀಗೇಹಳ್ಳಿ.

ಕೆ.ಆರ್. ಪುರ ಹೋಬಳಿ: ಬಸವನಪುರ, ದ್ಯಾವಸಂದ್ರ, ಕೊಡಿಗೇಹಳ್ಳಿ, ಸಾದರಮಂಗಲ, ವಿಭೂತಿಪುರ.

ವರ್ತೂರು ಹೋಬಳಿ: ಬಳಗೆರೆ, ಗುಂಜೂರು, ಕಾಚಮಾರನಹಳ್ಳಿ, ಮುಳ್ಳೂರು, ಸೂಲಕುಂಟೆ, ಹಾಲನಾಯಕನಹಳ್ಳಿ.

ಯಲಹಂಕ ತಾಲ್ಲೂಕು

ಯಲಹಂಕ ಹೋಬಳಿ: ಶಿವನಹಳ್ಳಿ, ಫಂಟಿಗಾನಹಳ್ಳಿ, ಲಕ್ಷ್ಮೀಸಾಗರ, ನಾಗದಾಸನಹಳ್ಳಿ, ಹೊನ್ನೇನಹಳ್ಳಿ, ಸಿಂಗನಾಯಕನಹಳ್ಳಿ, ಮುದ್ದನಹಳ್ಳಿ.

ಜಾಲ ಹೋಬಳಿ: ಸಾತನೂರು, ಬೈಯಪ್ಪನಹಳ್ಳಿ, ಚಾಗಲಟ್ಟಿ, ಕಟ್ಟಿಗೇನಹಳ್ಳಿ, ಕೋಗಿಲು, ಬಾಗಲೂರು, ಬಿ.ಕೆ. ಹಳ್ಳಿ, ಮಾರೇನಹಳ್ಳಿ, ಬೆಟ್ಟಹಲಸೂರು, ಹುಣಸಮಾರನಹಳ್ಳಿ, ನೆಲ್ಲುಕುಂಟೆ.

ಆನೇಕಲ್ ತಾಲ್ಲೂಕು

ಜಿಗಣಿ ಹೋಬಳಿ: ಹುಲ್ಲಹಳ್ಳಿ, ಹುಲಿಮಂಗಲ, ಬಿಲ್ವಾರದಹಳ್ಳಿ, ಕಲ್ಕೆರೆ, ಮಂಟಪ, ಬೇಗಿಹಳ್ಳಿ, ಹಳೆ ಸಂಪಿಗೆಹಳ್ಳಿ, ಮಲ್ಲಸಂದ್ರ.

ಸರ್ಜಾಪುರ ಹೋಬಳಿ: ಚಿಕ್ಕೇನಕ್ಕುಂದಿ, ಹಲಸಹಳ್ಳಿ ತಿಪ್ಪಸಂದ್ರ, ಹೆಗ್ಗೊಂಡನಹಳ್ಳಿ, ಕತ್ರಿಗುಪ್ಪೆ, ರಾಮನಾಯಕನಹಳ್ಳಿ, ತಿಗಳಚೌಡೇದೇನಹಳ್ಳಿ, ಶ್ರೀರಾಮಪುರ, ಚಿಕ್ಕನಾಗಮಂಗಲ, ಗಟ್ಟಹಳ್ಳಿ, ಗೂಳಿಮಂಗಲ, ಸಿಂಗೇನ ಅಗ್ರಹಾರ, ಆವಲಹಳ್ಳಿ, ಕೊಡತಿ, ದೊಮ್ಮಸಂದ್ರ, ಸೂಲಿಕುಂಟೆ, ಹುಸ್ಕೂರು, ಕಗ್ಗಲೀಪುರ, ಕೊಮ್ಮಸಂದ್ರ, ರಾಯಸಂದ್ರ.

ದಕ್ಷಿಣ ತಾಲ್ಲೂಕು

ಉತ್ತರಹಳ್ಳಿ ಹೋಬಳಿ: ಕೆ. ಗೊಲ್ಲಹಳ್ಳಿ.

ಕೆಂಗೇರಿ ಹೋಬಳಿ: ಗುಡಿಮಾವು, ದೇವಗೆರೆ, ಕುಂಬಳಗೋಡು, ಕಂಬೀಪುರ, ಅಗರ.

ಬೇಗೂರು ಹೋಬಳಿ: ಹೊಮ್ಮದೇವನಹಳ್ಳಿ, ವಿಟ್ಟಸಂದ್ರ, ಬೇಗೂರು, ಮಲ್ಲಸಂದ್ರ.

'ಮಗನ ಹೆಸರಿನಲ್ಲಿ ನಕಲಿ ಸಂಸ್ಥೆ'

ಬಿಬಿಎಂಪಿ ಆರೋಗ್ಯಾಧಿಕಾರಿ ವಿರುದ್ಧ ಕ್ರಮಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತನ್ನ ಮಗನ ಹೆಸರಿನಲ್ಲಿ ನಕಲಿ ಸಂಸ್ಥೆ ಸೃಷ್ಟಿಸಿ ನಿಯಮಬಾಹಿರವಾಗಿ ಟೆಂಡರ್ ಗುತ್ತಿಗೆ ನೀಡಿರುವ ಆರೋಗ್ಯಾಧಿಕಾರಿ ಡಾ. ಸವಿತಾ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು' ಎಂದು ಬಿಬಿಎಂಪಿ ಆಡಳಿತದ ಉಪ ಆಯುಕ್ತರು, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಶಿಫಾರಸು ಮಾಡಿದ್ದಾರೆ.

ಡಾ. ಸವಿತಾ ಅವರ ಕರ್ತವ್ಯಲೋಪಕ್ಕೆ ಸಂಬಂಧಿಸಿದ ನಿರ್ದಿಷ್ಟ ಆರೋಪ ಪಟ್ಟಿ ಮತ್ತು ಆರೋಪದ ವಿಷಯವನ್ನು ಸಮರ್ಥಿಸುವ ದಾಖಲೆಗಳು ಹಾಗೂ ಸಾಕ್ಷಿಗಳ ಅನುಬಂಧಗಳನ್ನು ಉಪ ಆಯುಕ್ತರು ಪತ್ರದೊಂದಿಗೆ ಲಗತ್ತಿಸಿದ್ದಾರೆ. ಡಾ.ಸವಿತಾ ಅವರು ಗ್ರೂಪ್–ಎ ವೃಂದದ ಅಧಿಕಾರಿಯಾಗಿರುವುದರಿಂದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ, ಅವರ ಮೇಲೆ ಶಿಸ್ತುಕ್ರಮ ಕೈಗೊಳ್ಳಲು ಆರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ ಪೂರ್ವ ವಲಯದ ಆರೋಗ್ಯಾಧಿಕಾರಿಯಾಗಿರುವ ಡಾ. ಸವಿತಾ ಅವರು 2020ರ ನ.26ರಿಂದ 2021 ಮೇ 10ರವರೆಗೆ ಬೊಮ್ಮನಹಳ್ಳಿ ವಲಯ ಆರೋಗ್ಯಾಧಿಕಾರಿಯಾಗಿದ್ದ ಸಮಯದಲ್ಲಿ ತಮ್ಮ ಮಗ ಸಿ. ಸಿದ್ದರಾಜು ಚಿರಾಗ್ ಒಡೆತನದ ಎ.ವಿ.ಎಸ್. ಎಂಟರ್‌ಪ್ರೈಸಸ್ ಎಂಬ ನಕಲಿ ಸಂಸ್ಥೆಗೆ ಕಾನೂನುಬಾಹಿರವಾಗಿ ಕಾರ್ಯಾದೇಶ ನೀಡಿದ್ದಾರೆ.

ಈ ಕಾರ್ಯಾದೇಶದ ಕಡತಗಳಲ್ಲಿ ಹಲವು ನ್ಯೂನತೆಗಳಿದ್ದು, ಈ ಬಗ್ಗೆ ವಿವರಣೆ ನೀಡುವಂತೆ ಮುಖ್ಯ ಆರೋಗ್ಯಾಧಿಕಾರಿ 2023ರ ಜ.31ರಂದು ಸವಿತಾ ಅವರಿಗೆ ನೋಟಿಸ್ ನೀಡಿದ್ದರು. ಆ.19ರಂದು ಮುಖ್ಯ ಆಯುಕ್ತರ ಆಡಳಿತ ಶಾಖೆಯಿಂದಲೂ ಸಮಜಾಯಿಷಿ ನೀಡಲು ಅವರಿಗೆ ಸೂಚಿಸಲಾಗಿತ್ತು. ಆದರೆ, ಸಮಜಾಯಿಷಿ ನೀಡದೆ ನಿಯಮಾವಳಿಗಳನ್ನು ಉಲ್ಲಂಘಿಸಿ, ಗಂಭೀರ ಕರ್ತವ್ಯಲೋಪ ಎಸಗಿದ್ದು, ವಿಚಾರಣೆ ನಡೆಸಲು ನಿರ್ಧರಿಸಲಾಗಿದೆ.

'ಔಷಧ ಸಿಂಪಡಣೆ ಕಾರ್ಯಕ್ಕೆ ಕಾರ್ಮಿಕರು, ಆಟೊ, ಚಾಲಕರು ಮತ್ತು ಇಂಧನ ಒದಗಿಸುವ ಗುತ್ತಿಗೆ, ಸೊಳ್ಳೆ ನಿಯಂತ್ರಣಕ್ಕೆ ಗ್ಯಾಂಗ್‌ಮ್ಯಾನ್‌ಗಳನ್ನು ಒದಗಿಸುವ ಗುತ್ತಿಗೆ, ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ವೈದ್ಯರನ್ನು ಒದಗಿಸುವ ಗುತ್ತಿಗೆಯನ್ನು ಆರೋಗ್ಯಾಧಿಕಾರಿಯಾಗಿ ಅವರ ಮಗ ಸಿದ್ದರಾಜು ಚಿರಾಗ್ ಅವರ ಸಂಸ್ಥೆಗೆ ಕಾನೂನುಬಾಹಿರವಾಗಿ ಡಾ. ಸವಿತಾ ನೀಡಿದ್ದಾರೆ. ಇದು ಗಂಭೀರ ಕರ್ತವ್ಯಲೋಪ. ಈ ಎಲ್ಲ ಕಾರ್ಯಾದೇಶಗಳನ್ನು ತಾಂತ್ರಿಕ ಜಾಗೃತ ಕೋಶ (ಟಿವಿಸಿಸಿ) ಪರಿಶೀಲಿಸಿದ್ದು, ನ್ಯೂನತೆಗಳು ಕಂಡು ಬಂದಿದೆ. ಬಿಲ್ ಸಲ್ಲಿಸಿರುವ ಕಡತದಲ್ಲಿ 'ತೃಪ್ತಿಕರ ನಿರ್ವಹಣೆ ಮಾಡಿರುವ' ಬಗ್ಗೆ ಅಧಿಕಾರಿಗಳು ದೃಢೀಕರಣ ಮಾಡಿಲ್ಲ. ಗುತ್ತಿಗೆದಾರರಿಂದ ಇನ್‌ವಾಯ್ಸ್ ಸಲ್ಲಿಕೆಯಾಗದಿದ್ದರೂ ಹಣ ಪಾವತಿಮಾಡಲಾಗಿದೆ' ಎಂದು ಟಿವಿಸಿಸಿ ಮುಖ್ಯ ಎಂಜಿನಿಯರ್ ವರದಿ ನೀಡಿದ್ದಾರೆ.

ಡಾ. ಸವಿತಾ ಅವರ ಕರ್ತವ್ಯ ಲೋಪ ಹಾಗೂ ಅಕ್ರಮಕ್ಕೆ ಹಿಂದಿನ ಹೆಚ್ಚುವರಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್, ಟಿವಿಸಿಸಿ ಮುಖ್ಯ ಎಂಜಿನಿಯರ್ ವಿಜಯಕುಮಾರ್, ಅಧೀಕ್ಷಕ ಎಂಜಿನಿಯರ್ ಸ್ವಯಂಪ್ರಭ, ಕಾರ್ಯಪಾಲಕ ಹಾಗೂ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು, ಬೊಮ್ಮನಹಳ್ಳಿ ಆರೋಗ್ಯ ವೈದ್ಯಾಧಿಕಾರಿ ನಾಗೇಂದ್ರಕುಮಾರ್, ಬೊಮ್ಮನಹಳ್ಳಿ ಜಂಟಿ ಆಯುಕ್ತರು ಸಾಕ್ಷಿಗಳಾಗಿದ್ದಾರೆ ಎಂದು ಉಪ ಆಯುಕ್ತರು ವರದಿಯಲ್ಲಿ ತಿಳಿಸಿದ್ದಾರೆ.

ಓಕಳಿಪುರ ಕಾರಿಡಾರ್: ಶೀಘ್ರ ಎರಡು ಮಾರ್ಗ ಮುಕ್ತ

ಬೆಂಗಳೂರು: ಓಕಳಿಪುರ ಸಿಗ್ನಲ್‌ಮುಕ್ತ ಕಾರಿಡಾರ್‌ನ ಎರಡು ಮಾರ್ಗಗಳು (ಲೂಪ್) ಪೂರ್ಣಗೊಂಡಿದ್ದು, ಒಂದು ವಾರದಲ್ಲಿ ವಾಹನ ಸಂಚಾರಕ್ಕೆ ಮುಕ್ತಗೊಳಿಸುವ ಸಾಧ್ಯತೆ ಇದೆ.

ಮಲ್ಲೇಶ್ವರದಿಂದ ರೈಲು ನಿಲ್ದಾಣ ಹಾಗೂ ರಾಜಾಜಿನಗರದಿಂದ ರೈಲು ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಎರಡು ಮಾರ್ಗಗಳ ನಿರ್ಮಾಣವನ್ನು ಬಿಬಿಎಂಪಿ ಪೂರ್ಣಗೊಳಿಸಿದೆ ಎಂದು ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ಓಕಳಿಪುರ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಯಲ್ಲಿ ಓಕಳಿಪುರದ ಜಂಕ್ಷನ್‌ನಲ್ಲಿ ಆರು ಪಥಗಳನ್ನು ನಿರ್ಮಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿತ್ತು. ರೈಲ್ವೆ ಇಲಾಖೆಯಿಂದ ಭೂ ಹಸ್ತಾಂತರ ಪ್ರಕ್ರಿಯೆ ನಿಧಾನವಾದ ಕಾರಣ, ಎರಡು ಮಾರ್ಗಗಳನ್ನು ಪೂರ್ಣಗೊಳಿಸುವುದು ವಿಳಂಬವಾಗಿತ್ತು. ಈಗ ಎಲ್ಲವೂ ಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ಉದ್ಘಾಟಿಸಲಾಗುತ್ತದೆ ಎಂದರು.

'ತುಮಕೂರು ಮಾರ್ಗದಡಿ ಪ್ರೀಕಾಸ್ಟ್ ಬಾಕ್ಸ್ ಅಳವಡಿಕೆ ಪೂರ್ಣವಾಗಿದೆ. ಚೆನ್ನೈ ರೈಲು ಮಾರ್ಗದಡಿ ಪ್ರೀಕಾಸ್ಟ್ ಬಾಕ್ಸ್‌ಗಳನ್ನು ರೈಲ್ವೆ ಇಲಾಖೆ ಅಳವಡಿಸಬೇಕಿದೆ. ಅದನ್ನು ಅವರು ಇನ್ನೆರಡು ತಿಂಗಳಲ್ಲಿ ಪೂರ್ಣಗೊಳಿಸುವುದಾಗಿ ಹೇಳಿದ್ದಾರೆ. ಅದು ಮುಗಿದರೆ ಕಾರಿಡಾರ್ ಸಂಪೂರ್ಣಗೊಳ್ಳುತ್ತದೆ' ಎಂದು ಹೇಳಿದರು.

2013–14ರಲ್ಲಿ ಓಕಳಿಪುರ ಸಿಗ್ನಲ್ ಮುಕ್ತ ಕಾರಿಡಾರ್ ಯೋಜನೆ ಆರಂಭವಾಗಿತ್ತು. ₹337 ಕೋಟಿ ವೆಚ್ಚದ ಕಾಮಗಾರಿಯಲ್ಲಿ ಭೂಸ್ವಾಧೀನ ವೆಚ್ಚವೂ ಸೇರಿದೆ.

ಕಾಣೆಯಾಗಿದ್ದಾರೆ



ಚನ್ನಬಸಪ್ಪ ಅಕ್ಕಿ
(ಧಾರವಾಡ)
ವಯಸ್ಸು: 74, ಎತ್ತರ: 5', ಕಪ್ಪು ಮೈಬಣ್ಣ, ಬಿಳಿ ಬಣ್ಣದ ತುಂಬು ತೋಳಿನ ಶರ್ಟ್, ನೀಲಿ ಲುಂಗಿ ಧರಿಸಿದ್ದು, ಕನ್ನಡ ಮಾತನಾಡುತ್ತಾರೆ. ಇತ್ತೀಚಿಗೆ ಸ್ಪಷ್ಟವಾಗಿ ಮಾತನಾಡಲು ಬರುತ್ತಿಲ್ಲ.
ಬೆಂಗಳೂರಿನ ವಿಜಯನಗರದ ವಾಟರ್ ಟ್ಯಾಂಕ್ ಹತ್ತಿರ ದಿ: 6.2.2024 ರಂದು ಕಾಣೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ: ಅಥವಾ ಕೆಳಗಿನ ಮೊಬೈಲ್‌ಗೆ ಕರೆ ಮಾಡಿ:
9341939913, 9008448464

17ರಂದು ಲಕ್ಷ್ಮೀಶ ತೋಳ್ಪಾಡಿಯವರಿಗೆ ಅಭಿನಂದನೆ

ಬೆಂಗಳೂರು: ರಂಗಚಂದಿರ ಸಂಸ್ಥೆಯ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ಬಯಲು ರಂಗಮಂದಿರದಲ್ಲಿ 17ರಂದು ಸಂಜೆ ಉಪನ್ಯಾಸ, ಅಭಿನಂದನೆ ಹಾಗೂ ಯಕ್ಷಗಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಜೆ 6 ಗಂಟೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಸಂಗೀತ ವಿದ್ವಾಂಸ ವಿದ್ಯಾಭೂಷಣ ಅವರು ಅಭಿನಂದಿಸಲಿದ್ದಾರೆ. 'ಪ್ರಜಾವಾಣಿ' ಕಾರ್ಯನಿರ್ವಾಹಕಸಂಪಾದಕರವೀಂದ್ರ ಭಟ್ಟ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣೀದೇವಿ ಮಾಲಗತ್ತಿ, ಬಹುರೂಪಿ ಪ್ರಕಾಶನದ ಜಿ.ಎನ್.ಮೋಹನ್, ರಂಗ ಚಂದಿರದ ಗೌರವಾಧ್ಯಕ್ಷ ಆರ್. ಕೆ. ಹೆಗಡೆ ಪಾಲ್ಗೊಳ್ಳಲಿದ್ದಾರೆ. ಸಂಜೆ 6.30 ಗಂಟೆಗೆ ಲಕ್ಷ್ಮೀಶ ತೋಳ್ಪಾಡಿ ಅವರಿಂದ 'ಮಹಾಭಾರತದಲ್ಲಿ ಮಾತು ಮತ್ತು ಮೌನ' ಉಪನ್ಯಾಸ ನಡೆಯಲಿದೆ. ಸಂಜೆ 7 ರಿಂದ 8ರವರೆಗೆ ಉಡುಪಿಯ ಥಿಯೇಟರ್ ಯಕ್ಷ ತಂಡದವರು 'ಚಕ್ರವ್ಯೂಹ' ಯಕ್ಷಗಾನ ಪ್ರಸ್ತುತ ಪಡಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಸುಂದರ್ ಸರುಕ್ಕೈ, ಎ.ನಾರಾಯಣ, ಶಶಿಧರ ಅಡಪ, ಸಚ್ಚಿದಾನಂದ ಹೆಗಡೆ, ಎಂಎಎನ್ ಇಸ್ಮಾಯಿಲ್, ಪುರುಷೋತ್ತಮ ಅವರು ಭಾಗವಹಿಸಲಿದ್ದಾರೆ ಎಂದು ರಂಗಚಂದಿರ ಕಾರ್ಯದರ್ಶಿ ಜಿಪಿಒ ಚಂದ್ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪಘಾತದಲ್ಲಿ ಮೃತಪಟ್ಟಿರುವ ಕೆಎಸ್‌ಆರ್‌ಟಿಸಿ ನೌಕರರ ಅವಲಂಬಿತರಿಗೆ ಅಪಘಾತ ಪರಿಹಾರ ವಿಮೆ ಹಾಗೂ ರೋಗ, ಇನ್ನಿತರ ಕಾರಣಗಳಿಂದ ಮೃತಪಟ್ಟವರ ಅವಲಂಬಿತರಿಗೆ ಕುಟುಂಬ ಕಲ್ಯಾಣ ಯೋಜನೆಯ ಪರಿಹಾರ ಧನವನ್ನು ಬುಧವಾರ ವಿತರಿಸಲಾಯಿತು. ಕೆಎಸ್‌ಆರ್‌ಟಿಸಿ ನಿರ್ದೇಶಕಿ ನಂದಿನಿದೇವಿ, ಅಧ್ಯಕ್ಷ ಎಸ್‌ಆರ್‌ ಶ್ರೀನಿವಾಸ್, ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಭಾಗವಹಿಸಿದ್ದರು

ಮೃತಪಟ್ಟ ನೌಕರರ ಕುಟುಂಬಗಳಿಗೆ ಪರಿಹಾರ ಧನ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತದಲ್ಲಿ ಮೃತಪಟ್ಟ ಕೆಎಸ್‌ಆರ್‌ಟಿಸಿ ನೌಕರರ ಅವಲಂಬಿತರಿಗೆ ಅಪಘಾತ ಪರಿಹಾರ ವಿಮೆ ಹಾಗೂ ರೋಗ, ಇನ್ನಿತರ ಕಾರಣಗಳಿಂದ ಮೃತಪಟ್ಟವರ ಅವಲಂಬಿತರಿಗೆ ಕುಟುಂಬ ಕಲ್ಯಾಣ ಯೋಜನೆಯ ಪರಿಹಾರ ಧನವನ್ನು ಬುಧವಾರ ವಿತರಿಸಲಾಯಿತು.

ಹಾಸನ ವಿಭಾಗದ ಅರಕಲಗೂಡು ಘಟಕದಲ್ಲಿ ಚಾಲಕ ಕಂ ನಿರ್ವಾಹಕರಾಗಿದ್ದ ರಾಜೇಶ್ ಡಿ.ಸಿ. ಜುಲೈ 29ರಂದು ಅಪಘಾತದಲ್ಲಿ ಮೃತಪಟ್ಟಿದ್ದರು. ಅವರ ಕುಟುಂಬದವರಿಗೆ ವಿಮೆ ₹1 ಕೋಟಿ ಮತ್ತು ಉಪಧನ, ಭವಿಷ್ಯ ನಿಧಿ, ನೌಕರರ ಕುಟುಂಬ ಕಲ್ಯಾಣ ಯೋಜನೆ, ಡಿಆರ್‌ಬಿಎಫ್ ಹಾಗೂ ಗುಂಪು ವಿಮಾ ಪರಿಹಾರ ಮೊತ್ತ ₹ 14.19 ಲಕ್ಷ ನೀಡಲಾಯಿತು.

ಹೃದಯಾಘಾತ, ಕ್ಯಾನ್ಸರ್, ಪಾರ್ಶ್ವವಾಯು ಇನ್ನಿತರ ಕಾರಣಗಳಿಂದ 16 ನೌಕರರು ಮೃತಪಟ್ಟಿದ್ದು, ಅವರ ಕುಟುಂಬದವರಿಗೆ ₹10 ಲಕ್ಷ ಪರಿಹಾರ ವಿತರಿಸಲಾಯಿತು.

ಪರಿಹಾರ ಧನ ವಿತರಿಸಿ ಮಾತನಾಡಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, 'ನೌಕರರ ಜೀವಕ್ಕೆ ಬೆಲೆ ಕಟ್ಟುವುದು ಸಾಧ್ಯವಿಲ್ಲ. ಆದರೂ ಪರಿಹಾರ ಮೊತ್ತವನ್ನು ಸದುಪಯೋಗ ಪಡಿಸಿಕೊಂಡು ಸುಸೂತ್ರವಾಗಿ ಜೀವನ ನಿರ್ವಹಣೆ ಮಾಡಬೇಕು' ಎಂದು ಸಲಹೆ ನೀಡಿದರು.

'₹1 ಕೋಟಿ ವಿಮಾ ಯೋಜನೆ ಜಾರಿಯಾದ ಬಳಿಕ ಅಪಘಾತದಲ್ಲಿ 17 ನೌಕರರು ಮೃತಪಟ್ಟಿದ್ದಾರೆ. ಕುಟುಂಬ ಕಲ್ಯಾಣ ಯೋಜನೆಯ ಪರಿಹಾರ ಧನ ₹3 ಲಕ್ಷ ಇತ್ತು. ವಿವಿಧ ಕಾರಣಗಳಿಂದ ಮೃತಪಡುವವರ ಸಂಖ್ಯೆ ಹೆಚ್ಚಿರುವುದನ್ನು ಮನಗಂಡು ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿದ್ದವು. ಅದರಂತೆ ₹10 ಲಕ್ಷಕ್ಕೆ ಏರಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಕೇಂದ್ರ ಕಚೇರಿಯಲ್ಲಿ ಪರಿಹಾರದ ಚೆಕ್‌ಗಳನ್ನು ವಿತರಿಸಿದ ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ಮಾತನಾಡಿ, 'ಸಾರಿಗೆ ಸಿಬ್ಬಂದಿ ಶ್ರಮ ಜೀವಿಗಳಾಗಿದ್ದು, ನಿಗಮವು ಅವರ ಕಲ್ಯಾಣಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ' ಎಂದು ತಿಳಿಸಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತ) ನಂದಿನಿದೇವಿ, ಕಾರ್ಮಿಕ ಸಂಘಟನೆಗಳ ಮುಖಂಡರು, ಅಧಿಕಾರಿಗಳು ಇದ್ದರು.

ಸಮ್ಮೇಳನದ ಅಧ್ಯಕ್ಷರಾಗಿ ಚೌಡಯ್ಯ ಆಯ್ಕೆ

ಪ್ರಜಾವಾಣಿ ವಾರ್ತೆ

ಚೌಡಯ್ಯ

ನೆಲಮಂಗಲ: ಬಸವಣ್ಣದೇವರ ಮಠದಲ್ಲಿ ಫೆ.29ರಂದು ನಡೆಸಲು ನಿಶ್ಚಯಿಸಿರುವ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಸಾಹಿತಿ ಬಿ.ಚೌಡಯ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರದೀಪ್ ತಿಳಿಸಿದ್ದರೆ.

'ಶಿವನಹಳ್ಳಿ: ರಸ್ತೆಯಲ್ಲಿ ಜಲಮಂಡಳಿ ಗುಂಡಿ ತೋಡಿಲ್ಲ'

ಪ್ರಜಾವಾಣಿ ವಾರ್ತೆ

ಕನಕಪುರ: 'ಶಿವನಹಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ–209ರಲ್ಲಿ ಯಾವುದೇ ಕಾಮಗಾರಿ ಕೈಗೊಂಡಿಲ್ಲ. ಅಲ್ಲಿ ನಡೆದ ಕಾಮಗಾರಿ ಸ್ಥಳದಲ್ಲಿ ಸಂಭವಿಸಿದ ಅಪಘಾತಕ್ಕೂ ನಮಗೂ ಸಂಬಂಧ ಇಲ್ಲ' ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಸ್ಪಷ್ಟನೆ ನೀಡಿದೆ.

ಪತ್ರಿಕೆಯಲ್ಲಿ ಫೆ.12ರಂದು ಪ್ರಕಟವಾಗಿದ್ದ 'ಪೈಪ್‌ಲೈನ್ ಕಾಮಗಾರಿಗಾಗಿ ಬಿಡಬ್ಲ್ಯುಎಸ್‌ಎಸ್‌ಬಿ ತೋಡಿದ್ದ ಗುಂಡಿಯಲ್ಲಿ ಬಿದ್ದು ಬೈಕ್ ಸವಾರ ಸಾವಿಗೀಡಾಗಿದ್ದಾರೆ' ಎಂದು ಪೊಲೀಸರ ಮಾಹಿತಿಯನ್ನು ಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ (ಕಾವೇರಿ–2) ತಳ್ಳಿ ಹಾಕಿದ್ದಾರೆ.

'ಈ ಸ್ಥಳದಲ್ಲಿ ನಡೆದ ಅಪಘಾತಕ್ಕೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೂ ಯಾವುದೇ ಸಂಬಂಧ ಇಲ್ಲ' ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

'ಘಟನೆ ನಡೆದ ಸ್ಥಳದಲ್ಲಿ ಆರ್‌ಸಿಸಿ ವೆಂಟ್ ಅಳವಡಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಗುತ್ತಿಗೆದಾರರಾದ ಮೆ. ಗವಾರ್ ಬೆಂಗಳೂರು ಹೈವೇಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ ರಸ್ತೆ ಅಗೆದಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ನಾಪತ್ತೆಯಾಗಿದ್ದ ವೃದ್ಧನ ಮೃತದೇಹ ಕೆರೆಯಲ್ಲಿ ಪತ್ತೆ

ಬೆಂಗಳೂರು: ಮನೆಯಿಂದ ನಾಪತ್ತೆಯಾಗಿದ್ದ ವೃದ್ಧ ನಾರಾಯಣಸ್ವಾಮಿ (60) ಅವರ ಮೃತದೇಹ ಸ್ಯಾಂಕಿ ಕೆರೆಯಲ್ಲಿ ಬುಧವಾರ ಪತ್ತೆಯಾಗಿದ್ದು, ಈ ಬಗ್ಗೆ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಬಸವೇಶ್ವರನಗರ ನಿವಾಸಿ ನಾರಾಯಣಸ್ವಾಮಿ, ಫೆ. 12ರಂದು ಮನೆಯಿಂದ ನಾಪತ್ತೆಯಾಗಿದ್ದರು. ಹಲವೆಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ. ನಾಪತ್ತೆ ಬಗ್ಗೆ ಕುಟುಂಬಸ್ಥರು ಬಸವೇಶ್ವರನಗರ ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ನಾರಾಯಣಸ್ವಾಮಿ, ಜಿಗುಪ್ಸೆಗೊಂಡು ಸ್ಯಾಂಕಿ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ. ಕೆರೆಯಲ್ಲಿ ಮೃತದೇಹ ನೋಡಿದ್ದ ವಾಯುವಿಹಾರಿಗಳು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿತ್ತು' ಎಂದು ತಿಳಿಸಿವೆ.

'ಆರಂಭದಲ್ಲಿ ಮೃತ ವ್ಯಕ್ತಿ ಹೆಸರು ಗೊತ್ತಾಗಿರಲಿಲ್ಲ. ಫೋಟೊವನ್ನು ನಗರ ಹಾಗೂ ಹೊರ ಜಿಲ್ಲೆಗಳ ಠಾಣೆಗಳಿಗೆ ಕಳುಹಿಸಲಾಗಿತ್ತು. ಬಸವೇಶ್ವರನಗರ ಠಾಣೆ ಪೊಲೀಸರು, ಸಂಬಂಧಿಕರನ್ನು ಕರೆತಂದು ಮೃತದೇಹ ಗುರುತಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಕೆಮಿಕಲ್ ಸೊಸೈಟಿ ಉದ್ಘಾಟನೆ: ಅತಿಥಿಗಳು: ಎಲ್. ಗೋಮತಿ ದೇವಿ, ಅಧ್ಯಕ್ಷತೆ: ಎಸ್.ಎಂ. ಜಯಕರ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಸಂತ ಸೇವಾಲಾಲ್ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಜಮೀರ್ ಅಹಮದ್ ಖಾನ್, ಎಚ್.ಸಿ. ಮಹದೇವಪ್ಪ, ರುದ್ರಪ್ಪ ಲಮಾಣಿ, ಆರ್. ಅಶೋಕ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

ನಾದಜ್ಯೋತಿ ಸಂಗೀತ ಸಂಭ್ರಮ–2024: ಗಾಯನ: ಟಿ.ವಿ. ರಾಮಪ್ರಸಾದ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಅರ್ಜುನ್ ಕುಮಾರ್, ಖಂಜೀರಾ: ಎ.ಎಸ್.ಎನ್. ಸ್ವಾಮಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಮನೋಹರ್ ಮತ್ತು ವಿಜಯ ಮನೋಹರ್ ಸವಿನೆನಪು: ಉದ್ಘಾಟನೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳು: ಸುವರ್ಣ ಅಮರನಾಥ್, ಬಿ.ಎಸ್. ಜ್ಞಾನಪ್ರಕಾಶ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: 'ಭಗವದ್ಗೀತೆ' ಕುರಿತು ಉಪನ್ಯಾಸ: ಗೋಪಾಲ್ ಅಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಗೀತಾ ಭತ್ತದ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಪೃಥ್ವಿ, ಶ್ರೇಯಾ, ಪೂಜಾ, ಸ್ತುತಿ, ಸಮತಾ, ಪ್ರಣತಿ, ನಿರ್ದೇಶನ: ಸಹನಾ ಎಸ್. ಭಾರಧ್ವಾಜ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ನೀರಿನ ಬವಣೆ: ಕೆಂಗೇರಿಯಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ನೀರಿನ ಬವಣೆಯಿಂದ ಬೇಸತ್ತ ಕೆಂಗೇರಿ-ಉಪನಗರ ಸುತ್ತಮುತ್ತಲ ಮಹಿಳೆಯರು ಖಾಲಿ ಕೊಡದೊಂದಿಗೆ ಸ್ಥಳೀಯ ಜಲಮಂಡಳಿ ಕಚೇರಿ ಎದುರು ಈಚೆಗೆ ಪ್ರತಿಭಟನೆ ನಡೆಸಿದರು.

'ಕೆಂಗೇರಿ-ಉಪನಗರ, ಶಿರ್ಕೆ, ವಳಗೇರಹಳ್ಳಿ, ರಾಜು ಲೇಔಟ್, ವಿಶ್ವೇಶ್ವರಯ್ಯ ಲೇಔಟ್, ನಾಗದೇವನಹಳ್ಳಿ, ಉಲ್ಲಾಳ ಸೇರಿದಂತೆ ಈ ಭಾಗದ ಬಹುತೇಕ ಎಲ್ಲಾ ಪ್ರದೇಶದಲ್ಲೂ 4-5 ದಿನಗಳಿಗೆ ಒಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ. ಸಮಯದ ಲಾಭ ಪಡೆದುಕೊಳ್ಳುತ್ತಿರುವ ಖಾಸಗಿ ನೀರು ಸರಬರಾಜುದಾರರು ಟ್ಯಾಂಕರ್ ಒಂದಕ್ಕೆ ಸುಮಾರು ₹800 ಹಣ ವಸೂಲಿ ಮಾಡುತ್ತಿದ್ದಾರೆ' ಎಂದು ದೂರಿದರು.

ಕೆಂಗೇರಿಯ ಜಲಮಂಡಳಿ ಕಚೇರಿ ಎದುರು ಸ್ಥಳೀಯರು ಖಾಲಿ ಕೊಡಗಳೊಂದಿಗೆ ಪ್ರತಿಭಟನೆ ನಡೆಸಿದರು

ಜಲಮಂಡಳಿ ಕಚೇರಿ ಎದುರು ಪ್ರತಿಭಟನೆ ನಡೆಸಿ, ಸಮರ್ಪಕವಾಗಿ ನೀರು ಸರಬರಾಜು ಮಾಡುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

'ಕುಡಿಯುವ ನೀರಿಗೆ ಹಾಹಕಾರ ಎದುರಾಗಿದೆ. ಶೌಚಾಲಯಕ್ಕೆ ಹೋಗಲೂ ನೀರಿಲ್ಲದೆ ಪಡಿಪಾಟಲು ಪಡುವಂತಾಗಿದೆ' ಎಂದು ಗೃಹಿಣಿ ಪದ್ಮಮ್ಮ ಹೇಳಿದರು.

ಬೆಂಗಳೂರು ಜಲ ಮಂಡಳಿ ಎಇಇ ದೀಪಕ್ ಮತ್ತು ಎಇ ರಾಹುಲ್ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ಬಿಬಿಎಂಪಿ ಮಾಜಿ ಸದಸ್ಯ ರ.ಅಂಜನಪ್ಪ ಮಾತನಾಡಿ, 'ಜಲಮೂಲಗಳ ಸಂರಕ್ಷಣೆಗೆ ತೋರಿದ ಉದಾಸೀನದಿಂದ ಇಂತಹ ದುರ್ಗತಿ ನಿರ್ಮಾಣವಾಗಿದೆ. ನೀರು ಸರಬರಾಜು ಮಾಡಲು ಜಲಮಂಡಳಿ ಹಾಗೂ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಬೆಂಗಳೂರು ಜಲಮಂಡಳಿ ಅಧ್ಯಕ್ಷರು ಹಾಗೂ ಮೇಲಧಿಕಾರಿಗಳ ಜೊತೆ ಮಾತನಾಡಿ ಮುಂದಿನ ದಿನಗಳಲ್ಲಿ ಕಾವೇರಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಬೆಂಗಳೂರು ಜಲಮಂಡಳಿ ಪ್ರಾದೇಶಿಕ ಮುಖ್ಯ ಎಂಜಿನಿಯರ್ ಮಹದೇವಗೌಡ ಭರವಸೆ ನೀಡಿದರು.

ಜಲಕ್ಷಾಮದ ಭೀತಿ: ಕುಡಿಯುವ ನೀರಿಗೆ ಬರ, ಟ್ಯಾಂಕರ್‌ಗಳಿಗೆ ಬೇಡಿಕೆ

ಬೊಮ್ಮನಹಳ್ಳಿ: ಅಂತರ್ಜಲ ಕುಸಿತ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಬೊಮ್ಮನಹಳ್ಳಿಯಲ್ಲಿ ಕುಡಿಯುವ ನೀರಿನ ಬರ ಎದುರಾಗಿದೆ. ಮಳೆಯ ತೀವ್ರ ಅಭಾವದಿಂದಾಗಿ ಅಂತರ್ಜಲ ಕುಸಿತ ಕಂಡಿದ್ದು, 1,200 ಅಡಿ ಕೊರೆದರೂ ನೀರು ಸಿಗುತ್ತಿಲ್ಲ. ಬಹುತೇಕ ಕೊಳವೆಬಾವಿಗಳಲ್ಲಿ ಜೀವಜಲ ಪಾತಾಳಕ್ಕೆ ಇಳಿದಿದೆ.

ಅಗತ್ಯವಿರುವಷ್ಟು ಕಾವೇರಿ ನೀರು ಲಭ್ಯವಾಗದ ಕಾರಣ, ಟ್ಯಾಂಕರ್ ನೀರಿಗೆ ಬೇಡಿಕೆ ಹೆಚ್ಚಾಗಿದೆ. ಬೇಡಿಕೆ ಏರುತ್ತಿದ್ದಂತೆ, ಟ್ಯಾಂಕರ್ ನೀರು ಪೂರೈಕೆದಾರರು ದರಗಳನ್ನು ₹900 ರಿಂದ ₹1,000ಕ್ಕೆ ಹೆಚ್ಚಿಸಿದ್ದಾರೆ. ಇದು ₹1,500ರವರೆಗೂ ವಸೂಲಿ ಮಾಡುತ್ತಿದ್ದಾರೆ. ಕೊಳವೆಬಾವಿಗಳು ಬತ್ತಿದ ಕಾರಣ, ಕೆಲವೆಡೆ ನೀರು ಶುದ್ಧೀಕರಣ ಘಟಕಗಳು ಸ್ಥಗಿತಗೊಂಡಿವೆ. ಇದರಿಂದಾಗಿ ಕುಡಿಯುವ ನೀರಿಗೂ ತತ್ವಾರ ಎದುರಾಗಿದೆ.

ಬಂಡೇಪಾಳ್ಯ, ಚಿಕ್ಕಬೇಗೂರು ಗೇಟ್, ಮೈಕೋ ಬಡಾವಣೆ, ಹೊಂಗಸಂದ್ರ, ಬಿಳೇಕಹಳ್ಳಿ, ಕೋಡಿಚಿಕ್ಕನಹಳ್ಳಿ ಸೇರಿದಂತೆ ಬಹುತೇಕ ಪ್ರದೇಶಗಳು ನೀರಿನ ಅಭಾವ ಎದುರಿಸುತ್ತಿವೆ. ಎಚ್‌ಎಸ್‌ಆರ್ ಬಡಾವಣೆ ಯಲ್ಲಿ ಪ್ರತಿಷ್ಠಿತ ಅಪಾರ್ಟ್ ಮೆಂಟ್ ಸಮುಚ್ಚಯಗಳು ಹಾಗೂ ಪ್ರಭಾವಿಗಳು ವಾಸಿಸುವ ರಸ್ತೆಗಳಿಗೆ ಕಾವೇರಿ ನೀರು ಸರಾಗವಾಗಿ ಹರಿಯುತ್ತದೆ. ಆದರೆ, ಸಾಮಾನ್ಯರು ವಾಸಿಸುವ ಪ್ರದೇಶ ಗಳಿಗೆ ನೀರು ಸಿಗುತ್ತಿಲ್ಲ ಎಂಬ ಗಂಭೀರ ದೂರುಗಳು ಕೇಳಿ ಬಂದಿವೆ.

ಕೊಳವೆಬಾವಿ ಕೊರೆಸಲು ಇಲ್ಲ ಕಡಿವಾಣ: ಅಂತರ್ಜಲ ಅಭಿವೃದ್ಧಿ ಮತ್ತು ಅತಿ ಬಳಕೆ ಕುರಿತಾಗಿ ಜಾರಿಯಲ್ಲಿರುವ 'ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಮಯ ಹಾಗೂ ನಿಯಂತ್ರಣ) ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಪ್ರಕಾರ ಕೊಳವೆಬಾವಿ ಕೊರೆಯಲು ಜಲಮಂಡಳಿಯಿಂದ ಪರವಾನಗಿ ಪಡೆಯುವುದು ಕಡ್ಡಾಯ. ಆದರೆ ಪರವಾನಗಿ ಇಲ್ಲದೆಯೇ ಭೂಮಿಯ ಒಡಲನ್ನು ಮನಸೋಇಚ್ಛೆ ಬಗೆಯಲಾಗುತ್ತಿದೆ.

'ಎಲ್ಲೆಲ್ಲೂ ಕೊಳವೆಬಾವಿಗಳ ಕೊರೆತದ ಮೊರೆತ ಹೆಚ್ಚಾಗಿದ್ದರೂ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ' ಎಂದು ಸ್ಥಳೀಯರು ದೂರಿದ್ದಾರೆ.

'ನಮ್ಮ ಅಪಾರ್ಟ್‌ಮೆಂಟ್ ನಲ್ಲಿ 80 ಕುಟುಂಬಗಳಿವೆ, ಮೂರು ಕೊಳವೆ ಬಾವಿಗಳಿದ್ದವು, ಎಲ್ಲವೂ ಬತ್ತಿಹೋಗಿವೆ. ಇದೀಗ ಟ್ಯಾಂಕರ್ ನೀರನ್ನೇ ಅವಲಂಬಿ ಸಿದ್ದೇವೆ. ತಿಂಗಳಿಗೆ ನೀರಿಗಾಗಿ ಪ್ರತಿ ಮನೆಗೆ ಸುಮಾರು ₹2000ದಿಂದ ₹2500 ಭರಿಸುತ್ತಿದ್ದೇವೆ. ಬೇಡಿಕೆ ಹೆಚ್ಚಿದಂತೆ ದರವೂ ಏರುತ್ತಿದ್ದು, ಬೇಸಿಗೆಯಲ್ಲಿ ಪರಿಸ್ಥಿತಿ ಎದುರಿಸುವುದು ಹೇಗೆಂಬ ಚಿಂತೆ ಶುರುವಾಗಿದೆ' ಎಂದು ಮೈಕೋ ಬಡಾವಣೆಯ ಕ್ರೆಡೆನ್ಸ್ ಫ್ಲೋರಾ ಅಪಾರ್ಟ್ ಮೆಂಟ್ ನ ನಿವಾಸಿ ಸಂದೀಪ್ ರೆಡ್ಡಿ ಬೇಸರ ವ್ಯಕ್ತಪಡಿಸಿದರು.

'ಬಂಡೇಪಾಳ್ಯದಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಾಗಿದ್ದೇವೆ. ಇಲ್ಲಿ ಹತ್ತು ದಿನಗಳಿಗೊಮ್ಮೆ ಒಂದು ಬಾರಿ ಮುಕ್ಕಾಲು ಗಂಟೆ ಕಾವೇರಿ ನೀರು ಬಿಡುತ್ತಾರೆ. 4 ಸಾವಿರ ಲೀಟರ್ ಟ್ಯಾಂಕರ್ ನೀರಿಗೆ ಈಗ ₹600 ರಿಂದ ₹700 ಇದೆ. ಬಡವರು ಬದುಕುವುದಾದರೂ ಹೇಗೆ' ಎಂದು ಸ್ಥಳೀಯ ನಿವಾಸಿ ನೀಲಮ್ಮ ಅಳಲು ತೋಡಿಕೊಂಡರು.

'ಜಲಮೂಲ ಸಂರಕ್ಷಿಸುವುದು, ತ್ಯಾಜ್ಯ ನೀರಿನ ಮರು ಬಳಕೆ, ಮಳೆ ನೀರು ಸಂಗ್ರಹ, ನೀರಿನ ಮಿತ ಬಳಕೆಯಂತಹ ಕಾರ್ಯಕ್ರಮಗಳು ಕೇವಲ ಕಾಗದದಲ್ಲೇ ಉಳಿದಿವೆ, ಇದರಲ್ಲಿ ಅಧಿಕಾರಶಾಹಿಯ ದಿವ್ಯ ನಿರ್ಲಕ್ಷ್ಯ ಎದ್ದು ಕಾಣುತ್ತದೆ' ಎನ್ನುತ್ತಾರೆ ಎಚ್‌ಎಸ್‌ಆರ್ ನಿವಾಸಿ ಡಾ.ನಾರಾಯಣರೆಡ್ಡಿ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶಾಸಕ ಎಂ.ಸತೀಶ್ ರೆಡ್ಡಿ, 'ನೀರಿನ ಸಮಸ್ಯೆ ಉಲ್ಬಣಗೊಂಡಿರುವುದು ಹೌದು. ಕಾವೇರಿ ನೀರಿನ ಪೂರೈಕೆ ಕಡಿಮೆಯಾಗಿದೆ. ಈ ಸಂಬಂಧ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅಭಾವ ಹೆಚ್ಚಿರುವ ಪ್ರದೇಶಗಳಿಗೆ ಜಲಮಂಡಳಿಯಿಂದಲೇ ಟ್ಯಾಂಕರ್ ನೀರು ಪೂರೈಕೆ ಮಾಡಬೇಕು ಮತ್ತು ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗದಂತೆ ನಿಗಾವಹಿಸುವಂತೆ ಸೂಚಿಸಿದ್ದೇನೆ' ಎಂದರು.

ಬೊಮ್ಮನಹಳ್ಳಿಯಲ್ಲಿ ದಿನದ 24 ಗಂಟೆಯೂ ನೀರಿನ ಟ್ಯಾಂಕರ್‌ಗಳ ಓಡಾಟವಿರುತ್ತದೆ

'ಇಚ್ಛಾಶಕ್ತಿ ಅಗತ್ಯ'

'ಅಂತರ್ಜಲ ಕುರಿತಾಗಿ ನಮ್ಮಲ್ಲಿ ಅಜ್ಞಾನ ಆವರಿಸಿದೆ. ಅಂತರ್ಜಲದ ಮಟ್ಟ ಅರಿಯಲು ದತ್ತಾಂಶ ಮುಖ್ಯ. ಆದರೆ, ದತ್ತಾಂಶ ಸಂಗ್ರಹಿಸುವ ವ್ಯವಸ್ಥೆಯಾಗಲಿ, ಕಾಳಜಿಯಾಗಲಿ ಕಾಣುತ್ತಿಲ್ಲ. ದಿನೇ ದಿನೇ ಮಣ್ಣಿನ ತೇವಾಂಶ ಸಾಮರ್ಥ್ಯ ಕ್ಷೀಣಿಸುತ್ತಿದೆ, ನೀರಿನ ಬಳಕೆಯ ವಿಧಾನವೇ ಅವೈಜ್ಞಾನಿಕವಾಗಿದೆ. ಆದ್ದರಿಂದ ಸರ್ಕಾರಿ ಸಂಸ್ಥೆಗಳು ಭೂ ಜಲದ ಕುರಿತು ಜಾಗೃತಿ ಮೂಡಿಸುವ ಜರೂರಿದೆ. ಕೆರೆಗಳ ನಿರ್ವಹಣೆ, ಮೋಡ ಬಿತ್ತನೆ, ಮಳೆ ನೀರು ಸಂಗ್ರಹವನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವುದು ಹಾಗೂ ನೀರಿನ ಬಳಕೆಯ ವಿಧಾನದಲ್ಲಿ ಬದಲಾವಣೆ ತರುವುದು ಇತ್ಯಾದಿ ಮಾರ್ಗಗಳಿಂದ ಜಲಕ್ಷಾಮವನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ. ಇದಕ್ಕೆ ಆಡಳಿತದ ಇಚ್ಛಾಶಕ್ತಿ ಮತ್ತು ಸಮುದಾಯದ ಸಹಭಾಗಿತ್ವ ಬೇಕು.

ಡಾ.ಪ್ರಕಾಶ್, ಭೂ ಜಲತಜ್ಞ ಹಾಗೂ ಕರ್ನಾಟಕ ಕೆರೆ ನಿರ್ವಹಣಾ ಪ್ರಾಧಿಕಾರದ ಸದಸ್ಯರು

'ರಥಸಪ್ತಮಿ' ನಾಳೆ

ಬೆಂಗಳೂರು: ಪತಂಜಲಿ ಯೋಗ ಶಿಕ್ಷಣ ಸಮಿತಿ ಇದೇ 16ರಂದು (ಶುಕ್ರವಾರ) ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ 'ರಥಸಪ್ತಮಿ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಬೆಳಿಗ್ಗೆ 4 ಗಂಟೆಯ ಬ್ರಾಹ್ಮಿ ಮುಹೂರ್ತದಲ್ಲಿ ಸೂರ್ಯ ಹೋಮ, ಬೆಳಿಗ್ಗೆ 5ಕ್ಕೆ 1008 ಅಗ್ನಿ ಹೋತ್ರ ಹಾಗೂ 108 ಸೂರ್ಯ ನಮಸ್ಕಾರ ಸಮರ್ಪಣೆ ಸಮಾರಂಭ ನಡೆಯಲಿದ್ದು, ಆಸಕ್ತರು ಭಾಗವಹಿಸಬಹುದು. ಬೆಳಿಗ್ಗೆ 6.50ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ, ಶಾಸಕ ಉದಯ್ ಬಿ. ಗರುಡಾಚಾರ್ ಭಾಗವಹಿಸಲಿದ್ದು, ಸಮಿತಿಯ ಮಾದೇವ್ ರಾವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 90085 05539

ಸಂವಾದ

ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಲೇಖಕ ಜಯಂತ್ ಕಾಯ್ಕಿಣಿ (ಎಡದಿಂದ ಎರಡನೆಯವರು) ರಚಿಸಿರುವ, ತೇಜಸ್ವಿನಿ ನಿರಂಜನ್ (ಎಡದಿಂದ ಮೊದಲನೆಯವರು) ಅನುವಾದಿಸಿದ್ದ 'ಮಿಥುನ್ ನಂಬರ್ ಟು' ಕೃತಿ ಕುರಿತು ಸಂವಾದ 'ಹೌ ಟು ಟೆಲ್ ಎ ಮುಂಬೈ ಸ್ಟೋರಿ' ಕಾರ್ಯಕ್ರಮದಲ್ಲಿ ವನಮಾಲಾ ವಿಶ್ವನಾಥ, ಇಂದಿರಾ ಚಂದ್ರಶೇಖರ್ ಪಾಲ್ಗೊಂಡಿದ್ದರು

ಮದ್ಯ ಮಾರಾಟ ಅವಧಿ ನಿರ್ಬಂಧ ಮಾರ್ಪಾಡು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 16ರಂದು ನಡೆಯಲಿರುವ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯ ಮತದಾನದ ಮುನ್ನ 48 ಗಂಟೆಗಳ ಅವಧಿಯಲ್ಲಿ ಮದ್ಯ ಮಾರಾಟಕ್ಕೆ ನಿಷೇಧ ಹೇರಿದ್ದ ಬೆಂಗಳೂರು ನಗರ ಜಿಲ್ಲಾಧಿಕಾರಿ ಆದೇಶವನ್ನು ಮಾರ್ಪಾಡು ಮಾಡಿ ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿ ಇದೇ 1ರಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘಟನೆ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಮದ್ಯ ಮಾರಾಟ ನಿಷೇಧವನ್ನು ಮತದಾನದ ಮತ್ತು ಮತ ಎಣಿಕೆಯ ದಿನಕ್ಕೆ ಮಾತ್ರವೇ ಸೀಮಿತಗೊಳಿಸಿ ಆದೇಶಿಸಿದೆ.

'ಮತದಾರರು ಶಿಕ್ಷಕರಾಗಿದ್ದು, ಮದ್ಯ ಮಾರಾಟ ನಿರ್ಬಂಧಿಸದೇ ಹೋದರೆ ಶಿಕ್ಷಕರು ಮದ್ಯ ಸೇವಿಸುತ್ತಾರೆ ಎಂದು ಭಾವಿಸಬೇಕಿಲ್ಲ. ಮುಕ್ತ ಹಾಗೂ ನ್ಯಾಯಸಮ್ಮತ ಮತದಾನಕ್ಕೆ 48 ಗಂಟೆಗಳ ನಿರ್ಬಂಧ ಅಗತ್ಯವಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಉಪ ಚುನಾವಣೆ ಹಿನ್ನೆಲೆಯಲ್ಲಿ ಇದೇ 14ರಂದು ಸಂಜೆ 5ರಿಂದ ಮತದಾನ ನಡೆಯುವ ಇದೇ 16ರ ಮಧ್ಯರಾತ್ರಿ 12ರವರೆಗೆ ಮತ್ತು ಮತ ಎಣಿಕೆ ದಿನವಾದ ಇದೇ 20ರಂದು ಬೆಳಗ್ಗೆ 6 ರಿಂದ ಮಧ್ಯರಾತ್ರಿ 12 ಗಂಟೆಯವರೆಗೆ ಬೆಂಗಳೂರು ನಗರ ಮತ್ತು ನಗರದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿನ ಸಗಟು ಮತ್ತು ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ಮುಚ್ಚಲು ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಲಾಗಿತ್ತು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಹಾಗೂ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಹಾಜರಾಗಿದ್ದರು.

ಶಿಕ್ಷಕ ಮತದಾರರಿಗೆ ನಾಳೆ ಸಾಂದರ್ಭಿಕ ರಜೆ ಮಂಜೂರು

ಬೆಂಗಳೂರು: ವಿಧಾನ ಪರಿಷತ್ತಿಗೆ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಇದೇ 16ರಂದು ಉಪ ಚುನಾವಣೆ ನಡೆಯಲಿದ್ದು, ಕ್ಷೇತ್ರ ವ್ಯಾಪ್ತಿಯ ಅರ್ಹ ಶಿಕ್ಷಕ ಮತದಾರರಿಗೆ ಅಂದು ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಿಬಿಎಂಪಿ, ರಾಮನಗರ ಜಿಲ್ಲೆ ಮತ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಇಲ್ಲಿನ ಸರ್ಕಾರಿ, ಖಾಸಗಿ ಶಾಲಾ ಕಾಲೇಜುಗಳು, ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಸೇರಿದಂತೆ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಅರ್ಹ ಮತದಾರರಿಗೆ ಈ ಆದೇಶ ಅನ್ವಯವಾಗಲಿದೆ. ಮತದಾನದಲ್ಲಿ ಭಾಗವಹಿಸಲು ಪೂರ್ವಾನುಮತಿ ಪಡೆಯಬೇಕೆಂಬ ಷರತ್ತಿಗೆ ಒಳಪಟ್ಟು ಈ ರಜೆ ಮಂಜೂರು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಸನ್ನದು ನೋಂದಣಿ: ಪರಿಷತ್ ಆದೇಶ ರದ್ದು

ಬೆಂಗಳೂರು: ಸೇವಾವಧಿಯಲ್ಲಿ ಕಾನೂನು ಪದವಿ ಪಡೆದಿದ್ದ ಸರ್ಕಾರಿ ನೌಕರರೊಬ್ಬರು, 'ಕಾನೂನು ಪದವಿ ತರಗತಿಗಳಿಗೆ ಹಾಜರಾಗಿರುವ ದಾಖಲೆಗಳನ್ನು ಹಾಜರುಪಡಿಸಿಲ್ಲ' ಎಂಬ ಕಾರಣಕ್ಕೆ ಅವರ ವಕೀಲಿಕೆ ಸನ್ನದು ನೋಂದಣಿಗೆ ನಿರಾಕರಿಸಿ ಆದೇಶಿಸಿದ್ದ ರಾಜ್ಯ ವಕೀಲರ ಪರಿಷತ್ ಕ್ರಮವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ರಾಜ್ಯ ವಕೀಲರ ಪರಿಷತ್ ಕಾರ್ಯದರ್ಶಿ ಆದೇಶ ರದ್ದುಗೊಳಿಸುವಂತೆ ಕೋರಿ ಬೀದರ್‌ನ ಸಿವಿಲ್ ನ್ಯಾಯಾಲಯದ ನಿವೃತ್ತ ಸಹಾಯಕ ರಿಜಿಸ್ಟ್ರಾರ್ ಶೆಲ್ಟನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. 'ಅರ್ಜಿದಾರರಿಂದ ನೋಂದಣಿಗೆ ಹೊಸದಾಗಿ ಅರ್ಜಿ ಪಡೆದು, ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ' ಎಂದು ಪರಿಷತ್‌ಗೆ ನಿರ್ದೇಶಿಸಿದೆ.

'ವಿಶ್ವವಿದ್ಯಾಲಯ ಅರ್ಜಿದಾರರಿಗೆ ತಾತ್ಕಾಲಿಕ ಪದವಿ ಹಾಗೂ ಘಟಿಕೋತ್ಸವ ಪ್ರಮಾಣ ಪತ್ರವನ್ನು ನೀಡಿರುವಾಗ, ಕಾನೂನು ಪದವಿ ಪ್ರಮಾಣ ಪತ್ರ ಪಡೆಯಲು ಅರ್ಹರಲ್ಲ ಎಂದು ಹೇಳಲಾಗದು' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ಅರ್ಜಿದಾರರು ಟೈಪಿಸ್ಟ್ ಆಗಿ ಕೆಲಸಕ್ಕೆ ಸೇರಿದ್ದರು ಮತ್ತು ಸೇವಾವಧಿಯಲ್ಲಿ ಕಾನೂನು ಪದವಿ ಪೂರೈಸಿದ್ದರು. ಇವರಿಗೆ ಗುಲ್ಬರ್ಗಾ ವಿ.ವಿಯಿಂದ ಪದವಿ ಮತ್ತು ಘಟಿಕೋತ್ಸವ ಪ್ರಮಾಣಪತ್ರ ಪ್ರದಾನ ಮಾಡಲಾಗಿತ್ತು. ನಿವೃತ್ತರಾದ ನಂತರ ವಕೀಲರಾಗಿ ನೋಂದಾಯಿಸಲು ರಾಜ್ಯ ವಕೀಲರ ಪರಿಷತ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ಪರಿಷತ್, 'ಶೆಲ್ಟನ್ ಪದವಿ ಪ್ರಮಾಣಪತ್ರ ಪಡೆಯಲು ಅರ್ಹರಲ್ಲ' ಎಂಬ ಕಾರಣ ನೀಡಿ ಅರ್ಜಿಯನ್ನು ತಿರಸ್ಕರಿಸಿತ್ತು. ಅರ್ಜಿದಾರರ ಪರ ವಕೀಲ ಎಚ್.ಎಲ್.ಪ್ರದೀಪ್ ಕುಮಾರ್, ರಾಜ್ಯ ವಕೀಲರ ಪರಿಷತ್ ಪರ ಜಿ.ನಟರಾಜ್ ಮತ್ತು ಭಾರತೀಯ ವಕೀಲರ ಪರಿಷತ್ ಪರವಾಗಿ ಶ್ರೀಧರ್ ಪ್ರಭು ವಾದ ಮಂಡಿಸಿದರು.

ಮಾರ್ಚ್ 2 ರಂದು ಮಹಾಕಾವ್ಯ ಲೋಕಾರ್ಪಣೆ

ಚಿಕ್ಕಬಳ್ಳಾಪುರ: ಕಾಂಗ್ರೆಸ್ ನಾಯಕ ಎಂ.ವೀರಪ್ಪ ಮೊಯಿಲಿ ಅವರ 'ವಿಶ್ವ ಸಂಸ್ಕೃತಿಯ ಮಹಾಯಾನ' ಗದ್ಯ ಮಹಾಕಾವ್ಯವು ಮಾರ್ಚ್ 2ರಂದು ಇಲ್ಲಿ ಲೋಕಾರ್ಪಣೆಗೊಳ್ಳಲಿದೆ.

ತಾಲ್ಲೂಕಿನ ಯಲುವಹಳ್ಳಿಯಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಮೊಯಿಲಿ, ಮೊದಲ ಸಂಪುಟ ಮಾತ್ರ ಬಿಡುಗಡೆ ಆಗಲಿದೆ. ಉಳಿದ ಮೂರು ಸಂಪುಟಗಳು ನಂತರದ ದಿನಗಳಲ್ಲಿ ಬಿಡುಗಡೆ ಆಗಲಿದೆ ಎಂದು ವಿವರಿಸಿದರು.

ಮಣ್ಣಿನ ಫಲವತ್ತತೆ ಹೆಚ್ಚಿಸಿಕೊಳ್ಳಲು ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಸಮರ್ಪಕ ನೀರಾವರಿ ಮತ್ತು ರಸಗೊಬ್ಬರಗಳ ಬಳಕೆಯಿಂದ ಮಣ್ಣಿನ ಗುಣಧರ್ಮಗಳು ಕ್ಷೀಣಿಸುತ್ತಿವೆ. ಆದ್ದರಿಂದ, ಜಮೀನಿನಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಮಣ್ಣಿನ ಫಲವತ್ತತೆ ಹೆಚ್ಚಿಸಿಕೊಳ್ಳಬೇಕು' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಾಗೂ ಹೈದರಾಬಾದ್ ವಿಸ್ತರಣಾ ಶಿಕ್ಷಣ ಸಂಸ್ಥೆಯ ಸಹಯೋಗದಲ್ಲಿ ಬುಧವಾರ ನಡೆದ 'ಸುಸ್ಥಿರ ಕೃಷಿಗಾಗಿ ನೈಸರ್ಗಿಕ ಕೃಷಿ' ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕಡಿಮೆ ಬಂಡವಾಳದಿಂದ ಹೆಚ್ಚಿನ ಇಳುವರಿ ಮತ್ತು ಉತ್ಪಾದಕತೆ ಪಡೆಯಲು ರೈತರು ಮುಂದಾಗಬೇಕು. ಸಾವಯವ ಮತ್ತು ನೈಸರ್ಗಿಕ ಕೃಷಿಯಿಂದ ಬೆಳೆದ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗಬೇಕು. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಒದಗಿಸುವ ವಿಷಯವನ್ನೂ ಗಮನದಲ್ಲಿಟ್ಟುಕೊಂಡು ಸುಸ್ಥಿರ ಕೃಷಿಗಾಗಿ ನೈಸರ್ಗಿಕ ಕೃಷಿಯನ್ನು ಹಂತ-ಹಂತವಾಗಿ ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

ಹೈದರಾಬಾದ್ ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕ ಕೆ. ಮಧುಬಾಬು, 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಪ್ರತಿವರ್ಷ ಎರಡು ತರಬೇತಿ ಕಾರ್ಯಕ್ರಮಗಳನ್ನು ವಿವಿಧ ಅಭಿವೃದ್ಧಿ ಇಲಾಖೆಗಳ ಅಧಿಕಾರಿಗಳಿಗೆ ನೀಡಲಾಗುತ್ತಿದೆ. ಸಮಯೋಚಿತ ತರಬೇತಿಯಿಂದ ಅಧಿಕಾರಿಗಳಿಗೆ ಕೃಷಿಯಲ್ಲಿನ ಇತ್ತೀಚಿನ ಸಂಶೋಧನೆಗಳು ಮನದಟ್ಟು ಮಾಡಿಕೊಳ್ಳಲು ಸಹಾಯವಾಗಲಿದೆ' ಎಂದು ಮಾಹಿತಿ ನೀಡಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್, ಪ್ರಾಧ್ಯಾಪಕ ಎನ್. ಪ್ರವೀಣ್, ತರಬೇತಿಯ ಸಂಯೋಜಕ ಕೆ. ಶಿವರಾಮು ಭಾಗವಹಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಕ್ಲಾಸಿಫೈಡ್ಸ್ CONNECT

JOB OPPORTUNITIES

Wanted

WANTED
- Female Business Development Manager
- Senior HR Manager
for a Manpower Service Provider
Accommodation Available
mail your resume to headhr.grpsusfgroup@gmail.com
80501 87236

General

WANTED IMMEDIATELY PLACEMENT MANAGER, TRAVELS MANAGER, BUSINESS EXECUTIVES, RECEPTIONIST, TELECALLERS, CAB DRIVERS. Good Salary. Bengaluru South Candidates Call: 99000-54461/62

Teachers/ Professors

SRI-AYYAPPAN EDUCATIONAL INSTITUTIONS JAYAMAHAL-BANGALORE-46. (Phone:-23433008) WANTED TRAINED GRADUATE TEACHERS: For SCIENCE, SOCIAL SCIENCE For PRIMARY and HIGH SCHOOL "IMMEDIATE APPOINTMENT"

BUSINESS

Business to Business

Business

WANTED BUSINESS PARTNERS For Saree Business 10 Lakhs Investment Monthly Income 4 Lakhs: 8892501007/ 9606701007

Business Offers

Finance

WANTED BUSINESS Partners Gold Business 5, 10, 25 Lakhs Investment Monthly Income 1Lakhs WE PURCHASE GOLD Contact: 8892501007/ 9606701007

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

REAL ESTATE SELLING

Commerical

Out-Station

1) 85 ACR, 4 LAC 2) 950, 2400 ACR, 7 LAC 3) 480 ACR 11 LAC 4) 500 ACR ESTATE / HI TEC DAIRY 2K CR TOTAL 5) 72 ACR (75 LAC) BEST FOR LAYOUT - 9448182899

PERSONAL

Lost

DOCUMENT MISPLACED
I, meera saksena residing at #21, Jakkur, Bellary Road, Bangalore have misplaced my original documents bearing document No BNG (U)- YLNk/ 20379 2003-2004 and document No BNG (U)- YLNK/ 20428 2003-2004 registered at sub registrar 's office Yelahanka. If any one finders Please Contact : 9844443952

TRAVEL CORNER

EDUCATIONAL

Special Courses

DIPLOMA IN Life Skills & Emotional Intelligence 6 months, ONLINE, Starts 15 Feb. For parents teachers, counsellors. Become a Life Skills&EI coach. WhatsApp 9886044221 www.darwinpsychologycentre.com

AUTOMOTIVE

Four Wheelers Selling

Mahindra

NEED SALVAGE Quotation of vehicle #KA-53 MA-3475 Accident Damage Vehicle- M&M Quanto C6, 2013, (Without R.C) NIC Claim. Contact-9845002975

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಿಂದ ಇಂದು ಜಾಗೃತಿ ಕಾರ್ಯಕ್ರಮ

ಮಕ್ಕಳಲ್ಲಿ ರಕ್ತ ಕ್ಯಾನ್ಸರ್ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳಲ್ಲಿಯೂ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿದ್ದು, ಪ್ರತಿ ವರ್ಷ ಸರಾಸರಿ 500 ಪ್ರಕರಣಗಳು ಹೊಸದಾಗಿ ನೋಂದಣಿಯಾಗುತ್ತಿವೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ಫೆ.15ರಂದು ಅಂತರರಾಷ್ಟ್ರೀಯ ಮಕ್ಕಳ ಕ್ಯಾನ್ಸರ್ ದಿನದ ಪ್ರಯುಕ್ತ ಸಂಸ್ಥೆಯು ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಸಂಸ್ಥೆಯ ಮಕ್ಕಳ ಗಂಥಿ ವಿಜ್ಞಾನ ವಿಭಾಗದ ದಾಖಲಾತಿ ಪ್ರಕಾರ ಕಳೆದ ವರ್ಷ 1,800 ಹೊರರೋಗಿಗಳು ಭೇಟಿ ನೀಡಿದ್ದಾರೆ. ಕ್ಯಾನ್ಸರ್ ಪೀಡಿತ ಮಕ್ಕಳಲ್ಲಿ ಹೆಚ್ಚಿನವರು ರಕ್ತದ ಕ್ಯಾನ್ಸರ್ (ಲ್ಯುಕೇಮಿಯಾ ಮತ್ತು ಲಿಂಫೋಮಾ), ಮಿದುಳು ಕ್ಯಾನ್ಸರ್‌ಗೆ ಒಳಗಾಗುತ್ತಿದ್ದಾರೆ.

'ಯಾವುದೇ ಶಂಕಿತ ಕ್ಯಾನ್ಸರ್ ಗೆಡ್ಡೆ ಇದ್ದರೆ ಮಕ್ಕಳನ್ನು ತಪಾಸಣೆಗೆ ಒಳಪಡಿಸಬೇಕು. ತಡವಾಗಿ ತಪಾಸಣೆಗೆ ಒಳಪಡಿಸಿ, ಚಿಕಿತ್ಸೆ ನೀಡಿದಲ್ಲಿ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಳ್ಳಲಿದೆ. ಸಾರ್ವಜನಿಕರು ಮತ್ತು ವೈದ್ಯಕೀಯ ವೃತ್ತಿಪರರಲ್ಲಿ ಮಕ್ಕಳ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವುದು ಅಗತ್ಯ' ಎಂದು ಸಂಸ್ಥೆ ನಿರ್ದೇಶಕ ಸೈಯದ್ ಅಲ್ತಾಫ್ ತಿಳಿಸಿದ್ದಾರೆ.

'ಸಂಸ್ಥೆಗೆ ಚಿಕಿತ್ಸೆಗಾಗಿ ಕರ್ನಾಟಕ ಮಾತ್ರವಲ್ಲದೆ, ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಹಾಗೂ ಈಶಾನ್ಯ ರಾಜ್ಯಗಳ ಜನರು ಬರುತ್ತಿದ್ದಾರೆ. ಸಂಸ್ಥೆಯಲ್ಲಿ 16 ಬೆಡ್‌ಗಳ ಮಕ್ಕಳ ತೀವ್ರ ನಿಗಾ ಘಟಕ (ಪಿಐಸಿಯು) ಇದೆ. 75 ಬೆಡ್‌ಗಳ ಕ್ಯೂರ್ ವಾರ್ಡ್ ಮಕ್ಕಳ ಚಿಕಿತ್ಸೆಗೆ ಸಹಕಾರಿಯಾಗಿದೆ. ಸದ್ಯ ಸಂಸ್ಥೆಯಲ್ಲಿ 'ಆಟೋಲೋಗಸ್' ಕಸಿ ಮಾಡಲಾಗುತ್ತಿದ್ದು, ಶೀಘ್ರದಲ್ಲಿಯೇ 'ಅಲೋಜೆನಿಕ್' ಕಸಿ ಪ್ರಾರಂಭಿಸಲಾಗುವುದು' ಎಂದಿದ್ದಾರೆ.

'ಅಸಹಜ ಗೆಡ್ಡೆ, ತೀವ್ರ ಜ್ವರ, ರಕ್ತಸ್ರಾವ, ವಾಂತಿಯೊಂದಿಗೆ ಆಗಾಗ ತಲೆನೋವು, ತೂಕ ನಷ್ಟ ಸೇರಿ ವಿವಿಧ ಕ್ಯಾನ್ಸರ್ ಲಕ್ಷಣಗಳು ಮಕ್ಕಳಲ್ಲಿ ಕಾಣಿಸಿಕೊಂಡರೆ ತಪಾಸಣೆಗೆ ಒಳಪಡಿಸಬೇಕು. ಚಿಕಿತ್ಸೆಗೆ ಸಂಬಂಧಿಸಿದಂತೆ ಸಂಸ್ಥೆಯು ವೈದ್ಯಕೀಯ ಅಧಿಕಾರಿಗಳಿಗೆ ತರಬೇತಿಯನ್ನೂ ನೀಡಲಾಗುತ್ತಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೆಂಗಿ: 44 ದಿನಗಳಲ್ಲಿ 575 ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಈ ವರ್ಷ ಆರಂಭದಲ್ಲಿಯೇ ಅಧಿಕ ಡೆಂಗಿ ಪ್ರಕರಣಗಳು ಪತ್ತೆಯಾಗುತ್ತಿದ್ದು, ಕಳೆದ 44 ದಿನಗಳಲ್ಲಿ 575 ಪ್ರಕರಣಗಳು ದೃಢಪಟ್ಟಿವೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ 2023ರಲ್ಲಿ 16,500ಕ್ಕೂ ಅಧಿಕ ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. 9 ಮಂದಿ ಮೃತಪಟ್ಟಿದ್ದರು. ಈ ವರ್ಷದ ಆರಂಭದಲ್ಲಿಯೇ ಜ್ವರಕ್ಕೆ ಒಳಗಾದ ಹಲವರಿಗೆ ಡೆಂಗಿ ಶಂಕೆ ಕಾರಣ ಪರೀಕ್ಷೆ ನಡೆಸಲಾಗುತ್ತಿದೆ. ಈವರೆಗೆ 11,389 ಶಂಕಿತರನ್ನು ಗುರುತಿಸಲಾಗಿದ್ದು, 6,010 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ.

ರಾಜ್ಯದ 28 ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಚಿತ್ರದುರ್ಗ (79), ಮಂಡ್ಯ (54), ಶಿವಮೊಗ್ಗ (46), ತುಮಕೂರು (42), ಕೊಪ್ಪಳ (41) ಹಾಸನ (34), ದಕ್ಷಿಣ ಕನ್ನಡ (34), ವಿಜಯಪುರ (34) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ವರದಿಯಾಗಿವೆ. ಯಾವುದೇ ಡೆಂಗಿ ಮರಣ ಪ್ರಕರಣ ದೃಢಪಟ್ಟಿಲ್ಲ.

ಈ ವರ್ಷ ಚಿಕೂನ್‌ಗುನ್ಯ ಜ್ವರದ ಶಂಕೆ ಕಾರಣ 2,151 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, 161 ಪ್ರಕರಣಗಳು ದೃಢಪಟ್ಟಿವೆ. 18 ಜಿಲ್ಲೆಗಳಲ್ಲಿ ಪ್ರಕರಣಗಳು ವರದಿಯಾಗಿದ್ದು, ಶಿವಮೊಗ್ಗದಲ್ಲಿ (35) ಗರಿಷ್ಠ ಪ್ರಕರಣಗಳು ಖಚಿತಪಟ್ಟಿವೆ.

ಸಿದ್ಧಾರ್ಥ ಬಡಾವಣೆ: ಅಧಿಕಾರಿಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಾಡುಗೋಡಿಯ ಸಿದ್ಧಾರ್ಥ ಬಡಾವಣೆಗೆ ಬಿಬಿಎಂಪಿ ಮಹದೇವಪುರ ವಲಯ ಕಾರ್ಯಪಾಲಕ ಎಂಜಿನಿಯರ್, ಬೆಂಗಳೂರು ಜಲ ಮಂಡಳಿ ಹಾಗೂ ರಸ್ತೆ ಮೂಲಸೌಕರ್ಯ ವಿಭಾಗದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೂಲ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಕ್ರಿಯಾ ವೇದಿಕೆ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಹೋರಾಟ ನಡೆಸಿದ್ದರು. ಇದಕ್ಕೆ ಸ್ಪಂದಿಸಿರುವ ಅಧಿಕಾರಿಗಳು ಪರಿಶೀಲನೆಗೆ ತೆರಳಿದರು.

ದಲಿತ ಕ್ರಿಯಾ ವೇದಿಕೆ ರಾಜ್ಯ ಕಾರ್ಯಾಧ್ಯಕ್ಷ ಕಾಡುಗೋಡಿ ಸೊಣ್ಣಪ್ಪ ಮಾತನಾಡಿ, 'ಸಿದ್ಧಾರ್ಥ ಬಡಾವಣೆಯಲ್ಲಿ ಸುಮಾರು ವರ್ಷಗಳಿಂದ ರಸ್ತೆ ಸಂಪರ್ಕವಿಲ್ಲ. ಜನರು ಪ್ರಾಣ ಲೆಕ್ಕಿಸದೆ ರೈಲ್ವೆ ಹಳಿ ಮೇಲೆ ರಸ್ತೆ ದಾಟಲು ಪರದಾಡುತ್ತಿದ್ದು ಹಾಗೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಅಧಿಕಾರಿಗಳಲ್ಲಿ ಮನವಿ ಮಾಡಲಾಗಿದೆ' ಎಂದರು.

ಬಿಬಿಎಂಪಿ ಮಹದೇವಪುರ ವಲಯ ಇ.ಇ, ಬೆಂಗಳೂರು ಜಲ ಮಂಡಳಿ ಹಾಗೂ ರಸ್ತೆ ಮೂಲಸೌಕರ್ಯ ವಿಭಾಗದ ಅಧಿಕಾರಿಗಳು ಕಾಡುಗೋಡಿಯ ಸಿದ್ಧಾರ್ಥ ಬಡಾವಣೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು

ಸಾರ್ವಜನಿಕರ ಅಹವಾಲು ಆಲಿಸಿದ ಅಧಿಕಾರಿಗಳು, 'ರಸ್ತೆ ಸಂಪರ್ಕಕ್ಕೆ ರೈಲ್ವೆಯಿಂದ ಅನುಮತಿ ಪಡೆಯಬೇಕಿದೆ. ರೈಲ್ವೆಗೆ ಮನವಿ ಪತ್ರ ಸಲ್ಲಿಸಿ ಅವರ ಸೂಚನೆ ಮೇರೆಗೆ ರಸ್ತೆ ಸಂಪರ್ಕ ಕಾಮಗಾರಿ ಮಾಡಿಸಲಾಗುವುದು' ಎಂದು ತಿಳಿಸಿದರು.

ಇಇ ರವಿಕುಮಾರ್, ಎಇಇ ವೆಂಕಟೇಶ್, ಜಲ ಮಂಡಳಿ ಎಂಜಿನಿಯರ್ ರವಿಕುಮಾರ್, ರಸ್ತೆ ಮೂಲಸೌಕರ್ಯ ವಿಭಾಗದ ಎಂಜಿನಿಯರ್ ರಮೇಶ್, ಮುಖಂಡರಾದ ಎಚ್. ಶಂಬಪ್ಪ, ಕ್ರಿಸ್ತುರಾಜ್, ಡಿಚ್ಚಿ ರಾಜು, ಆರ್.ಆರ್.ಲೋಕೇಶ್ ಈ ಸಂದರ್ಭದಲ್ಲಿ ಹಾಜರಿದ್ದರು.

ನಗರದಲ್ಲಿ ಬುಧವಾರ ನಡೆದ ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ರಾಜ್ಯ ಸಮಾವೇಶದಲ್ಲಿ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು

ಕಾರ್ಮಿಕ ಸಂಘಟನೆಗಳ ಪ್ರತಿಭಟನೆ 22ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪರಿಷ್ಕರಣೆ, 38 ತಿಂಗಳ ವೇತನ ಬಾಕಿ ಪಾವತಿ, ಶಕ್ತಿ ಯೋಜನೆಯ ಪೂರ್ಣ ಹಣ ಬಿಡುಗಡೆ ಮುಂತಾದ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಫೆ.22ರಂದು ಉಪವಾಸ ಸತ್ಯಾಗ್ರಹ ನಡೆಸಲು ಕೆಎಸ್‌ಆರ್‌ಟಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ನಗರದಲ್ಲಿ ಬುಧವಾರ ನಡೆದ ಜಂಟಿ ಕ್ರಿಯಾ ಸಮಿತಿಯ ರಾಜ್ಯ ಸಮಾವೇಶದಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ರಾಜ್ಯದ ಎಲ್ಲ ವಿಭಾಗೀಯ ಕಚೇರಿಗಳಲ್ಲಿ, ಹುಬ್ಬಳ್ಳಿ ಮತ್ತು ಕಲಬುರಗಿಯ ಕೇಂದ್ರ ಕಚೇರಿಗಳ ಮುಂದೆ ಹಾಗೂ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸತ್ಯಾಗ್ರಹ ನಡೆಸಲು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ (ಎಐಟಿಯುಸಿ), ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಫೆಡರೇಷನ್ (ಸಿಐಟಿಯು), ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನೌಕರರ ಸಂಘ, ಕೆಎಸ್‌ಆರ್‌ಟಿಸಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘಗಳು ಈ ಸಭೆಯಲ್ಲಿ ತೀರ್ಮಾನ ಕೈಗೊಂಡವು.

ಐದು ಸಂಘಟನೆಗಳ ಪ್ರತಿನಿಧಿಗಳಾದ ಜಿ.ಟಿ. ರಂಗೇಗೌಡ, ಎಚ್.ಡಿ. ರೇವಪ್ಪ, ಎನ್.ಆರ್. ದೇವರಾಜ ಅರಸ್, ರವಿಪ್ರಕಾಶ್, ಸೋಮಣ್ಣ, ಎಚ್.ಎಸ್. ಮಂಜುನಾಥ್, ಎಚ್.ವಿ. ಅನಂತ ಸುಬ್ಬರಾವ್, ವಿಜಯ ಭಾಸ್ಕರ್ ಸಭೆಯಲ್ಲಿ ಭಾಗವಹಿಸಿದ್ದರು.

'ಗ್ರಾಮ ಪಂಚಾಯಿತಿ ಬಲವರ್ಧನೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮ ಪಂಚಾಯಿತಿಗಳ ಬಲವರ್ಧನೆ, ಸುಗಮ ಕಾರ್ಯನಿರ್ವಹಣೆಗೆ ಅಗತ್ಯವಾದ ಎಲ್ಲ ಕ್ರಮಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿ ಪ್ರಶ್ನೆಗೆ ಉತ್ತರಿಸಿದ ಅವರು, 'ಆದಷ್ಟು ಬೇಗ ಕೈಪಿಡಿ ಬಿಡುಗಡೆ ಮಾಡಲಾಗುವುದು. ಗ್ರಾಮ ಸಭೆಗಳು ಸಮರ್ಪಕವಾಗಿ ನಡೆಸಲು ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಗ್ರಾಮ ಸಭೆ ವಿಷಯಗಳು ಆನ್ ಲೈನ್‌ನಲ್ಲಿ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿದೆ' ಎಂದರು.

'ಗ್ರಾಮ ಪಂಚಾಯಿತಿಗಳಲ್ಲಿ ಕೆಡಿಪಿ ಸಭೆ ಕಡ್ಡಾಯಗೊಳಿಸಲು ಸೂಚನೆ ನೀಡಲಾಗುವುದು. ಬಾಪೂಜಿ ಸೇವಾ ಕೇಂದ್ರಗಳಲ್ಲಿ 72 ಸೇವೆಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಈ ಕೇಂದ್ರಗಳನ್ನು ಇನ್ನಷ್ಟು ಸಶಕ್ತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

ಗ್ರಾಮ ಪಂಚಾಯಿತಿಗಳಿಗೆ ರೇಟಿಂಗ್ ಕೊಡುವ ವ್ಯವಸ್ಥೆ ಜಾರಿಗೆ ತರಲು ನಿರ್ಧರಿಸಲಾಗಿದೆ. ಪಿಡಿಒಗಳಿಗೆ ಇ-ಹಾಜರಾತಿ ವ್ಯವಸ್ಥೆ ಮಾಡಲಾಗಿದೆ ಎಂದರು.

'ದಾಂಪತ್ಯದಲ್ಲಿ ಹೊಂದಾಣಿಕೆ ಮುಖ್ಯ'

ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರೀತಿಸಿ ಮದುವೆ ಆಗುವವರು ಜೀವನದಲ್ಲಿ ಏನೇ ಕಷ್ಟ ಬಂದರೂ ಆ ಸಂಬಂಧವನ್ನು ನಿಭಾಯಿಸಿಕೊಂಡು ಬಾಳ್ವೆ ನಡೆಸಬೇಕು. ಅದಕ್ಕಾಗಿ ವಿವಾಹಕ್ಕೂ ಮುನ್ನ ದೃಢ ಸಂಕಲ್ಪ ಮಾಡಿಕೊಳ್ಳಬೇಕು' ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ತಿಳಿಸಿದರು.

ಉರು ಪ್ರಕಾಶನ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಜ್ಜಿನಿ ರುದ್ರಪ್ಪ ಅವರ 'ಪ್ರೀತಿಯನ್ನು ಹಂಬಲಿಸಿ...' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು. 'ಪ್ರೀತಿ ಕೇವಲ ಹುಡುಗ ಹುಡುಗಿಗೆ ಮಾತ್ರ ಸೀಮಿತವಾಗದೆ, ಎಲ್ಲ ಸಂಬಂಧಗಳಲ್ಲೂ ಪ್ರೀತಿ ಇರುತ್ತದೆ. ಆದ್ದರಿಂದ ಪ್ರೀತಿಸಿ ವಿವಾಹ ಆಗುವವರು ಆದರ್ಶ ಜೀವನ ನಡೆಸುವ ಮೂಲಕ ಇತರರಿಗೆ ಮಾದರಿಯಾಗಬೇಕು. ಗಾಡಿ ಬದಲಿಸಿದಂತೆ ವಿಚ್ಛೇದನ ನೀಡಿ, ಮತ್ತೊಂದು ಮದುವೆಯಾಗಬಾರದು' ಎಂದು ಹೇಳಿದರು.

'ನಾನೂ ಕೂಡ ಪ್ರೀತಿಸಿ ಮದುವೆ ಯಾಗಿದ್ದೇನೆ. ಪಂಜಾಬಿ ಹುಡುಗಿ ವಿವಾಹವಾಗಿ 54 ವರ್ಷಗಳು ಕಳೆದಿವೆ. ನಮ್ಮ ನಡುವೆ ಎಂದಿಗೂ ವೈಮನಸ್ಸು ಬಂದಿಲ್ಲ. ಸುಖ ದುಃಖಗಳೆರಡರಲ್ಲೂ ಹೊಂದಿಕೊಂಡು ಜೀವನ ನಡೆಸಿದ್ದೇವೆ' ಎಂದು ತಿಳಿಸಿದರು.

ಕವಿ ಎಲ್.ಎನ್.ಮುಕುಂದರಾಜ್, 'ಎಲ್ಲ ಜೀವಿಗಳು ಒಂದಲ್ಲ ಒಂದು ರೀತಿಯಲ್ಲಿ ಪರಸ್ಪರ ಪ್ರೀತಿಸುತ್ತವೆ. ಜಗತ್ತನ್ನು ಪ್ರೀತಿಸುವವರು ಪ್ರೇಮಿಗಳೇ ಆಗಿದ್ದಾರೆ. ಕವಿ ಪಂಪ ಆದಿಯಾಗಿ ಕುವೆಂಪುವರೆಗಿನ ಎಲ್ಲ ಕವಿಗಳು ಕನ್ನಡ ಸಾಹಿತ್ಯದಲ್ಲಿ ಪ್ರೇಮದ ಹಲವು ವೈಶಿಷ್ಟ್ಯತೆಗಳನ್ನು ಅಕ್ಷರ ರೂಪಕ್ಕಿಳಿಸಿದ್ದಾರೆ' ಎಂದು ಹೇಳಿದರು.

ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಬಿ.ಕೆ. ರವಿ, 'ಬದಲಾದ ಕಾಲಘಟ್ಟದಲ್ಲಿ ಹೊಂದಾಣಿಕೆಯ ದಾಂಪತ್ಯ ಬಹಳ ಮುಖ್ಯ. 30-40 ವರ್ಷಗಳ ಹಿಂದೆ ವಿಚ್ಛೇದನದ ಬಗ್ಗೆ ಬಹಳಷ್ಟು ಮಂದಿಗೆ ತಿಳಿದಿರಲೇ ಇಲ್ಲ. ಆದರೆ, ಇತ್ತೀಚೆಗೆ ವಿಚ್ಛೇದನ ಸಾಮಾನ್ಯವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ, 'ನಾನೂ ಪ್ರೀತಿಸಿ ಮದುವೆಯಾಗಿದ್ದು, ಇಬ್ಬರೂ ಕ್ರೀಡಾಪಟುಗಳಾಗಿದ್ದೆವು. ಕಷ್ಟ ಸುಖ ಎರಡರಲ್ಲೂ ಒಬ್ಬರಿಗೊಬ್ಬರು ಆಸರೆಯಾಗಿ ಉತ್ತಮ ಬಾಳ್ವೆ ನಡೆಸಿದ್ದೇವೆ. ಪ್ರೀತಿ ಮಾಡುವಾಗ ಮಾತ್ರವಲ್ಲ ಆ ನಂತರದ ದಾಂಪತ್ಯದಲ್ಲೂ ಆ ಪ್ರೀತಿಯನ್ನು ಹಾಗೇ ಮುಂದುವರೆಸಿಕೊಂಡು ಹೋಗಬೇಕು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 'ಪ್ರೀತಿಯನ್ನು ಹಂಬಲಿಸಿ...' ಪುಸ್ತಕವನ್ನು ನ್ಯಾ.ಎನ್. ಸಂತೋಷ್ ಹೆಗ್ಡೆ ಬಿಡುಗಡೆ ಮಾಡಿದರು. ಎಲ್.ಎನ್. ಮುಕುಂದರಾಜ್, ಲೇಖಕಿ ವಸುಂಧರಾ ಭೂಪತಿ, ಲೇಖಕ ಉಜ್ಜಿನಿ ರುದ್ರಪ್ಪ ಹಾಗೂ ನಟ ಚೇತನ ಕುಮಾರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಫ್ಯಾನ್ಸಿ ಮುತ್ತಣ್ಣ, ಅಮರೇಂದ್ರಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಸತ್ಯವತಿ ವಿಜಯರಾಘವ ಚಾರಿಟಬಲ್ ಟ್ರಸ್ಟ್ ದತ್ತಿ ಪ್ರಶಸ್ತಿ'ಗೆ ಬರಹಗಾರರಾದ ಕೊಡಗು ಜಿಲ್ಲೆಯ ಕುಶಾಲನಗರದ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಮತ್ತು ಕೋಲಾರ ಜಿಲ್ಲೆಯ ಅಮರೇಂದ್ರ ಹೊಲ್ಲಂಬಳ್ಳಿ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಮೈಸೂರಿನ ಎ.ಪುಷ್ಪಾ ಅಯ್ಯಂಗಾರ್ ಈ ದತ್ತಿ ಸ್ಥಾಪಿಸಿದ್ದಾರೆ.

ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಅವರು ಕೊಡಗು ಜಿಲ್ಲೆಯ ಇತಿಹಾಸ ಮತ್ತು ಮಹಿಳಾ ಸಮಸ್ಯೆಗಳ ಕುರಿತು ವಿಶೇಷ ಅಧ್ಯಯನ ನಡೆಸಿದ್ದಾರೆ.

ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ

ಅಮರೇಂದ್ರ ಹೊಲ್ಲಂಬಳ್ಳಿ

'ಕಾಡು ಹಕ್ಕಿಯ ಹಾಡು', 'ಕಾಡಿದ ನೆನಪುಗಳು', 'ಕನವರಿಕೆ', 'ಒಡಲ ಉರಿ' ಸೇರಿ ಹಲವು ಕೃತಿಗಳನ್ನು ರಚಿಸಿದ್ದಾರೆ. ಅಮರೇಂದ್ರ ಹೊಲ್ಲಂಬಳ್ಳಿ ಅವರು ಕಥೆ, ನಾಟಕ, ಕಾದಂಬರಿ, ವಿಮರ್ಶೆ ಸೇರಿ ಸಾಹಿತ್ಯ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ಬರೆದಿದ್ದಾರೆ. 'ವಾಲ್ ಪೇಪರ್', 'ಬಣ್ಣದ ನೆರಳು', 'ಕಾಯ', 'ಚಂದ್ರಗುಪ್ತ' ಅವರ ಪ್ರಮುಖ ಕೃತಿಗಳು' ಎಂದು ಪ್ರಕಟಣೆ ತಿಳಿಸಿದೆ.

ಸ್ಪರ್ಧೆಗೆ ಕವನ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು ರಾಷ್ಟ್ರಕವಿ ಗೋವಿಂದ ಪೈ ಅವರ ಜನ್ಮದಿನಾಚರಣೆ ಪ್ರಯುಕ್ತ ಉದಯೋನ್ಮುಖ ಕವಿ-ಕವಯತ್ರಿಯರಿಗೆ ಕವನ ಸ್ಪರ್ಧೆ ಆಯೋಜಿಸಿದೆ.

ಈವರೆಗೆ ಒಂದೂ ಕವನ ಸಂಕಲನ ಹೊರತರದವರ ಕವನಗಳನ್ನು ಪರಿಗಣಿಸಲಾಗುತ್ತದೆ. ಕನ್ನಡ ನಾಡು, ನುಡಿ, ಸಾಹಿತ್ಯ, ಕನ್ನಡ ನಾಡಿನ ಪರಂಪರೆ ಕುರಿತು ಒಂದು ಕವನವನ್ನು ಸ್ಪರ್ಧೆಗೆ ಕಳುಹಿಸಿಕೊಡಬಹುದಾಗಿದೆ. ಪ್ರವೇಶ ಶುಲ್ಕ ₹ 50 ನಿಗದಿಪಡಿಸಲಾಗಿದ್ದು, ಕವನವನ್ನು ಇದೇ 29ರೊಳಗೆ ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9739001410

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101
ದೂರವಾಣಿ ಸಂಖ್ಯೆ: ಕಛೇರಿ: 08156-295427
ಫ್ಯಾಕ್ಸ್: 08156-295427 ಇಮೇಲ್: eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 03/2023-24 ದಿನಾಂಕ:13/02/2023
4702 ಪ್ರಧಾನ ಕಾಮಗಾರಿಗಳು ಅಣೆಕಟ್ಟು ಮತ್ತು ಪಿಕಪ್ ಯೋಜನೆ ಅಡಿಯಲ್ಲಿ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಚಿಂತಾಮಣಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಅಣೆಕಟ್ಟು ಮತ್ತು ಪಿಕಪ್ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 3 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 20/02/2024 ಸಾಯಂಕಾಲ 4.30 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 23/02/2024 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156-295427 ಮತ್ತು ಇ-ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 91-8068948777 ಮತ್ತು 91-8046010000 ರಿಂದ ಪಡೆಯಬಹುದು. ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ-75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ-563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ.
ಇ-ಮೇ: eemidklr@rediffmail.com, eemigwddkolar@gmail.com
ದೂರವಾಣಿ ಸಂಖ್ಯೆ:- 08152-200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/203/2023-24/ ದಿನಾಂಕ:09-02-2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆ.ಡಬ್ಲ್ಯೂ-2 & 3 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 3ನೇ ದರ್ಜೆ ಮತ್ತು ಮೇಲ್ಪಟ್ಟು ನೋಂದಾಯಿತ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಒಟ್ಟು 08 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 100.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 50.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ-ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ-ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ದಿನಾಂಕ:14/02/2024ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ:22/02/2024ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:23/02/2024ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.
ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಸಾಂಸ್ಕೃತಿಕ ಸಂಪನ್ಮೂಲಗಳು ಮತ್ತು ತರಬೇತಿ ಕೇಂದ್ರ (ಸಿಸಿಆರ್‌ಟಿ)
ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ
ಪ್ಲಾಟ್ ನಂ. 15 ಎ, ಸೆಕ್ಟರ್ – 7, ದ್ವಾರಕ, ನವದೆಹಲಿ-110075

ಸಂಸ್ಕೃತಿ ಕ್ಷೇತ್ರದಲ್ಲಿ ಸಾಧನೆಗೈದಿರುವ ವ್ಯಕ್ತಿಗಳಿಗೆ ನೀಡಲಾಗುವ ಫೆಲೋಶಿಪ್ ಯೋಜನೆ

ಪರ್‌ಫಾರ್ಮಿಂಗ್, ಲಿಟರರಿ, ಪ್ಲಾಸ್ಟಿಕ್ ಆರ್ಟ್ಸ್ ಮತ್ತು ಸಂಸ್ಕೃತಿಗೆ ಸಂಬಂಧಿತ ಹೊಸ ಕ್ಷೇತ್ರಗಳಲ್ಲಿ ಸಂಶೋಧನೆ ಆಧಾರಿತ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಜೂನಿಯರ್ ಮತ್ತು ಸೀನಿಯರ್ ಫೆಲೋಶಿಪ್ ನೀಡುವುದಕ್ಕಾಗಿ, ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಸಿಸಿಆರ್‌ಟಿ ಇವರು ಆಫ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಫೆಬ್ರವರಿ 15, 2024 ರಿಂದ ಜಾರಿಗೊಂಡಂತೆ ಸನ್ 2022-23ನೇ ವರ್ಷಕ್ಕೆ ಈ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಈ ವರ್ಷದಲ್ಲಿ 200 ಜೂನಿಯರ್ ಮತ್ತು 200 ಸೀನಿಯರ್ ಫೆಲೋಶಿಪ್‌ಗಳು ಲಭ್ಯವಿರುತ್ತವೆ. ಯೋಜನೆಯ ವಿವರ, ಅರ್ಜಿದಾರರಿಗೆ ಸೂಚನೆಗಳು, ಅರ್ಹತಾ ಷರತ್ತುಗಳು/ಮಾನದಂಡಗಳು ಮತ್ತು ಅರ್ಜಿ ನಮೂನೆಯು, ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಮತ್ತು ಸಿಸಿಆರ್‌ಟಿ ರವರ ಕೆಳಕಂಡ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.

www.indiaculture.nic.in
www.ccrtindia.gov.in
ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮಾರ್ಚ್ 31, 2024
ಆಫ್‌ಲೈನ್ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ

CBC 09127/12/0010/2324

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080-27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/24/2023-24 ದಿನಾಂಕ: 13-02-2024

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮ

ಕ್ರ. ಸಂ.	ಭೂ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ-ಗುಂ
1	ಶ್ರೀ ಗಿರೀಶ್ ಜಿ ಬಿನ್ ಗೋಪಾಲ ರೆಡ್ಡಿ	134/6	00-15
2	ಶ್ರೀ ಲೋಕೇಶ್ ಬಾಬು ಎನ್. ಬಿನ್ ಲೇಟ್. ನಾರಾಯಣರೆಡ್ಡಿ	134/5ಎ	01-14
3	ಶ್ರೀಮತಿ ಗೌರಮ್ಮ ಮತ್ತು ಭಾರತಿ	135/6	02-23
4	ಶ್ರೀಮತಿ ವಿಜಯಲಕ್ಷ್ಮಿ ಕೋಂ ಲೇಟ್. ವೆಂಕಟೇಶರೆಡ್ಡಿ	135/7	00-25

ಷರಾ:- ಪ್ರಶ್ನಿತ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿ ಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರರಿಗೆ ಉದ್ಯೋಗವಕಾಶ ದೊರಕುತ್ತದೆ ಹಾಗೂ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದ್ದು, ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3576/ಅಡ್ವರ್ಟೋ/2023-24

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter and Nine-months ended 31st December, 2023

(₹ in Crores except per share data)

Particulars	Quarter ended 31st December, 2023 (Unaudited)	Nine-months ended 31st December, 2023 (Unaudited)	Quarter ended 31st December, 2022 (Unaudited)
Total income from operations (net)	334.28	860.22	264.40
Net Profit/(loss) from ordinary activities after tax	75.63	(11.02)	(408.50)
Net Profit/(loss) for the period after tax (after Extraordinary items)	75.63	(11.02)	(408.50)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹10/- each)			
Basic :	3.28	(0.94)	(19.03)
Diluted :	3.28	(0.94)	(19.03)
Earnings Per Share (after extraordinary items) (of ₹10/- each)			
Basic :	3.28	(0.94)	(19.03)
Diluted :	3.28	(0.94)	(19.03)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 13th February, 2024 and have been subjected to the Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st December, 2023 (Unaudited)	Nine-months ended 31st December, 2023 (Unaudited)	Quarter ended 31st December, 2022 (Unaudited)
Total income from operations (net)	5.12	14.85	4.85
Profit/(loss) before tax and exceptional items	(0.08)	(23.52)	0.71
Profit/(loss) after tax and exceptional items	(0.08)	(23.52)	0.71

Place : Bengaluru
Date : 13 February, 2024

For and Behalf of Board of Directors
S.V Ranganath
Interim Chairman and Independent Director

ಪತ್ರಿಕಾ ಪ್ರಕಟಣೆ
ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಯಲಹಂಕ ತಾಲ್ಲೂಕು ಪಂಚಾಯಿತಿ
ರಾಜಾನುಕುಂಟೆ ಗ್ರಾಮ ಪಂಚಾಯಿತಿ
ಹೆಸರಘಟ್ಟ ಹೋಬಳಿ, ಯಲಹಂಕ ತಾಲ್ಲೂಕು
75ನೇ ವರ್ಷದ ಗಣರಾಜ್ಯೋತ್ಸವದ ಪ್ರಯುಕ್ತ
"ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮ"
ದಿನಾಂಕ : 17-02-2024ನೇ ಶನಿವಾರ
ಬೆಳಿಗ್ಗೆ 11.00 ಗಂಟೆಗೆ ರಾಜಾನುಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಭಾರತ ಸಂವಿಧಾನ ಅಂಗೀಕರಿಸಿಕೊಂಡು
"ಸಂವಿಧಾನ ಜಾಗೃತಿ ಜಾಥಾ ಸ್ತಬ್ಧ ಚಿತ್ರಕ್ಕೆ ಹೂವಿನ ಮಾಲಾರ್ಪಣೆ ಹಾಗೂ ಮೆರವಣಿಗೆ"
ಆಟೋ, ಬೈಕ್‌ರ್‍ಯಾಲಿ ಮತ್ತು ಪೂರ್ಣಕುಂಭ ಸ್ವಾಗತ, ಕಲಾ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ರಾಜಾನುಕುಂಟೆ ಗ್ರಾಮ ಪಂಚಾಯಿತಿ ಹತ್ತಿರ ಹಮ್ಮಿಕೊಳ್ಳಲಾಗಿದೆ.
ಸರ್ವರಿಗೂ ಆದರದ ಸುಸ್ವಾಗತ
ಪ್ರಕಟಣೆ : ರಾಜಾನುಕುಂಟೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ

ಪತ್ರಿಕಾ ಪ್ರಕಟಣೆ
ಸಂವಿಧಾನ ದಿನಾಚರಣೆಯ ಪ್ರಯುಕ್ತ ಸಂವಿಧಾನ ಜಾಗೃತಿ ಜಾಥಾದ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವನ್ನು
ದಿನಾಂಕ: 17-02-2024 ರಂದು ಸಂವಿಧಾನ ಜಾಥಾ ತಂಡದವರನ್ನು ಬರಮಾಡಿಕೊಂಡು ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಲು ರಾತ್ರಿ 7.30ಕ್ಕೆ ಬೀದಿ ನಾಟಕ ಏರ್ಪಡಿಸಲಾಗಿದೆ.
ದಿನಾಂಕ: 18-02-2024 ರಂದು ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮದ ಮಾರ್ಗವಾಗಿ ಬೆಟ್ಟಹಲಸೂರು ಗ್ರಾಮದವರೆಗೆ ಜಾಥಾ ಹೊರಡಲಿದ್ದು ಸದರಿ ದಿನದಂದು ಎಲ್ಲಾ ಜನಪ್ರತಿನಿಧಿಗಳು, ಆಡಳಿತವರ್ಗ ಹಾಗೂ ಸೂಚಿಸಿರುವ ಇಲಾಖಾ ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೋರಿದೆ.
ಅಧ್ಯಕ್ಷರು / ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸದಸ್ಯರು, ಗಂಟಿಗಾನಹಳ್ಳಿ ಗ್ರಾಮ ಪಂಚಾಯಿತಿ ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ

PUBLIC NOTICE

Our clients propose to purchase the Schedule Property from the owners **(1) Mr. A.S. Ashwathnarayana, (2) Mr. A.S. Seshadri, (3) Mrs. A.S. Lakshmi Prabha, (4) Mr. A. S. Rajendra Kumar Agalkot, (5) Mrs. A. Nirmala Prasad,** 1,2,3,4 and 5 children of Late A.V. Srikantaiah and their family members, No. 11, 4th Cross, N.S. Iyengar Street, Seshadripuram, Bangalore-560020.

Any person or persons having any manner of right, title or interest in the Schedule Property or objections for the proposed sale may lodge the same with the undersigned along with the supporting legal documents **within 15 days** from the date of publication of this notice failing which, our clients shall complete the sale transaction. Any Claims/ Objections received beyond the stipulated period will not be entertained.

COMPOSITE SCHEDULE PROPERTY

All that piece and parcel of the composite immovable property bearing Corporation No. 11, PID No. 27-83-11, No.12, PID No. 27-83-12, No. 12/1, PID No. 27-83-12/1, No. 12/2, PID No. 27-83-12/2 and No. 12/3, PID No. 27-83-12/3, (Old No. 17) Situated at 4th Cross, Narayana Swamy Iyengar Street (N.S. Iyengar Street), Bangalore within the revenue administrative jurisdiction of Ward No.94, Gandhinagar, Bruhat Bangalore Mahanagara Palike, Bangalore, together with the building thereon built of brick wall with Cement, RCC Roofing, Red-Oxide Flooring, Jungle Wood doors and windows with water, light and sanitation and including all rights, privileges and appurtenances thereto and the building constructed on the entire site measuring :

East to West : 70 Feet. North to South: 35 Feet. Total Area : 2,450 Square Feet and the entire property is bounded as follows :

East by : Private Property (formerly bearing Old No.26)
West by : Road
North by: Private Property (formerly bearing Old No.18)
South by: Private Property (formerly bearing Old No.16)

N. JAIPRAKASH RAO
VEENA RAO
N.ASHOK KUMAR
JAYPEE ASSOCIATES "LAW FIRM"
38, "KRISHNA", 1st Cross Malleswaram, BANGALORE-3. PH: 23560365, 23468742
Email: contact@jaypeeassociates.com
BANGALORE DATE: 14.02.2024

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಕೆಳಕಂಡ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಸ್ವತ್ತನ್ನು ಅದರ ಪ್ರಸ್ತುತ ಮಾಲೀಕರಾದ ಶ್ರೀ. ಮಧು ರಾಮಚಂದ್ರ ರಾವ್, ವಯಸ್ಸು ಸುಮಾರು 71 ವರ್ಷ, ಲೇಟ್ ಶ್ರೀ. ವೆನ್ನೆತಿ ರಾಮಚಂದ್ರ ರಾವ್ ಅವರ ಪುತ್ರ, ವಿಳಾಸ ಯೂನಿಟ್ ನಂ. 29-12, ಕೆರಿಸ್‌ಡೇಲ್ 36 ಸ್ಟರ್ಡಿ ರೋಡ್, ಸಿಂಗಪುರ 207855 ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಪ್ರಸ್ತುತ ಮಾಲೀಕರು ಸದರಿ ಷೆಡ್ಯೂಲ್ ಸ್ವತ್ತಿಗೆ ತಾವೇ ಮಾಲೀಕರಾಗಿದ್ದು, ಸ್ಪಷ್ಟ ಮತ್ತು ಮಾರಾಟಯೋಗ್ಯ ಹಕ್ಕುಗಳನ್ನು ಹೊಂದಿರುತ್ತೇನೆ ಎಂದು ಪ್ರತಿನಿಧಿಸುತ್ತಿದ್ದಾರೆ. ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ ವ್ಯಕ್ತಿಗಳಿಗೆ ಯಾವುದೇ ಸ್ವರೂಪದ ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿ ಕ್ಲೇಮ್‌ಗಳಿದ್ದರೆ ಅಥವಾ ಸ್ವರೂಪದ ಲೀನ್, ಚಾರ್ಜ್ ಅಥವಾ ಜಾರಿ ಹಕ್ಕು ಹೊಂದಿದ್ದಲ್ಲಿ ಮತ್ತು / ಅಥವಾ ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಆಕ್ಷೇಪಣೆ ಗಳನ್ನು ಹೊಂದಿದ್ದರೆ, ಅಂತಹವರು ಇಂದಿನಿಂದ ಹದಿನೈದು (15) ದಿನಗಳೊಳಗೆ ತಮ್ಮ ಕ್ಲೇಮು ಮತ್ತು/ಅಥವಾ ಆಕ್ಷೇಪಣೆಗಳನ್ನು ದಾಖಲಾತಿ ಪುರಾವೆಗಳ ಸಮೇತ ಲಿಖಿತ ರೂಪದಲ್ಲಿ ಕೆಳಗಿನ ಸಹಿದಾರರಿಗೆ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಯಾವುದೆ ಅಧಿಕೃತ ಕ್ಲೇಮ್‌ಗಳಾಗಲಿ ಅಥವಾ ಆಕ್ಷೇಪಣೆಗಳಾಗಲಿ ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ ಮತ್ತು ಶಾಸನಬದ್ಧ ಕ್ರಮಗಳು ಹಾಗೂ ಕಾನೂನು ಉಪಕ್ರಮ ಗಳ ನಿಬಂಧನೆಗಳ ಅನುಸರಣೆಯ ಮೇರೆಗೆ ನನ್ನ ಕಕ್ಷಿದಾರರು ಪ್ರಸ್ತುತ ಮಾಲೀಕರೊಂದಿಗೆ ತಮ್ಮ ವ್ಯವ ಹಾರವನ್ನು ಪೂರ್ಣಗೊಳಿಸಿಕೊಳ್ಳಲು ಮುಂದುವರಿ ಯುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ

ಬೆಂಗಳೂರಿನ ಕೋರಮಂಗಲ ಎಕ್ಸ್‌ಟೆನ್ಷನ್ 4ನೇ ಬ್ಲಾಕ್‌ನಲ್ಲಿ ಸ್ಥಿತಗೊಂಡಿರುವ, ಬಿಬಿಎಂಪಿ ನೀಡಿರುವ ಪ್ರಸಕ್ತ ಮುನಿಸಿಪಲ್ ನಂ. 384, ಪಿಐಡಿ ನಂ. 68-6-384, ಸೈಟ್ ನಂ. 384 ಹೊಂದಿರುವ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ಬಡಾವಣೆಯಲ್ಲಿ ರೂಪಗೊಂಡಿರುವ) ಮತ್ತು ಪೂರ್ವ ದಿಂದ ಪಶ್ಚಿಮ 50 ಅಡಿ, ಉತ್ತರ ದಿಂದ ದಕ್ಷಿಣ 81 ಅಡಿ, ಒಟ್ಟಾರೆ ಸುಮಾರು 4050 ಚ.ಅ. ವಿಸ್ತೀರ್ಣ ಹಾಗೂ ಶೌಚಾಲಯಗಳುಳ್ಳ 5 ಬೆಡ್‌ರೂಮ್‌ಗಳನ್ನು ಡ್ರಾಯಿಂಗ್/ಡೈನಿಂಗ್ ರೂಮ್, ಬಾಲ್ಕನಿಗಳು, ಕಿಚನ್, ಸ್ಟೋರ್ ರೂಮ್, ಪೌಡರ್ ರೂಮ್, ಎರಡನೇ ಮಹಡಿಯಲ್ಲಿ ಶೌಚಾಲಯವುಳ್ಳ ಹಾಲ್, ಒಪನ್ ಟೆರೇಸ್, ಬೇಸ್‌ಮೆಂಟ್‌ನಲ್ಲಿ ಸರ್ವಂಟ್ ಕ್ವಾಟರ್ಸ್ ಹಾಗೂ ಗ್ಯಾರೇಜ್ ಮುಂತಾದವೆಲ್ಲವನ್ನೂ ಬೇಸ್‌ಮೆಂಟ್, ನೆಲಮಹಡಿ, ಮೊದಲ ಮತ್ತು ಎರಡನೇ ಮಹಡಿಯಲ್ಲಿ ಹೊಂದಿರುವ ವಸತಿಯೋಗ್ಯ ಕಟ್ಟಡದ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ: ಪೂರ್ವಕ್ಕೆ: ಸೈಟ್ ನಂ. 385, ಪಶ್ಚಿಮಕ್ಕೆ: ಸೈಟ್ ನಂ. 383, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸೈಟ್ ನಂ. 395.

ಅರವಿಂದ್ ರಾಘವನ್
ವಕೀಲರು, ನಂ. 48, 'ಇಷಿತಾ', 2ನೇ ಮುಖ್ಯರಸ್ತೆ, ವೈಯಾಲಿಕಾವಲ್, ಬೆಂಗಳೂರು-560 003.
ಮೊಬೈಲ್: 98450 04419
ದಿನಾಂಕ: 14/02/2024 ಸ್ಥಳ: ಬೆಂಗಳೂರು

ನಮ್ಮ ಮೆಟ್ರೊ: 2026ಕ್ಕೆ ಐದು ಮಾರ್ಗಗಳಲ್ಲಿ ಸಂಚಾರ • ವಾರ್ಷಿಕ ಸಂಚರಿಸುವವರ ಸಂಖ್ಯೆ 50 ಕೋಟಿ ದಾಟುವ ನಿರೀಕ್ಷೆ

3 ವರ್ಷಗಳಲ್ಲಿ ಮೂರು ಮಾರ್ಗ ಪೂರ್ಣ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ವರ್ಷಕ್ಕೆ ಒಂದರಂತೆ 2026ರ ಡಿಸೆಂಬರ್ ಒಳಗೆ ಮತ್ತೆ ಮೂರು ಮಾರ್ಗಗಳಲ್ಲಿ ರೈಲು ಸಂಚರಿಸಲಿದೆ. ಅಲ್ಲಿಗೆ ಒಟ್ಟು ಮಾರ್ಗಗಳ ಸಂಖ್ಯೆ 5ಕ್ಕೇರಲಿದ್ದು, ಮೆಟ್ರೊ ರೈಲಿನಲ್ಲಿ ನಿತ್ಯ ಸಂಚರಿಸುವವರ ಪ್ರಮಾಣ 15 ಲಕ್ಷ ದಾಟಲಿದೆ.

ಈ ವರ್ಷದ ಅಂತ್ಯದೊಳಗೆ ಹಳದಿ ಮಾರ್ಗ, 2025ರ ಡಿಸೆಂಬರ್ ಒಳಗೆ ಗುಲಾಬಿ ಮತ್ತು 2026ರ ಡಿಸೆಂಬರ್ ಒಳಗೆ ನೀಲಿ ಮಾರ್ಗಗಳು ಸಂಚಾರಕ್ಕೆ ತೆರೆದುಕೊಳ್ಳಲಿವೆ.

ಹಳದಿ ಮಾರ್ಗದಲ್ಲಿ ಚಾಲಕ ರಹಿತ ರೈಲು: ರಾಷ್ಟ್ರೀಯ ವಿದ್ಯಾಲಯ ರಸ್ತೆಯಿಂದ ಬೊಮ್ಮಸಂದ್ರ ಸಂಪರ್ಕಿಸುವ ಹಳದಿ ಮಾರ್ಗದಲ್ಲಿ ಚಾಲಕ ರಹಿತ ರೈಲುಗಳು ಸಂಚರಿಸಲಿವೆ.

ಪ್ರೊಟೊ ಟೈಪ್ (ಮೂಲ ಮಾದರಿ) ಎರಡು ರೈಲು ಕೋಚ್‌ಗಳನ್ನು ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ (ಸಿಆರ್‌ಆರ್‌ಸಿ) ಡಿಸೆಂಬರ್‌ನಲ್ಲಿ ರವಾನಿಸಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮಾರ್ಗದಲ್ಲಿ ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆಯಲ್ಲಿ (ಸಿಬಿಟಿಸಿ) ಚಾಲಕ ರಹಿತ ರೈಲು ಜೊತೆಗೆ ಈಗಿರುವ 'ಡಿಸ್ಟೆನ್ಸ್ ಟು ಗೊ' (ಡಿಟಿಜಿ) ವ್ಯವಸ್ಥೆಯ ಲೋಕೊ ಪೈಲೆಟ್ ಮೆಟ್ರೊ ಕೂಡ ಸಂಚರಿಸಲಿವೆ.

18.82 ಕಿ.ಮೀ. ಹೊಂದಿರುವ ಹಳದಿ ಮಾರ್ಗದಲ್ಲಿ 16 ನಿಲ್ದಾಣಗಳಿದ್ದು, ಕಾಮಗಾರಿ ಶೇ 98ರಷ್ಟು ಪೂರ್ಣಗೊಂಡಿದೆ. ಆದರೆ, ರೈಲು ಕೋಚ್ ಪೂರೈಕೆ ತಡವಾಗಿರುವುದರಿಂದ ಸಂಚಾರ ಪರೀಕ್ಷೆ ಸಿಗ್ನಲಿಂಗ್ ಪರೀಕ್ಷೆ ಸಹಿತ ತಾಂತ್ರಿಕ ಕೆಲಸಗಳು ಬಾಕಿ ಉಳಿದಿವೆ. ಏಪ್ರಿಲ್–ಮೇ ನಲ್ಲಿ ಲೋಕಸಭಾ ಚುನಾವಣೆ ಮುಗಿದರೆ ಬಳಿಕ ವಿವಿಧ ಪರೀಕ್ಷೆಗಳು ನಡೆಯಲಿವೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಗುಲಾಬಿ ಮಾರ್ಗ: ಕಾಳೇನ ಅಗ್ರಹಾರದಿಂದ ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗವು ಅತಿ ಉದ್ದದ ಸುರಂಗ ಮಾರ್ಗವನ್ನು ಹೊಂದಿದೆ. ಒಟ್ಟು 21 ಕಿ.ಮೀ. ಇರುವ ಈ ಮಾರ್ಗದಲ್ಲಿ 13.76 ಕಿ.ಮೀ. ಸುರಂಗ ಮಾರ್ಗವಾಗಿದೆ. ಹೋಗುವ ಮತ್ತು ಬರುವ ಸುರಂಗಗಳ ಒಟ್ಟು ಉದ್ದ 20.99 ಕಿ.ಮೀ. ಆಗಿದ್ದು, ಅದರಲ್ಲಿ 19.08 ಕಿ.ಮೀ. ಸುರಂಗ ಕೊರೆಯುವ ಕಾರ್ಯ ಮುಗಿದಿದೆ. ಎರಡು ತಿಂಗಳಲ್ಲಿ ಸುರಂಗ ಕೊರೆಯುವ ಕಾರ್ಯ ಮುಗಿಯಲಿದ್ದು, ಬಳಿಕ ಎರಡು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

ನೀಲಿ ಮಾರ್ಗ: ಕಸ್ತೂರಿನಗರ ರೇಷ್ಮೆ ಮಂಡಳಿಯಿಂದ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನೀಲಿ ಮಾರ್ಗವು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳಲಿದೆ. ಈ ಮಾರ್ಗ 58.19 ಕಿಲೋಮೀಟರ್ ಉದ್ದವಿದ್ದು, 30 ನಿಲ್ದಾಣಗಳು ಇರಲಿವೆ. 2026ರ ಡಿಸೆಂಬರ್ ಒಳಗೆ ಸಂಚಾರಕ್ಕೆ ತೆರೆದುಕೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಾಹಿತಿ ನೀಡಿದ್ದಾರೆ.



ಹಸಿರು ಮೆಟ್ರೊ ರೈಲು

ನೇರಳೆ ಮೆಟ್ರೊ ರೈಲು



100 ಕೋಟಿ ದಾಟಿದ ಜನ ಸಂಚಾರ

ನಗರದ ಜನದಟ್ಟಣೆ, ವಾಹನ ದಟ್ಟಣೆ ಕಡಿಮೆಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ 'ನಮ್ಮ ಮೆಟ್ರೊ' ನೇರಳೆ ಮತ್ತು ಹಸಿರು ಮಾರ್ಗಗಳಲ್ಲಿ 11 ವರ್ಷಗಳಲ್ಲಿ ಪ್ರಯಾಣಿಸಿದವರ ಸಂಖ್ಯೆ 100 ಕೋಟಿ ದಾಟಿದೆ.

ವರ್ಷದಿಂದ ವರ್ಷಕ್ಕೆ ಮೆಟ್ರೊ ವ್ಯಾಪ್ತಿ ಕೂಡ ವಿಸ್ತಾರಗೊಳ್ಳುತ್ತಿದ್ದು, ಆರಂಭದಲ್ಲಿ 6.7 ಕಿಲೋಮೀಟರ್ ಕಾರ್ಯಾಚರಣೆ ನಡೆಸುತ್ತಿದ್ದ ಮೆಟ್ರೊ ಈಗ 73.81 ಕಿ.ಮೀ.ಗೆ ತಲುಪಿದೆ. ರಸ್ತೆಯ ದಟ್ಟಣೆಯಲ್ಲೇ ಹೆಚ್ಚು ಸಮಯ ಕಳೆದು ಹೋಗುವುದನ್ನು ತಪ್ಪಿಸಲು ಮೆಟ್ರೊವನ್ನೇ ಬಹುತೇಕ ಪ್ರಯಾಣಿಕರು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ಪ್ರಯಾಣಿಕರು ಏನಂತಾರೆ?

ಎರಡು ತಾಸು ಉಳಿತಾಯ

ಕಾಡುಬೀಸನಹಳ್ಳಿಯ ಮಾರತ್‌ಹಳ್ಳಿ ಸೇತುವೆ ಬಳಿ ನಮ್ಮ ಕಚೇರಿ ಇದೆ. ಮೆಟ್ರೊ ಆರಂಭವಾಗುವ ಮೊದಲು ನಮ್ಮ ಮನೆ(-ರಾಜಾಜಿನಗರ)ಯಿಂದ ಕಚೇರಿ ತಲುಪಲು 4 ತಾಸು ಬೇಕಾಗಿತ್ತು. ಈಗ ರಾಜಾಜಿನಗರದಿಂದ ಬನಶಂಕರಿವರೆಗೆ ಮೆಟ್ರೊ ರೈಲಿನಲ್ಲಿ ಹೋಗುತ್ತೇನೆ. 20 ನಿಮಿಷದಲ್ಲಿ ಬನಶಂಕರಿಗೆ ತಲುಪುತ್ತೇನೆ. ಅಲ್ಲಿಂದ ನಮ್ಮ ಕಚೇರಿಗೆ ಬಿಎಂಟಿಸಿ ಬಸ್‌ನಲ್ಲಿ ಒಂದೂವರೆ ತಾಸಿನಲ್ಲಿ ಹೋಗುತ್ತೇನೆ. ಮೆಟ್ರೊದಿಂದಾಗಿ ಎರಡು ತಾಸು ಉಳಿದಿದೆ.

ಮೇಘನಾ ರಾಂಗೋಪಾಲ್, ಕಾಡುಬೀಸನಹಳ್ಳಿ 'ಸ್ನೈಡರ್ ಎಲೆಕ್ಟ್ರಿಕ್' ಕಂಪನಿ ಉದ್ಯೋಗಿ

ಉದ್ಯೋಗಿಗಳಿಗೆ ಅನುಕೂಲ

ನಾನು ರಾಜಾಜಿನಗರದಿಂದ ಕಾಲೇಜಿಗೆ ಸ್ಕೂಟರ್‌ನಲ್ಲಿ ಹೋಗಲು 35–40 ನಿಮಿಷ ಬೇಕು. ಅದೇ ಮೆಟ್ರೊದಲ್ಲಿ 10–15 ನಿಮಿಷದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಕ್ಕೆ ತಲುಪುತ್ತೇನೆ. ಹಾಗಾಗಿ ಮೆಟ್ರೊದಲ್ಲೇ ಹೆಚ್ಚು ಸಂಚರಿಸುತ್ತಿದ್ದೇನೆ. ಎಲ್ಲ ತರಹದ ಉದ್ಯೋಗಿಗಳಿಗೆ ಮೆಟ್ರೊ ಬಹಳ ಉಪಯೋಗವಾಗಿದೆ.

ನೇತ್ರಾವತಿ, ಸಹಾಯಕ ಪ್ರಾಧ್ಯಾಪಕಿ, ಸರ್ಕಾರಿ ಕಲಾ ಕಾಲೇಜು

ನೀಲಿ ಮಾರ್ಗ ಶೀಘ್ರ ಶುರುವಾಗಲಿ

ರಾಜಾಜಿನಗರದಿಂದ ಬನಶಂಕರಿವರೆಗೆ ಮೆಟ್ರೊದಲ್ಲಿ ತೆರಳುತ್ತಿರುವುದರಿಂದ ಒಂದೂವರೆ ಗಂಟೆ ಉಳಿತಾಯವಾಗಿದೆ. ಅಲ್ಲಿಂದ ಮಾರತ್‌ಹಳ್ಳಿವರೆಗೆ ಬಸ್‌ನಲ್ಲಿ ಹೋಗುತ್ತಿದ್ದೇನೆ. ಮಾರತ್‌ಹಳ್ಳಿಯಲ್ಲಿ ಮೆಟ್ರೊ ನೀಲಿ ಮಾರ್ಗ ನಿರ್ಮಾಣಗೊಳ್ಳುತ್ತಿದೆ. ಆ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಗೊಂಡರೆ ಇನ್ನೂ ಕಡಿಮೆ ಅವಧಿಯಲ್ಲಿ ಮನೆಯಿಂದ ಕಚೇರಿಗೆ ತಲುಪಲು ಸಾಧ್ಯವಾಗಲಿದೆ.

ನಯನಾ ಯು.ಪಿ., ಕಾಡುಬೀಸನಹಳ್ಳಿ 'ಸ್ನೈಡರ್ ಎಲೆಕ್ಟ್ರಿಕ್' ಕಂಪನಿ ಉದ್ಯೋಗಿ

ವಾಹನ ದಟ್ಟಣೆಯಿಂದ ಪಾರು

'ಹೊಸಹಳ್ಳಿಯಿಂದ ಬೈಯಪ್ಪನಹಳ್ಳಿಗೆ ತೆರಳಲು ನನಗೆ 2 ಗಂಟೆ ಬೇಕಿತ್ತು. ಮೆಟ್ರೊದಲ್ಲಿ ಸಂಚರಿಸುತ್ತಿರುವುದರಿಂದ ಮುಕ್ಕಾಲು ಗಂಟೆ ಸಾಕಾಗುತ್ತಿದೆ. ವಾಹನ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಮೆಟ್ರೊ ಉಪಯೋಗವಾಗಿದೆ. ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಿಂದ ಒಂದೇ ಕಿಲೋಮೀಟರ್ ದೂರದಲ್ಲಿರುವ ಸಿ.ವಿ. ರಾಮನ್‌ನಗರದ ಟೆಕ್‌ಪಾರ್ಕ್‌ನಲ್ಲಿ ನಮ್ಮ ಕಚೇರಿ ಇದೆ.

ನರಸಿಂಹನ್ ಬಿ.ಎಲ್., 'ಇನ್‌ಫಾರ್ಮೆಟಿಕಾ' ಕಂಪನಿ ಉದ್ಯೋಗಿ

ಅಂಕಿ ಅಂಶಗಳು

57	ಹಸಿರು ಮತ್ತು ನೇರಳೆ ಮಾರ್ಗದಲ್ಲಿ ಸಂಚರಿಸುವ ರೈಲುಗಳ ಸಂಖ್ಯೆ
618	ಪ್ರತಿ ದಿನ ನಡೆಸುವ ಟ್ರಿಪ್‌ಗಳ ಸಂಖ್ಯೆ
21	ಸೇರ್ಪಡೆಗೊಳ್ಳಲು ತಯಾರಾಗಿರುವ ರೈಲುಗಳ ಸಂಖ್ಯೆ

ಪ್ರಮುಖ ಘಟ್ಟಗಳು

- 2011ರ ಅಕ್ಟೋಬರ್‌ನಲ್ಲಿ ನೇರಳೆ ಮಾರ್ಗದಲ್ಲಿ ಬೈಯಪ್ಪನಹಳ್ಳಿ–ಎಂ.ಜಿ. ರಸ್ತೆ ನಡುವೆ ಮೊದಲ ಬಾರಿಗೆ ನಮ್ಮ ಮೆಟ್ರೊ ರೈಲು ಸಂಚರಿಸಿತ್ತು. 6.7 ಕಿ.ಮೀ. ದೂರದ ಮತ್ತು 6 ನಿಲ್ದಾಣಗಳನ್ನು ಆಗ ಹೊಂದಿತ್ತು.
- 2014ರಲ್ಲಿ ಹಸಿರು ಮಾರ್ಗದಲ್ಲಿ ಪೀಣ್ಯ ಇಂಡಸ್ಟ್ರಿ–ಸಂಪಿಗೆ ರಸ್ತೆ ನಡುವೆ ಮೆಟ್ರೊ ರೈಲು ಸಂಚಾರ ಶುರುವಾಯಿತು
- 2015ರಲ್ಲಿ ನೇರಳೆ ಮಾರ್ಗದಲ್ಲಿ ಮಾಗಡಿ ರಸ್ತೆಯಿಂದ ಕೆಂಗೇರಿವರೆಗೆ ಸಂಚಾರ ಆರಂಭವಾಯಿತು.
- 2016ರ ಏಪ್ರಿಲ್‌ನಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಕಬ್ಬನ್ ಪಾರ್ಕ್ ಸುರಂಗಮಾರ್ಗ ಪೂರ್ಣಗೊಂಡು ಸಂಚಾರಕ್ಕೆ ತೆರೆದುಕೊಂಡಿತು.
- 2017ರಲ್ಲಿ ಹಸಿರು ಮಾರ್ಗವು ಮೆಜೆಸ್ಟಿಕ್‌ನಿಂದ ಯಲಚೇನಹಳ್ಳಿವರೆಗೆ ಹಾಗೂ ಪೀಣ್ಯ ಇಂಡಸ್ಟ್ರಿಯಿಂದ ನಾಗಸಂದ್ರವರೆಗೆ ವಿಸ್ತರಣೆಗೊಂಡಿತು.
- 2021ರಲ್ಲಿ ಹಸಿರು ಮಾರ್ಗವು ಯಲಚೇನಹಳ್ಳಿಯಿಂದ ರೇಷ್ಮೆ ಸಂಸ್ಥೆವರೆಗೆ ವಿಸ್ತರಣೆಗೊಂಡಿತು.
- 2023ರ ಆರಂಭದಲ್ಲಿ ನೇರಳೆ ಮಾರ್ಗದ ವೈಟ್‌ಫೀಲ್ಡ್(ಕಾಡುಗೋಡಿ)–ಕೆಆರ್.ಪುರ ಹಾಗೂ ವರ್ಷದ ಕೊನೆಗೆ ಕೆ.ಆರ್.ಪುರ–ಬೈಯಪ್ಪನಹಳ್ಳಿ ಮತ್ತು ಕೆಂಗೇರಿ–ಚಲ್ಲಘಟ್ಟ ನಡುವೆ ಮೆಟ್ರೊ ಸಂಚಾರಕ್ಕೆ ಚಾಲನೆ ಸಿಕ್ಕಿತು.

ರಾಕ್‌ಲೈನ್ ಮಾಲ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ಪಾವತಿ ಮಾಡದ ದಾಸರಹಳ್ಳಿಯಲ್ಲಿರುವ ರಾಕ್‌ಲೈನ್ ಮಾಲ್‌ಗೆ ಬಿಬಿಎಂಪಿ ಸಿಬ್ಬಂದಿ ಬುಧವಾರ ಬೀಗ ಹಾಕಿದ್ದಾರೆ.

ರಾಕ್‌ಲೈನ್ ಮಾಲ್‌ನಿಂದ 2011ರಿಂದ 2022-23ರವರೆಗೆ ₹11.51 ಕೋಟಿ ಆಸ್ತಿ ತೆರಿಗೆ ಪಾವತಿಯಾಗಬೇಕಿದೆ. ಬಾಕಿ ತೆರಿಗೆ ಪಾವತಿಸಲು ಈಗಾಗಲೇ ಡಿಮ್ಯಾಂಡ್ ನೋಟಿಸ್ ನೀಡಿದ್ದರೂ ತೆರಿಗೆಯನ್ನು ಪಾವತಿಸಿರುವುದಿಲ್ಲ. ಹೀಗಾಗಿ ಮಾಲ್ ಅನ್ನು ಸೀಜ್ ಮಾಡಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ವಲಯ ಆಯುಕ್ತೆ ಪ್ರೀತಿ ಗೆಹ್ಲೋಟ್, ವಲಯ ಜಂಟಿ ಆಯುಕ್ತ ಬಾಲಶೇಖರ್ ಉಪಸ್ಥಿತರಿದ್ದರು.

ರಾಕ್‌ಲೈನ್ ಮಾಲ್‌ಗೆ ಬಿಬಿಎಂಪಿ ಸಿಬ್ಬಂದಿ ಬೀಗ ಹಾಕಿರುವುದು

ನಗರಕ್ಕೆ ಬಂದ ಚಾಲಕರಹಿತ ಮೆಟ್ರೊ ಬೋಗಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಹಳದಿ ಮಾರ್ಗದ ಸಂಚಾರಕ್ಕಾಗಿ ಚೀನಾದಿಂದ ತರಲಾದ ಚಾಲಕರಹಿತ ಮೆಟ್ರೊ ರೈಲು ಒಂದು ಸೆಟ್ ಬೋಗಿಗಳು ಹೆಬ್ಬಗೋಡಿ ಡಿಪೊಗೆ ಬುಧವಾರ ಸುರಕ್ಷಿತವಾಗಿ ತಲುಪಿವೆ.

ಮೆಟ್ರೊ ಹಳದಿ ಮಾರ್ಗದ ಆರ್.ವಿ ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರ ವರೆಗಿನ ನೂತನ ಮಾರ್ಗದಲ್ಲಿ ಚಾಲಕರಹಿತ ಮೆಟ್ರೊ ರೈಲು ಸಂಚರಿಸಲಿದೆ. ಮಾರ್ಗ ಆರಂಭಗೊಳ್ಳುವ ಮೊದಲು ಪರೀಕ್ಷೆಗಾಗಿ ಎರಡು ಸೆಟ್ ಬೋಗಿಗಳು (ಒಂದು ಸೆಟ್ ಅಂದರೆ 6 ಬೋಗಿ) ಚೀನಾದಿಂದ ಚೆನ್ನೈಗೆ ಕಳುಹಿಸಲಾಗಿತ್ತು. ಅಲ್ಲಿಂದ ಒಂದು ಸೆಟ್ ಬೆಂಗಳೂರಿಗೆ ತಲುಪಿದ್ದು, ಕೆಲವೇ ದಿನಗಳಲ್ಲಿ ಮತ್ತೊಂದು ಸೆಟ್ ಕೂಡ ಹೆಬ್ಬಗೋಡಿ ಡಿಪೊ ತಲುಪಲಿದೆ.

ಈ ಮಾರ್ಗದಲ್ಲಿ ವಿವಿಧ ಪರೀಕ್ಷೆ ಮತ್ತು ಪರಿಶೀಲನೆಗಳು ಇನ್ನು ಆರಂಭಗೊಳ್ಳಲಿವೆ. ಅವುಗಳ ವರದಿ ಸಲ್ಲಿಕೆಯಾದ ಬಳಿಕ ಸಾರ್ವಜನಿಕ ಸಂಚಾರಕ್ಕೆ ತೆರೆದುಕೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ನಮ್ಮ ಮೆಟ್ರೊ' ಹಳದಿ ಮಾರ್ಗದ ಸಂಚಾರಕ್ಕಾಗಿ ನಗರದ ಹೆಬ್ಬಗೋಡಿ ಡಿಪೊಗೆ ಬುಧವಾರ ತಲುಪಿದ ಚಾಲಕರಹಿತ ಮೆಟ್ರೊ ರೈಲು ಬೋಗಿಗಳು

ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಸೂಕ್ಷ್ಮ ಹಾಗೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಒತ್ತು ನೀಡಬೇಕು' ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಮನವಿ ಮಾಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡಿದ್ದ ಕಾಸಿಯಾ ಅಧ್ಯಕ್ಷ ಹಾಗೂ ಸದಸ್ಯರು, ತಮ್ಮ ಬೇಡಿಕೆ ಪಟ್ಟಿ ಸಲ್ಲಿಸಿದರು.

'ವಿದ್ಯುತ್ ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳಿಗೆ ಸಬ್ಸಿಡಿ ದರದಲ್ಲಿ ವಿದ್ಯುತ್ ಪೂರೈಸಬೇಕು. ರಾಜ್ಯ ಸರ್ಕಾರದಿಂದ ಪ್ರತ್ಯೇಕ ಕಾರ್ಮಿಕ ನೀತಿ, ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಕಾರ್ಮಿಕ ನೀತಿ ರೂಪಿಸಬೇಕು. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಅಪ್ರೆಂಟಿಸ್ ಅಭ್ಯರ್ಥಿಗಳಿಗೆ ಯುವ ನಿಧಿ ಯೋಜನೆ ಮಾದರಿಯಲ್ಲಿ ಯೋಜನೆ ರೂಪಿಸಬೇಕು' ಎಂದು ಮನವಿ ಮಾಡಿದರು.

'ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಅವರು ಕೈಗಾರಿಕಾ ಪ್ರದೇಶಗಳಲ್ಲಿ ನಿಗದಿಪಡಿಸುತ್ತಿರುವ ಅಂತಿಮ ಭೂಮಿ ದರ ಅವೈಜ್ಞಾನಿಕವಾಗಿದೆ. ಖಾಸಗಿ ಕೈಗಾರಿಕಾ ಪ್ರದೇಶಗಳಲ್ಲಿ ಮೂಲ ಸೌಕರ್ಯ ಕೊರತೆ ಇದೆ. ತೆರಿಗೆ ವಸೂಲಾತಿ ಹೆಸರಿನಲ್ಲಿ ಬಿಬಿಎಂಪಿ ಅವರು ಅಕ್ರಮವಾಗಿ ಕೈಗಾರಿಕೆಗಳಿಗೆ ಬೀಗ ಹಾಕುತ್ತಿದ್ದಾರೆ' ಎಂದು ವಿವರಿಸಿದರು.

ಸಭೆಯಲ್ಲಿ ಕಾಸಿಯಾ ಪದಾಧಿಕಾರಿಗಳಾದ ಉಪಾಧ್ಯಕ್ಷ ಎಂ.ಜಿ. ರಾಜಗೋಪಾಲ್, ಗೌರವ ಪ್ರಧಾನ ಕಾರ್ಯದರ್ಶಿ ಎಸ್.ನಾಗರಾಜು, ಜಂಟಿ ಕಾರ್ಯದರ್ಶಿ –ನಗರ ಶ್ರೇಯಾನ್ಸ್ ಕುಮಾರ್ ಜೈನ್, ಜಂಟಿ ಕಾರ್ಯದರ್ಶಿ–ಗ್ರಾಮೀಣ ಅರುಣ್ ಪಡಿಯಾರ್ ಮತ್ತು ಖಜಾಂಚಿ ಮಲ್ಲೇಶ ಗೌಡ ಉಪಸ್ಥಿತರಿದ್ದರು.

ಇಬ್ಬರು ಶಾಸಕರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಗಳೂರು: ಶಾಸಕ ಡಿ.ವೇದವ್ಯಾಸ ಕಾಮತ್ ಮತ್ತು ಡಾ.ವೈ.ಭರತ್ ಶೆಟ್ಟಿ, ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯವಾಹ ಶರಣ್ ಪಂಪ್‌ವೆಲ್, ಪಾಲಿಕೆ ಸದಸ್ಯರಾದ ಸಂದೀಪ್ ಗರೋಡಿ ಮತ್ತು ಭರತ್ ಕುಮಾರ್ ಸೇರಿದಂತೆ ಹಲವರ ವಿರುದ್ಧ ನಗರದ ದಕ್ಷಿಣ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

ಇಲ್ಲಿನ ವೆಲೆನ್ಸಿಯಾದ ಸೇಂಟ್ ಜೆರೋಸಾ ಶಾಲೆಯ ಬಳಿ ಸೋಮವಾರ ಪ್ರತಿಭಟನೆ ನಡೆಸಿದ ಸಂದರ್ಭ 'ಜೈ ಶ್ರೀ ರಾಮ್' ಎಂಬ ಘೋಷಣೆ ಕೂಗಿ, ಕ್ರೈಸ್ತ ಧರ್ಮದ ವಿರುದ್ಧ ಮಾತನಾಡಿದ ಹಾಗೂ ಜಿಲ್ಲೆಯಲ್ಲಿ ಶಾಂತಿ ಮತ್ತು ನೆಮ್ಮದಿಗೆ ಭಂಗ ತರಲು ಬಯಸಿದ ಆರೋಪದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಅನಿಲ್ ಜೆರಾಲ್ಡ್ ಲೋಬೊ ಎಂಬುವರು ನೀಡಿದ ದೂರಿನ ಆಧಾರದಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಿಲ್ಲಾ ವಿಭಜನೆಗೆ ಮೊದಲ ಹೆಜ್ಜೆ

ನೋಂದಣಿ ಕಾಯ್ದೆ–1908 ಪ್ರಕಾರ ಅಧಿಸೂಚನೆ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಪ್ರಾದೇಶಿಕವಾಗಿ ದೊಡ್ಡ ವ್ಯಾಪ್ತಿ ಹೊಂದಿರುವ ಬೆಳಗಾವಿ ಹಾಗೂ ತುಮಕೂರು ಜಿಲ್ಲೆಗಳನ್ನು ವಿಭಜಿಸುವ ಸಂಬಂಧ ರಾಜ್ಯ ಸರ್ಕಾರ ಮೊದಲ ಹೆಜ್ಜೆ ಇಟ್ಟಿದೆ.

ಕೇಂದ್ರ ಸರ್ಕಾರದ ನೋಂದಣಿ ಕಾಯ್ದೆ–1908ರ (ಸೆಕ್ಷನ್–5, ಸಬ್‌ಸೆಕ್ಷನ್–1) ಪ್ರಕಾರ ಈ ಎರಡೂ ಜಿಲ್ಲೆಗಳ ಗಡಿಗಳನ್ನು ಬದಲಾವಣೆ ಮಾಡುವುದಾಗಿ ಫೆಬ್ರುವರಿ 8ರಂದು ಅಧಿಸೂಚನೆ ಹೊರಡಿಸಿದೆ. ಅಧಿಸೂಚನೆಯ ಪ್ರತಿ ಜಿಲ್ಲೆಯ ಹೋರಾಟಗಾರರ ಕೈಸೇರಿದೆ.

ಬೆಳಗಾವಿ ಜಿಲ್ಲೆ ವಿಭಜನೆ ಮಾಡಿ ಚಿಕ್ಕೋಡಿ ಕೇಂದ್ರಿತವಾಗಿ ಹೊಸ ಜಿಲ್ಲೆ ರಚಿಸಬೇಕು ಎಂಬ ಕೂಗು 50 ವರ್ಷಗಳಿಂದ ಇದೆ. 1975ರಿಂದಲೇ ಮೊದಲ ಹಂತದ ಹೋರಾಟ ಆರಂಭವಾಗಿತ್ತು. 20 ವರ್ಷಗಳ ಬಳಿಕ ಅಂದರೆ 1997ರ ಆಗಸ್ಟ್ 22ರಂದು ಅಂದಿನ ಜೆ.ಎಚ್.ಪಟೇಲ್ ಸರ್ಕಾರ ಜಿಲ್ಲೆಯ ವಿಭಜನೆಗೆ ಸದನದಲ್ಲೇ ಒಪ್ಪಿಗೆ ನೀಡಿತ್ತು.

'ಬೆಳಗಾವಿ ಜಿಲ್ಲೆಯನ್ನು ಮೂರು ಭಾಗಗಳಾಗಿ ಮಾಡಿ ಬೆಳಗಾವಿ, ಚಿಕ್ಕೋಡಿ ಹಾಗೂ ಗೋಕಾಕ ಕೇಂದ್ರವಾಗಿ ಮೂರು ಹೊಸ ಜಿಲ್ಲೆ ಮಾಡಲು ಸರ್ಕಾರ ನಿರ್ಧಾರ ಪ್ರಕಟಿಸಿತು. ಆಗ 10 ತಾಲ್ಲೂಕು ಮಾತ್ರ ಇದ್ದವು (ಈಗ 15). ರಾಮದುರ್ಗ, ಸವದತ್ತಿ ಹಾಗೂ ಬೈಲಹೊಂಗಲ ತಾಲ್ಲೂಕಿನ ಜನ ಆಗಿನ ಗೋಕಾಕ ಜಿಲ್ಲಾ ವ್ಯಾಪ್ತಿಗೆ ಸೇರಲು ವಿರೋಧ ವ್ಯಕ್ತಪಡಿಸಿದರು. ಜತೆಗೆ, ಬೆಳಗಾವಿ, ಖಾನಾಪುರ, ಹುಕ್ಕೇರಿ ತಾಲ್ಲೂಕು ಸೇರಿ ಆರೂ ತಾಲ್ಲೂಕಿನ ಹೋರಾಟಗಾರರು ಸೇರಿ 'ಬೆಳಗಾವಿ ಜಿಲ್ಲಾ ಹೋರಾಟ ಸಮಿತಿ' ನಿರ್ಮಿಸಿಕೊಂಡರು' ಎಂದು ಹೋರಾಟ ಸಮಿತಿಯಲ್ಲಿರುವ ಅಶೋಕ ಚಂದರಗಿ ತಿಳಿಸಿದರು.

'1997ರ ಆಗಸ್ಟ್ 25ರಿಂದ ಬೃಹತ್ ಹೋರಾಟ ಶುರು ಮಾಡಿದ್ದರು. ಆಗ ಮುಖ್ಯಮಂತ್ರಿ ಆಗಿದ್ದ ಜೆ.ಎಚ್. ಪಟೇಲ್ ಅವರಿಗೆ ಆಗಸ್ಟ್ 24ರಂದು ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಮತ್ತು ಜಿಲ್ಲಾ ಹೋರಾಟ ಸಮಿತಿಯಿಂದ ಮನವಿ ಸಲ್ಲಿಸಲಾಯಿತು. 25 ದಿನ ನಿರಂತರ ಹೋರಾಟ ನಡೆಯಿತು. ಆಗಿನ ನಾಯಕರಾಗಿದ್ದ ಪಾಟೀಲ ಪುಟ್ಟಪ್ಪ ಹಾಗೂ ಎಸ್. ನಿಜಲಿಂಗಪ್ಪ ಅವರ ನಿರ್ದೇಶನದಂತೆ ಜೆ.ಎಚ್.ಪಟೇಲ್ ಅವರು ಸೆಪ್ಟೆಂಬರ್ 29ರಂದು ಈ ಆದೇಶ ತಡೆಹಿಡಿದರು. ಅಲ್ಲಿಂದ ಇಲ್ಲಿಯವರೆಗೆ ಜಿಲ್ಲೆಯ ವಿಭಜನೆ ಕುಲ್ಕು ಬಿದ್ದಿದೆ' ಎಂದರು.

'ಜಿಲ್ಲೆಯನ್ನು ಮೂರು ಭಾಗಗಳಾಗಿ ವಿಭಾಗ ಮಾಡುತ್ತೇವೆ. ಅದರಲ್ಲಿ ಗೋಕಾಕ ಕೂಡ ಒಂದಾಗಿರುತ್ತದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಪದೇಪದೇ ಹೇಳುತ್ತಲೇ ಇದ್ದಾರೆ.

ಇದಕ್ಕೆ ಪೂರಕವಾಗಿ ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ, 'ಬೈಲಹೊಂಗಲ ಕೇಂದ್ರವಾಗಿಯೇ ಮೂರನೇ ಜಿಲ್ಲೆ ರಚನೆ ಆಗುತ್ತದೆ' ಎಂದು ಹೇಳುತ್ತಿದ್ದಾರೆ.

ಬೆಳಗಾವಿ ಜಿಲ್ಲೆ ವಿಭಜನೆ ಸಂಬಂಧ ಸರ್ಕಾರದ ಹಂತದಲ್ಲಿ ಯಾವುದೇ ಚರ್ಚೆ ಆಗಿಲ್ಲ. ಮುಖ್ಯಮಂತ್ರಿ ಅವರು ನಮ್ಮನ್ನೆಲ್ಲ ವಿಶ್ವಾಕ್ಕೆ ತೆಗೆದುಕೊಂಡೇ ಹೆಜ್ಜೆ ಇಡುತ್ತಾರೆ

ಲಕ್ಷ್ಮಿ ಹೆಬ್ಬಾಳಕರ, ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ನೋಟಿಫಿಕೇಷನ್ ಗಮನಿಸಿದ್ದೇನೆ. ಇದು ಜಿಲ್ಲೆಯ ವಿಭಜನೆಗೆ ಸಂಬಂಧಿಸಿದ್ದು ಎಂದು ಗೊತ್ತಾಗಿಲ್ಲ. ಗುರುವಾರ ಬೆಂಗಳೂರಿನಲ್ಲಿ ಸಿ.ಎಂ ಭೇಟಿ ಮಾಡಿ ಪ್ರತಿಕ್ರಿಯಿಸುವೆ

ಮಹಾಂತೇಶ ಕೌಜಲಗಿ
ಶಾಸಕ, ಬೈಲಹೊಂಗಲ

ಜಿಲ್ಲೆ ವಿಭಜನೆ ಮಾಡುವ ಮುನ್ನ ಸರ್ಕಾರ ಕರ್ನಾಟಕ– ಮಹಾರಾಷ್ಟ್ರ ಗಡಿ ಸಮಸ್ಯೆಗೆ ಕೊನೆ ಹಾಡಬೇಕು. ಇಲ್ಲದಿದ್ದರೆ ಸಂಕಷ್ಟ ಎದುರಾಗಬಹುದು

ಅಶೋಕ ಚಂದರಗಿ, ಅಧ್ಯಕ್ಷ, ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ

ಬಿಜೆಪಿಯ ಸುಳ್ಳು ಆರೋಪಗಳಿಗೆ ಸ್ಪಷ್ಟ ಉತ್ತರ ಕೊಡಿ: ಸಿದ್ದರಾಮಯ್ಯ

ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕರಿಗೆ ಸೂಚನೆ

ಪ್ರಜಾವಾಭಣಿ ವಾರ್ತೆ

ಬೆಂಗಳೂರು: 'ವಿಧಾನ ಮಂಡಲ ಅಧಿವೇಶನದಲ್ಲಿ ಸದನದ ಕಡತಕ್ಕೆ ಹೋಗಲಿ ಎಂದು ಬಿಜೆಪಿಯವರು ಸುಳ್ಳು ಆರೋಪಗಳನ್ನು ಮಾಡುತ್ತಾರೆ. ಇದಕ್ಕೆ ಸತ್ಯದ ಮೂಲಕ, ಅಧಿಕೃತ ಅಂಕಿಅಂಶಗಳ ಮೂಲಕ ಸ್ಪಷ್ಟ ಉತ್ತರ ಕೊಡಿ' ಎಂದು ಸ್ವಪಕ್ಷೀಯ ಶಾಸಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ಏಟ್ರಿಯಾ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, 'ಸರಣಿ ಸುಳ್ಳುಗಳ ಮೂಲಕ ಸತ್ಯವನ್ನು ಹುದುಗಿಸಿಡಲು ಬಿಜೆಪಿ ಯತ್ನಿಸುತ್ತಿದೆ. ಲೋಕಸಭಾ ಚುನಾವಣೆಗೆ ಜನರ ಬಳಿಗೆ ಹೋಗಿ ಮುಖ ತೋರಿಸಲು ಬಿಜೆಪಿಗೆ ಅಭಿವೃದ್ಧಿ ವಿಚಾರಗಳೇ ಇಲ್ಲ. 10 ವರ್ಷಗಳಲ್ಲಿ ಅಭಿವೃದ್ಧಿಯನ್ನು ಮರೆತು ಈಗ ಚುನಾವಣೆ ವೇಳೆ ಅಯೋಧ್ಯೆ ವಿಚಾರ ಒಂದನ್ನೇ ಮುಂದಿಟ್ಟುಕೊಂಡು ಹೊರಟಿದ್ದಾರೆ' ಎಂದರು.

'ಬಿಜೆಪಿ ಮತ್ತು ಜೆಡಿಎಸ್ ಬೆಂಬಲಿಗರು ಮತ್ತು ಮತದಾರರು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಆದರೆ, ಎರಡೂ ಪಕ್ಷದ ನಾಯಕರು ವಿರೋಧಿಸುತ್ತಿದ್ದಾರೆ. ಆದರೆ, ಹಳ್ಳಿ ಹಳ್ಳಿಗೆ ಗ್ಯಾರಂಟಿ ಯೋಜನೆ ಪರಿಣಾಮಕಾರಿಯಾಗಿ ತಲುಪುತ್ತಿದೆ. ಈ ಬಗ್ಗೆ ಸದನದಲ್ಲಿ ಬಹಳ ಹೆಮ್ಮೆಯಿಂದ ಮಾತನಾಡಿ' ಎಂದೂ ಕರೆ ನೀಡಿದರು.

'ಶಾಸಕರು ಸದನದಲ್ಲಿ ಪರಿಣಾಮಕಾರಿಯಾಗಿ, ಕಡ್ಡಾಯವಾಗಿ ಭಾಗವಹಿಸುವ ಮೂಲಕ ಸದನದ ಸಮಯವನ್ನು ಅರ್ಥಪೂರ್ಣಗೊಳಿಸಬೇಕು' ಎಂದೂ ಹೇಳಿದರು.

ಏಟ್ರಿಯಾ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಗೃಹ ಸಚಿವ ಜಿ. ಪರಮೇಶ್ವರ, ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದರು

ಲೋಕಸಭೆ ಅಭ್ಯರ್ಥಿ ಆಯ್ಕೆಗೆ ಮತ್ತೊಮ್ಮೆ ಸಮೀಕ್ಷೆ- ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗೆ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸುತ್ತೇವೆ. ನಂತರ ದೆಹಲಿಯಲ್ಲಿ ಸಭೆ ಸೇರಿ ಚರ್ಚೆ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಚುನಾವಣೆ ಸಮಿತಿ ಸಭೆಯ ಬಳಿಕ ಮಾತನಾಡಿದ ಅವರು, 'ಪಕ್ಷದ ವೀಕ್ಷಕರು, ಜಿಲ್ಲಾ ಉಸ್ತುವಾರಿ ಸಚಿವರು, ಕೆಲವು ಕಾರ್ಯಕರ್ತರು ಸಲ್ಲಿಸಿದ್ದ ವರದಿ ಮತ್ತು ನಮ್ಮ ಸಮೀಕ್ಷೆಯ ವರದಿಗಳನ್ನು ಪರಾಮರ್ಶೆ ಮಾಡಿದ್ದೇವೆ. ಮತ್ತೊಂದು ಸುತ್ತಿನ ಸಮೀಕ್ಷೆಗೆ ಸೂಚಿಸಿದ್ದೇವೆ. ಅಭ್ಯರ್ಥಿಗಳ ಪಟ್ಟಿ ಇನ್ನೂ ಅಂತಿಮವಾಗಿಲ್ಲ. ದೆಹಲಿಯಲ್ಲಿ ಮುಂದಿನ ಸುತ್ತಿನ ಸಭೆ ನಡೆಯಲಿದೆ. ಬಜೆಟ್ ಅಧಿವೇಶನ ಇದ್ದುದರಿಂದ ಈ ಬಾರಿ ಬೆಂಗಳೂರಿನಲ್ಲೇ ಸಭೆ ನಡೆಸಿದ್ದೇವೆ' ಎಂದರು.

'ಇದೇ ತಿಂಗಳ ಒಳಗಾಗಿ ಅಭ್ಯರ್ಥಿಗಳ ಪಟ್ಟಿ ಅಂತಿಮ ಆಗಲಿದೆಯೇ' ಎಂಬ ಪ್ರಶ್ನೆಗೆ, 'ಆದಷ್ಟು ಬೇಗ ಅಂತಿಮಗೊಳಿಸಬೇಕು. ಶೇ 50ರಷ್ಟು ಅಭ್ಯರ್ಥಿಗಳಿಗಾದರೂ ಕೆಲಸ ಆರಂಭಿಸಲು ಸೂಚನೆ ನೀಡಬೇಕಿದೆ' ಎಂದರು.

ಎಷ್ಟು ಕ್ಷೇತ್ರಗಳಲ್ಲಿ ಒಬ್ಬ ಆಕಾಂಕ್ಷಿ ಇದ್ದಾರೆ ಎಂಬ ಪ್ರಶ್ನೆಗೆ, 'ಆ ವಿಚಾರವಾಗಿ ಇನ್ನೂ ಚರ್ಚೆ ಮಾಡಿಲ್ಲ. ನಾವು ಕೇವಲ ನಮಗೆ ಬಂದಿರುವ ವರದಿಗಳು, ಅಭಿಪ್ರಾಯದ ಬಗ್ಗೆ ಚರ್ಚೆ ಮಾಡಿದ್ದೇವೆ' ಎಂದರು.

ಎಐಸಿಸಿಗೆ ಕಳುಹಿಸಿರುವ ಪಟ್ಟಿ ಬಗ್ಗೆ ಗೊಂದಲವಿದೆಯೇ ಎಂದು ಕೇಳಿದಾಗ, 'ಇದೆಲ್ಲವೂ ಸುಳ್ಳು, ನಾವು ಎಐಸಿಸಿಗೆ ಯಾವುದೇ ಪಟ್ಟಿ ನೀಡಿಲ್ಲ. ಮುಖ್ಯಮಂತ್ರಿಗೆ ವಿವಿಧ ವರದಿಗಳು, ಅಭಿಪ್ರಾಯಗಳ ಕುರಿತ ಅಧಿಕೃತ ಪಟ್ಟಿಯನ್ನು ಇವತ್ತಷ್ಟೇ ನೀಡಿದ್ದೇನೆ. ನಾವು ನಮ್ಮ ಪಟ್ಟಿಯನ್ನು ಗೌಪ್ಯವಾಗಿಡಬೇಕು. ಆ ಕೆಲಸ ಮಾಡುತ್ತೇವೆ' ಎಂದರು.

ಸಚಿವರ ಸ್ಪರ್ಧೆ ಬಗ್ಗೆ ಕೇಳಿದಾಗ, 'ರಾಜಕೀಯದಲ್ಲಿ ಯಾರು ಬೇಕಾದರೂ ಸ್ಪರ್ಧಿಸಬಹುದು. ಎಲ್ಲರಿಗೂ ಅವಕಾಶ ಇರುತ್ತದೆ. ಪಕ್ಷ ಗೆಲ್ಲುವುದು ಮುಖ್ಯ' ಎಂದು ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಸನ್ಮಾನ

ಹಂಪಿ ಉತ್ಸವದಲ್ಲಿ ಮುಖ್ಯ ವೇದಿಕೆಯಾದ ಗಾಯತ್ರಿ ಪೀಠದಲ್ಲಿ ತಮ್ಮ ತಂಡದ ಜೊತೆ 'ಮೋಹಿನಿ ಆಟಂ' ಪ್ರದರ್ಶಿಸಿದ ಮುಖ್ಯಮಂತ್ರಿಯ ವಿಶೇಷ ಕರ್ತವ್ಯಾಧಿಕಾರಿ ಕೆ. ವೈಷ್ಣವಿ ಕುಪ್ಪುಸ್ವಾಮಿ ಅವರನ್ನು ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಸನ್ಮಾನಿಸಿದರು. ಕಂಪ್ಲಿ ಶಾಸಕ ಜೆ.ಎನ್. ಗಣೇಶ್, ಮಾಜಿ ಸಚಿವ ಆನಂದ್ ಸಿಂಗ್, ಚಿತ್ರ ನಟರಾದ ರವಿಚಂದ್ರನ್, ಪ್ರೇಮ್, ಸಾಧುಕೋಕಿಲ ಇದ್ದರು

ಬೈಕ್ ಸವಾರರು, ಪಾದಚಾರಿಗಳಿಗೆ ಅಪಾಯ ಹೆಚ್ಚು • ಸಂಚಾರ ನಿಯಮ ಉಲ್ಲಂಘನೆ: ದಿನಕ್ಕೆ ಕನಿಷ್ಠ ಇಬ್ಬರು ಸಾವು

ಅಪಘಾತ: ಒಂದೇ ತಿಂಗಳಿನಲ್ಲಿ 90 ಸಾವು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆ ಹೆಚ್ಚುತ್ತಿರುವ ಜೊತೆಯಲ್ಲಿಯೇ ಸಂಚಾರ ನಿಯಮ ಉಲ್ಲಂಘಿಸುವವರ ಸಂಖ್ಯೆಯೂ ಏರಿಕೆ ಆಗುತ್ತಿದೆ. ಇದರ ಪರಿಣಾಮವಾಗಿ ಮೇಲಿಂದ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಪ್ರಸಕ್ತ ವರ್ಷದ ಜನವರಿ ಒಂದೇ ತಿಂಗಳಿನಲ್ಲಿ 432 ಅಪಘಾತಗಳು ಸಂಭವಿಸಿದ್ದು, 90 ಮಂದಿ ಮೃತಪಟ್ಟಿದ್ದಾರೆ.

ಹೆಲ್ಮೆಟ್ ರಹಿತ ಚಾಲನೆ ಹಾಗೂ ಅತೀ ವೇಗದ ಚಾಲನೆ ಸೇರಿದಂತೆ ವಿವಿಧ ಪ್ರಕಾರಗಳ ನಿಯಮ ಉಲ್ಲಂಘನೆಯಿಂದಾಗಿ ಅಪಘಾತಗಳು ಹೆಚ್ಚುತ್ತಿರುವುದು ಸಂಚಾರ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಹೊರವರ್ತುಲ ರಸ್ತೆಗಳು, ಪ್ರಮುಖ ರಸ್ತೆಗಳು ಹಾಗೂ ಇತರೆ ಒಳ ರಸ್ತೆಗಳಲ್ಲಿ ನಿತ್ಯವೂ ಅಪಘಾತಗಳು ಸಂಭವಿಸುತ್ತಿವೆ. ಇಂಥ ಅಪಘಾತಗಳಲ್ಲಿ ಪ್ರತಿದಿನ ಕನಿಷ್ಠ ಇಬ್ಬರು ಸಾವಿಗೀಡಾಗುತ್ತಿದ್ದು, ಅವರನ್ನೇ ನಂಬಿಕೊಂಡು ಬದುಕು ಕಟ್ಟಿಕೊಂಡಿದ್ದ ಕುಟುಂಬಗಳು ಕಣ್ಣೀರಿನಲ್ಲಿ ಕೈ ತೊಳೆಯುತ್ತಿವೆ.

‘2023ರ ಜನವರಿ ತಿಂಗಳಿನಲ್ಲಿ 86 ಮಂದಿ ಮೃತಪಟ್ಟಿದ್ದರು. ಪ್ರಸಕ್ತ ವರ್ಷ (2024) ಜನವರಿ 1ರಿಂದ 31ರವರೆಗೆ 432 ಅಪಘಾತಗಳು ಸಂಭವಿಸಿದ್ದು, 90 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 369 ಮಂದಿ ಗಾಯಗೊಂಡಿದ್ದಾರೆ. ಪ್ರತಿಯೊಂದು ಅಪಘಾತದ ಬಗ್ಗೆ ಪ್ರತ್ಯೇಕ ತನಿಖೆ ನಡೆಸಲಾಗುತ್ತಿದೆ. ಯಾವ ಕಾರಣಕ್ಕೆ ಅಪಘಾತ ಸಂಭವಿಸಿದೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ರಸ್ತೆ ವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆ ಬೇಕಾದರೆ, ಸಂಬಂಧಪಟ್ಟ ಇಲಾಖೆ ಜೊತೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಸಂಚಾರ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಪಾದಚಾರಿ, ಸವಾರರಿಗೆ ಅಪಾಯ ಹೆಚ್ಚು: ‘ಬಹುತೇಕ ಅಪಘಾತಗಳಲ್ಲಿ ಮೃತಪಟ್ಟವರಲ್ಲಿ ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ಹೆಚ್ಚಿದ್ದಾರೆ. ರಸ್ತೆ ದಾಟುವ ಹಾಗೂ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುವ ಸಂದರ್ಭಗಳಲ್ಲಿ ವಾಹನಗಳು ಡಿಕ್ಕಿ ಹೊಡೆದು ಪಾದಚಾರಿಗಳು ಮೃತಪಡುತ್ತಿದ್ದಾರೆ’ ಎಂದು ಅಧಿಕಾರಿ ತಿಳಿಸಿದರು.

‘ನಗರದ ಹಲವು ರಸ್ತೆಗಳಲ್ಲಿ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಲಾಗಿದೆ. ಪಾದಚಾರಿ ಮಾರ್ಗದಲ್ಲಿ ಸಾಗಬೇಕಾದ ಜನರು, ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಜೊತೆಗೆ, ನಿಯಮ ಉಲ್ಲಂಘಿಸಿ ರಸ್ತೆ ದಾಟುತ್ತಿದ್ದಾರೆ. ಇದರಿಂದಾಗಿ ವಾಹನಗಳು ಪಾದಚಾರಿಗಳಿಗೆ ಡಿಕ್ಕಿ ಹೊಡೆಯುತ್ತಿವೆ. ಇಂಥ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಪಾದಚಾರಿ ಮಾರ್ಗಗಳನ್ನು ತೆರವು ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೂ ಕೋರಲಾಗುತ್ತಿದೆ’ ಎಂದು ಹೇಳಿದರು.

‘ಅತೀ ವೇಗದಲ್ಲಿ ದ್ವಿಚಕ್ರ ವಾಹನ ಚಲಾಯಿಸಿದ್ದರಿಂದ, ಉರುಳಿ ಬಿದ್ದು ಸವಾರರು ಮೃತಪಟ್ಟಿದ್ದಾರೆ. ಬಹುತೇಕ ಪ್ರಕರಣಗಳಲ್ಲಿ ಮೃತ ಸವಾರರು, ಹೆಲ್ಮೆಟ್ ಧರಿಸದಿರುವುದು ಗೊತ್ತಾಗಿದೆ. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ನಿಯಮವಿದ್ದರೂ ಕೆಲವರು ನಿರ್ಲಕ್ಷ್ಯ ವಹಿಸುತ್ತಿದ್ದಾರೆ’ ಎಂದು ಅಧಿಕಾರಿ ತಿಳಿಸಿದರು.

ಅಪಘಾತಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಉಪ್ಪಾರಪೇಟೆ ಸಂಚಾರ ಠಾಣೆ ಪೊಲೀಸರು, ಯಮ ವೇಷಧಾರಿ ಮೂಲಕ ಸಂಚಾರ ನಿಯಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು

ವರ್ಷವಾರು ಅಪಘಾತ ವಿವರ



ಸಂಚಾರ ಠಾಣೆವಾರು ಅಪಘಾತ ವಿವರ (2024ರ ಜನವರಿ)

ಠಾಣೆ	ಒಟ್ಟು ಅಪಘಾತ	ಸಾವು	ಗಾಯಾಳು
ಹಲಸೂರು	9	2	7
ಇಂದಿರಾನಗರ	6	2	4
ಪುಲಿಕೇಶಿನಗರ	5	2	5
ಕೆ.ಆರ್.ಪುರ	25	5	22
ಎಚ್‌ಎಎಲ್	7	3	4
ವೈಟ್‌ಫೀಲ್ಡ್	16	4	12
ವಿಲ್ಸನ್ ಗಾರ್ಡನ್	6	2	3
ಬ್ಯಾಟರಾಯನಪುರ	18	2	5
ಕೆಂಗೇರಿ	25	9	15
ಕಾಮಾಕ್ಷಿಪಾಳ್ಯ	25	4	23
ಹೆಬ್ಬಾಳ	19	4	14
ಯಲಹಂಕ	21	5	16
ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ	27	11	16
ಹೆಣ್ಣೂರು	12	3	7
ರಾಜಾಜಿನಗರ	12	2	9
ಯಶವಂತಪುರ	6	3	5
ಪೀಣ್ಯ	2	9	12
ಹುಳಿಮಾವು	8	2	6
ಕುಮಾರಸ್ವಾಮಿ ಲೇಔಟ್	11	2	12
ಎಲೆಕ್ಟ್ರಾನಿಕ್ ಸಿಟಿ	21	6	15
ಬೆಳ್ಳಂದೂರು	8	3	5

‘ಬೈಕ್ ಸವಾರರ ಸಾವಿನ ಪ್ರಮಾಣ ಶೇ 40’

‘ಜನವರಿಯಲ್ಲಿ ಮೃತಪಟ್ಟ 90 ಮಂದಿಗಳ ಪೈಕಿ ಶೇ 40ರಷ್ಟು ಮಂದಿ ಬೈಕ್ ಸವಾರರು. ಶೇ 25ರಷ್ಟು ಪಾದಚಾರಿಗಳು’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ತಿಳಿಸಿದರು.

ಎಂ.ಎನ್. ಅನುಚೇತ್

‘ಪ್ರಜಾವಾಣಿ’ ಜೊತೆ ಮಾತನಾಡಿದ ಅವರು, ‘ಪಾದಚಾರಿಗಳು ಜೀಬ್ರಾ ಕ್ರಾಸಿಂಗ್ ಬಳಸುತ್ತಿಲ್ಲ. ಎಲ್ಲೆಂದರಲ್ಲಿ ರಸ್ತೆ ದಾಟುತ್ತಿದ್ದಾರೆ. ಅಪಾಯಕಾರಿ ರಸ್ತೆಗಳಲ್ಲಿ ಬ್ಯಾರಿಕೇಡ್ ನಿಲ್ಲಿಸಿದರೆ, ಜನರು ಅದನ್ನು ಹತ್ತಿ ಇಳಿದು ಹೋಗುತ್ತಿದ್ದಾರೆ. ಇದರಿಂದಲೇ ಪಾದಚಾರಿಗಳ ಸಾವಿನ ಪ್ರಮಾಣ ಹೆಚ್ಚಾಗುತ್ತಿದೆ’ ಎಂದು ಹೇಳಿದರು.

‘ಹೆಲ್ಮೆಟ್ ಇಲ್ಲದಿದ್ದರಿಂದ ದ್ವಿಚಕ್ರ ಸವಾರರು ಹೆಚ್ಚು ಸಾಯುತ್ತಿದ್ದಾರೆ. ಈ ಬಗ್ಗೆ ಶಾಲೆ– ಕಾಲೇಜು ಹಾಗೂ ಸಂಸ್ಥೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ದ್ವಿಚಕ್ರ ವಾಹನ ಸವಾರರ ಹೆಲ್ಮೆಟ್ ಧರಿಸಿ ಸಂಚರಿಸಬೇಕು. ಅಪಘಾತ ಸಂಭವಿಸಿದರೂ ಜೀವ ಉಳಿಯುವ ಸಾಧ್ಯತೆ ಹೆಚ್ಚು’ ಎಂದು ತಿಳಿಸಿದರು.

ಬಸ್– ಬೈಕ್ ಅಪಘಾತ ಹಿಂಬದಿ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ರಸ್ತೆಯ ವಿದ್ಯಾನಗರ ವೃತ್ತದಲ್ಲಿ ಮಂಗಳವಾರ ರಾತ್ರಿ ಅಪಘಾತ ಸಂಭವಿಸಿದ್ದು, ಆಶೀಸ್ ಜೀಜಾ (22) ಅವರು ಮೃತಪಟ್ಟಿದ್ದಾರೆ.

‘ಕೇರಳದ ಆಶೀಸ್, ಕಟ್ಟಡ ನಿರ್ಮಾಣ ಕಂಪನಿಯೊಂದರ ಲೆಕ್ಕಾಧಿಕಾರಿ. ನಾರಾಯಣಪುರದಲ್ಲಿ ವಾಸವಿದ್ದರು. ಸ್ನೇಹಿತನ ಜೊತೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಸ್ನೇಹಿತ, ಬೈಕ್ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ಆಶೀಸ್ ಕುಳಿತಿದ್ದರು. ವಿದ್ಯಾನಗರ ವೃತ್ತದ ಸರ್ವೀಸ್ ರಸ್ತೆಯಲ್ಲಿ ರಾತ್ರಿ 8.15 ಗಂಟೆ ಸುಮಾರಿಗೆ ಬೈಕ್ ಹೊರಟಿತ್ತು. ಇದೇ ಮಾರ್ಗದಲ್ಲಿ ತೆರಳುತ್ತಿದ್ದ ಖಾಸಗಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಉರುಳಿಬಿದ್ದ ಆಶೀಸ್ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

‘ಅಪಘಾತದಲ್ಲಿ ಸ್ನೇಹಿತನಿಗೆ ಸಣ್ಣ–ಪುಟ್ಟ ಗಾಯಗಳಾಗಿವೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದರು.

ಸರ್ಕಾರಿ ನೌಕರನಿಗೆ 5 ವರ್ಷ ಜೈಲು ಶಿಕ್ಷೆ, ₹ 50 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೀದರ್: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಪ್ರಕರಣದಲ್ಲಿ ಇಲ್ಲಿಯ ಜಿಲ್ಲಾ ಸೆಷನ್ಸ್ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯವು ಸರ್ಕಾರಿ ನೌಕರರೊಬ್ಬರಿಗೆ ಐದು ವರ್ಷ ಜೈಲು ಶಿಕ್ಷೆ ಹಾಗೂ ₹ 50 ಲಕ್ಷ ದಂಡ ವಿಧಿಸಿದೆ.

ತುಳಸಿರಾಮ ಅಣ್ಣೆಪ್ಪ ನಂದಗಾಂವೆ ಶಿಕ್ಷೆಗೆ ಒಳಗಾದವರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ವಿಜಯಕುಮಾರ ಎಂ. ಆನಂದಶೆಟ್ಟಿ, ಲಂಚ ನಿಷೇಧ ಕಾಯ್ದೆಯ ಅನ್ವಯ ಬುಧವಾರ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ. ದಂಡ ಭರಿಸಲು ತಪ್ಪಿದ್ದಲ್ಲಿ ಹೆಚ್ಚುವರಿಯಾಗಿ ಒಂದು ವರ್ಷ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.

ಬೀದರ್‌ನ ಶಿವನಗರದ ತುಳಸಿರಾಮ ನಂದಗಾಂವೆ 1983ರ ಫೆಬ್ರುವರಿ 7ರಂದು ರೇಷ್ಮೆ ಇಲಾಖೆಯಲ್ಲಿ ರೇಷ್ಮೆ ಪ್ರದರ್ಶಕ ಹುದ್ದೆಗೆ ನೇಮಕಗೊಂಡಿದ್ದರು. ನಂತರ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ನಿಯೋಜನೆ ಮೇಲೆ ಬೀದರ್ ದಕ್ಷಿಣ ಶಾಸಕರ ಆಪ್ತ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿದ್ದರು.

ಆದಾಯಕ್ಕಿಂತ ಅಧಿಕ ಆಸ್ತಿ ಗಳಿಕೆ ಸಂಬಂಧ ಪ್ರಕರಣ ದಾಖಲಿಸಿಕೊಂಡ ಕರ್ನಾಟಕ ಲೋಕಾಯುಕ್ತದ ಬೀದರ್ ಠಾಣೆಯ ಅಧಿಕಾರಿಗಳು 2008ರ ಡಿಸೆಂಬರ್ 30ರಂದು ತುಳಸಿರಾಮ ಅವರ ಬೀದರ್‌ನ ಶಿವನಗರದ ಮನೆ ಹಾಗೂ ಬೆಂಗಳೂರಿನ ಮಲ್ಲೇಶ್ವರಂನ ಬಾಡಿಗೆ ಮನೆ ಮೇಲೆ ಏಕಕಾಲಕ್ಕೆ ದಾಳಿ ನಡೆಸಿದ್ದರು. ತನಿಖೆ ಸಂದರ್ಭದಲ್ಲಿ ತುಳಸಿರಾಮ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು ಕಂಡು ಬಂದಿತ್ತು.

ಲೋಕಾಯುಕ್ತದ ಬೀದರ್ ಠಾಣೆಯ ಅಧೀನ ಡಿವೈಎಸ್ಪಿ ಟಿ.ಜಿ. ರಾಯ್ಕರ್ ಅವರು ಲಂಚ ನಿಷೇಧ ಕಾಯ್ದೆಯಡಿ ತುಳಸಿರಾಮ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಆದಾಯಕ್ಕಿಂತ ₹ 36.76 ಲಕ್ಷ (ಶೇ 125.94) ಹೆಚ್ಚು ಆಸ್ತಿ ಹೊಂದಿರುವುದು ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶರು ತುಳಸಿರಾಮಗೆ ಶಿಕ್ಷೆ ಹಾಗೂ ದಂಡ ವಿಧಿಸಿ ತೀರ್ಪು ನೀಡಿದ್ದಾರೆ ಎಂದು ಪ್ರಕರಣದಲ್ಲಿ ಕರ್ನಾಟಕ ಲೋಕಾಯುಕ್ತದ ಪರವಾಗಿ ವಾದ ಮಂಡಿಸಿದ್ದ ವಿಶೇಷ ಸರ್ಕಾರಿ ಅಭಿಯೋಜಕ ಕೇಶವರಾವ್ ಶ್ರೀಮಾಳೆ ತಿಳಿಸಿದ್ದಾರೆ.

ಮುಂಬೈನಲ್ಲಿ ಸೆರೆಸಿಕ್ಕ ‘ಇಡ್ಲಿ ಗುರು’ ಮಾಲೀಕ

ಫ್ರಾಂಚೈಸಿ ವಂಚನೆ: ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಡ್ಲಿ ಮಾರಾಟಕ್ಕೆ ಫ್ರಾಂಚೈಸಿ ನೀಡುವುದಾಗಿ ಹೇಳಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ‘ಇಡ್ಲಿ ಗುರು’ ಕಂಪನಿ ಮಾಲೀಕ ಕಾರ್ತಿಕ್ ಶೆಟ್ಟಿ ಅವರನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಮುಂಬೈನಲ್ಲಿ ವಶಕ್ಕೆ ಪಡೆದಿದ್ದಾರೆ.

‘ಫ್ರಾಂಚೈಸಿಗೆ ಹಣ ಕೊಟ್ಟು ನಷ್ಟ ಅನುಭವಿಸಿದ್ದ ಚೇತನ್ ಅವರು ದೂರು ನೀಡಿದ್ದರು. ವಂಚನೆ ಆರೋಪದಡಿ ಕಾರ್ತಿಕ್ ಶೆಟ್ಟಿ, ಪತ್ನಿ ಮಂಜುಳಾ, ತಂದೆ ಬಾಬು ಶೆಟ್ಟಿ ಹಾಗೂ ಹೋಟೆಲ್ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಕರಣ ದಾಖಲಾಗುತ್ತಿದ್ದಂತೆ ನಗರ ತೊರೆದಿದ್ದ ಕಾರ್ತಿಕ್, ಮುಂಬೈನಲ್ಲಿ ಉಳಿದುಕೊಂಡಿದ್ದ. ಮುಂಬೈಗೆ ಹೋಗಿರುವ ವಿಶೇಷ ತಂಡ, ಆರೋಪಿಯನ್ನು ವಶಕ್ಕೆ ಪಡೆದು ನಗರಕ್ಕೆ ಕರೆತರುತ್ತಿದೆ’ ಎಂದು ತಿಳಿಸಿವೆ.

ಕಾರ್ತಿಕ್ ಶೆಟ್ಟಿ ಹಾಗೂ ಪತ್ನಿ ಮಂಜುಳಾ

10 ಜನರಿಗೆ ವಂಚನೆ: ‘ಚೇತನ್ ದೂರು ದಾಖಲಾದ ಸಂಗತಿ ತಿಳಿದು, ಹೊಸದಾಗಿ 9 ಮಂದಿ ಠಾಣೆಗೆ ಬಂದಿದ್ದರು. ಅವರಿಗೂ ಆರೋಪಿಗಳು ವಂಚನೆ ಮಾಡಿದ್ದಾರೆ. 9 ಮಂದಿಯೂ ಪ್ರತ್ಯೇಕ ದೂರು ನೀಡಿದ್ದಾರೆ. ಎಲ್ಲರ ದೂರು ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

₹3 ಲಕ್ಷ ಠೇವಣಿ: ‘ಕಡಿಮೆ ಜಾಗದಲ್ಲಿ ಫುಡ್‌ಕಾರ್ಟ್‌ನಲ್ಲಿ ಇಡ್ಲಿ ಮಾರಾಟ ಮಾಡಿ ಹಣ ಗಳಿಸಿ’ ಎಂಬುದಾಗಿ ಹೇಳಿದ್ದ ಆರೋಪಿಗಳು, ಇಡ್ಲಿ ಗುರು ಮಳಿಗೆ ಆರಂಭಿಸಿದ್ದರು. ನಂತರ, ‘ಇಡ್ಲಿ ಗುರು’ ಹೆಸರಿನಲ್ಲಿ ಇಡ್ಲಿ ಮಾರಾಟಕ್ಕೆ ಫ್ರಾಂಚೈಸಿ ನೀಡುವುದಾಗಿ ಜಾಹೀರಾತು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಗಳ ಮಾತು ನಂಬಿದ್ದ 10 ಮಂದಿ, ಫ್ರಾಂಚೈಸಿ ಪಡೆಯಲು ಆಸಕ್ತಿ ತೋರಿಸುತ್ತಿದ್ದ. ಪ್ರತಿಯೊಬ್ಬರಿಂದ ತಲಾ ₹ 3 ಲಕ್ಷ ಠೇವಣಿ ಪಡೆದಿದ್ದ ಆರೋಪಿಗಳು, ಅವರೆಲ್ಲರಿಗೂ ವಂಚನೆ ಮಾಡಿರುವುದಾಗಿ ಗೊತ್ತಾಗಿದೆ.’

‘ಕೆಲವರಿಗೆ ಆರೋಪಿಗಳು, ಇಡ್ಲಿ ಗುರು ಫುಡ್ ಕಾರ್ಟ್ (ಗಾಡಿ) ನೀಡಿದ್ದರು. ಇಡ್ಲಿ ಮಾರಾಟದ ಮೇಲೆ ಕಮಿಷನ್ ಸಹ ಪಡೆಯುತ್ತಿದ್ದರು. ಫ್ರಾಂಚೈಸಿ ಪಡೆದವರಿಗೆ ಹೆಚ್ಚು ಆದಾಯ ಬರುತ್ತಿರಲಿಲ್ಲ. ಬೇಸತ್ತ ಜನ, ಫ್ರಾಂಚೈಸಿ ಹಣ ವಾಪಸು ನೀಡುವಂತೆ ಕೋರಿದ್ದರು. ಆದರೆ, ಆರೋಪಿಗಳು ಯಾವುದೇ ಹಣ ನೀಡಿಲ್ಲ. ಕೆಲವರಿಗೆ, ಫ್ರಾಂಚೈಸಿ ನೀಡುವುದಾಗಿ ಹೇಳಿ ಹಣ ಪಡೆದು ವಂಚಿಸಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಣ ವಾಪಸು ಕೇಳಲು ಹೋದ ದೂರುದಾರರಿಗೆ ಆರೋಪಿಗಳು ಜೀವ ಬೆದರಿಕೆಯೊಡ್ಡಿದ್ದರು. ನೊಂದ ದೂರುದಾರರು, ಠಾಣೆ ಮೆಟ್ಟಿಲೇರಿದ್ದರು’ ಎಂದು ತಿಳಿಸಿವೆ.

ಖಾಲಿ ಎಟಿಎಂ ಬಾಕ್ಸ್‌ಗಳಿಂದ ಆತಂಕ: ತಪಾಸಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾಸಿಪಾಳ್ಯ ಸಮೀಪದ ಬ್ಯಾಂಕ್‌ವೊಂದರ ಬಳಿ ಎಟಿಎಂ ಖಾಲಿ ಬಾಕ್ಸ್‌ಗಳು ಪತ್ತೆಯಾಗಿದ್ದರಿಂದ, ಸ್ಥಳದಲ್ಲಿ ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಪೊಲೀಸರು, ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ತಪಾಸಣೆ ನಡೆಸಿದ ನಂತರ ಜನರು ನಿಟ್ಟುಸಿರು ಬಿಟ್ಟರು.

‘ಎಟಿಎಂ ಯಂತ್ರದೊಳಗೆ ಇರಿಸುವ ನಗದು ಬಾಕ್ಸ್‌ಗಳನ್ನು ಯಾರೋ ರಸ್ತೆ ಪಕ್ಕದಲ್ಲಿ ಎಸೆದಿದ್ದರು. ಗುಜರಿ ಆಯುವ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಬಾಕ್ಸ್‌ಗಳನ್ನು ನೋಡಿದ್ದರು. ಅವುಗಳನ್ನು ಎತ್ತಿಕೊಂಡು ಬಂದು ಗುಜರಿ ಅಂಗಡಿಯವರಿಗೆ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಕ್ಸ್ ಖರೀದಿಸಲು ಗುಜರಿ ಅಂಗಡಿ ಮಾಲೀಕ ನಿರಾಕರಿಸಿದ್ದರು. ಅವಾಗಲೇ ಆ ವ್ಯಕ್ತಿ, ಎಟಿಎಂ ನಗದು ಬಾಕ್ಸ್‌ಗಳನ್ನು ಕಲಾಸಿಪಾಳ್ಯ ಬಳಿ ಎಸೆದು ಹೋಗಿದ್ದಾರೆ. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆದರೆ, ಆ ವ್ಯಕ್ತಿ ಯಾರು ಎಂಬುದು ಗೊತ್ತಾಗಿಲ್ಲ’ ಎಂದು ತಿಳಿಸಿವೆ.

‘ಬಾಕ್ಸ್ ನೋಡಿದ್ದ ಸ್ಥಳೀಯರು, ಅನುಮಾನಾಸ್ಪದ ವಸ್ತು ಬಿದ್ದಿರುವುದಾಗಿ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ, ಖಾಲಿ ಬಾಕ್ಸ್‌ಗಳು ಪತ್ತೆಯಾದವು. ಇವು ಯಾವ ಬ್ಯಾಂಕ್‌ಗೆ ಸೇರಿದ್ದ ಬಾಕ್ಸ್‌ಗಳು ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದು ಹೇಳಿವೆ.

ಕೆಐಎ ಪೊಲೀಸ್ ಠಾಣೆಯಲ್ಲಿ ಚಾಲಕನ ಮೇಲೆ ಎಫ್‌ಐಆರ್

₹914 ಬದಲು ₹5,194 ಪಡೆದು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರೊಬ್ಬರಿಂದ ₹ 914 ಬದಲು ₹ 5,194 ಪಡೆದು ಪರಾರಿಯಾಗಿರುವ ಕ್ಯಾಬ್ ಚಾಲಕನ ವಿರುದ್ಧ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ತಾವರೆಕೆರೆ ನಿವಾಸಿಯಾಗಿರುವ ವ್ಯಕ್ತಿಯೊಬ್ಬರು ದೂರು ನೀಡಿದ್ದಾರೆ. ಹೆಚ್ಚುವರಿ ಪ್ರಯಾಣ ದರ ವಸೂಲಿ ಮಾಡಿರುವ ಚಾಲಕನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಜ. 5ರಂದು ಸ್ನೇಹಿತರನ್ನು ವಿಮಾನ ನಿಲ್ದಾಣಕ್ಕೆ ಬಿಡಲು ಹೋಗಿದ್ದರು. ಸ್ನೇಹಿತರು ಹೊರಟ ನಂತರ ತಾವರೆಕೆರೆಯ ಮನೆಗೆ ವಾಪಸು ಹೋಗಲು ದೂರುದಾರ, ಉಬರ್ ಆ್ಯಪ್ ಮೂಲಕ ಕ್ಯಾಬ್ ಕಾಯ್ದಿರಿಸಿದ್ದರು. ಆ್ಯಪ್‌ನಲ್ಲಿ ₹ 914 ಪ್ರಯಾಣ ದರ ತೋರಿಸಿತ್ತು.’

‘ಉಬರ್ ಕ್ಯಾಬ್ ಚಾಲಕನೆಂದು ಹೇಳಿಕೊಂಡು ಸ್ಥಳಕ್ಕೆ ಬಂದಿದ್ದ ಆರೋಪಿ, ದೂರುದಾರನನ್ನು ಹತ್ತಿಸಿಕೊಂಡು ಸ್ಥಳದಿಂದ ಹೊರಟಿದ್ದರು. ತಾವರೆಕೆರೆಯಲ್ಲಿ ದೂರುದಾರರನ್ನು ಇಳಿಸಿದ್ದ ಆರೋಪಿ, ₹ 5,194 ನೀಡುವಂತೆ ಒತ್ತಾಯಿಸಿದ್ದ. ತಮ್ಮ ಮೊಬೈಲ್‌ನಲ್ಲಿ ₹ 914 ಇರುವುದಾಗಿ ದೂರುದಾರ ಹೇಳಿದ್ದರು. ತನ್ನ ಮೊಬೈಲ್‌ನಲ್ಲಿ ₹ 5,194 ಇರುವುದಾಗಿ ಹೇಳಿ ಜಗಳ ಮಾಡಿ ಹಣ ಪಡೆದು ಆರೋಪಿ ಸ್ಥಳದಿಂದ ಹೊರಟು ಹೋಗಿದ್ದಾನೆ’ ಎಂದು ತಿಳಿಸಿದರು.

ದೇಸಿ ನೃತ್ಯ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಬುಧವಾರ ಅಂತರರಾಷ್ಟ್ರೀಯ ಕನ್ನಡ ಕಲಾವಿದರ ಮತ್ತು ಕಲಾ ಸಂಘ ಸಂಸ್ಥೆಗಳ ಒಕ್ಕೂಟ ಆಯೋಜಿಸಿದ್ದ ಮೊದಲನೇ ದೇಸಿ ಕಲಾವಿದರ ಸಮ್ಮೇಳನದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು.
ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

9ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶ

ಚಾಲಕನ ಕೊಂದಿದ್ದವರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಬ್ ಸುಲಿಗೆ ಮಾಡುವ ಉದ್ದೇಶದಿಂದ ಚಾಲಕನನ್ನು ಕೊಂದು ಬೆಂಕಿ ಹಚ್ಚಿ ಮೃತದೇಹ ಸುಟ್ಟು ಹಾಕಿದ್ದ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ 9ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಅತ್ತಿಬೆಲೆ ಬಳಿಯ ಕಿತ್ತಗಾನಹಳ್ಳಿಯ ಪಿ.ಎನ್. ಹೇಮಂತ್ ಸಾಗರ್ (24) ಹಾಗೂ ನೆಲಮಂಗಲ ತಾಲ್ಲೂಕಿನ ಜಕ್ಕಸಂದ್ರದ ಎಚ್. ವಿನೋದ್‌ಕುಮಾರ್ (26) ಶಿಕ್ಷೆಗೆ ಗುರಿಯಾದ ಅಪರಾಧಿಗಳು. ಇಬ್ಬರೂ ಸೇರಿಕೊಂಡು ಕ್ಯಾಬ್ ಚಾಲಕ ಕೆ.ಎನ್. ಕೆಂಪೇಗೌಡ ಅವರನ್ನು ಕೊಂದಿದ್ದರು.

ನೆಲಮಂಗಲ ಗ್ರಾಮಾಂತರ ಠಾಣೆಯಲ್ಲಿ 2019ರ ಮೇ 19ರಂದು ದಾಖಲಾಗಿದ್ದ ಕೊಲೆ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಎಸ್. ಶ್ರೀಧರ್ ನಡೆಸಿದ್ದರು.

ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾದ ರಾಜ ಹಾಗೂ ಮಹಾದೇವ ಗಡಾದ ವಾದಿಸಿದ್ದರು.

ಕ್ಯಾಬ್ ಕದ್ದು ಮಾರಲು ಸಂಚು: ‘ಚಾಲಕನನ್ನು ಅಪಹರಿಸಿ ಕೊಂದು ಕ್ಯಾಬ್ ಕದ್ದೊಯ್ದು ಮಾರಾಟ ಮಾಡಿ ಹಣ ಸಂಪಾದಿಸಲು ಅಪರಾಧಿಗಳು ಸಂಚು ರೂಪಿಸಿದ್ದರು. ಅದರಂತೆ, ಊಟಿಗೆ ಹೋಗಬೇಕೆಂದು ಕೆಂಪೇಗೌಡ ಅವರ ಇನ್ನೋವಾ ಕ್ರಿಸ್ಟಾ (ಕೆಎ 01 ಎಎಚ್ 6012) ಕಾರು ಕಾಯ್ದಿರಿಸಿದ್ದರು. ಕ್ಯಾಬ್ ಮಾಲೀಕತ್ವ ವರ್ಗಾವಣೆ ಪತ್ರಗಳನ್ನೂ ಅಪರಾಧಿಗಳು ಖರೀದಿಸಿಟ್ಟುಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘2019ರ ಮೇ 16ರಂದು ಬಿಟಿಎಲ್ ಕಾಲೇಜು ಮುಂಭಾಗಕ್ಕೆ ಬಂದಿದ್ದ ಕೆಂಪೇಗೌಡ, ತನ್ನ ಕಾರಿನಲ್ಲಿ ಅಪರಾಧಿಗಳನ್ನು ಹತ್ತಿಸಿಕೊಂಡು ಹೊರಟಿದ್ದರು. ಮಂಡ್ಯ ತಾಲ್ಲೂಕಿನ ಕರಂಗದೂರು ಸಮೀಪ ಮೂತ್ರ ವಿಸರ್ಜನೆಗೆಂದು ಅಪರಾಧಿಗಳು ಕಾರು ನಿಲ್ಲಿಸಿದ್ದರು. ಚಾಲಕ ಕೆಂಪೇಗೌಡ ಸಹ ಕಾರಿನಿಂದ ಇಳಿದಿದ್ದರು.’

‘ಕೆಂಪೇಗೌಡನನ್ನು ಹಿಡಿದುಕೊಂಡಿದ್ದ ಅಪರಾಧಿಗಳು, ಬಾಯಿಗೆ ಬಟ್ಟೆ ತುರುಕಿದ್ದರು. ಕೈ–ಕಾಲುಗಳನ್ನು ಬಟ್ಟೆಯಿಂದ ಕಟ್ಟಿದ್ದರು. ಅದೇ ಸ್ಥಿತಿಯಲ್ಲಿ ಕೆಂಪೇಗೌಡ ಅವರನ್ನು ಕಾರಿನ ಹಿಂಭಾಗದ ಸೀಟಿನಲ್ಲಿ ಮಲಗಿಸಿದ್ದರು. ನಂತರ, ಅಪರಾಧಿಗಳೇ ಕಾರು ಚಲಾಯಿಸಿಕೊಂಡು ಹೆಬ್ಬಗೋಡಿಗೆ ಬಂದಿದ್ದರು’ ಎಂದು ಪೊಲೀಸರು ತಿಳಿಸಿದರು.

ದಾಖಲಾತಿ ಮೇಲೆ ಸಹಿ ಪಡೆದು ಹತ್ಯೆ

‘ಹೆಬ್ಬಗೋಡಿಯಿಂದ ಕಾರು ಚಲಾಯಿಸಿಕೊಂಡು ಸುತ್ತಾಡಿಸಿ ನೆಲಮಂಗಲ ಗ್ರಾಮಾಂತರ ಠಾಣೆ ವ್ಯಾಪ್ತಿಯ ಮಲ್ಲರ ಬಾಣವಾಡಿ ಸಮೀಪಕ್ಕೆ ಹೋಗಿದ್ದರು. ಅಲ್ಲಿಯೇ ಕೆಂಪೇಗೌಡ ಅವರಿಂದ ವಾಹನ ಮಾಲೀಕತ್ವ ವರ್ಗಾವಣೆ ದಾಖಲಾತಿ ಮೇಲೆ ಅಪರಾಧಿಗಳು ಸಹಿ ಪಡೆದಿದ್ದರು. ನಂತರ, ಪಂಚೆಯಿಂದ ಕುತ್ತಿಗೆಗೆ ಬಿಗಿದು ಉಸಿರುಗಟ್ಟಿಸಿದ್ದರು. ಕೆಳಗೆ ಬಿದ್ದ ಕೆಂಪೇಗೌಡ ಅವರ ತಲೆಗೆ ಕಟ್ಟಿಗೆಯಿಂದ ಹೊಡೆದಿದ್ದರು. ಬಳಿಕ, ಚಾಕುವಿನಿಂದ ಬೆನ್ನಿಗೆ ತಿವಿದು ಕೊಂದಿದ್ದರು’ ಎಂದು ಪೊಲೀಸರು ಹೇಳಿದರು.

‘ನೆಲಮಂಗಲ ಕುಣಿಗಲ್ ರಸ್ತೆಯಲ್ಲಿರುವ ಬಂಕ್‌ವೊಂದರಲ್ಲಿ ಪೆಟ್ರೋಲ್ ಖರೀದಿಸಿ ತಂದಿದ್ದ ಅಪರಾಧಿಗಳು, ಅದನ್ನೇ ಕೆಂಪೇಗೌಡ ಮೃತದೇಹದ ಮೇಲೆ ಎರಚಿದ್ದರು. ನಂತರ, ಬೆಂಕಿ ಹಚ್ಚಿ ಮೃತದೇಹ ಸುಟ್ಟು ಕಾರಿನ ಸಮೇತ ಪರಾರಿಯಾಗಿದ್ದರು’ ಎಂದರು.

‘ಸುಟ್ಟ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು. ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಇನ್‌ಸ್ಪೆಕ್ಟರ್ ಎಚ್.ಆರ್. ಅನಿಲ್‌ಕುಮಾರ್ ಅವರು ಅಪರಾಧಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅಪರಾಧಿಗಳಿಂದ ಕಾರು ಜಪ್ತಿ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದರು.

ಅಂಗನವಾಡಿ ಶಿಕ್ಷಕಿಗೆ ನೋಟಿಸ್

ಶಿರಸಿ: ತಾಲ್ಲೂಕಿನ ಹುತ್ಗಾರ ಗ್ರಾಮ ಪಂಚಾಯಿತಿ ಗಣೇಶ ನಗರದ ಅಂಗನವಾಡಿ ಕೇಂದ್ರ 6ರ ಬಳಿ ಗೌರಿ ನಾಯ್ಕ ಎಂಬುವವರು ಬಾವಿ ತೋಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂಗನವಾಡಿ ಶಿಕ್ಷಕಿಗೆ ಕಾರಣ ಕೇಳಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ನೋಟಿಸ್ ಜಾರಿ ಮಾಡಿದ್ದಾರೆ.

ಶಿಕ್ಷಕಿ ಜ್ಯೋತಿ ನಾಯ್ಕ ಅವರಿಗೆ ಶಿರಸಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯಿಂದ ಬುಧವಾರ ನೋಟಿಸ್ ನೀಡಲಾಗಿದೆ.

ಅಕ್ರಮ ಆಸ್ತಿ: ₹1.40 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ತುಮಕೂರು: ಅಕ್ರಮ ಆಸ್ತಿ ಸಂಪಾದನೆ ಪ್ರಕರಣದಲ್ಲಿ ತಿಪಟೂರು ತಾಲ್ಲೂಕು ಬೆನ್ನಾಯಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿವೃತ್ತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆರ್.ಎಚ್. ಬಸಪ್ಪ ಅವರಿಗೆ ನಾಲ್ಕು ವರ್ಷ ಶಿಕ್ಷೆ ಮತ್ತು ₹1.40 ಕೋಟಿ ದಂಡ ವಿಧಿಸಲಾಗಿದೆ.

ಬುಧವಾರ 7ನೇ ಹೆಚ್ಚುವರಿ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಲಯದ ಆದೇಶ ಹೊರಬಿದ್ದ ನಂತರ ಬಸಪ್ಪ ಅವರನ್ನು ಜೈಲಿಗೆ ಕಳುಹಿಸಲಾಗಿದೆ. ತಿಪಟೂರು ತಾಲ್ಲೂಕು ರಾಮಶೆಟ್ಟಿಹಳ್ಳಿ ಗ್ರಾಮದ ಬಸಪ್ಪ ಸದ್ಯ ನಿವೃತ್ತರಾಗಿದ್ದಾರೆ.

ಅಕ್ರಮ ಆಸ್ತಿ ಸಂಪಾದನೆ ದೂರುಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು 2014ರಲ್ಲಿ ಬಸಪ್ಪ ಮನೆ ಹಾಗೂ ಕಚೇರಿ ಮೇಲೆ ದಾಳಿ ನಡೆಸಿದ್ದರು. ಒಟ್ಟು ₹1.93 ಕೋಟಿ ಮೊತ್ತದ ಆಸ್ತಿ ಪತ್ತೆಯಾಗಿತ್ತು. ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ನ್ಯಾಯಾಧೀಶ ಟಿ.ಪಿ. ರಾಮಲಿಂಗೇಗೌಡ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. ಲೋಕಾಯುಕ್ತ ಪರ ಆರ್.ಪಿ.ಪ್ರಕಾಶ್ ವಾದ ಮಂಡಿಸಿದ್ದರು. ಪೊಲೀಸ್ ಇನ್‌ಸ್ಪೆಕ್ಟರ್ ಎಸ್. ಎಂ.ಶಿವಕುಮಾರ್ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸರ್ಕಾರಕ್ಕೆ ಗೋಪಾಲಯ್ಯ ಮನವಿ; ಮಾಜಿ ಕಾರ್ಪೊರೇಟರ್ ಪದ್ಮರಾಜ್ ಕೊಲೆ ಬೆದರಿಕೆ

‘ನನಗೂ ನನ್ನ ಕುಟುಂಬಕ್ಕೂ ರಕ್ಷಣೆ ಕೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯ ಮಾಜಿ ಕಾರ್ಪೊರೇಟರ್ (ಪದ್ಮರಾಜ್) ನಿನ್ನೆ ರಾತ್ರಿ ದೂರವಾಣಿ ಕರೆ ಮಾಡಿ ನನಗೆ ಮತ್ತು ನನ್ನ ಕುಟುಂಬದವರಿಗೆ ಕೊಲೆ ಬೆದರಿಕೆ ಹಾಕಿದ್ದು, ನನಗೂ ನನ್ನ ಕುಟುಂಬಕ್ಕೂ ರಕ್ಷಣೆ ನೀಡಬೇಕು’ ಎಂದು ಬಿಜೆಪಿಯ ಕೆ. ಗೋಪಾಲಯ್ಯ ವಿಧಾನಸಭೆಯಲ್ಲಿ ಮನವಿ ಮಾಡಿದರು.

ಗೋಪಾಲಯ್ಯ

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಗೋಪಾಲಯ್ಯ, ‘ರಾತ್ರಿ ವೇಳೆಯಲ್ಲಿ ಕುಡಿದು ಅವಾಚ್ಯ ಶಬ್ದಗಳಲ್ಲಿ ನಿಂದಿಸಿದ್ದೂ ಅಲ್ಲದೇ, ಪ್ರಾಣ ಬೆದರಿಕೆ ಒಡ್ಡಿದ್ದಾರೆ. ಹುಡುಗರನ್ನು ಬಿಟ್ಟು ಹಲ್ಲೆ ಮಾಡಿಸುವ ಸಾಧ್ಯತೆ ಇದೆ. ಆದ್ದರಿಂದ ರಕ್ಷಣೆ ನೀಡಬೇಕು. ಈ ಸಂಬಂಧ ನಿನ್ನೆ ರಾತ್ರಿಯೇ ದೂರವಾಣಿ ಕರೆ ಮಾಡಿ ಪೊಲೀಸರಿಗೆ ದೂರು ನೀಡಿದ್ದೆ’ ಎಂದು ಹೇಳಿದರು.

ಆಗ ಮಧ್ಯ ಪ್ರವೇಶಿಸಿ ಮಾತನಾಡಿದ ಬಿಜೆಪಿಯ ವಿ.ಸುನಿಲ್‌ಕುಮಾರ್, ಶಾಸಕ ಗೋಪಾಲಯ್ಯ ಅವರಿಗೆ ರಕ್ಷಣೆ ನೀಡಲು ಸಭಾಧ್ಯಕ್ಷರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಅಚ್ಚರಿ ಎಂದರೆ ಗೋಪಾಲಯ್ಯ ನಿನ್ನೆ ರಾತ್ರಿ ದೂರು ನೀಡಿದ್ದರೂ, ಬೆದರಿಕೆ ಹಾಕಿದ ವ್ಯಕ್ತಿಯನ್ನು ಈವರೆಗೂ ಬಂಧಿಸಿಲ್ಲ ಎಂದರೆ ಹೇಗೆ ಎಂದು ಪ್ರಶ್ನಿಸಿದರು. ಇದಕ್ಕೆ ಬಿಜೆಪಿಯ ಇತರ ಸದಸ್ಯರೂ ಧ್ವನಿಗೂಡಿಸಿದರು.

‘ಆ ವ್ಯಕ್ತಿ ನನಗೂ, ಅಶೋಕ ಅವರಿಗೂ ಬೆದರಿಕೆ ಹಾಕಿದ್ದಾನೆ. ಈ ವ್ಯಕ್ತಿ ನಡೆಸುವ ಕ್ಲಬ್‌ಗೆ ಕಡಿವಾಣವೇ ಇಲ್ಲ. ಆತ ಮನೆಯಲ್ಲಿ ಇದ್ದರೂ, ಏಕೆ ಬಂಧಿಸುತ್ತಿಲ್ಲ’ ಎಂದು ಬಿಜೆಪಿಯ ಶಾಸಕ ಎಸ್. ಸುರೇಶ್ ಕುಮಾರ್ ಪ್ರಶ್ನಿಸಿದರು. ‘ಪದ್ಮರಾಜ್ ಅನ್ನು ಗಡಿಪಾರು ಮಾಡಬೇಕು’ ಎಂಬ ಒತ್ತಾಯವೂ ಕೇಳಿ ಬಂದಿತು.

ಬಿಜೆಪಿಯ ಮತ್ತೊಬ್ಬ ಸದಸ್ಯ ಆರಗ ಜ್ಞಾನೇಂದ್ರ ಮಾತನಾಡಿ, ‘ಗೋಪಾಲಯ್ಯ ಅವರಂತಹ ಸಜ್ಜನ ವ್ಯಕ್ತಿಗೆ ಈ ರೀತಿ ಬೆದರಿಕೆ ಹಾಕುತ್ತಾರೆ ಎಂದರೆ ಹೇಗೆ? ನಮಗೇ ಯಾರಾದರೂ ಏನಾದರೂ ಹೇಳಿದರೆ ಕಪಾಳಕ್ಕೆ ಹೊಡೆಯುತ್ತೇವೆಯೋ ಏನೋ, ಆದರೆ ಗೋಪಾಲಯ್ಯ ತಿರುಗಿ ಮಾತನಾಡುವ ವ್ಯಕ್ತಿಯೇ ಅಲ್ಲ’ ಎಂದರು.

ಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ‘ಶಾಸಕರಿಗೆ ದೂರವಾಣಿ ಕರೆ ಮಾಡಿ ಬೆದರಿಕೆ ಹಾಕುತ್ತಾರೆ ಎಂದರೆ, ಎಷ್ಟು ಧೈರ್ಯ? ಕಾನೂನು ಪ್ರಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಸಂಜೆ ಒಳಗೆ ಆ ವ್ಯಕ್ತಿಯನ್ನು ಬಂಧಿಸದಿದ್ದರೆ ಎಸ್‌ಐ ಅನ್ನು ಅಮಾನತು ಮಾಡಬೇಕು’ ಎಂದು ಸರ್ಕಾರಕ್ಕೆ ಸೂಚಿಸಿದರು.

ಈ ಚರ್ಚೆ ನಡೆಯುವಾಗ ಗೃಹ ಸಚಿವ ಜಿ.ಪರಮೇಶ್ವರ ಅವರು ಸದನದಲ್ಲಿ ಇರಲಿಲ್ಲ. ಕೆಲ ಸಮಯದ ಬಳಿಕ ಅಲ್ಲಿಗೆ ಬಂದ ಅವರು, ‘ಗೋಪಾಲಯ್ಯ ಅವರಿಗೆ ಬೆದರಿಕೆ ಹಾಕಿದ ವ್ಯಕ್ತಿಯನ್ನು ಬಂಧಿಸಲಾಗಿದೆ’ ಎಂದು ಹೇಳಿ ವಿಷಯಕ್ಕೆ ತೆರೆ ಎಳೆದರು.

ಪದ್ಮರಾಜ್ ಬಂಧನ: ಜಾಮೀನು ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಗೋಪಾಲಯ್ಯ ಅವರನ್ನು ನಿಂದಿಸಿ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಮಾಜಿ ಕಾರ್ಪೊರೇಟರ್ ಎಸ್.ಎಚ್. ಪದ್ಮರಾಜ್ ಅವರನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದು, ಅವರಿಗೆ ನ್ಯಾಯಾಲಯದಿಂದ ಜಾಮೀನು ಸಹ ಮಂಜೂರಾಗಿದೆ.



ಪದ್ಮರಾಜ್

‘ಗೋಪಾಲಯ್ಯ ಅವರು ದೂರು ನೀಡಿದ್ದರು. ಬಸವೇಶ್ವರ ನಗರ ವಾರ್ಡ್ ಮಾಜಿ ಕಾರ್ಪೊರೇಟರ್ ಪದ್ಮರಾಜ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ನ್ಯಾಯಾಲಯದಲ್ಲಿ ಅವರಿಗೆ ಬುಧವಾರ ಜಾಮೀನು ಮಂಜೂರಾಗಿದೆ’ ಎಂದು ಪೊಲೀಸರು ಹೇಳಿದರು.

ಏನಿದು ಪ್ರಕರಣ: ‘ರಾತ್ರಿ 11 ಗಂಟೆ ಸುಮಾರಿಗೆ ಕರೆ ಮಾಡಿದ್ದ ಪದ್ಮರಾಜ್, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ನನ್ನ ಕುಟುಂಬವನ್ನು ಮುಗಿಸುವುದಾಗಿ ಜೀವ ಬೆದರಿಕೆ ಹಾಕಿದ್ದ’ ಎಂದು ಗೋಪಾಲಯ್ಯ ಅವರು ದೂರಿನಲ್ಲಿ ತಿಳಿಸಿದ್ದರು.

‘ಗುತ್ತಿಗೆ ಕೆಲಸಕ್ಕೆ ₹ 15 ಲಕ್ಷ ಕೊಟ್ಟಿದ್ದೆ’

‘ಕೆಲಸವೊಂದರ ಗುತ್ತಿಗೆ ಪಡೆಯುವ ವಿಚಾರಕ್ಕಾಗಿ ಗೋಪಾಲಯ್ಯಗೆ ₹ 15 ಲಕ್ಷ ಕೊಟ್ಟಿದ್ದೆ. ಆತ, ನನಗೆ ಗುತ್ತಿಗೆ ಕೊಡಿಸಲಿಲ್ಲ. ಹಣ ವಾಪಸ್ ನೀಡುವಂತೆ ಕೇಳಲು ಕರೆ ಮಾಡಿ ಮಾತನಾಡಿದ್ದೆ’ ಎಂದು ಪದ್ಮರಾಜ್ ಹೇಳಿದರು.

ನ್ಯಾಯಾಲಯದಲ್ಲಿ ಜಾಮೀನು ಸಿಕ್ಕ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಗೋಪಾಲಯ್ಯಗೆ ಜೀವ ಬೆದರಿಕೆ ಹಾಕಿದ್ದೇನೆ ಎಂಬುದು ಸತ್ಯಕ್ಕೆ ದೂರವಾದ ಮಾತು. ಕೊಲೆ ಬೆದರಿಕೆ ಹಾಕುವ ವ್ಯಕ್ತಿ ನಾನಲ್ಲ. ದೇವರು ಅವರಿಗೆ ಒಳ್ಳೆದು ಮಾಡಲಿ’ ಎಂದರು.

‘2010ರಲ್ಲಿ ನನ್ನನ್ನು ಮೇಯರ್ ಮಾಡುವುದಾಗಿ ಹೇಳಿದ್ದ ಬಿಜೆಪಿ ಮುಖಂಡ ಆರ್.ಅಶೋಕ, ₹ 1 ಕೋಟಿ ಪಡೆದಿದ್ದರು. ಇವತ್ತಿಗೂ ನನ್ನನ್ನು ಮೇಯರ್ ಮಾಡಲಿಲ್ಲ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಆ ಹಣ ವಾಪಸ್ ತೆಗೆದುಕೊಂಡೆ’ ಎಂದೂ ಅವರು ಹೇಳಿದರು.

ಸ್ಪರ್ಧಾ ವಾಣಿ





ಡಿಜಿಟಲ್ ಗೀಳು ಸುದ್ದಿಯಲ್ಲಿದೆ ಏಕೆ?

ಭಾರತವು ದಕ್ಷಿಣ ಕೊರಿಯಾದ ನಂತರ ಎರಡನೇ ಅತಿದೊಡ್ಡ ಸಂಖ್ಯೆಯ ಗೇಮರ್‌ಗಳನ್ನು ಹೊಂದಿದೆ ಎಂಬ ಅಘಾತಕಾರಿ ಅಂಶವನ್ನು ಯು.ಎಸ್ ಆಧಾರಿತ 2019ರ ಲೈಮ್‌ಲೈಟ್ ನೆಟ್‌ವರ್ಕ್ ಸಮೀಕ್ಷೆ ಬಹಿರಂಗಪಡಿಸಿತ್ತು. ಅತಿ ಹೆಚ್ಚು ಯುವಶಕ್ತಿ ಇರುವ ಭಾರತದಲ್ಲಿ ಯುವಜನತೆ ಡಿಜಿಟಲ್ ಗೀಳಿಗೆ ಒಳಗಾಗಿರುವುದು ಆತಂಕಕಾರಿ. ಈ ಹಿನ್ನೆಲೆಯಲ್ಲಿ ಡಿಜಿಟಲ್ ಡಿಟಾಕ್ಸಿನೇಶನ್‌ನ ಮಹತ್ವವನ್ನು ಅರಿಯೋಣ.

ಯು.ಟಿ. ಆಯಿಷಾ ಫರ್ಜಾನ

ಕರ್ನಾಟಕ ಸರ್ಕಾರವು ಇತ್ತೀಚೆಗೆ ಆಲ್ ಇಂಡಿಯಾ ಗೇಮ್ ಡೆವಲಪರ್ಸ್ ಫೋರಮ್ (ಎಐಜಿಡಿಎಫ್) ಜತೆಗೆ 'ಡಿಜಿಟಲ್ ಡಿಟಾಕ್ಸ್' ಎಂಬ ಉಪಕ್ರಮವನ್ನು ಪ್ರಾರಂಭಿಸಲು ತನ್ನ ಸಹಯೋಗವನ್ನು ಘೋಷಿಸಿದೆ. ಗೇಮಿಂಗ್ ಡಿಸಾರ್ಡರ್ ಮತ್ತು ಸಾಮಾಜಿಕ ಮಾಧ್ಯಮದ ಅತಿ ಬಳಕೆಯನ್ನು ಕಡಿಮೆ ಮಾಡಲು ತೆಗೆದುಕೊಂಡ ಕ್ರಮವಾಗಿದೆ.

ಈ ಉಪಕ್ರಮದ ಭಾಗವಾಗಿ, ಡಿಜಿಟಲ್ ಡಿಟಾಕ್ಸ್ ಕೇಂದ್ರಗಳನ್ನು ಕರ್ನಾಟಕದಾದ್ಯಂತ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಸ್ಥಾಪಿಸಲಿದೆ. ಈ ಕೇಂದ್ರಗಳು ತಂತ್ರಜ್ಞಾನದ ಬಳಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡುವಂತೆ, ತರಬೇತಿ ಪಡೆದ ವೃತ್ತಿಪರರ ವೈಯಕ್ತಿಕ ಮಾರ್ಗದರ್ಶನ ಮತ್ತು ಸಮಾಲೋಚನೆಯ ಸೇವೆಗಳನ್ನು ನೀಡುತ್ತವೆ. ಇದಕ್ಕಾಗಿ ಹೆಲ್ಪ್ ಲೈನ್‌ಗಳನ್ನು ನೀಡಲಾಗುತ್ತದೆ.

ಡಿಜಿಟಲ್ ಡಿಟಾಕ್ಸ್ ಎಂದರೇನು ?

- ಸಕಲವೂ ಡಿಜಿಟಲೈಸ್ ಆಗಿರುವ ಜಗತ್ತಿನಲ್ಲಿ, ಡಿಜಿಟಲ್ ಡಿಟಾಕ್ಸ್ ಪರಿಕಲ್ಪನೆಯು ಡಿಜಿಟಲ್ ಸಾಧನಗಳ ನಿರಂತರ ಸಂಪರ್ಕದ ಋಣಾತ್ಮಕ ಪರಿಣಾಮಗಳನ್ನು ನಿವಾರಿಸುವ ಸಾಧನವಾಗಿ ನಿಲ್ಲುತ್ತದೆ.
- ಡಿಜಿಟಲ್ ಡಿಟಾಕ್ಸ್ ಎನ್ನುವುದು ಸ್ಮಾರ್ಟ್‌ಫೋನ್‌ಗಳು, ಕಂಪ್ಯೂಟರ್‌ಗಳು, ಟ್ಯಾಬ್ಲೆಟ್‌ಗಳು ಮತ್ತು ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳಂತಹ ಎಲೆಕ್ಟ್ರಾನಿಕ್ ಸಾಧನಗಳ ಬಳಕೆಯನ್ನು ವ್ಯಕ್ತಿಗಳು ಸ್ವಯಂಪ್ರೇರಣೆಯಿಂದ ದೂರವಿರುವುದು.

ಡಿಜಿಟಲ್ ಗೀಳಿನ ಲಕ್ಷಣಗಳು

- **ತಂತ್ರಜ್ಞಾನದ ಅತಿಯಾದ ಬಳಕೆ:** ಡಿಜಿಟಲ್ ಸಾಧನಗಳು ಮತ್ತು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳ ಅತಿ ಬಳಕೆಯಿಂದ ಕಡಿಮೆ ಉತ್ಪಾದಕತೆ, ನಿದ್ರಾಹೀನತೆ, ಅತಿ ಒತ್ತಡ ಮತ್ತು ಹದಗೆಡುವ ಮಾನಸಿಕ ಆರೋಗ್ಯದಂಥ ಸಮಸ್ಯೆಗಳನ್ನು ಸೃಷ್ಟಿಸಬಹುದು.
- **ಡಿಜಿಟಲ್ ಗೀಳು:** ತಂತ್ರಜ್ಞಾನದ ಬಳಕೆ ಗೀಳಾಗಿ ಪದೇ ಪದೇ ವಾಟ್ಸ್‌ಆ್ಯಪ್ ಪರೀಕ್ಷಿಸುವುದು, ತುಂಬಾ ಹೊತ್ತು ಇ-ಮೇಲ್ ನೋಡದಿದ್ದರೆ ಚಡಪಡಿಸುವುದು, ಆನ್‌ಲೈನ್‌ನಲ್ಲಿ ಇಲ್ಲದಿರುವಾಗ ಇತರ ವಿಷಯಗಳತ್ತ ಕೇಂದ್ರೀಕರಿಸುವಲ್ಲಿ ವಿಫಲರಾಗುವುದು.
- **ಗೇಮಿಂಗ್ ಡಿಸ್ ಆರ್ಡರ್:** ಮಕ್ಕಳು ಅತಿ ಗೇಮಿಂಗ್ ಗೀಳಿನಿಂದಾಗಿ ಗೇಮಿಂಗ್ ಡಿಸ್‌ಆರ್ಡರ್‌ಗಳಿಗೆ ಬಲಿಯಾಗಬಹುದು. ಭಾರತದಲ್ಲಿ, ಆನ್‌ಲೈನ್‌ನಲ್ಲಿ ಕಳೆಯುವ ಸಮಯವು ಇತರ ದೇಶಗಳಂತೆ ಇನ್ನೂ ಹೆಚ್ಚಿಲ್ಲದಿದ್ದರೂ, ವಯಸ್ಕ ಭಾರತೀಯ ಗೇಮರ್‌ಗಳಲ್ಲಿ ಸುಮಾರು ಕಾಲು ಭಾಗದಷ್ಟು ಆಟಗಾರರು ಆಟಗಳನ್ನು ಆಡುತ್ತಾ ಕೆಲಸಕ್ಕೆ ತಪ್ಪಿಸಿಕೊಂಡಿದ್ದಾರೆ ಎಂದು ಸಮೀಕ್ಷೆಯು ತಿಳಿಸಿದೆ.
- **ನೆಮ್ಮದಿ ಮರೀಚಿಕೆ:** ನಿರಂತರ ಅಧಿಸೂಚನೆಗಳು, ಇ-ಮೇಲ್‌ಗಳು, ಸಂದೇಶಗಳು ಮತ್ತು ಸಾಮಾಜಿಕ ಮಾಧ್ಯಮ ಅಪ್‌ಡೇಟ್‌ಗಳ ನಿರಂತರ ಚಟುವಟಿಕೆಗಳು ನೆಮ್ಮದಿಯನ್ನು ಕಸಿಯಬಹುದು. ಅತಿಯಾದ ಚಟುವಟಿಕೆಯಿಂದಾಗಿ ಮಾನಸಿಕ ನಿರಾಳತೆಯನ್ನು ಕಳೆದುಕೊಳ್ಳಬಹುದು.
- **ಮಾಹಿತಿಯ ಭಾರ:** ನಿರಂತರವಾಗಿ ನೋಟಿಫಿಕೇಶನ್‌ಗಳೊಂದಿಗೆ ಬಂದುಬೀಳುವ ಮಾಹಿತಿಯು ವ್ಯಕ್ತಿಗಳನ್ನು ಸಾಮಾಜಿಕ ಚಟುವಟಿಕೆಗಳಿಂದ ವಿಮುಖರನ್ನಾಗಿಸಬಹುದು. ಮಾಹಿತಿಗಳ ಅತಿಭಾರವು ಇತರ ಗುರಿಗಳತ್ತ ಕೇಂದ್ರೀಕರಿಸುವಲ್ಲಿ ವಿಫಲರಾಗಿ ಅರ್ಥಪೂರ್ಣ ಆಫ್‌ಲೈನ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ.
- **ಆರೋಗ್ಯ ಕಾಳಜಿಗಳು:** ದೀರ್ಘಾವಧಿಗೆ ಡಿಜಿಟಲ್ ಪರದೆಗಳನ್ನು ನೋಡುತ್ತಿದ್ದರೆ ಕಣ್ಣಿನ ಆಯಾಸ, ನಿಧಾನವಾಗಿ ದೃಷ್ಟಿಗುಂದುತ್ತಾ ಹೋಗುವುದು,(ಸಣ್ಣ ವಯಸ್ಸಿನಲ್ಲಿಯೇ ಕನ್ನಡಕ ಬಳಸಬೇಕಾಗುವ ಅನಿವಾರ್ಯತೆ)ತಲೆನೋವು, ತಪ್ಪಾದ ಆಂಗಿಕ ಭಂಗಿಯನ್ನು ಅಭ್ಯಾಸ ಮಾಡುವುದು ಅಂದರೆ ಬೆನ್ನು ಬಾಗಿಸಿ ನಡೆಯುವುದು ಅಥವಾ ಭುಜಗಳನ್ನು ಇಳಿಬಿಟ್ಟಂತೆ ನಿಲ್ಲುವುದು ಮತ್ತು ಬೊಜ್ಜು ಬೆಳೆಸಿಕೊಳ್ಳುವಂಥ ಸಮಸ್ಯೆಗಳಿಂದ ದೈಹಿಕ ಆರೋಗ್ಯ ಸಮಸ್ಯೆಗಳು ಉಂಟಾಗಬಹುದು.
- **ಸೌಂದರ್ಯ ಕಾಳಜಿಗಳು:** ಅತಿಯಾಗಿ ಸ್ಕ್ರೀನ್ ನೋಡುವುದರಿಂದ ಅಲ್ಲಿಂದ ಹೊರಸೂಸುವ ಬ್ಲೂ ರೇಸ್ ಚರ್ಮದ ಕಾಂತಿಗುಂದಿಸುತ್ತವೆ ಮತ್ತು ವಯಸ್ಸಿಗೆ ಮುನ್ನ ನಿರಿಗೆ ಮೂಡಲು ಕಾರಣವಾಗುತ್ತವೆ ಎಂದು ಕೂಡಾ ಸಂಶೋಧನೆಗಳಿಂದ ತಿಳಿದುಬಂದಿದೆ. ❖

ಕಾರ್ಯಗತಗೊಳಿಸುವ ತಂತ್ರಗಳು

- **ನಿಖರವಾದ ಗಡಿ :** ನಿಖರವಾದ ಪರದೆ-ಮುಕ್ತ ಸಮಯಗಳು (ಉದಾ., ಊಟದ ಸಮಯದಲ್ಲಿ, ಮಲಗುವ ಮುನ್ನ) ಮತ್ತು ಪ್ರದೇಶಗಳು (ಉದಾ., ಮಲಗುವ ಕೋಣೆಗಳು, ಊಟದ ಟೇಬಲ್ ಗಳು) ತಂತ್ರಜ್ಞಾನದ ಬಳಕೆಯ ಸುತ್ತಲೂ ಸ್ಪಷ್ಟವಾದ ಗಡಿಗಳನ್ನು ಸ್ಥಾಪಿಸುವುದು.
- **ಶೆಡ್ಯೂಲ್ ಬ್ರೇಕ್‌ಗಳು :** ದೈನಂದಿನ ದಿನಚರಿಯಲ್ಲಿ ಡಿಜಿಟಲ್ ಸಾಧನಗಳಿಂದ ನಿಯಮಿತ ವಿರಾಮಗಳನ್ನು ಕಡ್ಡಾಯವಾಗಿ ಹಾಕುವುದು. ಉದಾಹರಣೆಗೆ ಕೆಲಸದ ಮಧ್ಯೆ ಸಣ್ಣ ನಡಿಗೆಗಳನ್ನು ಮಾಡುವುದು, ಚೇತೋಹಾರಿಯಾದ ಸಂಗೀತವನ್ನು ಆಲಿಸುವುದು, ಯಾವುದೇ ಇತರ ಆಫ್‌ಲೈನ್ ಹವ್ಯಾಸಗಳು ಮತ್ತು ಆಸಕ್ತಿಗಳನ್ನು ಅನುಸರಿಸುವುದು.
- **ಪರದೆಯ ಸಮಯದ ಮಿತಿ :** ನಮ್ಮ ಸ್ಕ್ರೀನ್ ಸಮಯವನ್ನು ಟ್ರ್ಯಾಕ್ ಮಾಡಲು ಮತ್ತು ಮಿತಿಗೊಳಿಸಲು ಅಪ್ಲಿಕೇಶನ್‌ಗಳು, ಸೆಟ್ಟಿಂಗ್‌ಗಳು ಅಥವಾ ಬಾಹ್ಯ ಪರಿಕರಗಳನ್ನು ಬಳಸುವುದು. ನಿರ್ದಿಷ್ಟ ಸಮಯದಷ್ಟೇ ಬಳಕೆಯ ಮಿತಿಗಳನ್ನು ಹೊಂದಿಸಿ ಮತ್ತು ದಿನದ ಕೆಲವು ಗಂಟೆಗಳಲ್ಲಿ ಡಿಜಿಟಲ್ ಡೌನ್‌ಟೈಮ್ ಅನ್ನು ಜಾರಿಗೊಳಿಸುವಂತಹಾ ಅಪ್ಲಿಕೇಶನ್ ಅನ್ನು ಬಳಸುವುದು.
- **ಸ್ವಯಂ ಅವಲೋಕನ:** ನಿಮ್ಮ ತಂತ್ರಜ್ಞಾನದ ಬಳಕೆಯ ಬಗ್ಗೆ ಉದ್ದೇಶಪೂರ್ವಕವಾದ ಅರಿವನ್ನು ಬೆಳೆಸಿಕೊಳ್ಳುವುದು. ಡಿಜಿಟಲ್ ಸಂವಹನಗಳು ನಿಮ್ಮ ಮನಸ್ಥಿತಿ, ಶಕ್ತಿಯ ಮಟ್ಟಗಳು ಮತ್ತು ಒಟ್ಟಾರೆ ಯೋಗಕ್ಷೇಮದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದರ ಬಗ್ಗೆ ಗಮನ ಕೊಡುವುದು.ಡಿಜಿಟಲ್ ಗೀಳು ಶುರುವಾಗುವ ಮುನ್ನ ಹೇಗಿದ್ದೆ ಎಂದು ಅವಲೋಕನ ಮಾಡುವುದು.
- **ಆಫ್‌ಲೈನ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು:** ಓದುವುದು, ಅಡುಗೆ ಮಾಡುವುದು, ತೋಟಗಾರಿಕೆ ಮಾಡುವುದು, ವ್ಯಾಯಾಮ ಮಾಡುವುದು, ಕರಕುಶಲ ಕಲೆಗಳಲ್ಲಿ ತೊಡಗಿಸಿಕೊಳ್ಳುವುದು ಅಥವಾ ಪ್ರೀತಿಪಾತ್ರರೊಂದಿಗೆ ಸಮಯ ಕಳೆಯುವಂತಹ ಪರದೆಯ ಗೊಂದಲವಿಲ್ಲದೆ ಆಫ್‌ಲೈನ್ ಚಟುವಟಿಕೆಗಳ ಸಂತೋಷಗಳನ್ನು ಮರುಶೋಧನೆ ಮಾಡುವುದು.

ಡಿಜಿಟಲ್ ಡಿಟಾಕ್ಸ್‌ನ ಪ್ರಯೋಜನಗಳು

- **ಸುಧಾರಿತ ಮಾನಸಿಕ ಆರೋಗ್ಯ :** ಡಿಜಿಟಲ್ ಸಾಧನಗಳಿಂದ ಸಂಪರ್ಕ ಕಡಿಮೆಗೊಳಿಸುವುದು ಒತ್ತಡ, ಆತಂಕ ಮತ್ತು ಅತಿಯಾದ ಭಾವನಾತ್ಮಕ ಏರಿಳಿತಗಳನ್ನು ನಿವಾರಿಸುತ್ತದೆ. ವಿಶ್ರಾಂತಿ, ಸಾವಧಾನದ ಮನಸ್ಥಿತಿಯನ್ನು ಹೊಂದಲು ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಹೊಂದಲು ಸಹಾಯ ಮಾಡುತ್ತದೆ.
- **ಹೆಚ್ಚಿನ ಉತ್ಪಾದಕತೆ :** ತೀವ್ರ ತಂತ್ರಜ್ಞಾನದ ಒಡನಾಟದಿಂದ ದೂರವಾಗುವ ಮೂಲಕ, ಗೊಂದಲ ಮತ್ತು ಪದೇಪದೇ ಅಡಚಣೆಗಳನ್ನು ಕಡಿಮೆ ಮಾಡುವ ಮೂಲಕ, ವ್ಯಕ್ತಿಗಳು ತಮ್ಮ ಕೆಲಸ ಮತ್ತು ದೈನಂದಿನ ಚಟುವಟಿಕೆಗಳಲ್ಲಿ ಹೆಚ್ಚಿನ ಗಮನಸಾಧಿಸಿ ಸೃಜನಶೀಲ ಕಾರ್ಯಗಳನ್ನು ಸಾಧಿಸಬಹುದು. ಕೆಲಸದಲ್ಲಿಯೂ ದಕ್ಷತೆಯನ್ನು ಸಾಧಿಸಬಹುದು.
- **ನಿದ್ರೆಯ ಗುಣಮಟ್ಟ ಉತ್ತಮ:** ಮಲಗುವ ಕೆಲವು ಗಂಟೆಗಳ ಮುನ್ನವೇ ಕಡ್ಡಾಯವಾಗಿ ಸ್ಕ್ರೀನ್ ನಿಂದ ದೂರವಿರುವುದು, ಸ್ಕ್ರೀನಿಂಗ್ ಸಮಯವನ್ನು ಸೀಮಿತಗೊಳಿಸುವುದು ಉತ್ತಮ ನಿದ್ರೆಯನ್ನು ಹೊಂದಲು ಸಹಾಯ ಮಾಡುತ್ತದೆ ಮತ್ತು ನಿದ್ರೆಯ ಗುಣಮಟ್ಟ ಮತ್ತು ಅವಧಿಯನ್ನು ಸುಧಾರಿಸುತ್ತದೆ. ಸೊಗಸಾದ ನಿದ್ದೆಯು ಯಾವುದೇ ವ್ಯಕ್ತಿಗಳಿಗೆ ಸಹಜವಾಗಿಯೇ ಹೆಚ್ಚಿದ ಶಕ್ತಿ ಮತ್ತು ಉತ್ಸಾಹವನ್ನು ನೀಡುತ್ತದೆ.
- **ಬಲವಾಗುವ ಸಂಬಂಧಗಳು :** ಡಿಜಿಟಲ್ ಡಿಟಾಕ್ಸ್ ವ್ಯಕ್ತಿಗಳು ತಮ್ಮ ಗೆಳೆಯಗೆಳತಿಯರ ಜತೆ ಸಹಜವಾಗಿ ಬೆರೆಯಲು, ಸಂಬಂಧಗಳಿಗೆ ಆದ್ಯತೆ ನೀಡಲು, ವೈಯಕ್ತಿಕ ಸಂಪರ್ಕಗಳನ್ನು ಗಾಢವಾಗಿಸಲು ಮತ್ತು ಸ್ನೇಹಿತರು, ಕುಟುಂಬ ಮತ್ತು ಸಮುದಾಯದ ಸದಸ್ಯರೊಂದಿಗೆ ಅರ್ಥಪೂರ್ಣ ಸಂಬಂಧಗಳನ್ನು ಬೆಳೆಸಲು ಅನುವು ಮಾಡಿಕೊಡುತ್ತದೆ.ವಿಶೇಷವಾಗಿ ದಾಂಪತ್ಯದಲ್ಲಿ ಸಂಬಂಧಗಳ ಪುನರ್ ನವೀಕರಣಕ್ಕೆ ಕಾರಣವಾಗುತ್ತದೆ.
- **ಪ್ರಕೃತಿಯೊಂದಿಗೆ ಮರುಸಂಪರ್ಕ:** ನಿಸರ್ಗದ ಜತೆ ಮುಖಾಮುಖಿಯಾಗುತ್ತಾ ಹೊರಾಂಗಣದಲ್ಲಿ ಸಮಯ ಕಳೆಯುವುದು ಮತ್ತು ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಾವು ನಿಸರ್ಗದ ಶಿಶುಗಳು ಎಂಬ ಪ್ರಜ್ಞೆಯನ್ನು ಬೆಳೆಸುತ್ತದೆ. ಸಹಜವಾಗಿಯೇ ಈ ಬದಲಾವಣೆಗಳು ದೈಹಿಕ ಆರೋಗ್ಯವನ್ನು ಉತ್ತೇಜಿಸುತ್ತದೆ ಮತ್ತು ಕುಟುಂಬದ ಜತೆ ಬಾಂಧವ್ಯಗಳನ್ನು ಉತ್ತೇಜಿಸಿ ಪ್ರತ್ಯೇಕತೆ ಮತ್ತು ಬೇರ್ಪಡುವಿಕೆಯ ಭಾವನೆಗಳನ್ನು ಕಡಿಮೆ ಮಾಡುತ್ತದೆ.

ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ಮೇ 26ಕ್ಕೆ

ನವದೆಹಲಿ: ನಾಗರಿಕ ಸೇವೆಗೆ ಹೋಗಬಯಸುವವರಿಗಾಗಿ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗೆ ಅಧಿಸೂಚನೆ ಪ್ರಕಟಗೊಂಡಿದ್ದು, ಅರ್ಜಿ ಸಲ್ಲಿಸಲು ಮಾರ್ಚ್ 5 ಕೊನೆಯ ದಿನವಾಗಿದೆ.

ಈ ಬಾರಿ 1,056 ಹುದ್ದೆಗಳಿಗೆ ಪರೀಕ್ಷೆ ನಡೆಯಲಿದೆ. ಪೂರ್ವಭಾವಿ ಪರೀಕ್ಷೆ ಮೇ 26ರಂದು ನಡೆಯಲಿದೆ. ಪರೀಕ್ಷೆ ಎದುರಿಸುವವರ ವಯೋಮಾನ 21ರಿಂದ 32 (2024ರ ಆಗಸ್ಟ್ 1ಕ್ಕೆ) ರವರೆಗೆ ಇರಬೇಕು. ಅರ್ಜಿ ಸಲ್ಲಿಸಲು ಅಭ್ಯರ್ಥಿಯ ಕನಿಷ್ಠ ವಿದ್ಯಾರ್ಹತೆ ಪದವಿಯಾಗಿರಬೇಕು. ಲೋಕಸೇವಾ ಆಯೋಗದ ಅಂತರ್ಜಾಲ ಪುಟದ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಯುಪಿಎಸ್‌ಸಿ ಹೇಳಿದೆ.

ಪೂರ್ವಭಾವಿ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಎಂಬ ಮೂರು ಹಂತದ ಈ ಪರೀಕ್ಷೆಯನ್ನು ಗರಿಷ್ಠ 6 ಬಾರಿಯಷ್ಟೇ ಎದುರಿಸಲು ಅವಕಾಶ ಕಲ್ಪಿಸಲಾಗಿದೆ.

ಪೂರ್ವಭಾವಿ ಪರೀಕ್ಷೆ: ಇದರಲ್ಲಿ 2 ಕಡ್ಡಾಯ ಪತ್ರಿಕೆಗಳಿವೆ. ಪ್ರತಿಯೊಂದಕ್ಕೂ 200 ಅಂಕಗಳು. 2 ಗಂಟೆಯ ಈ ಪರೀಕ್ಷೆಯ ಎರಡೂ ಪತ್ರಿಕೆಗಳು ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತವೆ. ಸಾಮಾನ್ಯ ಜ್ಞಾನ ಪತ್ರಿಕೆ–2 ಅರ್ಹತೆಯ ಪತ್ರಿಕೆಯಾಗಿದೆ. ಇದರಲ್ಲಿ ಕನಿಷ್ಠ ಶೇ 33ರಷ್ಟು ಅಂಕ ಗಳಿಸುವುದು ಕಡ್ಡಾಯ. ಇದು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಇರಲಿದೆ.

ಮುಖ್ಯ ಪರೀಕ್ಷೆ: ಮೆರಿಟ್ ಆಧಾರಿತ ಈ ಪರೀಕ್ಷೆಯಲ್ಲಿ ದೀರ್ಘ ಉತ್ತರಗಳನ್ನು ಬರೆಯಬೇಕು. ಪತ್ರಿಕೆ–1ರಲ್ಲಿ ಭಾರತೀಯ ಭಾಷೆ ಹಾಗೂ ಪತ್ರಿಕೆ–2ರಲ್ಲಿ ಇಂಗ್ಲಿಷ್ ಇರಲಿದೆ. 300 ಅಂಕಗಳಿಗೆ ಈ ಪರೀಕ್ಷೆ ನಡೆಯಲಿದೆ. ಪ್ರಬಂಧ, ಸಾಮಾನ್ಯ ಜ್ಞಾನ–1, 2, 3 ಹಾಗೂ 4 ಪತ್ರಿಕೆಗಳು ಮತ್ತು ಐಚ್ಛಿಕ ವಿಷಯ ಸೇರಿ 275 ಅಂಕಗಳಿಗೆ ಪರೀಕ್ಷೆ ನಡೆಯಲಿದೆ. ಇವುಗಳಲ್ಲಿ ಕನಿಷ್ಠ ಅರ್ಹತೆಯ ಅಂಕಗಳಿಲ್ಲ.

ರಿಟನ್ ಟೆಸ್ಟ್‌ನಲ್ಲಿ 9 ಪತ್ರಿಕೆಗಳು ಇರಲಿವೆ. ಪ್ರಬಂಧ ಮಾದರಿಯ ಉತ್ತರಗಳನ್ನು ಬರೆಯಬೇಕಿದ್ದು ವಿಭಾಗ–2ರಲ್ಲಿ ಇರಲಿದೆ. ನಂತರ ಸಂದರ್ಶನ ನಡೆಯಲಿದೆ. ಲಿಖಿತ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ್ದರೆ ಮಾತ್ರ ಸಂದರ್ಶನಕ್ಕೆ ಆಯ್ಕೆಯಾಗಲಿದ್ದಾರೆ.

ಅರ್ಜಿ ಸಲ್ಲಿಸುವ ಕೊಂಡಿ: https://upsconline.nic.in/upsc/OTRP/ ❖

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

48. What do you think is the writer of 'Narayanapur incident' trying to impress upon the readers?

Ans:- This incident was most common during 1942. This gives bravery, truthfulness, patriotism etc., It teaches a lesson to readers. If youngsters during their school time read this type of incidents, they may cultivate these qualities. The writer's intention is to sow the good (virtue) seeds, it may give good fruits only.

OR

What qualities of Dicky Dolma led her to realise her dream?

Ans:- From the childhood days she had an urge to climb Mount Everest. Daily she watched the beautiful, breath taking view of the Mountain. She had firm determination, and hard work helped her. She practiced 4 hours a, day. She had one track mind and ready to face hardships. Her desire grew when she came to know about the newly opened mountaineering institute in Manali. She was just 16 years at that time. She joined the institute and got 'A' grade and selected at all India level.

49. Life for Hanif, in the beginning, was never a smooth sail. Explain.

Ans:- When Hanif was eight years old, he lost his father. He had to take the responsibility to look after his three younger brothers. His mother Hema aziz had a touring job and was out very often. They had to do their work for themselves. So it was not a smooth sail.

OR

Why were the poeple miserable in Wangjia's village?

Ans:-In ancient times, there was a poor area in Tibet was Wangjia's village. The people who lived in that area suffered from hunger and cold. There was no river or water source, trees, green grass or any types of crops, No fruits, flowers or vegetables. The land was also not good. The people did not know what happiness could be. In spite of that they believed that happiness must exist somewhere in the world.

50. How did the bird in the garden change Satish's life?

Ans:- One day he saw a rare bird that was flying here and there. It had long tail and black crest. It had restless energy and to flight at any moment. He was attracted by the bird and sketched the bird from his memory. He liked his sketch, and kept beside his bed on the pile of books. He had discovered his past time by filling the pages with pictures and patterns of his thinking. Like this the bird in the garden changed his life.

51. Why does the poet's mother asserts her right to reside in a tree?

Ans:- The poet's mother asserts her right to reside in a tree because she loves to stay in a tree. She is fond of climbing trees even at her old age. When Grandma recover from her fall and after she became stronger she said her son that she could not lie on the bed any longer and without hesitating she ordered that she wanted a house on the tree top to reside in that house peacefully. So her obedient son fulfilled her ambition and right.

52. After Roma made a full recovery, Baleshwar met her. Briefly describe how Roma thanked him, and what Baleshwar said in reply (in about 8-10 sentences)

Ans : Roma made full recovery in few days. She was thinking about the accident and felt that she couldn't imagine what would have happened if Baleshwar hadn't been there. At that time Baleshwar met her. Roma thanked him and said if he would not take such a risk. She was no more. She said that she could never repay him. For that Baleshwar said her that is humanity and at that time she needed help, that day was Roma, other day it could be some other helping is necessary those who needed, especially timely help will save the life.

OR

"Satish Gujral became a great artist" Support this statement mentioning a few of his achievements.

Ans : Satish Gujral became a great artist and he was one of the few artist famous for painting, sculpture and architecture. He was also a writer. His works were displayed in prestigious museums like the museum of Modern Art, New York, the Hiroshima collection, Washington and the National Gallery of Modern Art, New Delhi. He had published four books of his works in the various Arts. He was awarded the order of the crown for the best architectural design of 20th century for his design of the Belgian Embassy in New Delhi. He was humoured with "Padma vibhushan"

(Contd/-)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

MATHEMATICS

REVISION : MODEL QUESTIONS

5. If a line makes angle 90^0, 60^0 and 30^0 with the direction of x y z axis respectively, find its cosines.

Ans:- $\alpha = 90^0,\ \beta = 60^0\ \&\ \gamma = 30^0$

$\cos\alpha = \cos 90^0 = 0,\ \cos\beta = \cos 60^0 = \frac{1}{2},$

$\cos\gamma = \cos 30^0 = \frac{\sqrt{3}}{2}$

$\therefore$ Direction cosines are 0, $\frac{1}{2}$ and $\frac{\sqrt{3}}{2}$

6. Define linear objective function in LPP.

Ans:- A linear function z = ax + by, where a and b are constants which has to be maximized or minimized is called linear objective function.

7. If P (A) = 0.6 P (B) = 0.3 and P (ACB) = 0.2, find P(A/B).

$$\text{Ans}:-\ P(A/B) = \frac{P(A\cap B)}{P(B)} = \frac{0.2}{0.3} = \frac{2}{3}$$

8. Show that the function $f : N \to N$ given by f(1) = f(2) = 1 and f(x) = x – 1 for every x > 2 is on to but not one – one.

Ans:- Co domain = {1, 2, 3….} = Range of f

$\therefore$ f is on to function

f(1) = f(2); but $1 \neq 2$

$\therefore$ f is not 1 – 1 function

9. Prove that $\tan^{-1} x + \cot^{-1} x = \frac{\pi}{2}$ $x \in R$.

Ans:- Let $\tan^{-1} x = \theta \Rightarrow x = \tan\theta$

$x = \cot\left(\frac{\pi}{2} - \theta\right) \Rightarrow \cot^{-1} x = \frac{\pi}{2} - \theta$

$\theta + \cot^{-1} x = \frac{\pi}{2}$ (substitute the value of θ)

$\tan^{-1} x + \cot^{-1} x = \frac{\pi}{2}$

10. Write the simplest form of $\tan^{-1}\left(\sqrt{\frac{1-\cos x}{1+\cos x}}\right)$ $0 < x < \pi$.

$$\text{Ans}:-\ \tan^{-1}\left[\sqrt{\frac{2\sin^2 x/2}{2\cos^2 x/2}}\right] = \tan^{-1}(\tan x/2) = x/2$$

11. Find the equation of line passing through the points (3, 1) (9, 3).

Ans:- Let P(x y) be any point on AB then area of Δle ABP is zero.

$$\therefore \frac{1}{2}\begin{vmatrix} 9 & 3 & 1 \\ 3 & 3 & 1 \\ x & y & 1 \end{vmatrix} = 0 \ (\text{or}) \begin{vmatrix} x & y & 1 \\ 3 & 1 & 1 \\ 9 & 3 & 1 \end{vmatrix} = 0$$

x(1 – 3) – y (3 – 9) + 1(9 - 9) = 0

- 2x + 6y = 0 (or) x – 3y = 0 (or) x = 3y

12. If $\sqrt{x} + \sqrt{y} = \sqrt{10}$, show that $\frac{dy}{dx} + \sqrt{\frac{y}{x}} = 0$.

$$\text{Ans}:-\ \frac{1}{2\sqrt{x}} + \frac{1}{2\sqrt{y}}\frac{dy}{dx} = 0$$

$$\Rightarrow \frac{1}{\sqrt{y}}\frac{dy}{dx} = -\frac{1}{\sqrt{x}}$$

$$\Rightarrow \frac{dy}{dx} = -\frac{\sqrt{y}}{\sqrt{x}}$$

13. Find $\frac{dy}{dx}$, If $y = (\log x)^{\cos x}$

Ans:- Taking log on both sides, log y = cos x log (log x)

$$\frac{1}{y}\frac{dy}{dx} = \frac{\cos x}{\log x}\frac{1}{x} = \sin x \log(\log x)$$

$$\frac{dy}{dx} = y\left[\frac{\cos x}{x \log x} - \sin x \log(\log x)\right]$$

$$= (\log x)^{\cos x}\left[\frac{\cos x}{x \log x} - \sin x \log(\log x)\right]$$

14. Approximate $\sqrt{36.6}$ using differentiation.

Ans:- Let $y = f(x) = \sqrt{x}$ and $x = 36$; $\Delta x = 0.6$

$f(x + \Delta x) = f(x) + f^1(x)\,\Delta x$

$= f(36) + \frac{1}{2\sqrt{36}}(0.6) = 6 + \frac{0.6}{12}$

$= 6 + 0.05 = 6.05$

15. Integrate sin x. sin (cos x) with respect to x.

Ans:- $\int \sin(\cos x) \sin x\, dx$

let $\cos x = t \Rightarrow -\sin x\, dx = dt \Rightarrow -\int \sin t\, dt$

$\Rightarrow -(-\cos t) + c = \cos(\cos x) + c$

16. Evaluate $\int_0^1 \frac{1}{1+x^2}dx$.

$\text{Ans}:-$ Consider $\int_0^1 \frac{1}{1+x^2}dx$

$\Rightarrow \tan-1\, x\Big]_0^1 \Rightarrow \tan^{-1}(1) - \tan^{-1}(0)$

$\Rightarrow \frac{\pi}{4} - 0 = \frac{\pi}{4}$

17. Find the order and degree of the D.E.

$$\left(\frac{d^3y}{dx^3}\right)^2 + \left(\frac{d^2y}{dx^2}\right)^3 + \frac{dy}{dx} + y = 0$$

Ans:- Order : 3, degree : 2. *(Contd…..)*

ಕೊಪ್ಪಳ ತಾಲ್ಲೂಕಿನ ಹಾಲವರ್ತಿ ಗ್ರಾಮದ ಕೆರೆಗೆ ಕಾವಲು • ಕ್ಷೌರಕ್ಕೂ ಇಲ್ಲ ಅವಕಾಶ

ದಲಿತರು ಬಂದರೆ ಹೋಟೆಲ್ ಬಂದ್!

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲಾ ಕೇಂದ್ರದಿಂದ ಐದಾರು ಕಿ.ಮೀ. ದೂರದಲ್ಲಿರುವ ಕೊಪ್ಪಳ ತಾಲ್ಲೂಕಿನ ಹಾಲವರ್ತಿ ಗ್ರಾಮದಲ್ಲಿ ದಲಿತರು ಹೋಟೆಲ್ ಪ್ರವೇಶಿಸಿದರೆ ಹೋಟೆಲ್ ಬಂದ್ ಮಾಡಲಾಗುತ್ತದೆ. ಕ್ಷೌರದ ಅಂಗಡಿಗಳಲ್ಲಿ ಅಸ್ಪೃಶ್ಯತೆ ತಾಂಡವ ವಾಡುತ್ತಿದೆ.

ಗ್ರಾಮದಲ್ಲಿ ಹಲವು ದಿನಗಳಿಂದ ಹೀಗೆ ನಡೆದುಕೊಂಡು ಬರುತ್ತಿರುವುದನ್ನು ಕಂಡು ದಲಿತ ಸಮುದಾಯದ ವಿದ್ಯಾವಂತ ಯುವಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೋಟೆಲ್ ಹಾಗೂ ಕ್ಷೌರದ ಅಂಗಡಿಗಳ ಮಾಲೀಕರನ್ನು ತರಾಟೆಗೆ ತೆಗೆದುಕೊಂಡು ಬುಧವಾರ ಗ್ರಾಮ ಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಕೊಪ್ಪಳ ತಾಲ್ಲೂಕಿನ ಹಾಲವರ್ತಿ ಗ್ರಾಮದಲ್ಲಿ ಬಂದ್ ಮಾಡಿರುವ ಹೋಟೆಲ್

ದಲಿತರು ಹೋಟೆಲ್‌ಗೆ ಬಂದರೆ ತಿಂದು ಬೀಸಾಡುವ ಪ್ಲೇಟ್‌ನಲ್ಲಿ, ಬೇರೆಯವರಿಗೆ ಸ್ಟೀಲ್ ಪ್ಲೇಟ್‌ನಲ್ಲಿ ಆಹಾರ ಕೊಡಲಾಗುತ್ತದೆ. ಕ್ಷೌರಿಕರ ಅಂಗಡಿಗಳಿಗೆ ತೆರಳಿದರೆ ಕ್ಷೌರ ಮಾಡುವುದಿಲ್ಲ. ಪ್ರಶ್ನಿಸಿದರೆ ಬೀಗ ಹಾಕಿಕೊಂಡು ಹೋಗಿಬಿಡುತ್ತಾರೆ ಎಂದು ದಲಿತ ಸಮುದಾಯದ ಯುವಕರು ಆಕ್ರೋಶ ವ್ಯಕ್ತಪಡಿಸಿದರು.

> **ದಲಿತರಿಗೆ ಹೋಟೆಲ್ ಪ್ರವೇಶ ನಿಷೇಧ ಮಾಡಿದ್ದಾರೆ ಎನ್ನುವುದನ್ನು ಸಹಿಸಲು ಸಾಧ್ಯವಿಲ್ಲ. ಸಂಬಂಧಪಟ್ಟವರ ವಿರುದ್ಧ ಕೂಡಲೇ ಕ್ರಮ ಜರುಗಿಸಲಾಗುವುದು**
> **ಶಿವರಾಜ ತಂಗಡಗಿ,** ಜಿಲ್ಲಾ ಉಸ್ತುವಾರಿ ಸಚಿವ, ಕೊಪ್ಪಳ

ಹಾಲವರ್ತಿ ಗ್ರಾಮದ ಪ್ರಾಣೇಶ ಗಾಳೆಪ್ಪ ಹೊಸಮನಿ 'ಪ್ರಜಾವಾಣಿ' ಜೊತೆ ಮಾತನಾಡಿ, 'ಅಪಘಾತದಲ್ಲಿ ನನ್ನ ಸಹೋದರನ ಕಾಲಿಗೆ ಪೆಟ್ಟಾಗಿದ್ದರಿಂದ ಕ್ಷೌರ ಮಾಡಿಸಿಕೊಳ್ಳಲು ಬೇರೆ ಊರಿಗೆ ಹೋಗಲು ಸಾಧ್ಯವಾಗದ ಅಸಹಾಯಕ ಪರಿಸ್ಥಿತಿಯಿದೆ. ಆದ್ದರಿಂದ ಕ್ಷೌರ ಮಾಡುವಂತೆ ಪರಿಪರಿಯಾಗಿ ಬೇಡಿಕೊಂಡರೂ ಅಂಗಡಿ ಬಾಗಿಲು ಮುಚ್ಚಿಕೊಂಡು ಹೋಗುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಕೆರೆಯಿದ್ದು ಅಲ್ಲಿನ ನೀರು ದಲಿತರು ಮುಟ್ಟಬಾರದು ಎಂದು ಕೆರೆಗೆ ಕಾವಲುಗಾರನನ್ನು ನಿಯೋಜಿಸಿದ್ದಾರೆ. ಇದನ್ನು ಪ್ರಶ್ನಿಸಿದರೆ 'ಕೆರೆಯ ನೀರು ಕೊಳಚೆಯಾಗಬಾರದೆಂದು ಹೀಗೆ ಮಾಡಿದ್ದೇವೆಂದು ಸಬೂಬು ಹೇಳುತ್ತಾರೆ' ಎಂದು ಯುವಕರ ತಂಡದವರು ಆಪಾದಿಸಿದರು.

ಘಟನೆ ಬೆಳಕಿಗೆ ಬರುತ್ತಿದ್ದಂತೆ ಗ್ರಾಮಕ್ಕೆ ಅಧಿಕಾರಿಗಳು ಭೇಟಿ ನೀಡಿ ಗ್ರಾಮದ ಎಲ್ಲ ಹೋಟೆಲ್‌ಗಳ ಮಾಲೀಕರನ್ನು ವಿಚಾರಿಸಿದರು. ಗುರುವಾರ ಸಭೆ ನಡೆಸುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ನಲಿನ್ ಅತುಲ್ ಪ್ರತಿಕ್ರಿಯಿಸಿ, 'ಗ್ರಾಮಕ್ಕೆ ಅಧಿಕಾರಿಗಳು ಭೇಟಿ ನೀಡಿದ್ದಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಸಂಧಾನ ಸಭೆ ನಡೆಸಲಾಗುವುದು' ಎಂದರು.

ಹೋರಾಟ ಅಂತ್ಯಗೊಳಿಸಿದ ಆಶಾ ಕಾರ್ಯಕರ್ತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಡಿಕೆ ಈಡೇರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದರಿಂದ, ಆಶಾ ಕಾರ್ಯಕರ್ತೆಯರು ಅಹೋರಾತ್ರಿ ಹೋರಾಟವನ್ನು ಬುಧವಾರ ಸಂಜೆ ಅಂತ್ಯಗೊಳಿಸಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡುವ ಮೊತ್ತ ಸೇರಿ ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ ಕನಿಷ್ಠ ₹15,000 ಪ್ರೋತ್ಸಾಹಧನ ನೀಡಬೇಕು' ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರದಿಂದ ಹೋರಾಟ ಆರಂಭಿಸಿದ್ದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮಂಗಳವಾರ ಸ್ಥಳಕ್ಕೆ ಭೇಡಿ ನೀಡಿ, 'ಗೌರವಧನವನ್ನು ₹7,000ಕ್ಕೆ ಹೆಚ್ಚಿಸಲು ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದ್ದರು. ಇದಕ್ಕೆ ಒಪ್ಪದ ಕಾರ್ಯಕರ್ತೆಯರು, ಹೋರಾಟ ಮುಂದುವರಿಸಿದ್ದರು. ಇಡೀ ರಾತ್ರಿ ಉದ್ಯಾನದಲ್ಲಿ ಕಾರ್ಯಕರ್ತೆಯರು ಇದ್ದರು.

ಆಶಾ ಕಾರ್ಯಕರ್ತೆಯರ ನಿಯೋಗದ ಪ್ರತಿನಿಧಿಗಳ ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಜತೆ ಮಾತುಕತೆ ನಡೆಸಿದರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿಯಾದ ಕಾರ್ಯಕರ್ತೆಯರ ನಿಯೋಗದ ಮುಖಂಡರು, ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮನವಿ ಸಲ್ಲಿಸಿದರು.

ಮನವಿ ಆಲಿಸಿದ ಸಿದ್ದರಾಮಯ್ಯ, 'ಇಲಾಖೆ ಸಚಿವರು, ಅಧಿಕಾರಿಗಳು ಹಾಗೂ ಸಂಘದ ಮುಖಂಡರ ಜೊತೆ ಫೆ. 23ರ ನಂತರ ಸಭೆ ನಡೆಸಲಾಗುವುದು. ಬೇಡಿಕೆ ಈಡೇರಿಕೆ ಬಗ್ಗೆ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದರು. ಇದಕ್ಕೆ ಒಪ್ಪಿದ ಮುಖಂಡರು, 'ತಾತ್ಕಾಲಿಕವಾಗಿ ಹೋರಾಟ ಅಂತ್ಯಗೊಳಿಸುತ್ತೇವೆ' ಎಂದು ಘೋಷಿಸಿದರು. ಬುಧವಾರ ಸಂಜೆಯೇ ಎಲ್ಲ ಕಾರ್ಯಕರ್ತೆಯರು ಹೋರಾಟ ಕೈಬಿಟ್ಟು ತಮ್ಮೂರಿನತ್ತ ಹೊರಟರು.

ಸೆಸ್, ಸರ್‌ಚಾರ್ಜ್‌ನಲ್ಲೂ ಪಾಲು ನೀಡಬೇಕು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತಿ ಹೆಚ್ಚು ತೆರಿಗೆ ಸಂಗ್ರಹಿಸಿ, ಕೇಂದ್ರಕ್ಕೆ ನೀಡುವ ಕರ್ನಾಟಕಕ್ಕೆ ಅನ್ಯಾಯ ಆಗುವುದನ್ನು ತಡೆಯಲು ಸಂವಿಧಾನ ತಿದ್ದುಪಡಿ ಮಾಡಿ ಸೆಸ್ ಮತ್ತು ಸರ್‌ಚಾರ್ಜ್‌ನಲ್ಲೂ ಪಾಲು ನೀಡಬೇಕು' ಎಂದು ಕೇಂದ್ರ ಸರ್ಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

'X'ನಲ್ಲಿ (ಟ್ವಿಟರ್) ನಡೆದ 'ನಮ್ಮ ಹಕ್ಕು ನಮ್ಮ ತೆರಿಗೆ' ಅಭಿಯಾನದ ಅಂಗವಾಗಿ ನೇರ ಸಂವಾದದಲ್ಲಿ ಬುಧವಾರ ಮಾತನಾಡಿದ ಮುಖ್ಯಮಂತ್ರಿ, 'ನಾವು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ಚೀನಾ ಮಾದರಿಯ ಏಕಸ್ವಾಮ್ಯ ಸಹಿಸಲು, ಅಮೆರಿಕದ ಅಧ್ಯಕ್ಷೀಯ ಮಾದರಿ ಆಡಳಿತ ಒಪ್ಪಿಕೊಳ್ಳಲು ಸಾಧ್ಯವಿಲ್ಲ' ಎಂದರು.

'ಸೆಸ್ ಮತ್ತು ಸರ್‌ಚಾರ್ಜ್‌ನಿಂದ ಸಂಗ್ರಹ ಆಗಿದ್ದ ತೆರಿಗೆಯಲ್ಲಿ ಒಂದು ರೂಪಾಯಿಯನ್ನೂ ಕೇಂದ್ರ ಸರ್ಕಾರ ರಾಜ್ಯಗಳಿಗೆ ಕೊಡುವುದಿಲ್ಲ. ಆದ್ದರಿಂದ ಅದರಲ್ಲೂ ನಾವು (ರಾಜ್ಯಗಳು) ಪಾಲು ಕೇಳಬೇಕು ಎಂದು ತೀರ್ಮಾನಿಸಿದ್ದೇವೆ. ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ತರಬೇಕಿದೆ. ಇದೇ ಕಾರಣಕ್ಕೆ ನಾನು, 'ನನ್ನ ತೆರಿಗೆ ನನ್ನ ಹಕ್ಕು' ಎಂದು ಹೇಳುತ್ತಿದ್ದೇನೆ' ಎಂದು ಸಮರ್ಥಿಸಿದರು.

'ನಮ್ಮ ಸಂಸದರು, ಕೇಂದ್ರದಲ್ಲಿ ಮಂತ್ರಿಗಳಾಗಿರುವವರು ಯಾರೂ ದೆಹಲಿಯಲ್ಲಿ ಈ ಅನ್ಯಾಯವನ್ನು ಪ್ರಶ್ನಿಸುವುದೇ ಇಲ್ಲ. ನಾವು ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಲೇ ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದುಕೊಂಡು, ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುತ್ತೇವೆ' ಎಂದರು.

'ಕನ್ನಡ ಬಾವುಟ ಮತ್ತು ದ್ವಿಭಾಷಾ ನೀತಿಯ ವಿಚಾರದಲ್ಲೂ ಜನ ಎಚ್ಚೆತ್ತುಕೊಂಡು ಹೋರಾಟ ಮಾಡುವ ಅಗತ್ಯವಿದೆ. ಭಾಷೆಯಾಗಿ ಯಾವ ಭಾಷೆಯನ್ನಾದರೂ ಕಲಿಯಬಹುದು. ಆದರೆ, ಕನ್ನಡದ ಮೇಲೆ ಹಿಂದಿ ಅಥವಾ ಇತರೆ ಭಾಷೆಯ ಹೇರಿಕೆ, ಸಾಂಸ್ಕೃತಿಕ ಹೇರಿಕೆಯನ್ನು ಸಹಿಸಲು ಸಾಧ್ಯವಿಲ್ಲ. ಸಾಮಾನ್ಯ ಜನರ ಖರ್ಚಿನ ಮೇಲೆ ಹಾಕುವ ಜಿಎಸ್‌ಟಿ ಪ್ರಮಾಣ ಕಡಿಮೆ ಆಗಿ, ಶ್ರೀಮಂತರು ಬಳಸುವ ಐಷಾರಾಮಿ ವಸ್ತುಗಳ ಮೇಲೆ ಜಿಎಸ್‌ಟಿ ಹೆಚ್ಚಿಸಲೇಬೇಕು' ಎಂದರು.

'ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಐದು ವರ್ಷದಲ್ಲಿ ದೊಡ್ಡ ಹೊಡೆತ ಬಿದ್ದು, ₹1.87 ಲಕ್ಷ ಕೋಟಿ ನಷ್ಟ ಆಗಿದೆ. ನಾವು ಕೊಡುವ ತೆರಿಗೆಯ ₹100ರಲ್ಲಿ ನಮಗೆ ವಾಪಸ್ ಬರುವುದು ₹12ರಿಂದ ₹13 ಮಾತ್ರ. ಬೆಂಗಳೂರು ಫೆರಿಫೆರಲ್ ರಸ್ತೆ ನಿರ್ಮಾಣ ಮತ್ತು ಕೆರೆಗಳ ಅಭಿವೃದ್ಧಿಗೆ ₹6 ಸಾವಿರ ಕೋಟಿ ಸೇರಿ ಒಟ್ಟು ₹11,495 ಕೋಟಿ ವಿಶೇಷ ಅನುದಾನ ಕೊಡಲು ಹಣಕಾಸು ಆಯೋಗ ಶಿಫಾರಸು ಮಾಡಿತ್ತು. ರಾಜ್ಯದಿಂದ ಆಯ್ಕೆಯಾದ ನಿರ್ಮಲಾ ಸೀತಾರಾಮನ್ ಇದನ್ನು ಕೊಡಬಾರದು ಎಂದು ತೀರ್ಮಾನಿಸಿ ದೊಡ್ಡ ಅನ್ಯಾಯ ಮಾಡಿಬಿಟ್ಟರು' ಎಂದರು ದೂರಿದರು.

ದಂಡ: ಸಿದ್ದರಾಮಯ್ಯ 'ಸುಪ್ರೀಂ' ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮ್ಮ ಹಾಗೂ ಇತರ ನಾಯಕರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣದ ಸಿಂಧುತ್ವ ಹಾಗೂ ₹10 ಸಾವಿರ ದಂಡ ವಿಧಿಸಿರುವ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ನಡೆಸಲಾಗಿದ್ದ ಪ್ರತಿಭಟನೆಗೆ ಸಂಬಂಧಿಸಿದಂತೆ ಸಿದ್ದರಾಮಯ್ಯ, ಸಚಿವರಾದ ಎಂ.ಬಿ.ಪಾಟೀಲ, ರಾಮಲಿಂಗಾರೆಡ್ಡಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ವಿರುದ್ಧದ ಕ್ರಿಮಿನಲ್ ಪ್ರಕರಣ ವಜಾಗೊಳಿಸಲು ಹೈಕೋರ್ಟ್ ಫೆಬ್ರುವರಿ 6ರಂದು ನಿರಾಕರಿಸಿತ್ತು.

'ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಯನ್ನು ಯಾವುದೇ ಸಮರ್ಥನೆ ನೀಡದೆ ಪ್ರತಿವಾದಿಯನ್ನಾಗಿ ಹೆಸರಿಸಲಾಗಿದೆ' ಎಂಬ ಕಾರಣಕ್ಕೆ ಎಲ್ಲ ಅರ್ಜಿದಾರರಿಗೂ ತಲಾ ₹ 10 ಸಾವಿರ ದಂಡ ವಿಧಿಸಿತ್ತು. ಬೆಳಗಾವಿಯ ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಹಿನ್ನೆಲೆಯಲ್ಲಿ ಈಶ್ವರಪ್ಪ ಅವರ ರಾಜೀನಾಮೆಗೆ ಆಗ್ರಹಿಸಿ 2022ರ ಏಪ್ರಿಲ್ 14ರಂದು ಬೆಂಗಳೂರಿನ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಬಳಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದ್ದರು.

ಈ ವೇಳೆ ಸಾರ್ವಜನಿಕರ ಮುಕ್ತ ಸಂಚಾರಕ್ಕೆ ಅಡ್ಡಿಪಡಿಸಿದ, ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದ ಆರೋಪದ ಅಡಿಯಲ್ಲಿ ಹೈಗ್ರೌಂಡ್ಸ್ ಠಾಣೆ ಪೊಲೀಸರು ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) ಕಲಂ 143 (ಕಾನೂನು ಬಾಹಿರವಾಗಿ ಸಮಾವೇಶಗೊಳ್ಳುವುದು) ಮತ್ತು ಕರ್ನಾಟಕ ಪೊಲೀಸ್ ಕಾಯ್ದೆಯ ಕಲಂ 103ರ ಅಡಿ ಪ್ರಕರಣ ದಾಖಲಿಸಿದ್ದರು.

₹4.80 ಕೋಟಿ ವಂಚನೆ: ಜಪ್ತಿಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಅಧಿಕ ಬಡ್ಡಿ ನೀಡುವ ಮೂಲಕ ಹಣ ದ್ವಿಗುಣಗೊಳಿಸುವ ಆಮಿಷ ತೋರಿಸಿ ರೈಲ್ವೆ ಉದ್ಯೋಗಿಗಳು ಸೇರಿದಂತೆ ಸಾರ್ವಜನಿಕರಿಂದ ₹4.80 ಕೋಟಿ ಠೇವಣಿ ಸಂಗ್ರಹಿಸಿ ವಂಚಿಸಿದ ಆಂಧ್ರ ಪ್ರದೇಶದ 'ಕ್ರೌಡ್ ಕ್ಲಬ್ ಇಂಟರ್‌ನ್ಯಾಷನಲ್ ಪ್ರೈವೆಟ್ ಲಿಮಿಟೆಡ್'ನ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಚಿತ್ರದುರ್ಗ ಪೊಲೀಸರು ಸಜ್ಜಾಗಿದ್ದಾರೆ.

ಕೋಡೆ ರಮಣಯ್ಯ

ಪ್ರಮುಖ ಆರೋಪಿ ಕೋಡೆ ರಮಣಯ್ಯ ಪತ್ತೆಗೆ ಲುಕ್‌ಔಟ್ ನೋಟಿಸ್ ಜಾರಿಗೊಳಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

ಚಿಕ್ಕಜಾಜೂರಿನ ರೈಲ್ವೆ ಉದ್ಯೋಗಿಗಳು ಸೇರಿದಂತೆ 106 ಜನರು ಈ ಕಂಪನಿಯಲ್ಲಿ ಹೂಡಿಕೆ ಮಾಡಿ, ಹಣ ಕಳೆದುಕೊಂಡಿದ್ದಾರೆ. ವಂಚನೆಗೆ ಒಳಗಾದವರಲ್ಲಿ ಕರ್ನಾಟಕ, ರಾಜಸ್ಥಾನ, ಆಂಧ್ರ ಪ್ರದೇಶದವರೂ ಇದ್ದಾರೆ. ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯ ಕೋಡೆ ರಮಣಯ್ಯ ಪ್ರಮುಖ ಆರೋಪಿಯಾಗಿದ್ದು, ದೇಶ ತೊರೆದಿರುವ ಶಂಕೆ ವ್ಯಕ್ತವಾಗಿದೆ.

> **ಹಣ ಕಳೆದುಕೊಂಡವರಲ್ಲಿ ಬಹುತೇಕರು ರೈಲ್ವೆ ಉದ್ಯೋಗಿಗಳು ಹಾಗೂ ಅವರ ಸಂಬಂಧಿಕರು. ಹೆಚ್ಚಿನ ಲಾಭದ ಆಮಿಷ ತೋರಿಸಿ ವಂಚಿಸಲಾಗಿದೆ**
> **ಧರ್ಮೇಂದ್ರ ಕುಮಾರ್ ಮೀನಾ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ–2019 (ಬಡ್ಸ್), ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ–2004 ಅಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆಸ್ತಿಯ ಮಾಹಿತಿ ಕಲೆ ಹಾಕುತ್ತಿದ್ದಾರೆ.

ರೈಲ್ವೆ ಉದ್ಯೋಗಿಯಾಗಿರುವ ಹೊಸದುರ್ಗ ತಾಲ್ಲೂಕಿನ ಬಾಗೂರು ಗ್ರಾಮದ ರಮೇಶಪ್ಪ ಅವರಿಗೆ ಸಹೋದ್ಯೋಗಿ ಪಿ.ವಿ. ಶೇಷಪ್ಪ ಎಂಬವರು 'ಕ್ರೌಡ್ ಕ್ಲಬ್' ಕಂಪನಿಯನ್ನು ಪರಿಚಯಿಸಿದ್ದರು. 60 ದಿನಗಳಲ್ಲಿ ಹಣ ದ್ವಿಗುಣಗೊಳ್ಳುವ ಆಸೆಯಿಂದ ರಮೇಶಪ್ಪ ₹1.04 ಲಕ್ಷ ಹೂಡಿಕೆ ಮಾಡಿದ್ದರು. ನಿಗದಿತ ಸಮಯಕ್ಕೆ ₹1.96 ಲಕ್ಷವನ್ನು ಕಂಪನಿ ಮರಳಿಸಿತ್ತು. ಈ ಭರವಸೆಯ ಮೇರೆಗೆ ರಮೇಶಪ್ಪ ಅವರ ಸಂಬಂಧಿಕರು, ಸಹೋದ್ಯೋಗಿಗಳು ಹಣ ಹೂಡಿಕೆ ಮಾಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ರಮೇಶಪ್ಪ ಅವರು 2ನೇ ಬಾರಿ ಹೂಡಿಕೆ ಮಾಡಿದಾಗ ಠೇವಣಿದಾರರೊಂದಿಗೆ ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿತ್ತು. ಮರಳಿಸುವ ಹಣದಲ್ಲಿ ಶೇ 50ರಷ್ಟನ್ನು ಚಿನ್ನ ಖರೀದಿಗೆ ಹೂಡಿಕೆ ಮಾಡಬೇಕು ಎಂಬ ಷರತ್ತು ವಿಧಿಸಲಾಗಿತ್ತು. ನಿಗದಿತ ಸಮಯ ಮುಗಿದರೂ ಕಂಪನಿ ಹಣ ಮರಳಿಸಲಿಲ್ಲ. ದೂರವಾಣಿ ಕರೆ, ವಾಟ್ಸ್‌ಆ್ಯಪ್ ಸಂದೇಶಕ್ಕೂ ಪ್ರತಿಕ್ರಿಯಿಸಿಲ್ಲ. ಮೋಸ ಹೋಗಿದ್ದು ಖಚಿತವಾದ ಬಳಿಕ ಚಿಕ್ಕಜಾಜೂರು ಠಾಣೆಗೆ ರಮೇಶಪ್ಪ ದೂರು ನೀಡಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ತಿಳಿಸಿದ್ದಾರೆ.

ಪ್ರಕರಣದ ತನಿಖೆ ನಡೆಸಿದ ಪೊಲೀಸರಿಗೆ ಕೋಡೆ ರಮಣಯ್ಯ ವಂಚನೆಯ ಜಾಲದ ಸುಳಿವು ದೊರೆತಿದೆ. 106 ಜನರಿಗೆ ವಂಚನೆ ಮಾಡಿರುವುದು ಗೊತ್ತಾಗಿದೆ. ಚಿಕ್ಕಜಾಜೂರು ಠಾಣೆಯ ಪ್ರಕರಣವನ್ನು ಚಿತ್ರದುರ್ಗದ 'ಸೆನ್' ಠಾಣೆಗೆ ವರ್ಗಾವಣೆ ಮಾಡಿ ತನಿಖೆಗೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ರಚಿಸಲಾಗಿದೆ.

ಕರ್ನಾಟಕ ಮತ್ತು ಆಂಧ್ರ ಪ್ರದೇಶದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ರಿಜಿಸ್ಟ್ರಾರ್ ಹಾಗೂ ಬ್ಯಾಂಕ್‌ಗಳಿಂದ ತನಿಖಾಧಿಕಾರಿ ಮಾಹಿತಿ ಕೋರಿದ್ದಾರೆ.

ರಾಜ್ಯದಿಂದ ಅಜಯ್ ಮಾಕನ್ ಸ್ಪರ್ಧೆ

ಒಂದನೇ ಪುಟದಿಂದ

ನಾಸಿರ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಆಪ್ತರು. ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸದಸ್ಯರಾಗಿರುವ ಅವರು, ಖರ್ಗೆ ಅವರ ಕಚೇರಿಯ ಉಸ್ತುವಾರಿಯೂ ಆಗಿದ್ದಾರೆ. ಜತೆಗೆ, ರಾಜ್ಯಸಭೆಯಲ್ಲಿ ಪಕ್ಷದ ಸಚೇತಕರೂ ಹೌದು. ಮುಸ್ಲಿಂ ಸಮುದಾಯದ ಕೋಟಾದಲ್ಲಿ ಮನ್ಸೂರ್ ಅಲಿ ಖಾನ್ ಅವರು ಟಿಕೆಟ್‌ಗೆ ಪ್ರಯತ್ನ ನಡೆಸಿದ್ದರು. ಆದರೆ, ಲಾಬಿಯಲ್ಲಿ ನಾಸಿರ್ 'ಕೈ' ಮೇಲಾಗಿದೆ.

ಜಿ.ಸಿ.ಚಂದ್ರಶೇಖರ್ ಅವರಿಗೆ ಟಿಕೆಟ್ ನೀಡುವ ಕುರಿತು ರಾಜ್ಯ ಘಟಕವು ಹೆಚ್ಚಿನ ಒಲವು ತೋರಿರಲಿಲ್ಲ. ಆದರೆ, ಅವರು ಹೈಕಮಾಂಡ್ ಮಟ್ಟದಲ್ಲಿ ಲಾಬಿ ನಡೆಸಿದ್ದರು. ಅವರಿಗೆ ಮತ್ತೆ ಅವಕಾಶ ಸಿಕ್ಕಿದೆ. ಚಂದ್ರಶೇಖರ್ ಬದಲು ಬಿ.ಎಲ್.ಶಂಕರ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಬೇಕು ಎಂದು ರಾಜ್ಯದ ಕೆಲವು ಸಚಿವರು ಹೈಕಮಾಂಡ್‌ಗೆ ಒತ್ತಡ ಹೇರಿದ್ದರು.

ಸೋನಿಯಾ ಗಾಂಧಿ ಅವರು ರಾಜಸ್ಥಾನದಿಂದ ಆಯ್ಕೆ ಬಯಸಿ ಬುಧವಾರ ನಾಮಪತ್ರ ಸಲ್ಲಿಸಿದ್ದಾರೆ. ಈ ಮೂಲಕ 25 ವರ್ಷಗಳ ಅವರ ಚುನಾವಣಾ ರಾಜಕೀಯದ ಇನ್ನಿಂಗ್ಸ್ ಕೊನೆಗೊಂಡಿದೆ. ರಾಯ್ ಬರೇಲಿ ಲೋಕಸಭಾ ಕ್ಷೇತ್ರದಿಂದ ಪ್ರಿಯಾಂಕಾ ಗಾಂಧಿ ವಾದ್ರಾ ಸ್ಪರ್ಧೆ ಮಾಡಲಿದ್ದಾರೆ ಎಂಬ ಸುದ್ದಿಗಳು ಹರಡಿವೆ. ಸೋನಿಯಾ ಪ್ರವೇಶದಿಂದ ರಾಜಸ್ಥಾನದಲ್ಲಿ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯರ ಸಂಖ್ಯೆ ಆರು ಆಗಲಿದೆ. ಈ ಪೈಕಿ, ಐವರು ಅನ್ಯ ರಾಜ್ಯದವರು.

ಚುನಾವಣೆ: 56 ಸ್ಥಾನಗಳು

ಪಕ್ಷ	ಸದಸ್ಯರ ನಿವೃತ್ತಿ	ಗೆಲ್ಲುವ ಸಾಧ್ಯತೆ ಇರುವ ಸ್ಥಾನಗಳು
ಬಿಜೆಪಿ	28	28
ಕಾಂಗ್ರೆಸ್	9	10
ಟಿಎಂಸಿ	4	4
ಟಿಡಿಪಿ	1	0
ವೈಎಸ್‌ಆರ್ ಕಾಂಗ್ರೆಸ್	1	3
ಆರ್‌ಜೆಡಿ	2	2
ಜೆಡಿಯು	1	1
ಟಿಆರ್‌ಎಸ್	3	1

ಹಿರಿಯ ನಾಯಕಿ ರೇಣುಕಾ ಚೌಧರಿ ಅವರನ್ನು ಹುರಿಯಾಳುವನ್ನಾಗಿ ಪಕ್ಷ ಆಯ್ಕೆ ಮಾಡಿದೆ. ಅವರು ಆರು ವರ್ಷಗಳ ಬಳಿಕ ಮತ್ತೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗುವ ಹೊಸ್ತಿಲಲ್ಲಿದ್ದಾರೆ. ಯುವ ನಾಯಕ ಅನಿಲ್ ಯಾದವ್ ಅವರನ್ನು ತೆಲಂಗಾಣದಿಂದ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಅಶೋಕ್ ಹಂಡೋರೆ ಅವರನ್ನು ಮಹಾರಾಷ್ಟ್ರದಿಂದ ಹಾಗೂ ಅಶೋಕ್ ಸಿಂಗ್ ಅವರನ್ನು ಮಧ್ಯಪ್ರದೇಶದಿಂದ ಪಕ್ಷ ಕಣಕ್ಕೆ ಇಳಿಸಿದೆ.

ಫೆ.27ರಂದು ಚುನಾವಣೆ ನಡೆಯಲಿರುವ 56 ರಾಜ್ಯಸಭಾ ಸ್ಥಾನಗಳ ಪೈಕಿ 10ರಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಿದೆ. ಯಾವುದೇ ಅಚ್ಚರಿಗಳು ಘಟಿಸದಿದ್ದರೆ ಪಕ್ಷವು ತನ್ನ ಸದಸ್ಯರ ಸಂಖ್ಯೆಯನ್ನು ಒಂಬತ್ತರಿಂದ 10ಕ್ಕೆ ಸುಧಾರಿಸಿಕೊಳ್ಳುವ ನಿರೀಕ್ಷೆ ಇದೆ. ನಾಮಪತ್ರ ಸಲ್ಲಿಕೆಗೆ ಗುರುವಾರ ಕೊನೆಯ ದಿನ.

ಮಧ್ಯಪ್ರದೇಶದಿಂದ ರಾಜ್ಯಸಭಾ ಟಿಕೆಟ್‌ಗೆ ಹಿರಿಯ ನಾಯಕ ಕಮಲನಾಥ್ ಲಾಬಿ ನಡೆಸುತ್ತಿದ್ದಾರೆ ಎಂಬ ಸುದ್ದಿಗಳು ಹರಡಿದ್ದವು. ಟಿಕೆಟ್ ಕೊಡದಿದ್ದರೆ ಅವರು ಪಕ್ಷ ತೊರೆಯಲಿದ್ದಾರೆ ಎಂಬ ವದಂತಿಗಳು ಹಬ್ಬಿದ್ದವು. ಆದರೆ, ಅಶೋಕ್ ಸಿಂಗ್ ಅವರನ್ನು ಪಕ್ಷ ಆಯ್ಕೆ ಮಾಡಿದೆ.

ಬಿಜೆಪಿ; 4 ಸದಸ್ಯರಿಗಷ್ಟೇ ಮತ್ತೆ ಅವಕಾಶ

ಬಿಜೆಪಿಯ 28 ಸದಸ್ಯರು ಏಪ್ರಿಲ್‌ನಲ್ಲಿ ನಿವೃತ್ತರಾಗುತ್ತಿದ್ದು, ಅವರಲ್ಲಿ ನಾಲ್ಕು ಮಂದಿಗಷ್ಟೇ ಟಿಕೆಟ್ ನೀಡಲಾಗಿದೆ. ಧರ್ಮೇಂದ್ರ ಪ್ರಧಾನ್, ಭೂಪೇಂದರ್ ಯಾದವ್ ಸೇರಿದಂತೆ ಏಳು ಕೇಂದ್ರ ಸಚಿವರ ಹೆಸರು ಸಹ ಪಟ್ಟಿಯಲ್ಲಿಲ್ಲ. ಅವರಲ್ಲಿ ಹೆಚ್ಚಿನವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಸಂಭವವಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಹಿಮಾಚಲ ಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ವಿಧಾನಸಭೆಯ ಬಲಾಬಲದ ಆಧಾರದಲ್ಲಿ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಈ ಸಲ ಗೆಲ್ಲಲಿದ್ದಾರೆ. ಹೀಗಾಗಿ, ನಡ್ಡಾ ಅವರನ್ನು ಗುಜರಾತ್‌ನಿಂದ ಪಕ್ಷ ಕಣಕ್ಕೆ ಇಳಿಸಿದೆ. ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಹಾಗೂ ಎಲ್.ಮುರುಗನ್ ಅವರಿಗೆ ಮತ್ತೆ ಟಿಕೆಟ್ ನೀಡಲಾಗಿದೆ. ರಾಷ್ಟ್ರೀಯ ವಕ್ತಾರ ಸುಧಾಂಶು ದ್ವಿವೇದಿ ಅವರಿಗೆ ಪುನಃ ಅವಕಾಶ ಲಭಿಸಿದೆ. ಉಳಿದಂತೆ, ರಾಜಕೀಯ ವಲಯದಲ್ಲಿ ಪರಿಚಿತರಲ್ಲದ, ತಳಮಟ್ಟದ ನಾಯಕರನ್ನು ಗುರುತಿಸಿ ಅಭ್ಯರ್ಥಿಗಳನ್ನಾಗಿ ಮಾಡಿದೆ. ಮೂರನೇ ಅವಧಿಗೆ ಸದಸ್ಯರಾಗಲು ಸಜ್ಜಾಗಿರುವ ನಡ್ಡಾ ಹೊರತುಪಡಿಸಿ ಎರಡು ಅಥವಾ ಎರಡು ಬಾರಿಗಿಂತ ಹೆಚ್ಚು ಅವಧಿಗೆ ಸೇವೆ ಸಲ್ಲಿಸಿರುವ ಬಿಜೆಪಿಯ ಹಿರಿಯ ನಾಯಕರಿಗೆ ಈ ಸಲ ಅವಕಾಶ ನಿರಾಕರಿಸಲಾಗಿದೆ. ಎರಡು ದಿನಗಳ ಹಿಂದೆ ಕಾಂಗ್ರೆಸ್ ಸೇರಿದ್ದ ಅಶೋಕ್ ಚವ್ಹಾಣ್ ಅವರಿಗೆ ಮಹಾರಾಷ್ಟ್ರದಿಂದ ಟಿಕೆಟ್ ನೀಡಲಾಗಿದೆ.

ಪಕ್ಷದ ಮಹಿಳಾ ಮೋರ್ಚಾದ ಪದಾಧಿಕಾರಿಗಳಾಗಿರುವ ಧರ್ಮಶೀಲಾ ಗುಪ್ತಾ (ಬಿಹಾರ), ಮೇಧಾ ಕುಲಕರ್ಣಿ (ಮಹಾರಾಷ್ಟ್ರ) ಹಾಗೂ ಮಾಯಾ ನರೋಲಿಯಾ ಅವರನ್ನು ಹುರಿಯಾಳುಗಳನ್ನಾಗಿ ಮಾಡಲಾಗಿದೆ.

ಕೇಂದ್ರ ಸಚಿವರಾದ ರಾಜೀವ್ ಚಂದ್ರಶೇಖರ್, ಮನ್ಸುಖ್ ಮಾಂಡವಿಯಾ, ಪುರುಷೋತ್ತಮ ರೂಪಾಲ, ನಾರಾಯಣ ರಾಣೆ ಹಾಗೂ ವಿ.ಮುರಳೀಧರನ್, ಹಿರಿಯ ಮುಖಂಡರಾದ ಪ್ರಕಾಶ ಜಾವಡೇಕರ್, ಸುಶೀಲ್ ಕುಮಾರ್ ಮೋದಿ ಹಾಗೂ ಪಕ್ಷದ ಮಾಧ್ಯಮ ವಿಭಾಗದ ಮುಖ್ಯಸ್ಥ ಅನಿಲ್ ಬಲೂನಿ ಅವರಿಗೆ ಪಕ್ಷ ಟಿಕೆಟ್ ನೀಡಿಲ್ಲ.

ಸುಧಾ, ಮಯೂರ ಓದಿರಿ

ರಾಮಸ್ವಾಮಿಗೆ 'ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ನೀಡುವ 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ'ಗೆ ಸಾಹಿತಿ ಎಸ್.ಆರ್. ರಾಮಸ್ವಾಮಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ. ರಾಮಸ್ವಾಮಿ ಅವರು ಸಾಹಿತ್ಯ, ಸಂಸ್ಕೃತಿ, ಸಮಾಜ ಸಂಘಟನೆ, ಪರಿಸರ ಸಂರಕ್ಷಣೆ, ಸ್ವದೇಶಿ ಅಭಿಯಾನ, ಪತ್ರಿಕೋದ್ಯಮ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಇದೇ 18ರಂದು ಸಂಜೆ 4.30ಕ್ಕೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಾಹಿತಿ ಎಸ್.ಎಲ್. ಭೈರಪ್ಪ ಅವರು ಉಪಸ್ಥಿತರಿರಲಿದ್ದು, ವಿದ್ವಾಂಸ ಟಿ.ವಿ. ವೆಂಕಟಾಚಲಶಾಸ್ತ್ರಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಜಿ.ಎಲ್. ಶೇಖರ್ ತಿಳಿಸಿದ್ದಾರೆ.

ಮಹಾ ಸಮ್ಮೇಳನ: ವಿಶೇಷ ಸಾಂದರ್ಭಿಕ ರಜೆ ಮಂಜೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಇದೇ 27ರಂದು ನಡೆಯಲಿರುವ ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ ಮತ್ತು ಆಡಳಿತದಲ್ಲಿ ಕಾರ್ಯಕ್ಷಮತೆ ಕಾರ್ಯಾಗಾರದಲ್ಲಿ ಭಾಗವಹಿಸುವ ಅಧಿಕಾರಿ ಮತ್ತು ನೌಕರರಿಗೆ ವಿಶೇಷ ಸಾಂದರ್ಭಿಕ ರಜೆ ಮಂಜೂರು ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಬೆಂಗಳೂರು ನಗರ ಜಿಲ್ಲೆಯ ಅಧಿಕಾರಿ, ನೌಕರರಿಗೆ ಫೆ. 27ರಂದು ಒಂದು ದಿನ, ಇತರ ಜಿಲ್ಲೆಗಳ ಅಧಿಕಾರಿ, ನೌಕರರಿಗೆ ಪ್ರಯಾಣದ ದಿನವೂ ಸೇರಿ ಫೆ. 27 ಮತ್ತು 28ರಂದು ಎರಡು ದಿನಗಳ ರಜೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಜೂರು ಮಾಡಿದೆ.

KRISHNA BHAGYA JALA NIGAM LIMITED
(A.Government of Karnataka Undertaking)
Office of the Executive Engineer, KBJNL Dam Division.,
(Irrigation Department) Narayanpur-585219 Tq :Shorapur,
Dist :Yadigir. State : Karnataka, PH/Fax No-08444-229615

No:KBJNL/EE/Dam Divn/PB-1/Quotation/2023-24/ 1314 Dated: 14.02.2024

Quotation notification

Ref: ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂ:ಕಸಂಪಾ:04:ವಾಪ್ರಜಾ:2017 ದಿ : 19–01–2017

Sealed quotations are invited by the under signed on behalf of Managing Director, KBJNL, Bengaluru from the reputed agencies/suppliers for materials and detailed technical specifications for preperation of estimates under Narayanpur Camp. The details of materials and Item wise detailed technical specification are uploaded in KBJNL web site : www.kbjnl.karnataka.gov.in

The intending agencies/suppliers shall submit their sealed quotation rates duly excluding GST& all taxes & should reach the office of the undersigned either by post or in person on or before 22.02.2024 at 5.30 PM. The sealed quotation will be opened at the office of the undersigned on 23.02.2024 at 11.00 AM.

Sd/-
(Sri. Ashokreddy Patil)
Executive Engineer,
KBJNL, Dam Division, Narayanpur

ಅಪರಾಧಗಳ ಪ್ರಮಾಣ ಶೇ 20– 30ರಷ್ಟು ಏರಿಕೆ: ಸರ್ಕಾರದ ವಿರುದ್ಧ ವಿರೋಧ ಪಕ್ಷದ ವಾಗ್ದಾಳಿ

ಕ್ರಿಮಿನಲ್‌ಗಳ ಅಟ್ಟಹಾಸ ಹೆಚ್ಚಳ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಪರಾಧಗಳ ಸಂಖ್ಯೆ ಏರಿಕೆ ಆಗಿರುವುದು ಎನ್‌ಸಿಆರ್‌ಬಿ ವರದಿಯಲ್ಲಿ ಉಲ್ಲೇಖವಾಗಿದೆ. ಕ್ರಿಮಿನಲ್‌ಗಳ ಅಟ್ಟಹಾಸ ಹೆಚ್ಚಾಗಿದ್ದು, ಭಯೋತ್ಪಾದಕರಿಗೆ ಕರ್ನಾಟಕ ರಾಜ್ಯ ಸ್ಲೀಪರ್ ಸೆಲ್ ಆಗಿ ಪರಿಣಮಿಸಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹರಿಹಾಯ್ದರು.

ರಾಜ್ಯಪಾಲರ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿದ ಅವರು, ಎನ್‌ಸಿಆರ್‌ಬಿ ವರದಿ ಪ್ರಕಾರ ಕಳೆದ 8-9 ತಿಂಗಳಲ್ಲಿ ಅಪರಾಧಗಳ ಪ್ರಮಾಣ ಶೇ 20ರಿಂದ 30ರಷ್ಟು ಹೆಚ್ಚಾಗಿದೆ. ಹಿರಿಯ ನಾಗರಿಕರ ಮೇಲಿನ ದೌರ್ಜನ್ಯ ಪ್ರಮಾಣವೂ ಶೇ 56ರಷ್ಟು ಹೆಚ್ಚಳವಾಗಿದೆ. 1,80,742 ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ವಿವರಿಸಿದರು.

‘ಮಹಿಳೆಯರ ಮೇಲಿನ ದೌರ್ಜನ್ಯದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಒಂದು ಕಾಲದಲ್ಲಿ ಸೇಫ್‌ಸಿಟಿ ಆಗಿದ್ದ ಬೆಂಗಳೂರು ಕ್ರೈಂ ಸಿಟಿಯಾಗಿ ಪರಿವರ್ತನೆಯಾಗಿದೆ. ನಮ್ಮ ಸರ್ಕಾರ ಇದ್ದಾಗ ಬಾಲ ಮುಚ್ಚಿಕೊಂಡಿದ್ದ ಕ್ರಿಮಿನಲ್‌ಗಳು ಈಗ ಚಿಗುರಿಕೊಂಡಿದ್ದಾರೆ. ಪಿಎಫ್‌ಐ, ಕೆಎಫ್‌ಡಿಯಂತಹ ಸಂಘಟನೆಗಳ ಕಾರ್ಯಕರ್ತರ ಮೇಲಿನ ಪ್ರಕರಣಗಳನ್ನು ಹಿಂದಕ್ಕೆ ಪಡೆದಿರುವುದರಿಂದ ಯಾವುದೇ ಭಯವಿಲ್ಲದೇ ಓಡಾಡಿಕೊಂಡಿದ್ದಾರೆ. ಕೋಲಾರ ಮತ್ತು ಶಿವಮೊಗ್ಗದಲ್ಲಿ ಸ್ಟೀಲ್‌ನಿಂದ ಮಾಡಿದ ಲಾಂಗು ಮಚ್ಚುಗಳ ಕಟೌಟ್‌ಗಳನ್ನು ನಿಲ್ಲಿಸಿ ಭಯಭೀತಿ ಮೂಡಿಸುವ ಪ್ರಯತ್ನ ನಡೆಸಿದ್ದಾರೆ’ ಎಂದು ಟೀಕಿಸಿದರು.

‘ಐಸಿಸ್‌ನಂತಹ ಭಯೋತ್ಪಾದನಾ ಸಂಘಟನೆಗಳಿಗೆ ಕರ್ನಾಟಕ ‘ಸ್ಲೀಪರ್ ಸೆಲ್’ ಆಗಿದೆ. ಎನ್‌ಐಎ ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಎಂಟು ಶಂಕಿತ ಉಗ್ರರನ್ನು ಬಂಧಿಸಿದೆ. ಇವರು ರಾಜ್ಯದಲ್ಲಿ ಬಾಂಬ್ ಸ್ಫೋಟಕ್ಕೆ ಸಂಚು ಮಾಡಿದ್ದರು. ಬಳ್ಳಾರಿಯಲ್ಲಿ ಬಂಧನಕ್ಕೆ ಒಳಗಾದ ಮಹಮ್ಮದ್ ಸುಲೇಮಾನ್ ‘ಕಿಂಗ್ ಪಿನ್’ ಆಗಿದ್ದು, ಅಮಾಯಕ ಯುವಕರ ತಲೆ ಕೆಡಿಸಿ ಭಯೋತ್ಪಾದಕ ಸಂಘಟನೆಗಳಿಗೆ ಸೇರಿಸುವ ಕೆಲಸ ಮಾಡುತ್ತಿದ್ದ’ ಎಂದು ಅಶೋಕ ದೂರಿದರು.

ಬೆಳಗಾವಿ ವೆಂಟಮುರಿಯಲ್ಲಿ ದಲಿತ ಮಹಿಳೆಯ ಬೆತ್ತಲೆ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಪೊಲೀಸರು ಮಾಡಿದ್ದು, ಈ ಸಂಬಂಧ ನ್ಯಾಯಾಲಯವೂ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಇದೇ ರೀತಿ ಹಾವೇರಿಯಲ್ಲಿ ಮುಸ್ಲಿಂ ಮಹಿಳೆಯ ಮೇಲೆ ಏಳುಮಂದಿ ಸಾಮೂಹಿಕ ಅತ್ಯಾಚಾರ ಮಾಡಿದ ಘಟನೆಯನ್ನೂ ಮುಚ್ಚಿ ಹಾಕಲು ಪೊಲೀಸರು ಪ್ರಯತ್ನ ನಡೆಸಿದರು. ಇದಕ್ಕಾಗಿ ಪೊಲೀಸರು ತನಿಖೆ ನಡೆಸದೇ ₹500ಕ್ಕೆ ರಾಜಿ ಮಾಡಿಸುವ ನಾಚಿಕೆಗೇಡಿನ ಕೃತ್ಯಕ್ಕೂ ಮುಂದಾದರು. ನೈತಿಕ ಪೊಲೀಸ್‌ಗಿರಿ ಬಗ್ಗೆ ಮಾತನಾಡುತ್ತಿದ್ದ, ಪ್ರಗತಿಪರರು, ಈ ಘಟನೆ ನಡೆದಾಗ ತುಟಿಬಿಚ್ಚದೇ ಮೌನವಹಿಸಿದ್ದು ಅಚ್ಚರಿಯ ಸಂಗತಿ. ಅಷ್ಟೇ ಅಲ್ಲ ದೂರು ಹಿಂದಕ್ಕೆ ಪಡೆಯಲು ಮಹಿಳೆಗೆ ₹50 ಲಕ್ಷ ಆಮಿಷವನ್ನೂ ಒಡ್ಡಲಾಯಿತು ಎಂದು ಅಶೋಕ ಹೇಳಿದರು.

ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕ ಆರ್. ಅಶೋಕ ಮಾತನಾಡಿದರು

‘ವಿಳಂಬಕ್ಕೆ ಕೇಂದ್ರವನ್ನು ದೂರಬೇಡಿ’

‘ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ಬರ ಪರಿಹಾರ ವಿತರಣೆಯಲ್ಲಿ ವಿಳಂಬ ಆಗಿರಲಿಲ್ಲ. ಈಗ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿಕೊಂಡು ವಿಳಂಬ ಮಾಡುತ್ತಿದೆ’ ಎಂದು ಅಶೋಕ ಆರೋಪಿಸಿದರು.

ವಿರೋಧ ಪಕ್ಷದ ನಾಯಕರ ಆರೋಪವನ್ನು ಅಲ್ಲಗಳೆದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಅತಿವೃಷ್ಟಿ, ಪ್ರವಾಹ ಸಂದರ್ಭಗಳಲ್ಲಿ ಮಾತ್ರ ಬೇಗ ಪರಿಹಾರ ನೀಡಲಾಗಿತ್ತು. ಬರ ಪರಿಹಾರವನ್ನು ಬೇಗ ನೀಡಿದ ಉದಾಹರಣೆಗಳಿಲ್ಲ’ ಎಂದರು.

‘ಚುನಾವಣೆಗಾಗಿ ಸಂವಿಧಾನ ಹಿಡಿದ ಕಾಂಗ್ರೆಸ್’

ಬೆಂಗಳೂರು: ‘ಅಂಬೇಡ್ಕರ್ ಅವರಿಗೆ ಜೀವಿತಾವಧಿ ಯುದ್ದಕ್ಕೂ ಅವಮಾನ ಮಾಡಿದ್ದ ಕಾಂಗ್ರೆಸ್‌ಗೆ ಚುನಾವಣೆ ಬಂದಾಗ ಸಂವಿಧಾನದ ನೆನಪಾಗುತ್ತದೆ. ಈಗಲೂ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಚುನಾವಣೆಗಾಗಿ ಸಂವಿಧಾನ ಜಾಗೃತಿ ಜಾಥಾ ಮಾಡುತ್ತಿದೆ’ ಎಂದು ಬಿಜೆಪಿಯ ಬಿ.ವೈ. ವಿಜಯೇಂದ್ರ ವಿಧಾನಸಭೆಯಲ್ಲಿ ಬುಧವಾರ ಟೀಕಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ 90 ಬಾರಿ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಿತ್ತು. ಇವರಿಗೆ ಸಂವಿಧಾನದ ಹೆಸರಿನಲ್ಲಿ ಅಭಿಯಾನ ನಡೆಸಲು ಯಾವ ನೈತಿಕತೆ ಇದೆ’ ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಅತ್ಯಂತ ಹೆಚ್ಚು ಅವಧಿಗೆ ಆಡಳಿತ ನಡೆಸಿರುವುದು ಕಾಂಗ್ರೆಸ್ ಪಕ್ಷ. ಈಗಲೂ ರಾಜ್ಯವು ಅಭಿವೃದ್ಧಿಯಲ್ಲಿ ಹಿಂದುಳಿದಿದ್ದು, ಜನರು ಸಮಸ್ಯೆಗಳನ್ನು ಎದುರಿಸುತ್ತಿದ್ದರೆ ಅದರ ಹೊಣೆಯನ್ನು ಕಾಂಗ್ರೆಸ್ ಪಕ್ಷವೇ ಹೊರಬೇಕು ಎಂದರು.

ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ. ಬರಗಾಲದಿಂದ ಸಂಕಷ್ಟದಲ್ಲಿರುವ ಜನರಿಗೆ ಪರಿಹಾರ ಕೊಡುವುದಕ್ಕೂ ಹಣವಿಲ್ಲ. ದೆಹಲಿಯಲ್ಲಿ ಕಾಂಗ್ರೆಸ್‌ನವರು ನಡೆಸಿದ ರಾಜಕೀಯ ನಾಟಕಕ್ಕೆ ಸರ್ಕಾರದ ಖಜಾನೆಯ ಹಣ ಬಳಸಲಾಗಿದೆ. ರಾಜಕೀಯ ಪ್ರತಿಭಟನೆ ಬೆಂಬಲಿಸಿ ಜಾಹೀರಾತು ನೀಡಿದ ಆಯುಕ್ತರಿಂದಲೇ ಹಣ ವಸೂಲಿ ಮಾಡಿ. ಇಲ್ಲವಾದರೆ ಅವರನ್ನು ಜಾಗ ಖಾಲಿ ಮಾಡಿಸಿ ಎಂದು ಆಗ್ರಹಿಸಿದರು.

ಬಿಜೆಪಿಯ ಎಸ್. ಚನ್ನಬಸಪ್ಪ, ಮಾತನಾಡಿ, ‘ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಅಪರಾಧ ಚಟುವಟಿಕೆ ಹೆಚ್ಚಳವಾಗಿದೆ. ಪೊಲೀಸರು ಅಪರಾಧಿಗಳ ಜತೆ ಶಾಮೀಲಾಗಿದ್ದಾರೆ’ ಎಂದು ಆರೋಪಿಸಿದರು.

‘ಜೆಸಿಬಿಯಲ್ಲಿ ಶಾಲೆಗೆ ಹೋಗುವ ಮಕ್ಕಳು’

ಒಂದೂ ಹೊಸ ಬಸ್ ಖರೀದಿಸದೇ ಸರ್ಕಾರ ಸುಳ್ಳು ಹೇಳುತ್ತಿದೆ. ಐದು ಗ್ಯಾರಂಟಿಯಲ್ಲ, ಐವತ್ತು ಗ್ಯಾರಂಟಿಗಳನ್ನಾದರೂ ಜಾರಿ ಮಾಡಿ. ಆದರೆ, ಗ್ಯಾರಂಟಿ ಹೆಸರಲ್ಲಿ ಜನರಿಗೆ ಮೋಸ ಮಾಡಬೇಡಿ ಎಂದು ಅಶೋಕ ಹೇಳಿದರು.

ಶಕ್ತಿ ಯೋಜನೆ ಬಗ್ಗೆ ಸರ್ಕಾರ ಹೆಮ್ಮೆಯಿಂದ ಮಾತನಾಡುತ್ತದೆ. ಆದರೆ ವಾಸ್ತವವೇ ಬೇರೆ. ಶಾಲಾ ಮಕ್ಕಳು ಬಸ್ಸಿಲ್ಲದೇ ಜೆಸಿಬಿ, ಕಲ್ಲು ತುಂಬಿಕೊಂಡ ಲಾರಿಗಳಲ್ಲಿ ಪ್ರಯಾಣಿಸುತ್ತಿದ್ದಾರೆ. ಹೆಚ್ಚು ಬಸ್ ಇಲ್ಲದ ಮಾರ್ಗಗಳನ್ನು ರದ್ದು ಮಾಡಿರುವುದರಿಂದ ಜನರಿಗೆ ತೊಂದರೆ ಆಗುತ್ತಿದೆ. ಗುಜರಿಗೆ ಹೋದ ಬಸ್ಸಿಗೆ ಪರ್ಯಾಯವಾಗಿ ಬಸ್ಸುಗಳನ್ನು ಖರೀದಿಸಲಾಗುತ್ತಿದೆಯೇ ಹೊರತು ಹೊಸ ಬಸ್ಸುಗಳನ್ನು ಖರೀದಿಸುತ್ತಿಲ್ಲ ಎಂದರು.

ಸುದ್ದಿ 2 ನಿಮಿಷ

ಮಾವಳ್ಳಿಪುರ ಬಳಿ ಕ್ರೀಡಾ ನಗರಿ ನಿರ್ಮಾಣ: ನಾಗೇಂದ್ರ

ಬೆಂಗಳೂರು: ಯಲಹಂಕ ತಾಲ್ಲೂಕು ಹೆಸರಘಟ್ಟ ಹೋಬಳಿ ಮಾವಳ್ಳಿಪುರ ಬಳಿ 100 ಎಕರೆ ಪ್ರದೇಶದಲ್ಲಿ ಕ್ರೀಡಾ ನಗರಿ (ಸ್ಪೋರ್ಟ್ಸ್ ಸಿಟಿ) ನಿರ್ಮಿಸಲಾಗುವುದು ಎಂದು ಕ್ರೀಡಾ ಸಚಿವ ಬಿ.ನಾಗೇಂದ್ರ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎಸ್.ಆರ್.ವಿಶ್ವನಾಥ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಾವಳ್ಳಿಪುರ ಬಳಿ 60 ಎಕರೆ ಜಮೀನು ನೀಡಲು ಕಂದಾಯ ಇಲಾಖೆ ಒಪ್ಪಿಕೊಂಡಿದೆ ಎಂದರು.

ಇದರ ಜತೆಗೆ ಇನ್ನೂ ಹೆಚ್ಚುವರಿ 40 ಎಕರೆ ಜಾಗ ನೀಡುವಂತೆ ಕೇಳಲಾಗಿದೆ. ಅದನ್ನು ಪಡೆದು, ಸಂಪುಟ ಸಭೆಯ ಒಪ್ಪಿಗೆಯ ಬಳಿಕ ಸರ್ಕಾರದಿಂದ ಅಥವಾ ಖಾಸಗಿ ಸಹಭಾಗಿತ್ವದಲ್ಲಿ ಎಲ್ಲ ಸೌಲಭ್ಯಗಳು ಮತ್ತು ಎಲ್ಲ ಕ್ರೀಡೆಗಳು ಒಂದೇ ಸೂರಿನಡಿ ಇರುವಂತೆ ಕ್ರೀಡಾ ನಗರಿ ನಿರ್ಮಿಸಲಾಗುವುದು ಎಂದು ಹೇಳಿದರು.

‘ಕ್ರೀಡಾ ನಗರಿ ನಿರ್ಮಿಸಿದರೆ ನಿಮ್ಮನ್ನು ಬೆಳ್ಳಿರಥದಲ್ಲಿ ಮೆರವಣಿಗೆ ಮಾಡಿಸುತ್ತೇನೆ’ ಎಂದು ವಿಶ್ವನಾಥ್ ಅವರು ಸಚಿವ ನಾಗೇಂದ್ರ ಅವರ ಕಾಲೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ನಾಗೇಂದ್ರ, ‘ಉದ್ಘಾಟನೆ ದಿನದಂದು ನಾವು– ನೀವು ಕಬಡ್ಡಿ ಆಡೋಣ’ ಎಂದರು.

ಇಲಾಖೆಯ ವತಿಯಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಣ ನಿರ್ಮಿಸಲು ಆದ್ಯತೆ ನೀಡಲಾಗುವುದು ಎಂದರು.

ಆನೇಕಲ್ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಸಂಬಂಧ ಪ್ರಸ್ತಾವನೆ ಸಲ್ಲಿಕೆಯಾಗಿದೆ. ಶಾಸಕರ ಕೋರಿಕೆ ಮೇರೆಗೆ ಒಂದು ಬಾರಿ ಭೇಟಿ ನೀಡಿ, ಪರಿಶೀಲನೆ ನಡೆಸಿ ಅನುದಾನ ಒದಗಿಸಲಾಗುವುದು ಎಂದರು.

ರೈತರನ್ನು ವಾಪಸ್ ಕರೆತರಲು ಕ್ರಮ: ಸರ್ಕಾರದ ಭರವಸೆ

ಬೆಂಗಳೂರು: ರೈತರ ‘ದೆಹಲಿ ಚಲೋ’ ಪ್ರತಿಭಟನೆಯಲ್ಲಿ ಭಾಗವಹಿಸಲೆಂದು ರಾಜ್ಯದಿಂದ ತೆರಳಿದ್ದ 70 ರೈತರನ್ನು ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಬಂಧಿಸಲಾಗಿದ್ದು, ಅವರನ್ನು ಸುರಕ್ಷಿತವಾಗಿ ಕರೆತರಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕದ ರೈತರನ್ನು ಭೋಪಾಲ್‌ನಲ್ಲಿ ಬಂಧಿಸಿದ ಕ್ರಮ ಸರಿಯಲ್ಲ. ಸಾಂವಿಧಾನಿಕ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡುವುದು ಸಹಜ ಎಂದರು.

‘ಬಂಧಿತ 70 ರೈತರಲ್ಲಿ 25 ಮಹಿಳೆಯರೂ ಇದ್ದಾರೆ. ಇವರೆಲ್ಲರನ್ನೂ ಸುರಕ್ಷಿತವಾಗಿ ಕರೆ ತರಲು ಸರ್ಕಾರ ಸೂಕ್ತ ವ್ಯವಸ್ಥೆ ಮಾಡಬೇಕು’ ಎಂದು ದರ್ಶನ್ ಪುಟ್ಟಣ್ಣಯ್ಯ ಮನವಿ ಮಾಡಿದರು.

ಸಭಾಧ್ಯಕ್ಷ ಯು.ಟಿ.ಖಾದರ್, ‘ಈ ಘಟನೆ ಮಧ್ಯಪ್ರದೇಶದಲ್ಲಿ ನಡೆದಿರುವುದರಿಂದ ಅಲ್ಲಿನ ಸರ್ಕಾರದ ಜತೆ ಮಾತನಾಡಿ ರೈತರನ್ನು ವಾಪಸ್ ಕರೆಸಿಕೊಳ್ಳಬೇಕು’ ಎಂದು ಸರ್ಕಾರಕ್ಕೆ ಸೂಚಿಸಿದರು.

ಪ್ರಜಾವಾಣಿ facebook LIVE fb.com/prajavani.net
ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ
ರವಿ ಎಸ್., ಸರ್ಕಾರಿ ಎಚ್.ಡಿ. ಕೋಟೆ ಬಾಲಕಿಯರ ಪದವಿಪೂರ್ವ ಕಾಲೇಜು, ಮೈಸೂರು
ಇವರಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಉಪನ್ಯಾಸ
ಇಂದಿನ ವಿಷಯ: ಜೀವವಿಜ್ಞಾನ
ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ
ಫೆಬ್ರುವರಿ 15 ಮಧ್ಯಾಹ್ನ 3.00 ರಿಂದ 5.00

ಕೆರಗೋಡು ವಿವಾದದ ಜಟಾಪಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಕೆರಗೋಡಿನಲ್ಲಿ ಹನುಮಧ್ವಜ ಇಳಿಸಿದ ಪ್ರಕರಣ ವಿಧಾನಸಭೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಕಾವೇರಿದ ಜಟಾಪಟಿಗೆ ಕಾರಣವಾಯಿತು.

ವಿರೋಧಪಕ್ಷದ ನಾಯಕ ಆರ್. ಅಶೋಕ ಅವರು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಕೆರಗೋಡು ವಿಚಾರ ಪ್ರಸ್ತಾಪಿಸಿದರು. ಆಗ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮತ್ತು ಕಾಂಗ್ರೆಸ್‌ನ ಗಣಿಗ ರವಿಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

‘ಕೆರಗೋಡಿನಲ್ಲಿ ರಾಷ್ಟ್ರೀಯ ಹಬ್ಬಗಳಂದು ರಾಷ್ಟ್ರಧ್ವಜವನ್ನೂ, ರಾಜ್ಯೋತ್ಸವ ಸಂದರ್ಭದಲ್ಲಿ ಕನ್ನಡ ಬಾವುಟ ಮತ್ತು ಉಳಿದ ಸಂದರ್ಭಗಳಲ್ಲಿ ಹನುಮಧ್ವಜ ಹಾರಿಸುತ್ತಾರೆ. ಆದರೆ, ಇತ್ತೀಚೆಗೆ ಸರ್ಕಾರ ಏಕಾಏಕಿ ಹನುಮ ಧ್ವಜವನ್ನು ಇಳಿಸಿ ರಾಷ್ಟ್ರಧ್ವಜ ಅನಾವರಣಗೊಳಿಸಿದೆ. ರಾಷ್ಟ್ರಧ್ವಜಕ್ಕೂ ಸಂಹಿತೆ ಇದೆ. ಅವೆಲ್ಲವನ್ನೂ ಗಾಳಿಗೆ ತೂರಿ ಮಧ್ಯಾಹ್ನ 3 ಗಂಟೆಗೆ ಹಾರಿಸಿದ್ದಾರೆ. ಹನುಮ ಧ್ವಜದ ಕುರಿತು ಇರುವ ದ್ವೇಷದ ಕಾರಣಕ್ಕಾಗಿಯೇ ಈ ರೀತಿ ಮಾಡಿದ್ದಾರೆ. ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಮತ್ತು ಜಮ್ಮು ಕಾಶ್ಮೀರದಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಜೆಪಿ ಹೊರಟಾಗ ಕಾಂಗ್ರೆಸ್ ಸರ್ಕಾರಗಳು ವಿರೋಧಿಸಿದ್ದವು ಎಂದು ಅಶೋಕ ಕಿಡಿಕಾರಿದರು.

‘ಈ ಸ್ತಂಭವನ್ನು ಗ್ರಾಮದ ಜನರೇ ಹಣ ಹಾಕಿ ಸ್ಥಾಪಿಸಿದ್ದಾರೆ. ಗ್ರಾಮ ಪಂಚಾಯಿತಿ ಸಭೆಯಲ್ಲೂ ಈ ಸಂಬಂಧ ಬಹುಮತದ ನಿರ್ಣಯವನ್ನೂ ತೆಗೆದುಕೊಳ್ಳಲಾಗಿದೆ. ಇದನ್ನು ಸಹಿಸದ ಕಾಂಗ್ರೆಸ್ ಅಲ್ಲಿ ಜನರನ್ನು ರೊಚ್ಚಿಗೆಬ್ಬಿಸುವ ಕೆಲಸ ಮಾಡಿ, ಬಿಜೆಪಿ ಮೇಲೆ ಗೂಬೆ ಕೂರಿಸುತ್ತಿದೆ’ ಎಂದು ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಗಣಿಗ ರವಿಕುಮಾರ್, ಬಿಜೆಪಿ ಉದ್ದೇಶ ಪೂರ್ವಕವಾಗಿಯೇ ಅಲ್ಲಿ ಹನುಮಧ್ವಜದ ವಿವಾದವನ್ನು ಸೃಷ್ಟಿಸಿದೆ. ಇದರ ಹಿಂದೆ ರಾಜಕೀಯ ಕಾರಣವೂ ಇದೆ. ಇವರಿಗೆ ರಾಷ್ಟ್ರಧ್ವಜ ಹಾರಿಸುವುದು ಬೇಕಿಲ್ಲ ಎಂದರು.

ಇದಕ್ಕೆ ಧ್ವನಿಗೂಡಿಸಿದ ಸಚಿವ ಚಲುವರಾಯಸ್ವಾಮಿ, ಬಿಜೆಪಿಯವರು ರಾಷ್ಟ್ರಧ್ವಜ ಕಿತ್ತು ಹಾಕುವ ಮಾತು ಆಡುತ್ತಾರೆ. ರಾಷ್ಟ್ರಧ್ವಜವನ್ನು ತಾಲಿಬಾನ್ ಧ್ವಜ ಎಂದೂ ಹೇಳುತ್ತಾರೆ. ಅವರದು ಸಂವಿಧಾನ ವಿರೋಧಿ ಹೇಳಿಕೆ ಎಂದು ಕಿಡಿ ಕಾರಿದರು.

ಕಾಂಗ್ರೆಸ್‌ನ ನಯನಾ ಮೋಟಮ್ಮ ಮಾತನಾಡಿ, ‘ನಿಮಗೆ ರಾಷ್ಟ್ರಧ್ವಜ ಬೇಕಾ, ಹನುಮಧ್ವಜ ಬೇಕಾ ಎಂಬುದನ್ನು ಸ್ಪಷ್ಟಪಡಿಸಿ’ ಎಂದು ಏರಿದ ಧ್ವನಿಯಲ್ಲಿ ಪ್ರಶ್ನಿಸಿದರು. ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್ ಅವರು, ಯಾರೂ ರಾಷ್ಟ್ರಧ್ವಜಕ್ಕೆ ಅಪಮಾನ ಮಾಡಬಾರದು ಎಂದು ಹೇಳಿದರು. ಈ ಹಂತದಲ್ಲಿ ಬಿಜೆಪಿ–ಕಾಂಗ್ರೆಸ್ ಮಧ್ಯೆ ಜಟಾಪಟಿ ನಡೆಯಿತು. ಬಿಜೆಪಿ ಸದಸ್ಯರು ಜೈಶ್ರೀರಾಮ್ ಎಂದು ಘೋಷಣೆ ಕೂಗಿದರು.

‘ಮಾನ, ಮರ್ಯಾದೆ, ರಾಮ’

ಪರಿಷತ್‌ನಲ್ಲಿ ಆಡಳಿತಾರೂಢ ಕಾಂಗ್ರೆಸ್–ಬಿಜೆಪಿ ಸದಸ್ಯರ ಮಧ್ಯೆ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ತೆರಿಗೆ ಪಾಲಿನ ಹಣ ನೀಡದಿರುವ ಕೇಂದ್ರ ಸರ್ಕಾರಕ್ಕೆ ಮಾನ, ಮರ್ಯಾದೆ ಇಲ್ಲ’, ‘ರಾಮನನ್ನು ಇವರೇನು ಗುತ್ತಿಗೆ ಪಡೆದುಕೊಂಡಿದ್ದಾರಾ?’ ಎಂದು ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಚುಚ್ಚಿದ್ದು ವಿಧಾನ ಪರಿಷತ್‌ನಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ನಡುವೆ ವಾಕ್ಸಮರಕ್ಕೆ ಕಾರಣವಾಯಿತು.

ಜಟಾಪಟಿ ತಾರಕಕ್ಕೇರಿ ಅಸಾಂವಿಧಾನಿಕ ಪದಗಳು ಬಳಕೆಯಾಗುತ್ತಿದ್ದಂತೆಯೇ ಸಿಡಿಮಿಡಿಗೊಂಡ ಸಭಾಪತಿ ಬಸವರಾಜ ಹೊರಟ್ಟಿ, ‘ನಿಮ್ಮನ್ನು ಹೊರಗೆ ಹಾಕಬೇಕಾಗುತ್ತದೆ’ ಎಂದು ಬಿಜೆಪಿಯ ಕೇಶವಪ್ರಸಾದ್ ಅವರಿಗೆ ಎಚ್ಚರಿಕೆ ನೀಡಿದರು. ವಾಕ್ಸಮರ ನಿಯಂತ್ರಣಕ್ಕೆ ಬಾರದಿದ್ದಾಗ ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

ಮಾತಿನುದ್ದಕ್ಕೂ ಬಿಜೆಪಿ ವಿರುದ್ಧ ಟೀಕೆ ಮಾಡಿದ ವೆಂಕಟೇಶ್, ‘ಈಗ ಜೆಡಿಎಸ್ ಜೊತೆ ಸೇರಿಕೊಂಡಿದ್ದೀರಾ. ಮುಂದೆ ವಾಷ್‌ಔಟ್ ಆಗುತ್ತೀರಾ’ ಎಂದು ಛೇಡಿಸಿದರು. ಅದಕ್ಕೆ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ, ಮುಖ್ಯ ಸಚೇತಕ ಎನ್. ರವಿಕುಮಾರ್, ವೈ.ಎ. ನಾರಾಯಣಸ್ವಾಮಿ, ಭಾರತಿ ಶೆಟ್ಟಿ ಸೇರಿದಂತೆ ಬಿಜೆಪಿ ಸದಸ್ಯರು, ‘ಜೆಡಿಎಸ್ ಅಷ್ಟೇ ಅಲ್ಲ, ಎಲ್ಲರೂ ನಿಮ್ಮ ‘ಇಂಡಿಯಾ’ ಬಿಟ್ಟು ನಮ್ಮ ಜೊತೆ ಬರುತ್ತಿದ್ದಾರೆ’ ಎಂದರು.

ಆಗ ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ‘ನಾವು ಸಂವಿಧಾನಬದ್ಧ ರಾಜಕೀಯ ಮಾಡುತ್ತಿದ್ದೇವೆ. ನಿಮ್ಮಂತೆ ನಾವೂ ಇ.ಡಿ, ಐ.ಟಿ ಬಳಸುತ್ತಿದ್ದರೆ ಇನ್ನೂ ಬೆಳೆಯುತ್ತಿದ್ದೆವು. ನಾವು ವಾಷಿಂಗ್ ಮಷಿನ್‌ನಂತೆ ಕ್ಲೀನ್ ಮಾಡುವವರು. ಬಿಟ್ಟು ಹೋದವರೆಲ್ಲ ಮುಂದೆ ಮರಳಿ ಬರುತ್ತಾರೆ’ ಎಂದು ತಿರುಗೇಟು ನೀಡಿದರು.

ಅದಕ್ಕೆ ಕೇಶವಪ್ರಸಾದ್, ‘ಹರಿಪ್ರಸಾದ್ ಇಷ್ಟಬಂದಂತೆ ಮಾತನಾಡುತ್ತಾರೆ. ರೌಡಿ ರೀತಿ ನಡೆದುಕೊಂಡು ಸದನದ ಗೌರವ ಕಾಪಾಡುತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಗ ಹರಿಪ್ರಸಾದ್, ‘ನಾನಲ್ಲ ನೀವು ಗೂಂಡಾಥರ ಆಡಿ ಮಾನ, ಮರ್ಯಾದೆ ಕಳೆಯುತ್ತೀರಿ’ ಎಂದು ಕಿಡಿಕಾರಿದರು. ಸದಸ್ಯರ ನಡೆಗೆ ಸಭಾಪತಿಯವರು ಗರಂ ಆದರು.

‘ಮಂತ್ರಿಯಾಗುವ ಕನಸು ಈಡೇರಿಲ್ಲ ಎಂಬುದು ನಮಗೆ ಗೊತ್ತಿದೆ. ಈ ಬಗ್ಗೆ ವಿಷಾದವಿದೆ’ ಎಂದು ಬಿಜೆಪಿ ಸದಸ್ಯರು ಕೆಣಕಿದಾಗ, ‘ಮಂತ್ರಿ ಆಗುವುದಕ್ಕೆ ನಾನು ಬಂದಿಲ್ಲ. ಆ ಅಜೆಂಡಾ ಇಟ್ಟುಕೊಂಡಿಲ್ಲ. ನಾನು ಹಲವರನ್ನು ಮಂತ್ರಿ ಮಾಡಿದ್ದೇನೆ’ ಎಂದು ಹರಿಪ್ರಸಾದ್ ಹೇಳಿದರು. ಅದಕ್ಕೆ ಕೋಟ, ‘ಮಂತ್ರಿಯಾಗುವ ನಿಮ್ಮ ಸಾಮರ್ಥ್ಯ ಜನ ಮತ್ತು ವಿರೋಧ ಪಕ್ಷಕ್ಕೆ ಗೊತ್ತಿದೆ. ಆದರೆ, ಆಡಳಿತ ಪಕ್ಷಕ್ಕೆ ಇಲ್ಲ’ ಎಂದು ಕಿಚಾಯಿಸಿದರು.

‘ಇವರು (ಬಿಜೆಪಿ) ರಾಮನನ್ನು ಗುತ್ತಿಗೆ ಪಡೆದುಕೊಂಡಿದ್ದಾರೆಯೇ’ ಎಂದು ಯು.ಬಿ. ವೆಂಕಟೇಶ್ ಪ್ರಶ್ನಿಸುತ್ತಿದ್ದಂತೆಯೇ, ಎನ್. ರವಿಕುಮಾರ್, ‘ಗುತ್ತಿಗೆ ಪಡೆದುಕೊಂಡಿದ್ದೇವೆಂದು ಎಲ್ಲಿ ಹೇಳಿದ್ದೇವೆ’ ಎಂದು ಪ್ರಶ್ನಿಸಿದರು. ಮಧ್ಯಪ್ರವೇಶಿಸಿದ ಹರಿಪ್ರಸಾದ್, ‘ಅಯೋಧ್ಯೆಯು ಶ್ರೀರಾಮನ ಜನ್ಮಭೂಮಿಯಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಬಗ್ಗೆ ಹೋರಾಟ ನಡೆಸಿದ್ದ ಎಲ್.ಕೆ. ಅಡ್ವಾಣಿ ವಿರುದ್ಧ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ’ ಎಂದರು. ಅದಕ್ಕೆ ರವಿಕುಮಾರ್, ‘ಸುಪ್ರೀಂ ಕೋರ್ಟ್ ತೀರ್ಪು ಮತ್ತೊಮ್ಮೆ ಓದಿ. ಅಯೋಧ್ಯೆಯೇ ಶ್ರೀರಾಮನ ಜನ್ಮಸ್ಥಳ ಎಂದು ಐವರು ನ್ಯಾಯಮೂರ್ತಿಗಳು ತೀರ್ಪು ನೀಡಿದ್ದಾರೆ’ ಎಂದರು.

ಇದು ತೀವ್ರ ವಾಕ್ಸಮರಕ್ಕೆ ಕಾರಣವಾಯಿತು. ಆಗ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

‘ಅಕ್ಕಿ ಕಾಳು ಕೆಲಸ ಮಾಡುವುದಿಲ್ಲ’

‘ಅಯೋಧ್ಯೆಯ ಶ್ರೀರಾಮ ಎಲ್ಲರ ರಾಮ. ನಿಮ್ಮ (ಬಿಜೆಪಿ) ರಾಮ ಮಾತ್ರ ಅಲ್ಲ. ರಾಮ ಮಂದಿರದ ಹೆಸರಿನಲ್ಲಿ ನೀವು ಕಳುಹಿಸಿರುವ ಅಕ್ಕಿ ಕಾಳು ಚುನಾವಣೆಯಲ್ಲಿ ಕೆಲಸ ಮಾಡುವುದಿಲ್ಲ’ ಎಂದು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಬಿಜೆಪಿ ಸದಸ್ಯರನ್ನು ಕೆಣಕಿದರು.

‘ನಾವೂ ರಾಮನ ದೇವಸ್ಥಾನ ಕಟ್ಟಿಸಿದ್ದೇವೆ. ಬಿಜೆಪಿಯವರಿಗೆ ರಾಮನನ್ನು ಗುತ್ತಿಗೆಗೆ ಕೊಟ್ಟಿಲ್ಲ’ ಎಂದು ಶಿವಲಿಂಗೇಗೌಡ ಹೇಳುತ್ತಿದ್ದಂತೆ ಬಿಜೆಪಿಯ ಭರತ್ ಶೆಟ್ಟಿ, ಹರೀಶ್ ಪೂಂಜಾ, ರಾಜೇಶ್ ನಾಯ್ಕ್ ಆಕ್ಷೇಪಿಸಿದರು.

‘ಮಹಾತ್ಮ ಗಾಂಧೀಜಿಗೆ ಗುಂಡು ಹೊಡೆದ ಗೋಡ್ಸೆ ಸಂತತಿಯವರು ನಮಗೆ ಬುದ್ಧಿ ಹೇಳಬೇಕಿಲ್ಲ’ ಎಂದು ಶಿವಲಿಂಗೇಗೌಡ ಹೇಳಿದರು.

ರಾಜ್ಯಪಾಲರ ಭಾಷಣವನ್ನು ಬೆಂಬಲಿಸಿ ಮಾತನಾಡಿದ ಕಾಂಗ್ರೆಸ್‌ನ ಡಾ.ಎಚ್.ಡಿ. ರಂಗನಾಥ್, ‘ನಮ್ಮ ಸರ್ಕಾರ ಸಂಕಷ್ಟದಲ್ಲಿರುವವರ ನೆರವಿಗೆ ನಿಲ್ಲುವ ವಾಗ್ದಾನವನ್ನು ಈಡೇರಿಸಿದೆ. ಇದನ್ನು ಸಹಿಸಿಕೊಳ್ಳಲು ವಿರೋಧ ಪಕ್ಷದವರಿಗೆ ಆಗುತ್ತಿಲ್ಲ’ ಎಂದರು.

ಹೋರಿ ಓಟ ಹಾವೇರಿ ತಾಲ್ಲೂಕಿನ ದೇವಗಿರಿ ಗ್ರಾಮದಲ್ಲಿ ಬುಧವಾರ ರಾಜ್ಯಮಟ್ಟದ ಹೋರಿ ಬೆದರಿಸುವ ಸ್ಪರ್ಧೆ ನಡೆಯಿತು

ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

ಸಿದ್ಧಾಂತ ಸಂಭಾಳಿಸುವುದೇ ಸಂವಿಧಾನವಲ್ಲ: ಹೈಕೋರ್ಟ್

ಕನ್ನಡ: ನೌಕರರಿಗೆ ವೇತನ ಬಡ್ತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದ ಆಶಯವು, ವಾಸ್ತವಿಕ ಮತ್ತು ಭೌತಿಕ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ಇದೆಯೇ ಹೊರತು ಕೇವಲ ಸಿದ್ಧಾಂತಗಳನ್ನು ಸಂಭಾಳಿಸಲು ಅಲ್ಲ’ ಎಂಬ ಅಮೆರಿಕ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ ಅಲಿವರ್ ವೆಂಡಲ್‌ನ ತೀರ್ಪೊಂದನ್ನು ಉಲ್ಲೇಖಿಸಿರುವ ಹೈಕೋರ್ಟ್, ‘ರಾಜ್ಯ ಸರ್ಕಾರ ಪಿಂಚಣಿದಾರರನ್ನು ಸಹಾನುಭೂತಿಯಿಂದ ನಡೆಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದೆ.

ಎಸ್‌ಎಸ್‌ಎಲ್‌ಸಿವರೆಗೆ ಕನ್ನಡ ಭಾಷೆಯಲ್ಲಿ ಅಧ್ಯಯನ ಮಾಡಿ ಕೆಲಸ ಮಾಡುವ ನೌಕರರಿಗೆ ನೀಡಲಾಗುವ ಒಂದು ಬಾರಿಯ ವೇತನ ಬಡ್ತಿಗೆ ನಿರಾಕರಿಸಿದ್ದ, ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯ ಮಂಡಳಿ (ಕೆಎಸ್‌ಎಟಿ) ಆದೇಶವನ್ನು ಪ್ರಶ್ನಿಸಿ ಕುಂದಾಪುರ ತಾಲ್ಲೂಕಿನ ಕಣ್ಣುಕೆರೆ ಗ್ರಾಮದ ಸೀತಾಲಕ್ಷ್ಮಿ (62) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ಜಿ.ಬಸವರಾಜ ಅವರಿದ್ದ ವಿಭಾಗೀಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ.

‘2018ರ ಫೆಬ್ರುವರಿಯಿಂದ ಜಾರಿಗೆ ಬರುವಂತೆ ಅರ್ಜಿದಾರರಿಗೆ 3 ತಿಂಗಳ ಒಳಗಾಗಿ ಒಂದು ಬಾರಿಯ ವೇತನ ಬಡ್ತಿ ಮಂಜೂರು ಮಾಡಬೇಕು ಮತ್ತು ಹೆಚ್ಚಳದ ಬಾಕಿ ಮೊತ್ತವನ್ನೂ ಪಾವತಿಸಬೇಕು’ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೆ ನಿರ್ದೇಶಿಸಿದೆ.

‘ಆದೇಶ ಜಾರಿಗೊಳಿಸುವಲ್ಲಿ ವಿಳಂಬವಾದರೆ ಪ್ರತಿ ತಿಂಗಳಿಗೆ ಶೇ 2ರ ದರದಲ್ಲಿ ಬಡ್ಡಿ ಸೇರಿಸಿ ಪಾವತಿಸಬೇಕು. ಬಡ್ಡಿ ಮೊತ್ತವನ್ನು ತಕ್ಷಣವೇ ಪಾವತಿ ಮಾಡಬೇಕು. ವಿಳಂಬಕ್ಕೆ ಕಾರಣವಾದ ಅಧಿಕಾರಿಯಿಂದ ಹಣ ವಸೂಲಿ ಮಾಡಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ.

‘ಸೀತಾಲಕ್ಷ್ಮಿ ಮೂರು ದಶಕ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ, ಶಾಲಾ ಮಾತೆಯಾಗಿ ನಿಷ್ಕಳಂಕ ಸೇವೆ ಸಲ್ಲಿಸಿದ್ದಾರೆ. ಹಲವು ಕಂದಮ್ಮಗಳ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಈಗವರು ಬಾಳಸಂಜೆಯಲ್ಲಿದ್ದಾರೆ. ಇಳಿ ವಯಸ್ಸಿನಲ್ಲಿ ಉಂಟಾಗುವ ಹಲವು ಸಮಸ್ಯೆಗಳನ್ನು ಎದುರಿಸಲು ಹಣದ ಅವಶ್ಯಕತೆ ಇರುತ್ತದೆ. ಇಂತಹ ಸನ್ನಿವೇಶದಲ್ಲಿ ಒಬ್ಬ ಬಡ ಶಿಕ್ಷಕಿ ತನ್ನ ಪಾಲಿನ ಸಂವಿಧಾನಬದ್ಧ ಹಕ್ಕನ್ನು ಸಂರಕ್ಷಿಸಿಕೊಳ್ಳಲು ಹೆಣಗಬೇಕಾಗಿರುವುದು ನ್ಯಾಯಸಮ್ಮತ ಅಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣವೇನು?: ಸೀತಾಲಕ್ಷ್ಮಿ ಎಸ್‌ಎಸ್‌ಎಲ್‌ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಕನ್ನಡವನ್ನು ಒಂದು ವಿಷಯವಾಗಿ ಅಧ್ಯಯನ ಮಾಡಿದ್ದರು. ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ 1980ರ ಸೆಪ್ಟೆಂಬರ್ 24ರಿಂದ 2019ರ ಅಕ್ಟೋಬರ್ 31ರವರೆಗೆ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದರು.

‘ಎಸ್‌ಎಸ್‌ಎಲ್‌ಸಿವರೆಗೆ ಕನ್ನಡ ಭಾಷೆಯಲ್ಲಿ ಅಧ್ಯಯನ ಮಾಡಿದಂತಹ ಸರ್ಕಾರಿ ನೌಕರರಿಗೆ ಒಂದು ಬಾರಿಯ ವೇತನ ಬಡ್ತಿ ನೀಡಬೇಕು’ ಎಂಬ ನಿಯಮಾನುಸಾರ ಸೀತಾಲಕ್ಷ್ಮಿ ಸಲ್ಲಿಸಿದ್ದ ಮನವಿಯನ್ನು ಶಿಕ್ಷಣ ಇಲಾಖೆ ತಿರಸ್ಕರಿಸಿತ್ತು. ಈ ಸಂಬಂಧ ಅವರು ಕೆಎಸ್‌ಎಟಿ ಮೊರೆ ಹೋಗಿದ್ದರು. ಕೆಎಸ್‌ಎಟಿ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ವಿಘ್ನೇಶ್ವರ ಎಸ್.ಶಾಸ್ತ್ರಿ ಮತ್ತು ಆರ್. ಗುರುರಾಜ ವಾದ ಮಂಡಿಸಿದ್ದರು.

ಆಡಳಿತ ಪಕ್ಷದವರ ಗೈರು: ವಿಪಕ್ಷದವರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಧವಾರ ಮಧ್ಯಾಹ್ನ ಊಟದ ವಿರಾಮದ ಬಳಿಕ ಸಚಿವರೂ ಸೇರಿದಂತೆ ಆಡಳಿತ ಪಕ್ಷದ ಬಹುತೇಕ ಸದಸ್ಯರು ವಿಧಾನಸಭೆಯ ಕಲಾಪಕ್ಕೆ ಗೈರಾಗಿದ್ದಕ್ಕೆ ವಿರೋಧ ಪಕ್ಷ ಬಿಜೆಪಿ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಸಭಾಧ್ಯಕ್ಷ ಯು.ಟಿ. ಖಾದರ್ ಕೂಡ ಆಡಳಿತ ಪಕ್ಷದ ಸದಸ್ಯರ ವರ್ತನೆಗೆ ಆಕ್ಷೇಪ ವ್ಯಕ್ತಪಡಿಸಿದರು.

ಕಲಾಪ ಆರಂಭವಾದಾಗ ಸಚಿವರಾದ ಪ್ರಿಯಾಂಕ್ ಖರ್ಗೆ, ಕೃಷ್ಣಬೈರೇಗೌಡ, ಶಿವರಾಜ ತಂಗಡಗಿ ಮತ್ತು ಮೂವರು ಶಾಸಕರು ಮಾತ್ರ ಆಡಳಿತ ಪಕ್ಷದ ಸಾಲಿನಲ್ಲಿದ್ದರು. ‘ಸರ್ಕಾರಕ್ಕೆ ಕಲಾಪ ನಡೆಸಲು ಆಸಕ್ತಿ ಇಲ್ಲ. ಸಚಿವರು, ಶಾಸಕರು, ಅಧಿಕಾರಿಗಳು ಕೂಡ ಸದನದಲ್ಲಿ ಇಲ್ಲ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅಸಮಾಧಾನ ವ್ಯಕ್ತಪಡಿಸಿದರು.

ಅವ್ಯವಹಾರ; ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಬುಧವಾರ ವಿಧಾನ ಪರಿಷತ್ ಕಲಾಪದಲ್ಲಿ ಪ್ರತಿಧ್ವನಿಸಿತು. ಕಾಂಗ್ರೆಸ್‌ನ ಎಂ.ಎಲ್. ಅನಿಲ್ ಕುಮಾರ್ ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಸದಸ್ಯರು ಪಕ್ಷಭೇದ ಮರೆತು ಬೆಂಬಲ ಸೂಚಿಸಿದರು.

‘ಮಂಡಳಿ ವ್ಯಾಪ್ತಿಗೆ ಒಳಪಡುವ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ವಿಧಾನಸಭೆ ಹಾಗೂ ವಿಧಾನಪರಿಷತ್‌ನ 99 ಸದಸ್ಯರಿಗೆ ಸರ್ಕಾರ ಪ್ರತಿ ವರ್ಷ ತಲಾ ₹1 ಕೋಟಿ ನೀಡುತ್ತದೆ. 2022-23ನೇ ಸಾಲಿನ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ಪಡೆಯದೇ ಮಂಡಳಿಯ ಕಾರ್ಯದರ್ಶಿ ಹಂತದಲ್ಲೇ ಆಡಳಿತಾತ್ಮಕ ಅನುಮೋದನೆ ನೀಡಿದ್ದ ಕಾರಣ ಸಮಸ್ಯೆಯಾಗಿದೆ. ಕಾಮಗಾರಿ ನಡೆಸಿದವರು ಹಣಕ್ಕಾಗಿ ನಮ್ಮನ್ನು ಪೀಡಿಸುತ್ತಾರೆ. ನಮಗೆ ಇರುವ ಅಲ್ಪ ಅನುದಾನವೂ ಸಿಗದಂತೆ ಆಗಿದೆ. 2023-24ನೇ ಸಾಲಿನಲ್ಲಿ ಕೇವಲ ₹35 ಲಕ್ಷ ದೊರೆತಿದೆ’ ಎಂದು ಅನಿಲ್ ಕುಮಾರ್ ಹೇಳಿದರು.

ನಿಯಮದಂತೆ ಕಾರ್ಯನಿರ್ವಹಿಸದೇ ಲೋಪ ಎಸಗಿದ ಮಂಡಳಿ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಹಾಗೂ ವಿಷಯ ನಿರ್ವಾಹಕರನ್ನು ಈಗಾಗಲೇ ಅಮಾನತು ಮಾಡಲಾಗಿದೆ. ಅವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಲಾಗಿದೆ. ಹೆಚ್ಚುವರಿ ಮಂಜೂರಾತಿ ನೀಡಿ ಕೈಗೊಂಡಿದ್ದ ₹224 ಕೋಟಿ ವೆಚ್ಚದ 2,374 ಕಾಮಗಾರಿಗಳನ್ನು ರದ್ದು ಮಾಡಲಾಗಿದೆ. ಮುಂದುವರಿದ ಕಾಮಗಾರಿಗಳಿಗೆ ₹150 ಕೋಟಿ ಹೆಚ್ಚುವರಿ ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಸಭಾನಾಯಕ ಎನ್.ಎಸ್. ಬೋಸರಾಜು ಉತ್ತರಿಸಿದರು.

ಕಾರ್ಯದರ್ಶಿಯು ಆಡಳಿತ ಲೋಪ ಎಸಗಿರುವುದಲ್ಲದೇ, ತನ್ನ ಮಗನ ಒಡೆತನದ ಖಾಸಗಿ ಶಿಕ್ಷಣ ಸಂಸ್ಥೆಗೆ ₹2 ಕೋಟಿ ಅನುದಾನ ನೀಡಿದ್ದಾರೆ. ವರ್ಷಕ್ಕೆ ಇಂತಿಷ್ಟು ಸಭೆ ನಡೆಸಬೇಕು ಎಂಬ ನಿಯಮವನ್ನೂ ಉಲ್ಲಂಘಿಸಿದ್ದಾರೆ. ಎಲ್ಲ ಅವ್ಯವಹಾರಗಳ ಕುರಿತು ತನಿಖೆಗೆ ಆದೇಶಿಸಬೇಕು. ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಹಲವು ಸದಸ್ಯರು ಒತ್ತಾಯಿಸಿದರು.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಬಳಿ ಚರ್ಚಿಸಿದ ನಂತರ ತನಿಖೆಗೆ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಬೋಸರಾಜು ಭರವಸೆ ನೀಡಿದರು.

ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿಯಿಂದ ಮನವಿ

ಬಗರ್ ಹುಕುಂ: ಬಂಜಾರರ ಭೂಮಿ ಸಕ್ರಮಗೊಳಿಸಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬಂಜಾರರು ತಲೆ ತಲಾಂತರಗಳಿಂದ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಸರ್ಕಾರಿ, ಅರೆ ಸರ್ಕಾರಿ ಮತ್ತು ಅರಣ್ಯ ಭೂಮಿಯನ್ನು ಸಕ್ರಮಗೊಳಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿಯು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಸಲ್ಲಿಸಿತು.

ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪ ಬಳಿಯ ಭಾಯಾಗಡದಲ್ಲಿ ಬುಧವಾರ ನಡೆದ ಸಂತ ಸೇವಾಲಾಲ್ ಅವರ 285ನೇ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಚಿವರಿಗೆ ಸಮಿತಿಯ ಅಧ್ಯಕ್ಷ ರುದ್ರಪ್ಪ ಎಂ.ಲಮಾಣಿ ಮನವಿ ಸಲ್ಲಿಸಿದರು.

‘ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಭೂ ಯೋಜನೆಗೆ ಹೆಚ್ಚು ಅನುದಾನ ನೀಡಬೇಕು. ಸರ್ಕಾರವು ಬಂಜಾರ ಕುಟುಂಬಗಳು ಭೂ ಒಡೆತನ ಹೊಂದಲು ಅಗತ್ಯ ಕಾರ್ಯಕ್ರಮ ರೂಪಿಸಬೇಕು’ ಎಂದು ಸಮಿತಿ ಸದಸ್ಯರು ಆಗ್ರಹಿಸಿದರು.

‘ಭಾಯಾಗಡದಲ್ಲಿರುವ ಸಪ್ತ ಮಾತೃಕೆಯರ ಕೊಳದ ನವೀಕರಣ ಮತ್ತು ಕಾಗಿನೆಲೆ ಕ್ಷೇತ್ರದ ಮಾದರಿಯಲ್ಲಿ ಸಂಗೀತ ಕಾರಂಜಿ ನಿರ್ಮಿಸಲು ₹1 ಕೋಟಿ ಅನುದಾನ ಮಂಜೂರು ಮಾಡಬೇಕು. ಚಿನ್ನಿಕಟ್ಟೆಯಿಂದ ಹಳೇ ಜೋಗದವರೆಗೆ ಒಟ್ಟು 10 ಕಿ.ಮೀ. ಉದ್ದದ ಚತುಷ್ಪಥ ರಸ್ತೆಗೆ ₹44 ಕೋಟಿ ಅಂದಾಜಿನಲ್ಲಿ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದೆ. ರಸ್ತೆ ನಿರ್ಮಿಸಲು ಅನುದಾನ ನೀಡಬೇಕು’ ಎಂದು ಕೋರಲಾಯಿತು.

‘ಕ್ಷೇತ್ರದಲ್ಲಿ ಅಪೂರ್ಣವಾಗಿರುವ ಯಾತ್ರಿ ನಿವಾಸ ಪೂರ್ಣಗೊಳಿಸಲು ₹1 ಕೋಟಿ ಬಿಡುಗಡೆ ಮಾಡಬೇಕು. ಸುತ್ತಲೂ ಇರುವ ವರದನಕೆರೆ, ಭೂತನಕೆರೆ, ಬಸವಣ್ಣನಕೆರೆ, ಮಾಚಗೊಂಡನಹಳ್ಳಿ ಕೆರೆ, ಕೊಡತಾಳು ಕೆರೆಗಳ ಹೂಳು ಎತ್ತಬೇಕು. ಕೆರೆ ಒತ್ತುವರಿ ಪ್ರದೇಶ ತೆರವುಗೊಳಿಸಬೇಕು’ ಎಂದು ಮನವಿ ಮಾಡಿದರು.

‘ಸಮಿತಿಯಿಂದ ನೀಡಲಾಗಿರುವ ಬೇಡಿಕೆ ಪಟ್ಟಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸುತ್ತೇನೆ. ಬಂಜಾರ ಸಮುದಾಯದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ’ ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ದಾವಣಗೆರೆ ಜಿಲ್ಲೆ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಬುಧವಾರ ನಡೆದ ಸಂತ ಸೇವಾಲಾಲ್ ಅವರ 285ನೇ ಜಯಂತಿ ಕಾರ್ಯಕ್ರಮದಲ್ಲಿ ಬಂಜಾರ ಸಮುದಾಯದ ಯುವತಿಯರು ನೃತ್ಯ ಪ್ರದರ್ಶಿಸಿದರು

—ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

ಕಾರ್ಪೊರೇಟ್ ದೇಣಿಗೆ: ಬಿಜೆಪಿಗೆ ಸಿಂಹಪಾಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾರ್ಪೊರೇಟ್ ದೇಣಿಗೆ ಪಡೆದಿರುವ ವಿಚಾರದಲ್ಲಿ ಬಿಜೆಪಿ ಪಾರಮ್ಯ ಸಾಧಿಸಿದೆ. 2022–23ನೇ ಸಾಲಿನಲ್ಲಿ ಐದು ರಾಷ್ಟ್ರೀಯ ಪಕ್ಷಗಳು ಒಟ್ಟು ₹680.49 ಕೋಟಿ ಮೌಲ್ಯದ ಕಾರ್ಪೊರೇಟ್ ದೇಣಿಗೆ ಸ್ವೀಕರಿಸಿದ್ದು, ಈ ಪೈಕಿ ಶೇ 90ರಷ್ಟು ಪಾಲು ಬಿಜೆಪಿಗೆ ಹೋಗಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ ತಿಳಿಸಿದೆ.

ಕಾಂಗ್ರೆಸ್, ಎಎಪಿ, ಎನ್‌ಪಿಪಿ ಮತ್ತು ಸಿಪಿಎಂ ಪಕ್ಷಗಳು ಒಟ್ಟಾರೆ ಸ್ವೀಕರಿಸಿದ್ದಕ್ಕಿಂತ 8 ಪಟ್ಟು ಹೆಚ್ಚು ಕಾರ್ಪೊರೇಟ್ ದೇಣಿಗೆಯನ್ನು ಬಿಜೆಪಿ ಸ್ವೀಕರಿಸಿದೆ ಎಂದು ಎಡಿಆರ್ ತಿಳಿಸಿದೆ.

ಇದೇ ಅವಧಿಯಲ್ಲಿ ರಾಷ್ಟ್ರೀಯ ಪಕ್ಷಗಳು 12,167 ದೇಣಿಗೆದಾರರಿಂದ ₹20,000ಕ್ಕಿಂತ ಹೆಚ್ಚು ಸ್ವೀಕರಿಸಿದ ದೇಣಿಗೆಯ ಒಟ್ಟು ಮೊತ್ತ ₹850.43 ಕೋಟಿ. ಈ ಪೈಕಿ ಕಾರ್ಪೊರೇಟ್ ದೇಣಿಗೆ ಪಾಲು ಶೇ 84.81.

ಕಾರ್ಪೊರೇಟ್ ದೇಣಿಗೆ

ಪಕ್ಷ	ಮೊತ್ತ (ಕೋಟಿ)	ದೇಣಿಗೆದಾರರ ಸಂಖ್ಯೆ
ಬಿಜೆಪಿ	₹610.49	3,067
ಕಾಂಗ್ರೆಸ್	₹55.62	70
ಎಎಪಿ	₹11.26	69
ಸಿಪಿಎಂ	₹2.08	104
ಎನ್‌ಪಿಪಿ	₹1.03	8



‘ರಾಯಭಾರ ಕಚೇರಿ ನೌಕರ ಹನಿಟ್ರ್ಯಾಪ್ ಬಲೆಗೆ’

ಮೀರಠ್ (ಪಿಟಿಐ): ಬೇಹುಗಾರಿಕೆ ಆರೋಪದಡಿ ಈಚೆಗೆ ಬಂಧಿಸಿರುವ ರಷ್ಯಾದಲ್ಲಿರುವ ಭಾರತದ ರಾಯಭಾರ ಕಚೇರಿಯ ನೌಕರನನ್ನು ಮಹಿಳೆಯೊಬ್ಬರು ಹನಿಟ್ರ್ಯಾಪ್ ಬಲೆಗೆ ಬೀಳಿಸಿದ್ದರು ಎಂದು ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ದಳದ (ಎಟಿಎಸ್) ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನದ ಐಎಸ್‌ಐಗಾಗಿ ಬೇಹುಗಾರಿಕೆ ನಡೆಸಿರುವ ಆರೋಪದಲ್ಲಿ ಉತ್ತರ ಪ್ರದೇಶದ ಹಾಪುರ ಜಿಲ್ಲೆಯ ಶಾ ಮೊಹಿಯುದ್ದೀನ್ ಗ್ರಾಮದ ಸತೇಂದ್ರ ಸಿವಾಲ್ ಎಂಬಾತನನ್ನು ಎಟಿಎಸ್ ಅಧಿಕಾರಿಗಳು ಈಚೆಗೆ ಬಂಧಿಸಿದ್ದರು. ಸಾಮಾಜಿಕ ಮಾಧ್ಯಮದಲ್ಲಿ ಸತೇಂದ್ರನಿಗೆ ಪೂಜಾ ಮೆಹ್ರಾ ಎಂಬವರ ಪರಿಚಯವಾಗಿತ್ತು. ಆ ಮಹಿಳೆ ಈತನನ್ನು ಹನಿಟ್ರ್ಯಾಪ್ ಬಲೆಗೆ ಬೀಳಿಸಿದ್ದರು ಎಂದು ಎಟಿಎಸ್ ಇನ್‌ಸ್ಪೆಕ್ಟರ್ ರಾಜೀವ್ ತ್ಯಾಗಿ ತಿಳಿಸಿದರು.

ಕೇಜ್ರಿವಾಲ್‌ಗೆ 6ನೇ ಸಮನ್ಸ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಅಬಕಾರಿ ನೀತಿ ಹಗರಣದ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಆರನೇ ಬಾರಿಗೆ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕರೂ ಆದ ಕೇಜ್ರಿವಾಲ್ ಅವರಿಗೆ ಫೆ.19ರಂದು ಕೇಂದ್ರೀಯ ತನಿಖಾ ಸಂಸ್ಥೆಯ ಎದುರು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ.

ಈ ಪ್ರಕರಣದಲ್ಲಿ ನೀಡಲಾದ ಸಮನ್ಸ್‌ಗಳಿಗೆ ಪ್ರತಿಕ್ರಿಯಿಸದಿರುವುದಕ್ಕೆ ಇ.ಡಿ ದಾಖಲಿಸಿರುವ ದೂರಿನ ಹಿನ್ನೆಲೆಯಲ್ಲಿ ದೆಹಲಿ ಕೋರ್ಟ್ ತನ್ನ ಮುಂದೆ ಫೆ. 17ರಂದು ಹಾಜರಾಗುವಂತೆ ಸೂಚಿಸಿದೆ.

ಚುನಾವಣಾ ಬಾಂಡ್ ಇಂದು ತೀರ್ಪು

ನವದೆಹಲಿ: ಚುನಾವಣಾ ಬಾಂಡ್ ಯೋಜನೆಯ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ಪ್ರಕಟಿಸಲಿದೆ.

ಸರ್ಕಾರೇತರ ಸಂಘಟನೆಯಾದ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, ಸಿಪಿಎಂ, ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಸೇರಿದಂತೆ ಹಲವರು ಸಲ್ಲಿರುವ ಅರ್ಜಿಗಳ ವಿಚಾರಣೆಯನ್ನು ಕೋರ್ಟ್ ನಡೆಸಿದೆ.

ಮರಾಠ ಮೀಸಲು: 20ಕ್ಕೆ ಅಧಿವೇಶನ

ಐದನೇ ದಿನ ಪೂರೈಸಿದ ಮರಾಠ ಮೀಸಲು ಹೋರಾಟಗಾರನ ನಿರಶನ

ಪ್ರಜಾವಾಣಿ ವಾರ್ತೆ


ಮನೋಜ್

ಮುಂಬೈ: ಏಕನಾಥ ಶಿಂದೆ ನೇತೃತ್ವದ ಬಿಜೆಪಿ– ಶಿವ ಸೇನಾ–ಎನ್‌ಸಿಪಿ ಸರ್ಕಾರವು ಮರಾಠ ಮೀಸಲಾತಿ ಸೇರಿ ವಿವಿಧ ವಿಷಯಗಳ ಕುರಿತು ಚರ್ಚಿಸಲು ಫೆಬ್ರುವರಿ 20ರಂದು ವಿಧಾನಸಭೆ ವಿಶೇಷ ಅಧಿವೇಶನ ನಡೆಸಲು ನಿರ್ಧರಿಸಿದೆ. ಶಿಂದೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಇದಕ್ಕೂ ಮೊದಲು ಶಿಂದೆ ಅವರು ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಮತ್ತು ಅಜಿತ್ ಪವಾರ್ ಅವರ ಜತೆಗೆ ಈ ಬಗ್ಗೆ ಚರ್ಚೆ ನಡೆಸಿದ್ದರು.

ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಪಾಟೀಲ್ ಅವರು ಈ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆಯುವಂತೆ ಒತ್ತಾಯಿಸಿದ್ದರು. ನಾಗ್ಪುರದಲ್ಲಿ ನಡೆದ ಚಳಿಗಾಲದ ಅಧಿವೇಶನದ ವೇಳೆ ಮರಾಠ ಮೀಸಲಾತಿ ಚರ್ಚೆಗೆ ವಿಶೇಷ ಅಧಿವೇಶನ ಕರೆಯುವುದಾಗಿ ಶಿಂದೆ ಭರವಸೆ ನೀಡಿದ್ದರು. ಜರಾಂಗೆ ಅವರು ಮರಾಠ ಮೀಸಲಾತಿಗಾಗಿ ಒತ್ತಾಯಿಸಿ ಜಲ್ನಾ ಜಿಲ್ಲೆಯ ಅಂತರ್ವಾಲಿ ಸಾರಥಿ ಗ್ರಾಮದಲ್ಲಿ ನಾಲ್ಕನೇ ಬಾರಿಗೆ ಉಪವಾಸ ಸತ್ಯಾಗ್ರಹವನ್ನು ಫೆ.10ರಿಂದ ಆರಂಭಿಸಿದ್ದಾರೆ.

ಜರಾಂಗೆ ಆರೋಗ್ಯದಲ್ಲಿ ಏರುಪೇರು: ನಿರಶನ ಕೈಗೊಂಡಿರುವ ಮನೋಜ್ ಜರಾಂಗೆ ಪಾಟೀಲ್ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿದೆ. ಈ ಹಿನ್ನೆಲೆಯಲ್ಲಿ ಮಹಾರಾಷ್ಟ್ರದಲ್ಲಿ ಪ್ರತಿಭಟನೆಗಳು ಭುಗಿಲೆದ್ದಿವೆ.

‘ಜರಾಂಗೆ ಅವರು ತೀರಾ ಬಳಲಿದ್ದಾರೆ. ಅವರಿಗೆ ಕುಳಿತುಕೊಳ್ಳಲೂ ಸಾಧ್ಯವಾಗುತ್ತಿಲ್ಲ. ನಿರ್ಜಲೀಕರಣದಿಂದಾಗಿ ಅವರ ಮೂಗಿನಿಂದ ರಕ್ತ ಸೋರುತ್ತಿದೆ. ಕಳೆದ ಎರಡು ದಿನಗಳಿಂದ ಅವರು ನೀರು ಕುಡಿಯುವುದನ್ನೂ ಬಿಟ್ಟಿದ್ದಾರೆ’ ಎಂದು ಅವರ ಬೆಂಬಲಿಗರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ
ಸಾರ್ವಜನಿಕ ಆಸ್ಪತ್ರೆ, ಹರಪನಹಳ್ಳಿ–583131 ವಿಜಯನಗರ ಜಿಲ್ಲೆ.
ph No.08398-280266, 280222
Email id: ghharapanahalli1@gmail.com

ಸಂ:ಸಾಆಹ.ಹಳ್ಳಿ/353/2023–24 ದಿನಾಂಕ:12.02.2024

ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ನ ಟೆಂಡರ್ ಪ್ರಕಟಣೆ

2024–25 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ ಹರಪನಹಳ್ಳಿ ವಿಜಯನಗರ ಜಿಲ್ಲೆ ಇಲ್ಲಿಗೆ ಹೊರಗುತ್ತಿಗೆ ಆಧಾರದಲ್ಲಿ ನಾನ್–ಕ್ಲಿನಿಕಲ್ ಮತ್ತು ಗ್ರೂಪ್'ಡಿ' ಸಿಬ್ಬಂದಿ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ನಲ್ಲಿ ಟೆಂಡರ್ ಪ್ರಕಟಣೆ ಟೆಂಡರ ಆಹ್ವಾನಿಸಲಾಗಿದೆ LAST DATE AND TIME FOR RECEIPTOF TENDER S DATE :-04.03.2024, ಸಂಜೆ:4.30 ಗಂಟೆಯವರೆಗೆ ಸದರಿ ಇ– ಟೆಂಡರ್ ನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ http://e-proc.karnataka.gov.in ನಲ್ಲಿ ವೀಕ್ಷಣೆಗೆ ಹಾಗೂ ಡೌನಲೋಡ್ ಗೆ ಲಭ್ಯವಿರುತ್ತದೆ ಹೆಚ್ಚಿನ ಮಾಹಿತಿಗಾಗಿ ಈ ಕಾರ್ಯಲಯದ ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಹರಪನಹಳ್ಳಿ ಇವರ ದೂರವಾಣಿ ಸಂಖ್ಯೆ 9591674303 ಇವರಿಗೆ ಸಂಪರ್ಕಿಸಬಹುದು.

ಸಹಿ/– ಮುಖ್ಯ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಹರಪನಹಳ್ಳಿ, ವಿಜಯನಗರ ಜಿಲ್ಲೆ.

ಡಿಐಪಿಆರ್/ಹೊಸಪೇಟೆ/ಬಳ್ಳಾರಿ/398/ಎಂಸಿಎ/2023–24

ಕಂದಾಯ ಇಲಾಖೆ
ಭೂಮಿ ಉಸ್ತುವಾರಿ ಕೋಶ
1ನೇ ಮಹಡಿ, ಎಸ್.ಎಸ್.ಎಲ್.ಆರ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001

ಸಂ: BMC/2023-24/IND0004 ದಿನಾಂಕ: 13.02.2024

ತಿದ್ದುಪಡಿ ಅಧಿಸೂಚನೆ

DILRMP ಯೋಜನೆಯಡಿಯಲ್ಲಿ Rovers ಗಳನ್ನು ಖರೀದಿಸಲು ಆಹ್ವಾನಿಸಲಾಗಿರುವ ಟೆಂಡರ್‌ನ ತಿದ್ದುಪಡಿ ಇ–ಟೆಂಡರ್ ಅಧಿಸೂಚನೆ ವೇಳಾಪಟ್ಟಿ ಈ ಕೆಳಗಿನಂತಿದೆ. (1) ಬಿಡ್ಡುದಾರರು ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 20.02.2024 ರಂದು ಸಂಜೆ 5.30 ಗಂಟೆಯವರೆಗೆ (2) ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯ ಮಾಪನ ತೆರೆಯುವ ದಿನಾಂಕ: 23.02.2024 ರಂದು ಬೆಳಗ್ಗೆ 11.00 ಗಂಟೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.02.2024 ರಂದು ಬೆಳಗ್ಗೆ 11.30 ಗಂಟೆಗೆ (4) ಟೆಂಡರ್‌ಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ಹಾಗೂ updated replies to bidders queries and other terms and conditions. ಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ಆಯುಕ್ತರು,
ಭೂಮಿ ಉಸ್ತುವಾರಿ ಕೋಶ, ಕಂದಾಯ ಇಲಾಖೆ

DIPR/CP/SPAN/3572(c)/2023-24

ಕೃಷಿ ವಿಶ್ವವಿದ್ಯಾನಿಲಯ
ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೇ., ಬೆಂಗಳೂರು–560065

ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/147/2023–24 ದಿ:12–02–2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು ಕ್ರಮ ಸಂಖ್ಯೆ 1 ರಿಂದ 3 ರ ವರೆವಿಗೆ ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–1, ಮತ್ತು ಕೆ.ಜಿ–2 ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮುಖಾಂತರ ಬಾಗವಹಿಸಬಹುದು. ಕೆ.ಜಿ–1 ಮತ್ತು ಕೆ.ಜಿ–2, ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೊಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 26–02–2024 ಸಂಜೆ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:28–02–2024 ಸಮಯ ಬೆಳಗ್ಗೆ 10.30 ಕ್ಕೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ 04–03–2024 ಬೆಳಗ್ಗೆ 10.30, ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ www.uasbangalore.edu.in or https://kppp.karnataka.gov.in ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 91–8046010000, +91–8068948777 ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ.ಎಸ್. ಜಿ.ಕೆ.ವಿ.ಕೆ., ಬೆಂಗಳೂರು–560065. ದೂರವಾಣಿ ಸಂಖ್ಯೆ: 080–23630128 ಸಂಪರ್ಕಿಸಿ. ದ್ವಿ ಲಕೋಟೆ ಪದ್ಧತಿಯ ಅಡಿಯಲ್ಲಿ ಟೆಂಡರನ್ನು ಕರೆಯಲಾಗಿದ್ದು ಮತ್ತು ದ್ವಿ ಲಕೋಟೆ ಪದ್ಧತಿಯ ಷರತ್ತುಗಳು ಈ ಮೇಲಿನ ವೆಬ್‌ಸೈಟ್ ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ವಾಸಾಸಂಇ/ವಾಪ್ರ/ಜಿಎ/3592/2023–24 ಸಹಿ/– ಆಸ್ತಿ ಅಧಿಕಾರಿಗಳು

ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ
ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೆ.ಆರ್. ಪುರಂ, ಬೆಂಗಳೂರು.

ನಂ. ಪ್ರಾಸಾಅ/ಕೆ.ಆರ್.ಪುರ/ಕಟ್ಟಡ/2023–24 ದಿನಾಂಕ: 14.02.2024

ಇ-ಟೆಂಡರ್ ಪ್ರಕಟಣೆ

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೆ.ಆರ್.ಪುರ ಕಛೇರಿಯು ಭಟ್ಟರಹಳ್ಳಿ ಬಳಿ ಕಾರ್ಯನಿರ್ವಹಿಸುತ್ತಿದ್ದು, ಕಛೇರಿಯ ಭದ್ರತಾ ಕಾರ್ಯ (Office Security) ನಿರ್ವಹಣೆಗೆ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್ಜಾಲ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: (Office Security) 080–460010000 / 080–68948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 27.02.2024ರ ಸಂಜೆ 4.30 ಗಂಟೆ ಆಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–25617951 / 9449864053ನ್ನು ಸಂಪರ್ಕಿಸಬಹುದು.

ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು ನಗರ ರವರ ಆದೇಶದ ಮೇರೆಗೆ
ಸಹಿ/– ಪ್ರಾದೇಶಿಕ ಸಾರಿಗೆ ಅಧಿಕಾರಿ
ಕೆ.ಆರ್. ಪುರ, ಬೆಂಗಳೂರು.

DIPR/CP/YC/3581/2023-24

ಕ–ರೈಡ್
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ಬೆಂಗಳೂರು ಉಪನಗರ ರೈಲ್ವೆ ಯೋಜನೆ

CIN: U60100KA2000SGC028171
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–10
Ph: +91 9036572939, Email: jgmelec@kride.in / electrical.kride@gmail.com

ಇ–ಟೆಂಡರ್ ಸೂಚನ ಸಂ. KRIDE/2023-24/EL/WORK_INDENT18 ದಿನಾಂಕ 14.02.2024

ಇ–ಟೆಂಡರ್ ಅಧಿಸೂಚನೆ

ಈ ಕೆಳಗಿನ ಕಾಮಗಾರಿಗಳಿಗಾಗಿ ಅನುಭವಿ ಸಂಸ್ಥೆಗಳಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.

“ಬೆಂಗಳೂರು ಉಪನಗರ ರೈಲು ಯೋಜನೆಯ ಉದ್ದೇಶಿತ ಕಾರಿಡಾರ್–1ರಲ್ಲಿ ಮರಗಳ ಎಣಿಕೆ ಮಾಡುವುದು, ಗುರುತು ಹಾಕುವುದು ಮತ್ತು ವರದಿ ತಯಾರಿಸುವುದು ”

ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 18.03.2024

ವಿವರಗಳಿಗಾಗಿ ಭೇಟಿ ನೀಡಿ: https://kppp.karnataka.gov.in ಅಥವಾ www.kride.in

ಸಹಿ/–
ಕಾರ್ಯಪಾಲಕ ನಿರ್ದೇಶಕರು ಸಿವಿಲ್

DIPR/CP/VCPL/3568/2022-23

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ)

ಬೆವಿಕಂ ಟೆಂಡರ್ ಸಂಖ್ಯೆ: ಬೆವಿಕಂ/2023–24/ಐಎನ್‌ಡಿ0056 ರ ಅನ್ವಯ ಬೆವಿಕಂಗೆ ಅಗತ್ಯವಿರುವ (LT Polyolefin Heat Shrinkable Tube Insulation covered ACSR Rabbit Conductor) ಕವರ್ಡ್ ವಾಹಕವನ್ನು ಖರೀದಿಸಲು ಅರ್ಹ ಬಿಡ್ಡುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ 16.02.2024 3.00 ಗಂಟೆಗೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 01.03.2024, ಮಧ್ಯಾಹ್ನ 3.00 ಗಂಟೆಯವರೆಗೆ. ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: 02.03.2024 ಮಧ್ಯಾಹ್ನ 3.15 ಗಂಟೆಗೆ.

ಟೆಂಡರ್‌ನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಪಡೆಯಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ ಸಹಾಯವಾಣಿ ಸಂಖ್ಯೆ: 080–46010000, 080–68948777 ಅಥವಾ ಇ–ಮೇಲ್: support@eprochelpdesk.com

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಪ್ರಧಾನ ವ್ಯವಸ್ಥಾಪಕರು (ಖ),
ಖರೀದಿ, ಬೆವಿಕಂ, ಕೆ.ಆರ್. ವೃತ್ತ,
ಬೆಂಗಳೂರು – 560 001.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತ ಸೌಕರ್ಯ, ಬೊಮ್ಮನಹಳ್ಳಿ ವಿಭಾಗ, 2ನೇ ಮಹಡಿ, ಬಿಡಿಎ ಕಾಂಪ್ಲೆಕ್ಸ್, ಸೆಕ್ಟರ್–6, ಹೆಚ್‌ಎಸ್‌ಆರ್ ಬಡಾವಣೆ, ಬೆಂಗಳೂರು – 560102.

ಸಂಖ್ಯೆ: ಕಾಪಾಅ/ರಮೂಸೌ–ಬೊಮ್ಮನಹಳ್ಳಿ/ಟೆಂಡರ್/02/2023–24 ದಿನಾಂಕ: 14.02.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ–ಬೊಮ್ಮನಹಳ್ಳಿ ವಿಭಾಗ, ಬೃ.ಬೆಂ.ಮ.ಪಾ, ಬೆಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ ಜಿಎಸ್‌ಟಿ ಸೇರಿದಂತೆ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
ಆರ್‌ಎಂಪಿ–2015 ರಂತೆ ಬೇಗೂರು ಪೊಲೀಸ್ ಠಾಣೆಯಿಂದ ಬೇಗೂರು ಕೊಪ್ಪ ರಸ್ತೆಯವರೆಗೆ 24.00 ಮೀಟರ್ ಅಗಲದ ಸಂಪರ್ಕ ರಸ್ತೆಯನ್ನು ರಚನೆ (Formation) ಮಾಡುವುದು.	958.08	ರೂ. 14.38 (ರೂ. 1.00 ಲಕ್ಷ ಇ–ಪಾವತಿ ಮೂಲಕ ಮತ್ತು ಉಳಿಕೆ ಮೊತ್ತ ರೂ. 13.38 ಲಕ್ಷಗಳು ಇ–ಬ್ಯಾಂಕ್ ಗ್ಯಾರಂಟಿ ಮೂಲಕ]

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 15.02.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 23.02.2024ರ ಸಂಜೆ 4:00 ಗಂಟೆಯವರೆಗೆ (3) ಬಿಡ್ ಪೂರ್ವ ಸಭೆಯನ್ನು ಪ್ರಧಾನ ಅಭಿಯಂತರರ ಕಚೇರಿ, ಇಲ್ಲಿ ದಿನಾಂಕ 17.02.2024ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 26.02.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಸ್ತೆ ಮೂಲಭೂತಸೌಕರ್ಯ–ಬೊಮ್ಮನಹಳ್ಳಿ ವಿಭಾಗ

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222 ಇ–ಮೇಲ್: sitodirector@gmail.com

ಸಂಖ್ಯೆ: SGITO/e-Auction/FD/21/2023-24 ದಿನಾಂಕ: 13.02.2024

ಇ–ಆಕ್ಷನ್ ಪ್ರಕಟಣೆ

ವಿಷಯ: ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ವಿವಿಧ ಬಾಬ್ತಿನ ಮೊತ್ತವನ್ನು ಒಂದು ವರ್ಷದ ಅವಧಿಗೆ ಇ–ಆಕ್ಷನ್ ಮೂಲಕ ನಿಶ್ಚಿತ ಠೇವಣಿ / Callable / Non-callable ನಲ್ಲಿ ತೊಡಗಿಸಲು ಇ–ಟೆಂಡರ್ ಮೂಲಕ ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ವಿವಿಧ ಬಾಬ್ತಿನ ಮೊತ್ತಗಳಿಗೆ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಕೆಪಿಪಿಪಿ ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ. ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿ ದರವನ್ನು ಆಹ್ವಾನಿಸಲಾಗಿದೆ. ಮೊತ್ತಗಳ ವಿವರ ಕೆಳಕಂಡಂತಿದೆ.

1) ರೂ.7.50 ಕೋಟಿ (ರೂಪಾಯಿ ಏಳು ಕೋಟಿ ಐವತ್ತು ಲಕ್ಷಗಳು ಮಾತ್ರ) (Non-callable)
2) ರೂ.2.85 ಕೋಟಿ (ರೂಪಾಯಿ ಎರಡು ಕೋಟಿ ಎಂಭತ್ತೈದು ಲಕ್ಷಗಳು ಮಾತ್ರ) (Non-callable)
3) ರೂ.5.21 ಕೋಟಿ (ರೂಪಾಯಿ ಐದು ಕೋಟಿ ಇಪ್ಪತ್ತೊಂದು ಲಕ್ಷಗಳು ಮಾತ್ರ) (Callable)

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (https://kppp.karnataka.gov.in/) ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 20.02.2024 ಸಂಜೆ 4:00 ರೊಳಗಾಗಿ. ಹೆಚ್ಚಿನ ವಿವರಗಳಿಗಾಗಿ ಮುಖ್ಯ ಆಡಳಿತಾಧಿಕಾರಿಗಳನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು,
ಸಂಜಯಗಾಂಧಿ ಟ್ರಾಮ ಮತ್ತು
ಅಸ್ಥಿ ಚಿಕಿತ್ಸಾ ಸಂಸ್ಥೆ

ಡಿ.ಐ.ಪಿ.ಆರ್/3585/2023–24

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
E-mail: eepwdmys21@gmail.com
Ph.No. & Fax No. 0821 -2420810

ಈ ಕಛೇರಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:10/2023–24 ದಿನಾಂಕ: 09.02.2024

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಲೆಕ್ಕ ಶೀರ್ಷಿಕೆ: 3054–03–337–0–05–200 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ ಅಡಿಯಲ್ಲಿ ಅನುಮೋದನೆಯಾದ 02 ಸಂಖ್ಯೆ ಕಾಮಗಾರಿಗಳಿಗೆ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) 12.02.2024 ರಿಂದ 19.02.2024ರ ಸಂಜೆ 17:00ರ ವರೆಗೆ ಸಲ್ಲಿಸಬಹುದಾಗಿರುತ್ತದೆ. ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.156.84ಲಕ್ಷ ಹಾಗೂ ಕನಿಷ್ಠ ಇ.ಎಂ.ಡಿ ರೂ.2,35,270/–ಗಳು ಮತ್ತು ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.161.93 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ರೂ.2,42,900/–ಗಳಾಗಿರುತ್ತದೆ. ಸದರಿ ಕಾಮಗಾರಿಗೆ ಪೂರ್ವಭಾವಿ ಸಭೆಯನ್ನು ದಿ: 15.02.2024 ರಂದು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಪೂರ್ವಾಹ್ನ 11.00 ಕ್ಕೆ ನಿಗಧಿಪಡಿಸಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

DIPR/DDMYS/KSMCA/1073/2023-24 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರಕಾರ
ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ,
ಮಂಗಳೂರು ವೃತ್ತ, ಅರಣ್ಯ ಭವನ, ಅಳಪೆ, ಪಡೀಲ್, ಮಂಗಳೂರು – 575007.

ಸಂಖ್ಯೆ:ಎ4/ಸಿಬ್ಬಂದಿ/ ಅ.ವೀ.ನೇ.ನೇ./ವಿವ.31/2023–24 ದಿನಾಂಕ: 16.09.2023

ಪ್ರಕಟಣೆ

2023–24ನೇ ಸಾಲಿನಲ್ಲಿ 20 (ಇಪ್ಪತ್ತು) ಅರಣ್ಯ ವೀಕ್ಷಕ ಗ್ರೂಪ್ ಡಿ ಹುದ್ದೆಗಳಿಗೆ ನೇರ ನೇಮಕಾತಿ

ಮಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ ಅಧಿಸೂಚಿಸಲಾದ 20 ಅರಣ್ಯ ವೀಕ್ಷಕ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಈಗಾಗಲೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳನ್ವಯ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test]ಗಳಿಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ: ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗಿದೆ ಹಾಗೂ ಪ್ರತೀ ಪ್ರವರ್ಗದಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಕೊನೆಯ ಅಭ್ಯರ್ಥಿಯು ಗಳಿಸಿರುವ ಅಂಕಗಳ ಶೇಕಡವಾರು ಮಾಹಿತಿಯ ವಿವರವನ್ನು ಪ್ರಕಟಿಸಲಾಗಿದೆ.

ಈ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಪೂರಕ ದಾಖಲಾತಿಗಳೊಂದಿಗೆ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಇ–ಮೇಲ್ ccfmng@yahoo.com/ ಸ್ಪೀಡ್ ಪೋಸ್ಟ್/ ರಿಜಿಸ್ಟರ್ ಪೋಸ್ಟ್ ಮೂಲಕ ಈ ಕಛೇರಿಗೆ ದಿನಾಂಕ: 20-02-2024ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ.

ಈ ಮೇಲೆ ನಿಗದಿಪಡಿಸಿದ ದಿನಾಂಕದ ನಂತರ ಮತ್ತು ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಇತರೆ ವಿಧಾನ/ಕೊರಿಯರ್ ಮೂಲಕ ಸ್ವೀಕೃತವಾಗುವ ಹಾಗೂ ಅಸ್ಪಷ್ಟ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ 1:20 (ಹುದ್ದೆ: ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಯಾರಿಂದಲೂ ಸ್ವೀಕೃತವಾಗದಿದ್ದಲ್ಲಿ, ಸದರಿ ತಾತ್ಕಾಲಿಕ ಪಟ್ಟಿಯನ್ನು ಸರಿಯಾಗಿದೆ ಎಂದು ಪರಿಗಣಿಸಲಾಗುವುದು. ಇನ್ನು ಮುಂದೆ, ಈ ಕುರಿತು ಯಾವುದೇ ಆಕ್ಷೇಪಣೆಗಳನ್ನು ಯಾರಿಂದಲೂ ಸ್ವೀಕರಿಸಲಾಗುವುದಿಲ್ಲ.

ಸಹಿ/-
ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ
ಮಂಗಳೂರು ವೃತ್ತ, ಮಂಗಳೂರು

DIPR / MNG /1315/ MPL / 23-24

ಕರ್ನಾಟಕ ಸರ್ಕಾರ (ಜಲ ಸಂಪನ್ಮೂಲ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ ನಂ. 1,
ನೀರಾವರಿ ತನಿಖಾ ವಿಭಾಗ, ಕಾವೇರಿ ಭವನ ಸಂಕೀರ್ಣ, ಗೋಕುಲಂ
4ನೇ ಹಂತ, ಮೈಸೂರು–20. ಫೋನ್ : 0821–2411420

ಅಲ್ಪಾವಧಿ ಟೆಂಡರ್ ಪ್ರಕಟಣೆ ನಂ.: 10/2023–24 ದಿ: 13–02–2024

ಕಾರ್ಯಪಾಲಕ ಇಂಜಿನಿಯರ್, ನಂ. 1, ನೀರಾವರಿ ತನಿಖಾ ವಿಭಾಗ, ಮೈಸೂರು ಇವರು ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರ ಪರವಾಗಿ ಮೈಸೂರು ವಿಭಾಗದಲ್ಲಿ ಈ ಕೆಳಕಂಡ ಕೆಲಸಕ್ಕೆ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್ ಜೊತೆ ಲಗತ್ತಿಸುವುದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ : +91 8046010000 ರಿಂದ ಮಾಹಿತಿ ಪಡೆಯಬಹುದು ಮತ್ತು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು.

ಕ್ರ ಸಂ.	ಸೇವೆಯ ಹೆಸರು	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ (ರೂ. ಗಳಲ್ಲಿ)	ಷರಾ
1.	ರಾಷ್ಟ್ರೀಯ ಜಲ ವಿಜ್ಞಾನ ಯೋಜನೆಯ ಎಸ್.ಪಿ.ಎಂ.ಯು ಕಚೇರಿಗೆ 2023–24, 2024–25 ಮತ್ತು 2025–26 ನೇ ಸಾಲಿಗೆ ವಿವಿಧ ಕೆಟಗರಿಯ ಮಾನವ ಸಂಪನ್ಮೂಲಗಳನ್ನು ಒದಗಿಸುವ ಕೆಲಸ	36,32,087.00	Services
2.	Supply and installation of IT equipment for FY 2023-2024 under NHP (Call-2)	43,06,637.00	Goods
3.	Annual O&M of Equipment/ Station for the year 2023-2024 under NHP	500000.00	Goods

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ದಿ: 13–02–2024 ರ ಸಂಜೆ 4.00 ಗಂಟೆ ನಂತರ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆ ದಿ: 20–02–2024, ಅಪರಾಹ್ನ 4.00 ಗಂಟೆ, ಬಿಡ್ ತೆರೆಯುವ ದಿ: 21–02–2024 ಅಪರಾಹ್ನ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಧಾರವಾಡ. ದೂರವಾಣಿ: 0836–2448310
ಇ–ಮೇಲ್: eemidivdwd@yahoo.com / dwd@rediffmail.com

ಸಂಖ್ಯೆ: 30/2023–24 ದಿನಾಂಕ: 14–02–2024

ಟೆಂಡರ್ ಪ್ರಕಟಣೆ (ಐಎಫ್‌ಟಿ) (ಕೆಡಬ್ಲ್ಯೂ–1, 2, 3 & 4)
(ಏಕ ಮತ್ತು ದ್ವಿ–ಲಕೋಟೆ ಪದ್ಧತಿ)

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೋಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ ಧಾರವಾಡ / ಗದಗ / ರಾಣೆಬೆನ್ನೂರು / ಹಾವೇರಿ ಉಪವಿಭಾಗದ ಈ ಕೆಳಗಿನ ಕಾಮಗಾರಿಗಳನ್ನು ಕೆ.ಡಬ್ಲ್ಯೂ–1, 2, 3 & 4 (ಏಕ ಮತ್ತು ದ್ವಿ–ಲಕೋಟೆ) ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದೆ. ಲೆಕ್ಕ ಶೀರ್ಷಿಕೆ: ನಬಾರ್ಡ ಆರ್‌ಐಡಿಎಫ್ – 29 ಕೆರೆಗಳ ಆಧುನೀಕರಣ – ಪ್ರಧಾನ ಕಾಮಗಾರಿಗಳು (ಒಟ್ಟು 02 ಕಾಮಗಾರಿಗಳು); ನಬಾರ್ಡ ಆರ್‌ಐಡಿಎಫ್ – 29 ಆಣೆಕಟ್ಟು ಮತ್ತು ಪಿಕಪ್ – ಪ್ರಧಾನ ಕಾಮಗಾರಿಗಳು (ಒಟ್ಟು 05 ಕಾಮಗಾರಿಗಳು); 4702 – ಕೆರೆಗಳ ಆಧುನೀಕರಣ – ಪ್ರಧಾನ ಕಾಮಗಾರಿಗಳು (ಒಟ್ಟು 14 ಕಾಮಗಾರಿಗಳು); 4702 – ಆಣೆಕಟ್ಟು ಮತ್ತು ಪಿಕಪ್ – ಪ್ರಧಾನ ಕಾಮಗಾರಿಗಳು (ಒಟ್ಟು 15 ಕಾಮಗಾರಿಗಳು); 4702 – ಏತ ನೀರಾವರಿ ಯೋಜನೆ – ಪ್ರಧಾನ ಕಾಮಗಾರಿ (ಒಟ್ಟು 01 ಕಾಮಗಾರಿ); 4702 – ಪ್ರವಾಹ ನಿಯಂತ್ರಣ ಕಾಮಗಾರಿ (ಒಟ್ಟು 04 ಕಾಮಗಾರಿ); ಅಟಲ್ ಭೂಜಲ್ ಯೋಜನೆ ಕಾಮಗಾರಿಗಳು (ಒಟ್ಟು 06 ಕಾಮಗಾರಿಗಳು); 4702 – ಗಿರಿಜನ ಉಪ ಯೋಜನೆ ಕಾಮಗಾರಿಗಳು (ಒಟ್ಟು 01 ಕಾಮಗಾರಿಗಳು); ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. 500.00 ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ. 7.50 ಲಕ್ಷಗಳು; ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. 2.54 ಲಕ್ಷಗಳು; ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ. 6000.00; ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: https://kppp.karnataka.gov.in ನಲ್ಲಿ ದಿನಾಂಕ: 16–02–2024 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ: 23–02–2024 ರಂದು 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 26–02–2024 ರಂದು ಸಂಜೆ 17.45 ಗಂಟೆಗೆ ತೆರೆಯಲಾಗುವುದು.

ವಿ.ಸೂ: ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ / ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಧಾರವಾಡ.

ವಾಸಾಸಂಇ/ಧಾರವಾಡ/796/ಅಡ್ವರ್ಟೋ/2023–24

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ರವರ ಕಛೇರಿ,
ಬೆಂಗಳೂರು ವೃತ್ತ, ಬೆಂಗಳೂರು.

ಅಧಿಸೂಚನೆ ಸಂಖ್ಯೆ: ಎ5/ಮುಅಸಂ(ಪ್ರಾ)/ಸಿಬ್ಬಂದಿ/ ಸಿಆರ್–29/2023–24, ದಿನಾಂಕ: 16.09.2023 ರಂತೆ

2023-24ನೇ ಸಾಲಿನಲ್ಲಿ 33 ಅರಣ್ಯ ವೀಕ್ಷಕ ಗ್ರೂಪ್ ‘ಡಿ’ ವೃಂದದ ಹುದ್ದೆಗಳಿಗೆ 1:20 ತಾತ್ಕಾಲಿಕ ಅರ್ಹತಾ ಪಟ್ಟಿ

ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2019ರನ್ವಯ ಅರಣ್ಯ ವೀಕ್ಷಕ ವೃಂದಕ್ಕೆ ಸಂಬಂಧಿಸಿದಂತೆ ಅರಣ್ಯ ಸಂರಕ್ಷಣಾಧಿಕಾರಿಗಳು ಆಯ್ಕೆ ಪ್ರಾಧಿಕಾರವಾಗಿರುತ್ತಾರೆ.

ಅದರನ್ವಯ ಬೆಂಗಳೂರು ವೃತ್ತಕ್ಕೆ ಸಂಬಂಧಿಸಿದಂತೆ ಅಧಿಸೂಚಿಸಲಾದ 33 ಅರಣ್ಯ ವೀಕ್ಷಕ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಈಗಾಗಲೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳನ್ವಯ ದೈಹಿಕ ತಾಳ್ವಿಕೆ ಪರೀಕ್ಷೆ (Physical Endurance Test), ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ (Physical Efficiency Test) ಹಾಗೂ ದೇಹದಾರ್ಢ್ಯತೆ ಪರೀಕ್ಷೆ (Physical Standard Test)ಗಳಿಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗಿದೆ ಹಾಗೂ ಪ್ರತೀ ಪ್ರವರ್ಗದಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಕೊನೆಯ ಅಭ್ಯರ್ಥಿಯು ಗಳಿಸಿರುವ ಅಂಕಗಳ ಶೇಕಡವಾರು ಮಾಹಿತಿಯ ವಿವರವನ್ನು ಪ್ರಕಟಿಸಲಾಗಿದೆ. ಈ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಪೂರಕ ದಾಖಲಾತಿಗಳೊಂದಿಗೆ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಇ–ಮೇಲ್ “cfbangalore.hg@gmail.com”/ ಸ್ಪೀಡ್ ಪೋಸ್ಟ್ / ರಿಜಿಸ್ಟರ್ ಪೋಸ್ಟ್ ಮೂಲಕ ಈ ಕಛೇರಿಗೆ ದಿನಾಂಕ: 20.02.2024ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ. ಈ ಮೇಲೆ ನಿಗದಿಪಡಿಸಿದ ದಿನಾಂಕದ ನಂತರ ಮತ್ತು ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಇತರೆ ವಿಧಾನ/ಕೊರಿಯರ್ ಮೂಲಕ ಸ್ವೀಕೃತವಾಗುವ ಹಾಗೂ ಅಸ್ಪಷ್ಟ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಯಾರಿಂದಲೂ ಸ್ವೀಕೃತವಾಗದಿದ್ದಲ್ಲಿ ಸದರಿ ತಾತ್ಕಾಲಿಕ ಪಟ್ಟಿಯನ್ನು ಸರಿಯಾಗಿದೆ ಎಂದು ಪರಿಗಣಿಸಲಾಗುವುದು. ಇನ್ನು ಮುಂದೆ, ಈ ಕುರಿತು ಯಾವುದೇ ಆಕ್ಷೇಪಣೆಗಳನ್ನು ಯಾರಿಂದಲೂ ಸ್ವೀಕರಿಸಲಾಗುವುದಿಲ್ಲ.

ದಿನಾಂಕ: 14.02.2024 ಸಹಿ/– ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ
ಬೆಂಗಳೂರು ವೃತ್ತ, ಬೆಂಗಳೂರು

DIPR/CP/YC/3583/2023-24

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ.
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ / ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರರವರ ಕಛೇರಿ, ಬಳ್ಳಾರಿ ವೃತ್ತ, ಬಳ್ಳಾರಿ.

ಅಧಿಸೂಚನೆ ಸಂಖ್ಯೆ:ಎ4/ಸಿಬ್ಬಂದಿ/ನೇನೇ/ಅ.ವೀ/ಸಿಆರ್–36/2023–24,
ದಿನಾಂಕ: 15.09.2023 ರಂತೆ

2023–24ನೇ ಸಾಲಿನಲ್ಲಿ 20(ಇಪ್ಪತ್ತು) ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದದ ಅರಣ್ಯ ವೀಕ್ಷಕ ಗ್ರೂಪ್ ‘ಡಿ’ ಹುದ್ದೆಗಳಿಗೆ ನೇರ ನೇಮಕಾತಿ ಪ್ರಕಟಣೆ

ಸರ್ಕಾರದ ಅಧಿಸೂಚನೆಸಂಖ್ಯೆ: FEE 203 FEG 2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯಇಲಾಖಾಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಅರಣ್ಯ ವೀಕ್ಷಕ ವೃಂದಕ್ಕೆ ಸಂಬಂಧಿಸಿದಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿಗಳು ಆಯ್ಕೆ ಪ್ರಾಧಿಕಾರವಾಗಿರುತ್ತಾರೆ.

ಅದರನ್ವಯ, ಬಳ್ಳಾರಿ ವೃತ್ತಕ್ಕೆ ಸಂಬಂಧಿಸಿದಂತೆ ಅಧಿಸೂಚಿಸಲಾದ 20(ಇಪ್ಪತ್ತು) ಅರಣ್ಯ ವೀಕ್ಷಕ ಹುದ್ದೆಗಳಿಗೆ ಆನ್ಲೈನ್ ಮೂಲಕ ಈಗಾಗಲೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ.

ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳನ್ವಯ ದೈಹಿಕತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test]ಗಳಿಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗಿದೆ ಹಾಗೂ ಪ್ರತೀ ಪ್ರವರ್ಗದಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಕೊನೆಯ ಅಭ್ಯರ್ಥಿಯು ಗಳಿಸಿರುವ ಅಂಕಗಳ ಶೇಕಡವಾರು ಮಾಹಿತಿಯ ವಿವರವನ್ನು ಪ್ರಕಟಿಸಲಾಗಿದೆ.

ಈ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಪೂರಕದಾಖಲಾತಿಗಳೊಂದಿಗೆ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಇ–ಮೇಲ್ “ccfbellary@gmail.com”/ಸ್ಪೀಡ್ ಪೋಸ್ಟ್/ ರಿಜಿಸ್ಟರ್ ಪೋಸ್ಟ್ ಮೂಲಕ ಈ ಕಛೇರಿಗೆ ದಿನಾಂಕ:20–02–2024ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ.

ಈ ಮೇಲೆ ನಿಗದಿಪಡಿಸಿದ ದಿನಾಂಕದ ನಂತರ ಮತ್ತು ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಇತರೆ ವಿಧಾನ/ಕೊರಿಯರ್ ಮೂಲಕ ಸ್ವೀಕೃತವಾಗುವ ಹಾಗೂ ಅಸ್ಪಷ್ಟ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಯಾರಿಂದಲೂ ಸ್ವೀಕೃತವಾಗದಿದ್ದಲ್ಲಿ, ಸದರಿ ತಾತ್ಕಾಲಿಕ ಪಟ್ಟಿಯನ್ನು ಸರಿಯಾಗಿದೆ ಎಂದು ಪರಿಗಣಿಸಲಾಗುವುದು. ಇನ್ನುಮುಂದೆ, ಈ ಕುರಿತು ಯಾವುದೇ ಆಕ್ಷೇಪಣೆಗಳನ್ನು ಯಾರಿಂದಲೂ ಸ್ವೀಕರಿಸಲಾಗುವುದಿಲ್ಲ.

ದಿನಾಂಕ:14–02–2024

ಸಹಿ/– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಬಳ್ಳಾರಿ ವೃತ್ತ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/841/ಕೆಎಸ್‌ಎಂಸಿಎ/2023–24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಜ್ಞಾನವೆಂಬ ದೀಪವನ್ನು ಉರಿಸಿ ನಿಮ್ಮ ಹೃದಯ ಮಂಟಪ ಪ್ರಕಾಶಿಸುವಂತೆ ಮಾಡಿ.

-ಸಂತ ಕಬೀರ

ಗೆಹಲೋತ್ ನಡೆ ಅಭಿನಂದನೀಯ ರಾಜ್ಯಪಾಲ ರವಿ ವರ್ತನೆ ಖಂಡನೀಯ

ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವವರನ್ನು ವಿರೋಧಿಸುವ ರಾಜಕೀಯ ಪಕ್ಷದ ಆಡಳಿತ ಇರುವ ರಾಜ್ಯಗಳ ರಾಜ್ಯಪಾಲರು ಅಲ್ಲಿನ ವಿಧಾನಮಂಡಲವನ್ನು ಉದ್ದೇಶಿಸಿ ಮಾಡುವ ಸಾಂಪ್ರದಾಯಿಕ ಭಾಷಣಗಳು ವಿವಾದಗಳಿಗೆ ಕಾರಣವಾಗುತ್ತಿರುವ ಸಂದರ್ಭ ಇದು. ಕೆಲವು ರಾಜ್ಯಪಾಲರು ನಡೆದುಕೊಂಡ ಬಗೆ ಇದಕ್ಕೆ ಕಾರಣ. ಇಂತಹ ಹೊತ್ತಿನಲ್ಲಿ ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ರಾಜ್ಯದ ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣವು ಹರ್ಷ ಮೂಡಿಸುವಂತಿದ್ದು, ಗೆಹಲೋತ್ ಅವರು ಸಾಂವಿಧಾನಿಕ ನಿಯಮಗಳು ಹಾಗೂ ಸ್ಫೂರ್ತಿಗೆ ತಕ್ಕಂತೆ ನಡೆದುಕೊಂಡಿದ್ದಾರೆ. ಇದು ಸ್ವಾಗತಾರ್ಹ. ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಅಲ್ಲಿನ ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವ ಸಂದರ್ಭದಲ್ಲಿ ನಡೆದುಕೊಂಡ ಬಗೆಗೆ ಹೋಲಿಸಿದರೆ, ಗೆಹಲೋತ್ ಅವರ ನಡೆ ಗಮನ ಸೆಳೆಯುತ್ತದೆ. ಗೆಹಲೋತ್ ಅವರು ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಪೂರ್ತಿಯಾಗಿ ಓದಿದ್ದಾರೆ. ಅದರಲ್ಲಿ ಯಾವ ಅಂಶವನ್ನೂ ಅವರು ಬಿಟ್ಟಿಲ್ಲ, ಆ ಭಾಷಣಕ್ಕೆ ಹೊಸದಾಗಿ ಅವರು ಏನನ್ನೂ ಸೇರಿಸುವ ಕೆಲಸ ಮಾಡಿಲ್ಲ. ಅಲ್ಲದೆ, ಭಾಷಣದಲ್ಲಿನ ವಸ್ತು-ವಿಷಯಗಳ ಬಗ್ಗೆ ಯಾವ ಆಕ್ಷೇಪವನ್ನೂ ಅವರು ನೀಡಿಲ್ಲ. ಗೆಹಲೋತ್ ಅವರ ನಡೆಯಲ್ಲಿ ಕೆಡುಕು ಇರಲಿಲ್ಲ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಬಗ್ಗೆ, ಅದರ ಪರಿಣಾಮಗಳ ಬಗ್ಗೆ ಮೆಚ್ಚುಗೆಯ ಮಾತುಗಳು ಭಾಷಣದಲ್ಲಿ ಇತ್ತು. ಕೇಂದ್ರ ಸರ್ಕಾರದ ನೀತಿಗಳ ವಿಚಾರವಾಗಿ ಟೀಕೆ ಕೂಡ ಆ ಭಾಷಣದಲ್ಲಿ ಇತ್ತು. ಕೇಂದ್ರ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸಿದೆ, ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯ ಎಸಗಿದೆ ಎಂಬ ಮಾತುಗಳನ್ನು ಕೂಡ ಭಾಷಣವು ಸ್ಪಷ್ಟವಾಗಿ ಹೇಳಿದೆ.

ರಾಜ್ಯಪಾಲರು ರಾಷ್ಟ್ರಪತಿಯವರ ಪ್ರತಿನಿಧಿ ಆಗಿರುತ್ತಾರೆಯೇ ವಿನಾ ಕೇಂದ್ರ ಸರ್ಕಾರದ ರಾಜಕೀಯ ಪ್ರತಿನಿಧಿ ಆಗಿರುವುದಿಲ್ಲ

ತಮ್ಮ ನೀತಿಗಳನ್ನು, ಸಾಮಾಜಿಕ ಮತ್ತು ರಾಜಕೀಯ ನಿಲುವುಗಳನ್ನು ರಾಜ್ಯಪಾಲರ ಭಾಷಣದ ಮೂಲಕ ಹೇಳುವ ಅಧಿಕಾರವು ರಾಜ್ಯ ಸರ್ಕಾರಗಳಿಗೆ ಇದೆ. ಕೇಂದ್ರ ಸರ್ಕಾರದ ನೀತಿಗಳ ಹಾಗೂ ಕಾಯ್ದೆಗಳ ಬಗ್ಗೆ ತನಗೆ ಒಪ್ಪಿಗೆ ಆಗದಿದ್ದರೆ ಅವುಗಳನ್ನು ಟೀಕಿಸುವ ಅಧಿಕಾರ ಕೂಡ ರಾಜ್ಯ ಸರ್ಕಾರಗಳಿಗೆ ಇದ್ದೇ ಇದೆ. ವಾಸ್ತವದಲ್ಲಿ ಆ ಭಾಷಣವು ರಾಜ್ಯ ಸರ್ಕಾರದ್ದು. ಆದರೆ, ಸರ್ಕಾರದ ಮುಖ್ಯಸ್ಥ ರಾಜ್ಯಪಾಲರು ಆಗಿರುವ ಕಾರಣ, ಆ ಭಾಷಣವನ್ನು ರಾಜ್ಯಪಾಲರು ಮಾಡುತ್ತಾರೆ. ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಭಾಷಣದಲ್ಲಿನ ಸ್ವಾಗತ ನಿಯಮಗಳನ್ನು ತುಸುವೂ ತಪ್ಪದೆ ಇದ್ದುದರ ಕಾರಣಕ್ಕಾಗಿ, ಅವರಿಗೆ ಅಭಿನಂದನೆಗಳು ಸಲ್ಲಬೇಕು.

ರಾಜ್ಯಗಳ ರಾಜ್ಯಪಾಲರು, ರಾಷ್ಟ್ರಪತಿಯವರ ಪ್ರತಿನಿಧಿ ಆಗಿರುತ್ತಾರೆಯೇ ವಿನಾ ಅವರು ಕೇಂದ್ರ ಸರ್ಕಾರದ ರಾಜಕೀಯ ಪ್ರತಿನಿಧಿ ಆಗಿರುವುದಿಲ್ಲ. ರಾಜ್ಯ ಸರ್ಕಾರವು ರಾಜಕೀಯ ಸಂಗತಿಗಳನ್ನು ಮಾತನಾಡಬಹುದು, ರಾಜಕೀಯ ನೆಲೆಯಲ್ಲಿ ಕ್ರಮಗಳನ್ನು ಕೈಗೊಳ್ಳಬಹುದು. ಆದರೆ ರಾಜ್ಯಪಾಲರು ರಾಜಕೀಯದಲ್ಲಿ ಭಾಗಿಯಾಗಬಾರದು. ಇಂದು ಯಾವುದಾದರೂ ರಾಜ್ಯದ ರಾಜ್ಯಪಾಲರು ಸರಿಯಾಗಿ ನಡೆದುಕೊಂಡರೆ ಅದು ಉಲ್ಲೇಖನೀಯ ಅಥವಾ ಶ್ಲಾಘನೀಯ ಅಂಶವಾಗಿ ಪರಿಣಮಿಸುತ್ತಿರುವುದು ಕಾಲದ ವ್ಯಂಗ್ಯ. ತಮಿಳುನಾಡಿನ ರಾಜ್ಯಪಾಲರು ಹಾಗೂ ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ತಮ್ಮ ಸ್ಥಾನಕ್ಕೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡರು. ಹೀಗಾಗಿಯೇ, ಕರ್ನಾಟಕದ ರಾಜ್ಯಪಾಲರ ನಡೆಯು ಪ್ರತ್ಯೇಕವಾಗಿ ನಿಲ್ಲುತ್ತದೆ.

ಕೇರಳ ಹಾಗೂ ತಮಿಳುನಾಡಿನ ರಾಜ್ಯಪಾಲರು ತಮಗೆ ನೀಡಿದ್ದ ಭಾಷಣದಲ್ಲಿನ ಕೆಲವು ವಾಕ್ಯಗಳನ್ನು ಮಾತ್ರ ಓದಿದರು. ವಿಧಾನಸಭೆಯಲ್ಲಿ ತಮ್ಮ ಉಪಸ್ಥಿತಿಯನ್ನು ಒಂದು ಪ್ರಹಸನದ ಮಟ್ಟಕ್ಕೆ ಇಳಿಸಿದರು. ಭಾಷಣದಲ್ಲಿ ತಪ್ಪುದಾರಿಗೆ ಎಳೆಯುವ ಅಂಶಗಳು ಇದ್ದವು ಎಂದು ರವಿ ಹೇಳಿದ್ದಾರೆ. ಅವುಗಳನ್ನು ಓದುವುದು ಸಂವಿಧಾನವನ್ನು ನಗೆಪಾಟಲಿಗೆ ಈಡುಮಾಡಿದಂತೆ ಎಂದು ಕೂಡ ಅವರು ಹೇಳಿದ್ದಾರೆ. ರವಿ ಅವರು ರಾಷ್ಟ್ರಗೀತೆ ನುಡಿಸುವ ಮೊದಲೇ ಸದನದಿಂದ ಹೊರನಡೆದದ್ದು ವಿವಾದವಾಗಿದೆ. ಕಳೆದ ವರ್ಷ ಕೂಡ ರವಿ ಅವರು ತಮ್ಮ ಭಾಷಣವನ್ನು ಸರಿಯಾದ ರೀತಿಯಲ್ಲಿ ಮಾಡಿರಲಿಲ್ಲ, ಅಲ್ಲದೆ, ಭಾಷಣದಲ್ಲಿ ತಮ್ಮದೇ ಮಾತುಗಳನ್ನು ಸೇರಿಸಲು ಯತ್ನಿಸಿದ್ದರು. ಕಳೆದ ವರ್ಷದಂತೆಯೇ, ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರವು ಕೇಂದ್ರದ ನೀತಿಗಳನ್ನು ಹಾಗೂ ಕ್ರಮಗಳನ್ನು ಈ ವರ್ಷವೂ ಟೀಕಿಸಿದೆ. ಟೀಕೆ ಇರುವ ಸಾಲುಗಳನ್ನು ರಾಜ್ಯಪಾಲರು ಓದಬೇಕಿತ್ತು. ಆದರೆ ಆ ಸಾಲುಗಳನ್ನು ಓದಲು ರಾಜ್ಯಪಾಲರು ನಿರಾಕರಿಸಿರುವುದು ಸಂವಿಧಾನವನ್ನು ನಗೆಪಾಟಲು ಮಾಡಿದ್ದಕ್ಕೆ ಸಮ. ರಾಜ್ಯಪಾಲರು ನಡೆದುಕೊಂಡ ಬಗೆಯು ಅಲ್ಲಿನ ವಿಧಾನಸಭೆಗೆ ಅಗೌರವ ತೋರಿಸಿದಂತೆ ಇದೆ. ಭಾಷಣದ ಬಗ್ಗೆ ಟೀಕೆಗಳನ್ನು ಮಾಡಲು ರಾಜ್ಯಪಾಲರಿಗೆ ಅಧಿಕಾರ ಇಲ್ಲ. ಆ ಅಧಿಕಾರ ಇರುವುದು ವಿರೋಧ ಪಕ್ಷಗಳಿಗೆ ಹಾಗೂ ಜನರಿಗೆ.

ಈ ವರ್ಷದ ಬರ ಸಂಕೀರ್ಣ ಸ್ವರೂಪದ್ದಾಗಿದ್ದು, ಗ್ರಾಮೀಣ ಬದುಕು ಗಂಭೀರ ಅಪಾಯಗಳಿಗೆ ಸಿಲುಕುತ್ತಿದೆ

ಬರದ ಬವಣೆ ಮರೆಸುವ ಭ್ರಮೆ

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ಸಂಕ್ರಾಂತಿ ಸಮಯದಲ್ಲಿ ಉತ್ತರ ಕರ್ನಾಟಕದ ಮುಂಡಗೋಡು ಹಾಗೂ ಹಾವೇರಿ ಜಿಲ್ಲೆಯ ಹಾನಗಲ್ ಪ್ರದೇಶದ ಹಳ್ಳಿಗಳಲ್ಲಿ ಸ್ಥಳಾಧ್ಯಯನ ಕೈಗೊಳ್ಳುವ ಸಂದರ್ಭ ಬಂದಿತ್ತು. ಸಹ್ಯಾದ್ರಿಯ ತೋಟಗಾರಿಕೆ ಹಾಗೂ ಬಯಲುನಾಡಿನ ಕಾಳು-ಬೇಳೆ ಬೇಸಾಯ ಇವೆರಡೂ ಬೆಸೆದ ಸಮೃದ್ಧ ಮಲೆನಾಡ ಸೆರಗಿನ ಪ್ರದೇಶವಿದು. ಆದರೆ, ಮುಂಗಾರಿನ ವೈಫಲ್ಯದಿಂದಾಗಿ ಅರ್ಧಬೆಳೆಯೂ ಕೈಸೇರದೆ ರೈತರು ಸೋತಿದ್ದರು. ಬೇಸಿಗೆ ಕಾಲಿಡುವ ಮುನ್ನವೇ ತಾಪಮಾನ ಹೆಚ್ಚಾಗಿ, ಮೇಲ್ಮಣ್ಣಿನ ತೇವಾಂಶ ಕುಗ್ಗಿ, ಬಹುತೇಕ ಪ್ರದೇಶದಲ್ಲಿ ಹಿಂಗಾರು ಬಿತ್ತನೆಯೂ ಆಗಿರಲಿಲ್ಲ. ಕೆರೆ ತೊರೆಗಳೆಲ್ಲ ಒಣಗಿ, ಎಲ್ಲೆಡೆಯೂ ಕುಡಿಯುವ ನೀರು ಹಾಗೂ ಮೇವಿನ ಕೊರತೆ ಕಾಣುತ್ತಿತ್ತು. ಕಂಗೆಟ್ಟ ಸಣ್ಣರೈತರು ಹಾಗೂ ಕೂಲಿವರ್ಗ ಗುಳೆ ಹೋಗುತ್ತಿದ್ದುದನ್ನು ಹಳ್ಳಿಗಳ ಬಸ್ ನಿಲ್ದಾಣಗಳು ಸಾರಿ ಹೇಳುತ್ತಿದ್ದವು. ರಾಜ್ಯದ 223 ತಾಲ್ಲೂಕುಗಳು ಬರಪೀಡಿತ ಎಂದೀಗ ರಾಜ್ಯ ಸರ್ಕಾರವೇ ಘೋಷಿಸಿದ್ದು, ಎಲ್ಲೆಡೆಯೂ ಇದೇ ವೇದನೆಯಿರಬೇಕು!

'ಬರ' ಆಗಾಗ ಮರುಕಳಿಸುವ ಸಹಜ ವಿದ್ಯಮಾನವೆಂಬ ಗ್ರಹಿಕೆ ಈವರೆಗಿತ್ತು. ಮಳೆಯ ಏರಿಳಿತದಿಂದಾಗಿ, ನೆರೆ-ಬರಗಳು ದಶಕದಲ್ಲೊಮ್ಮೆ ಆವರ್ತನೆಯಾಗುತ್ತಿದ್ದುದೂ ಹೌದು. ಆದರೆ ಈ ಬರ ಅಂತಹ ಸರಳ ಪರಿಸ್ಥಿತಿಯಲ್ಲ ಹಾಗೂ ಮಾನವ ನಿರ್ಮಿತ ಗಂಭೀರ ಅವಘಡ ಎಂಬುದನ್ನೀಗ ಅಧ್ಯಯನಗಳು ತೆರೆದಿಡುತ್ತಿವೆ. ಇದಕ್ಕೆ ಕಾರಣಗಳೂ ಸಂಕೀರ್ಣ, ಪರಿಹಾರಗಳೂ ಜಟಿಲ. ಇದನ್ನು ಗಮನಿಸದೆ, ಅನುದಾನ ಹಂಚಿಕೆಯೊಂದೇ ಸಮಸ್ಯೆಗಳಿಗೆಲ್ಲ ಪರಿಹಾರ ಎಂಬಂತೆ ಸರ್ಕಾರಗಳು ವರ್ತಿಸುತ್ತಿವೆ. ಬಹುಪಾಲು ಮಾಧ್ಯಮಗಳು ಹಾಗೂ ನಾಗರಿಕ ಸಮಾಜವೂ ಈ 'ವಾದವಿಲಾಸ'ಕ್ಕೆ ಮರುಳಾಗುತ್ತಿವೆ!

ಈ ಬರದ ಹಿಂದೆ ಎರಡು ಪ್ರಮುಖ ಕಾರಣಗಳನ್ನು ಗುರುತಿಸಬಹುದು. ಮೊದಲಿನದು, ಕೃಷಿ ಹಾಗೂ ಗ್ರಾಮೀಣ ಬದುಕನ್ನು ಪೋಷಿಸುವ 'ನೈಸರ್ಗಿಕ ನೆಲಗಟ್ಟು' ಕುಸಿದಿರುವುದು. ಹಿಂದಿನ ಮೂರ್ನಾಲ್ಕು ದಶಕಗಳಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಅವೈಜ್ಞಾನಿಕವಾಗಿ ನಿರ್ವಹಿಸಿದ್ದರ ಫಲವಿದು. ಕೆರೆ-ನದಿಗಳ ತಪ್ಪಲಿನ ಕಾಡು, ಗೋಮಾಳಗಳು ಅರಣ್ಯನಾಶ ಹಾಗೂ ಭೂಕಬಳಿಕೆಗೆ ಒಳಗಾದಂತೆಲ್ಲ, ಮಳೆನೀರು ಹಿಡಿದಿಡುವ ಮಣ್ಣಿನ ಸಾಮರ್ಥ್ಯ ಕಡಿಮೆಯಾಗಿ, ಜಲಮೂಲಗಳು ಮರುಪೂರಣವಾಗುತ್ತಿಲ್ಲ. ಮಣ್ಣಿನ ಸವೆತ ಹಾಗೂ ಕೃತಕ ರಾಸಾಯನಿಕಗಳಿಂದಾಗಿ, ಮೇಲ್ಮಣ್ಣು ಸಾರವಿಲ್ಲದೆ ನೈಸರ್ಗಿಕ ಸ್ಥಿತಿಸ್ಥಾಪಕತ್ವ ಗುಣವನ್ನೇ ಕಳೆದುಕೊಳ್ಳುತ್ತಿದೆ.

ಮಲೆನಾಡು ಹಾಗೂ ಕರಾವಳಿಯಲ್ಲಿ ಮಣ್ಣು ಅತಿಯಾಗಿ ಹುಳಿಯಾಗುತ್ತಿದ್ದರೆ, ಬಯಲುನಾಡಿನಲ್ಲಿ ಕ್ಷಾರ ಗುಣ ಹೆಚ್ಚುತ್ತಿದೆ. ಬೆಳೆಗಳಿಗೆ ಅಗತ್ಯವಿರುವ ಸಾವಯವ ಇಂಗಾಲ, ಸಾರಜನಕ, ರಂಜಕ, ಪೊಟ್ಯಾಷಿಯಂ, ಬೋರಾನ್, ಜಿಂಕ್‌ನಂತಹ ಪೋಷಕಾಂಶಗಳನ್ನು ಕನಿಷ್ಠ ಪ್ರಮಾಣದಲ್ಲಿ ಪೂರೈಸಲೂ ಮೇಲ್ಮಣ್ಣಿಗೆ ಸಾಧ್ಯವಾಗುತ್ತಿಲ್ಲ. ಇದರಿಂದಾಗಿ, ಗೊಬ್ಬರವೆಂದರೆ ಕೃತಕ ರಾಸಾಯನಿಕ ಸುರಿಯುವುದು ಹಾಗೂ ನೀರಾವರಿ ಎಂದರೆ ಕೊಳವೆಬಾವಿ ಆಶ್ರಯಿಸುವುದು ಎಂಬ ಅಪಾಯಕಾರಿ ಸಿದ್ಧಸೂತ್ರಕ್ಕೆ ಸಮಗ್ರ ಕೃಷಿ ಕ್ಷೇತ್ರವೇ ಮುಖಮಾಡುತ್ತಿದೆ. ಹೀಗಾಗಿ, ಕೃಷಿಭೂಮಿ ಒಂದು ವರ್ಷದ ಬರವನ್ನೂ ಸಹಿಸಿಕೊಳ್ಳಲಾರದಷ್ಟು ರೀತಿಯಲ್ಲಿ ತನ್ನ ಸಹಜ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದೆ.

ಈ ಬರದ ಹಿಂದಿನ ಇನ್ನೊಂದು ಕಾರಣವೆಂದರೆ, ಜಾಗತಿಕ ಹವಾಮಾನ ಬದಲಾವಣೆ. ಇದಕ್ಕೆ ಯಾರೆಲ್ಲ ಹೇಗೆ ಕಾರಣ ಎಂಬ ಚರ್ಚೆ ಏನೇ ಇರಲಿ, ಅದರ ದುಷ್ಪರಿಣಾಮವನ್ನು ಮಾತ್ರ ಎಲ್ಲರೂ ಎದುರಿಸಲೇಬೇಕಿದೆ. ಹೋದ ವರ್ಷದ ಜೂನ್-ಜುಲೈ ತಿಂಗಳುಗಳು ಹಿಂದಿನ ನೂರು ವರ್ಷಗಳಲ್ಲೇ ಅತಿ ತಾಪಮಾನ ಹೊಂದಿದ್ದವು ಎಂಬುದನ್ನು ಗಮನಿಸಿದರೆ, ಈ ಬರದ ಆರಂಭ ಆಗಲೇ ಆಗಿತ್ತು ಎಂಬುದನ್ನು ಗುರುತಿಸಬಹುದು. ತಾಪಮಾನ ಹೆಚ್ಚಿದಂತೆ ಕಾಡಿನ ಹಸಿರುಹೊದಿಕೆ ಕಡಿಮೆಯಾಗಿ, ಜೀವವೈವಿಧ್ಯ ಕುಸಿದು, ಮಳೆಚಕ್ರದಂತಹ ಪರಿಸರದ ಪ್ರಕ್ರಿಯೆಗಳೇ ಪಲ್ಲಟಗೊಳ್ಳುತ್ತಿವೆ. ಮೇಲ್ಮಣ್ಣಿನ ಸಂರಚನೆ ಧ್ವಂಸಗೊಂಡು, ಪರೋಪಕಾರಿ ಸೂಕ್ಷ್ಮಾಣುಜೀವಿಗಳೆಲ್ಲ ನಾಶವಾಗಿ, ಪ್ರಕೃತಿಯಲ್ಲಿ ಹುದುಗಿದ್ದ ರೋಗಕಾರಕ ಸೂಕ್ಷ್ಮಾಣುಜೀವಿಗಳು ಮುನ್ನೆಲೆಗೆ ಬರುತ್ತಿವೆ. ಪರಾಗಸ್ಪರ್ಶ, ಬೀಜಪ್ರಸರಣದಂತಹ ಪಾರಿಸರಿಕ ಸೇವೆಗಳು ಕುಸಿದು, ಕೃಷಿ ಸಸ್ಯಗಳ ಬೆಳವಣಿಗೆ ಹಾಗೂ ಇಳುವರಿ ಕುಸಿಯುತ್ತಿದೆ. ಹವಾಮಾನ ಬದಲಾವಣೆಗೆ ಕೃಷಿ ಕ್ಷೇತ್ರ ಬಲಿಯಾಗುತ್ತಿರುವ ಪರಿಯಿದು.

ಅಂದರೆ, ಬರ ಎಂಬುದು ಮಳೆ ಕೊರತೆಯಷ್ಟೇ ಅಲ್ಲ; ಸ್ಥಳೀಯ ಪ್ರಕೃತಿನಾಶ ಹಾಗೂ ಜಾಗತಿಕ ಹವಾಮಾನ ಬದಲಾವಣೆಗಳೆರಡೂ ಜೊತೆಯಾಗಿ ಸೃಷ್ಟಿಸಿರುವ ಗಂಭೀರ ಪರಿಸ್ಥಿತಿ. ಇದು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇರುವುದನ್ನು ಸಂಶೋಧನೆಗಳು ನಿರೂಪಿಸುತ್ತಿವೆ. ದೇಶದ ಆರ್ಥಿಕತೆಯ ಮೇಲೆ ಇದು ಭಾರಿ ನಕಾರಾತ್ಮಕ ಪರಿಣಾಮ ಬೀರುತ್ತಿರುವ ಕುರಿತು, ಕೇಂದ್ರ ಸರ್ಕಾರ ಪ್ರತಿವರ್ಷ ಪ್ರಕಟಿಸುವ 'ಆರ್ಥಿಕ ಸಮೀಕ್ಷೆ ವರದಿ'ಗಳು ಎಚ್ಚರಿಸುತ್ತಲೂ ಇವೆ. ಭಾರತದ ರಿಸರ್ವ್ ಬ್ಯಾಂಕ್ ಅಂತೂ, ಹದಗೆಡುತ್ತಿರುವ ಪರಿಸರ ಪರಿಸ್ಥಿತಿಯು ಕೃಷಿಯ ಉತ್ಪಾದನೆಯನ್ನು ಶೇ 25ರಷ್ಟು ಕುಂಠಿತಗೊಳಿಸುತ್ತಿರುವುದು ಹಾಗೂ ದೇಶದ ಜಿಡಿಪಿಯ ಶೇ 3ರಿಂದ 4ರಷ್ಟು ಭಾಗವನ್ನೇ ಕಸಿದುಕೊಳ್ಳುತ್ತಿರುವುದನ್ನು ಇತ್ತೀಚಿನ ವರದಿಯಲ್ಲಿ ತಿಳಿಸಿದೆ!



ಇವೆಲ್ಲವುಗಳಿಂದಾಗಿ, ಕೃಷಿ ಉತ್ಪಾದನೆಯು ದೇಶದ ಒಟ್ಟು ಜಿಡಿಪಿಯ ಶೇ 15ಕ್ಕೆ ಈಗಾಗಲೇ ಕುಸಿದಿರುವುದನ್ನು, ಮೊನ್ನೆಯ ಸಂಸತ್ ಅಧಿವೇಶನದಲ್ಲಿ ಕೇಂದ್ರ ಕೃಷಿ ಸಚಿವರೇ ಒಪ್ಪಿಕೊಂಡಿದ್ದಾರೆ. ಇದಕ್ಕೆ ಬರದ ಬವಣೆಯೂ ಜೊತೆಯಾದರೆ, ಕೃಷಿ ಉತ್ಪಾದನೆ ಇನ್ನೆಷ್ಟು ಆಳಕ್ಕೆ ಕುಸಿಯಬಹುದು? ದೇಶದ ಶೇ 60ರಿಂದ 65ರಷ್ಟು ಜನತೆ ಈಗಲೂ ಕೃಷಿ ಆರ್ಥಿಕತೆಯನ್ನೇ ಆಧರಿಸಿರುವಾಗ, ಇದು ಎಷ್ಟು ಆತಂಕಕಾರಿ ಬೆಳವಣಿಗೆಯಲ್ಲವೇ?

ಸರ್ಕಾರಕ್ಕೆ ಈ ಸಮಸ್ಯೆಯ ಆಳ-ಅಗಲ ಅರ್ಥವಾದರೆ ಮಾತ್ರ ಸೂಕ್ತ ಪರಿಹಾರಗಳು ಕಾಣಬಲ್ಲವು. ತಕ್ಷಣದ ಅಗತ್ಯವಿರುವ ನೀರು, ಮೇವು, ಆಹಾರ ಸಾಮಗ್ರಿಯಂತಹವುಗಳನ್ನು ಪೂರೈಸುವಂತೆ ಸ್ಥಳೀಯ ಸರ್ಕಾರಗಳನ್ನು ಚುರುಕುಗೊಳಿಸಬೇಕು. ಚುನಾಯಿತ ಪ್ರತಿನಿಧಿಗಳಿಲ್ಲದೆ ಸೊರಗಿರುವ ಜಿಲ್ಲಾ ಪಂಚಾಯಿತಿ ವ್ಯವಸ್ಥೆಯ ಅಧಿಕಾರಿಶಾಹಿಯನ್ನು ಎಚ್ಚರಿಸಬೇಕಿದೆ. ಪ್ರೋತ್ಸಾಹಧನ ಯೋಜನೆಗಳಲ್ಲೇ ಕಳೆದುಹೋಗಿರುವ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ರೈತರ ನೆರವಿಗೆ ಧಾವಿಸುವಂತೆ ಚುರುಕು ಮುಟ್ಟಿಸಬೇಕಿದೆ. ಇನ್ನು, ಕೆರೆ ಹೂಳೆತ್ತುವುದು, ಮೇವಿನಬೆಳೆ ಬೆಳೆಸುವುದು, ಜಲಾನಯನ ಅಭಿವೃದ್ಧಿ, ಹನಿ ನೀರಾವರಿ ವಿಸ್ತರಣೆ, ಗುಣಮಟ್ಟದ ಸಾವಯವ ಗೊಬ್ಬರ ತಯಾರಿಕೆಗೆ ಪ್ರೋತ್ಸಾಹ, ನದಿಪಾತ್ರ ಸಂರಕ್ಷಣೆಯಂತಹ ದೀರ್ಘಕಾಲೀನ ಯೋಜನೆಗಳನ್ನು ಜಾರಿಗೆ ತರುವುದರ ಮೂಲಕ ಭವಿಷ್ಯದ ಹಿತ ಕಾಯಬೇಕು. ಈ ಎರಡೂ ಆಯಾಮಗಳ ಕೆಲಸಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಸ್ಪರ ಪೂರಕವಾಗಿ ಸ್ಪಂದಿಸಿದರೆ ಮಾತ್ರ ಇದು ಸಾಧ್ಯ.

ನಾಲ್ಕು ದಶಕಗಳ ಹಿಂದೆ ನಾಡು ಇದೇ ತೆರನ ಬರಕ್ಕೆ ತುತ್ತಾಗಿದ್ದಾಗ, ಆಗಿನ ಗ್ರಾಮೀಣಾಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್ ಮಾಡಿದ ಪ್ರಯತ್ನಗಳನ್ನು ಈಗ ನೆನೆಯಲೇಬೇಕು. ಒಂದೆಡೆ, ಬರ ಪ್ರದೇಶಗಳಲ್ಲಿ ದಿನಂಪ್ರತಿ ನೀರು ಪೂರೈಸುವಂಥ ತುರ್ತು ಜವಾಬ್ದಾರಿ ನಿರ್ವಹಿಸುತ್ತಲೇ, ಬರಕ್ಕೆ ದೀರ್ಘಕಾಲೀನ ಪರಿಹಾರ ಕಂಡುಕೊಳ್ಳಲು ಪಂಚಾಯತ್ ವ್ಯವಸ್ಥೆಯನ್ನು ಸಬಲೀಕರಣಗೊಳಿಸುವ ದೂರದರ್ಶಿತ್ವದ ಕ್ರಮಗಳನ್ನೂ ಅವರು ಕೈಗೊಂಡಿದ್ದರು. ನಜೀರ್ ಸಾಬ್ ಮಾದರಿ ನಮಗೆ ಆದರ್ಶವಾಗಬೇಕಿದೆ.

ಆದರೆ, ಜಾತಿ, ಧರ್ಮದಂತಹ ಭಾವನಾತ್ಮಕ ವಿಷಯಗಳು ಅಥವಾ ಆರ್ಥಿಕತೆ, ಅನುದಾನ, ಜಿಡಿಪಿಯಂತಹ ತಾಂತ್ರಿಕ ಸಂಗತಿಗಳು ಅಥವಾ ಉಚಿತ ಕೊಡುಗೆಯಂತಹ ಜನಪ್ರಿಯ ಸಂಗತಿಗಳು ಮಾತ್ರ ಇಂದಿನ ಸಾರ್ವಜನಿಕ ಚರ್ಚೆಯ ವಸ್ತುಗಳಾಗುತ್ತಿವೆ. ಆ ಮೂಲಕ 'ಹುಸಿ ಸಂತಸ'ದ ಭ್ರಮೆ ಸೃಷ್ಟಿಸುವಲ್ಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲ್ಲೀನವಾಗುತ್ತಿವೆ. ಅದರಿಂದ ಹೊರಬಂದು ಬರದ ಬವಣೆಗೆ ವಾಸ್ತವಿಕ ಪರಿಹಾರ ಕಂಡುಕೊಳ್ಳುವತ್ತ ಸರ್ಕಾರಗಳು ಸಾಗಲೆಂದು ಆಶಿಸೋಣ.

ಬರದ ಬಿಸಿಲಿಗೆ ಮುಖವೊಡ್ಡಿ ನಿಂತಿರುವ ಗ್ರಾಮೀಣ ಜನತೆಯನ್ನು ನೋಡುವಾಗ, ಮತ್ತೊಬ್ಬ ನಜೀರ್ ಸಾಬರಿಗಾಗಿ ಅವರು ಪ್ರಾರ್ಥಿಸುತ್ತಿದ್ದಾರೆ ಎಂಬಂತೆ ತೋರುತ್ತದೆ!

ಚುರುಮುರಿ

ಲವ್ ಆ್ಯನಿವರ್ಸರಿ

• ಮಣ್ಣೆರಾಜು

'ತಾತಾ... ಕಾಮನಬಿಲ್ಲು ಬರೆಯಿರಿ ಅಂದರೆ ರಾಮನ ಬಿಲ್ಲು ಬರೆದಿದ್ದೀರಿ!' ಮೊಮ್ಮಗಳು ಸಿಟ್ಟಾದಳು.

'ರಾಮನ ಬಿಲ್ಲಿಗೆ ಏಳು ಬಣ್ಣ ಹಚ್ಚಿದರೆ ಕಾಮನಬಿಲ್ಲಾಗುತ್ತದೆ...' ಅಂದ್ರು ಶಂಕ್ರಿ ತಾತ.

'ನಿಮಗೆ ಡ್ರಾಯಿಂಗ್ ಗೊತ್ತಿಲ್ಲ' ಎಂದು ಬೇಸರಗೊಂಡು ಮೊಮ್ಮಗಳು ಪುಸ್ತಕ ಎತ್ತಿಕೊಂಡು ರೂಮಿಗೆ ಹೋದಳು.

'ನಲವತ್ತು ವರ್ಷದ ಹಿಂದೆ ವ್ಯಾಲೆಂಟೈನ್ಸ್ ಡೇ ದಿನ ನೀವು ನನಗೆ ಗುಲಾಬಿ ಹೂ ಕೊಟ್ಟು, ಪ್ರಿಯೇ, ನಕ್ಷತ್ರಗಳನ್ನು ಕಿತ್ತುತಂದು ಪೋಣಿಸಿ ಹಾರ ಮಾಡಿ ಹಾಕಲೆ? ಚಂದ್ರನನ್ನು ತಂದು ಮುಡಿಸಲೆ? ಬಣ್ಣದ ಕಾಮನಬಿಲ್ಲನ್ನು ಸೀರೆಯಾಗಿ ಉಡಿಸಲೆ? ಅಂತ ಕವನ ಬರೆದು ಕೊಟ್ಟಿದ್ರಿ, ಈಗ ಕಾಮನಬಿಲ್ಲಿನ ಕಲರ್, ಕ್ರೇಜ್ ಕಮ್ಮಿಯಾಯ್ತೆ?' ಹಳೆ ಪ್ರೇಮ ಪುರಾಣ ನೆನಪಿಸಿದರು ಸುಮಿ.

'ಯೌವನದ ಪ್ರೇಮ ಪುಳಕ ಮರೆಯಲು ಸಾಧ್ಯವೇ? ಆಗಿನ ಕಾಮನಬಿಲ್ಲು, ಪ್ರೇಮದ ಗುಲ್ಲು ಈಗಲೂ ಹಾಗೇ ಇವೆ...' ಗಲ್ಲ ಹಿಡಿದು ಲಲ್ಲೆಗರೆದರು ಶಂಕ್ರಿ.

'ಪಾರ್ಕ್, ಹೋಟೆಲ್, ಸಿನಿಮಾ ಥಿಯೇಟರ್‌ಗಳಲ್ಲಿ ಪ್ರೇಮ ಗುಲಾಬಿಯ ಪರಿಮಳ ಹರಡಿದ್ವಿ. ತೊಂಡೆ ತುಟಿ, ಸಂಪಿಗೆ ಮೂಗು, ದ್ರಾಕ್ಷಿ ಕಣ್ಣು, ಕೋಗಿಲೆ ಕಂಠ, ಮೂಗಿಲಿ ಸೊಂಟ ಅಂತೆಲ್ಲಾ ನನ್ನನ್ನು ಹಾಡಿಹೊಗಳ್ತಿದ್ರಿ. ಈಗ ನೀವು ಹೊಗಳುವುದೇ ಇಲ್ಲ...'

'ಈಗ ನಿನ್ನ ಮುಖ ಸೋರೆಕಾಯಿ, ಸೊಂಟ ಕುಂಬಳಕಾಯಿ ಎಂದು ಸತ್ಯ ಹೇಳಿದರೆ ನಿನಗೆ ಕೋಪ ಬರುತ್ತೆ' ಎಂದು ಶಂಕ್ರಿ ನಕ್ಕರು.

ಸುಮಿ ನಗದೆ ಸಿಟ್ಟಾದರು.

'ವ್ಯಾಲೆಂಟೈನ್ಸ್ ಡೇಯಂದು ಲವ್ ಆ್ಯನಿವರ್ಸರಿ ಆಚರಿಸಿಕೊಂಡು, ಸಂಸಾರದ ಲಾಂಗ್ ಜರ್ನಿಯಲ್ಲಿ ಹೂವು, ಲವ್ವು ಬಾಡದಂತೆ ಕಾಪಾಡಿಕೊಳ್ಳೋಣ' ಎಂದ ಶಂಕ್ರಿ, ಗುಲಾಬಿ ಹೂ ಕೊಟ್ಟು 'ಐ ಲವ್ ಯೂ...' ಹೇಳಿ ರಮಿಸಿದರು.

ದಿನದ ಟ್ವೀಟ್

ಬರೀ ಬಾಯಿಮಾತಿನ ಪ್ರೀತಿಯಲ್ಲ!

ವ್ಯಾಲೆಂಟೈನ್ಸ್ ದಿನಾಚರಣೆಯ ಈ ಸಂದರ್ಭದಲ್ಲಿ, ಇದಕ್ಕಿಂತಲೂ ಹೆಚ್ಚು ಸುಂದರವಾದ ಪ್ರೇಮಕಥೆ ಏನಾದರೂ ಇದ್ದರೆ ನನಗೆ ತೋರಿಸಿ ನೋಡೋಣ. ಮರಿಗಳನ್ನು ಪೋಷಿಸುವ ಸಲುವಾಗಿ ಗೂಡಿನೊಳಗೆ ಬಂದಿಯಾದ ಹೆಣ್ಣು ಹಾರ್ನ್‌ಬಿಲ್ ಪಕ್ಷಿಗೆ ಗಂಡು ಹಾರ್ನ್‌ಬಿಲ್ ಆಹಾರವನ್ನು ತಂದು ತಿನ್ನಿಸುತ್ತದೆ. ಈ ಕೆಲಸವನ್ನು ಅದು ಕೆಲ ತಿಂಗಳುಗಳವರೆಗೆ ಪ್ರತಿನಿತ್ಯವೂ ಮಾಡುತ್ತದೆ...

ಪರವೀನ್ ಕಾಸವಾನ್, ಐಎಫ್‌ಎಸ್ ಅಧಿಕಾರಿ

ಕಿಡಿನುಡಿ

ಪುಲ್ವಾಮಾದಲ್ಲಿ ಭಯೋತ್ಪಾದಕರ ದಾಳಿಯಿಂದ ಪ್ರಾಣ ಕಳೆದುಕೊಂಡವರಿಗೆ ನಾನು ನಮನ ಸಲ್ಲಿಸುತ್ತೇನೆ. ಆದರೆ ಈ ಸಂದರ್ಭದಲ್ಲಿ, ಪ್ರಾರ್ಥನೆಯನ್ನಷ್ಟೇ ಸಲ್ಲಿಸಿ ನಾವು ಮೌನ ವಹಿಸುವುದು ತರವಲ್ಲ. ಏಕೆಂದರೆ, ಎಷ್ಟೋ ಪ್ರಶ್ನೆಗಳು ಈವರೆಗೂ ಉತ್ತರ ಸಿಗದೆ ಹಾಗೇ ಉಳಿದುಬಿಟ್ಟಿವೆ! ಮೋದಿ ನೇತೃತ್ವದ ಸರ್ಕಾರ ಪ್ರಕರಣದ ತನಿಖೆಯನ್ನು ಇನ್ನೂ ಪೂರ್ಣಗೊಳಿಸಿಲ್ಲವೇಕೆ ಮತ್ತು ಇದರ ಹಿಂದಿರುವವರ ವಿರುದ್ಧ ಕ್ರಮ ಜರುಗಿಸಿಲ್ಲವೇಕೆ?

ವಿಜಯ್ ತೋಟತ್ತಿಲ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 15-2-1999

• **ರಾಷ್ಟ್ರೀಯ ಕ್ರೀಡೆಗೆ ಸಾಂಸ್ಕೃತಿಕ ಮೆರುಗು**

ಇಂಫಾಲ, ಫೆ. 14– 'ಈ ಶತಮಾನದ ಕೊನೆಯ ರಾಷ್ಟ್ರೀಯ ಕ್ರೀಡೆಗಳ ಮೂಲಕ ಕೋಮುಗಲಭೆ ಮತ್ತು ತೀವ್ರಗಾಮಿಗಳ ಬೆದರಿಕೆಯ ಹಿಂದಿನ ಕಹಿ ಘಟನೆಗಳನ್ನು ಮರೆತು, ಎಲ್ಲರೂ ಒಂದಾಗಿ ಮುಂದಿನ ಶತಮಾನದ ಆರಂಭದಿಂದಲೇ ಶಾಂತಿಯ ಕಹಳೆ ಮೊಳಗಿಸೋಣ' ಎಂಬ ಮನೋಭಾವದೊಂದಿಗೆ, ರಾಷ್ಟ್ರದ ಎಲ್ಲೆಡೆಯಿಂದ ಬಂದ ಕ್ರೀಡಾಪಟುಗಳು ಐದನೇ ರಾಷ್ಟ್ರೀಯ ಕ್ರೀಡೆಗಳಿಗೆ ನಾಂದಿ ಹಾಡಿದರು.

ಬೆಳಗಿನ ಮಂಜು ಕರಗಿ ಇಂಫಾಲ ನಗರದ ಸುತ್ತಲಿನ ಬೆಟ್ಟಗಳು ಮೈ ತೊಳೆದಂತೆ ಎದ್ದು ಕಾಣತೊಡಗುತ್ತಿದ್ದಂತೆಯೇ ಕೇಳಿಬಂದ ಸಂಗೀತವು ಕಿಕ್ಕಿರಿದು ನೆರೆದಿದ್ದ ಕ್ರೀಡಾಭಿಮಾನಿಗಳ ಮನಸೂರೆಗೊಂಡಿತು. ಚಲನಚಿತ್ರ ನಿರ್ದೇಶಕ ಶ್ಯಾಮ್ ಶರ್ಮಾ ಅವರು ರೂಪಿಸಿದ 'ಮಣಿಪುರ ನನ್ನ ಚಿನ್ನದ ಭೂಮಿ' ಗೀತೆಯು ಇಡೀ ಕ್ರೀಡಾಂಗಣವೇ ತಲೆದೂಗುವಂತೆ ಮಾಡಿತು.

ಐದನೇ ರಾಷ್ಟ್ರೀಯ ಕ್ರೀಡೆಗಳ ಲಾಂಛನವಾದ ಇಲ್ಲಿಯ ಜನಪ್ರಿಯ ಪ್ರಾಣಿ ಕಡವೆ 'ಪಾಂಗೈ' ಕ್ರೀಡಾಂಗಣ ಪ್ರವೇಶಿಸುತ್ತಿದ್ದಂತೆ ಮಣಿಪುರದ ತಾಯಂದಿರು ಮೆರವಣಿಗೆಯಲ್ಲಿ ಸಾಂಪ್ರದಾಯಿಕ ಉಡುಗೆಯೊಂದಿಗೆ ಆದರದಿಂದ ಬರಮಾಡಿಕೊಂಡರು.

50 ವರ್ಷಗಳ ಹಿಂದೆ

ಶುಕ್ರವಾರ, 15-2-1974

• **'ಕಷ್ಟದಲ್ಲೇ ಸುಖಿಸಿದ' ಪ್ರಾಜ್ಞ ಡಿ.ವಿ.ಜಿ.ಗೆ ಭಕ್ತಿ ಪ್ರಣಾಮ**

ಬೆಂಗಳೂರು, ಫೆ. 14– ಕರ್ನಾಟಕದ ಪತ್ರಕರ್ತರ ಭಕ್ತಿ– ಗೌರವ ಹಾಗೂ ಕೃತಜ್ಞತೆಯ ಸಂಕೇತ.

ಆ ಕೂಟ, ಅವರ ಮನೆಯಲ್ಲೇ, ಅವರ ಮುಂದೆಯೇ ನೆರೆದಿತ್ತು, ಕುಳಿತಿತ್ತು.

'ಭರತಖಂಡದಲ್ಲಿ ಬೆರಳೆಣಿಕೆಯಷ್ಟಿರುವ ಬುದ್ಧಿಜೀವಿಗಳ ಅಗ್ರಪಂಕ್ತಿಯಲ್ಲಿರುವ ಹಿರಿಯರೊಬ್ಬರಿಗೆ ಪದ್ಮಭೂಷಣ ಪ್ರಶಸ್ತಿ. ಈ ಹಿನ್ನೆಲೆಯಲ್ಲಿ, ಡಿ.ವಿ.ಜಿ ಅವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಗುರುವಾರ ಸನ್ಮಾನಿಸಿತು.

'ಪ್ರಭುತ್ವದವರು ನಿಮ್ಮ ಹಿರಿಮೆಗರಿಮೆಗಳನ್ನು ತಡವಾಗಿಯಾದರೂ ಗುರುತಿಸಿದರಲ್ಲ' ಎಂಬ ಸಮಾಧಾನದಿಂದ 'ಪುಲಕಿತಗೊಂಡ' ನಾಡಿನ ಸಮಗ್ರ ಪತ್ರಕರ್ತರ ಪರವಾಗಿ ಪತ್ರಕರ್ತರ ಸಂಘದ ಸ್ಥಾಪಕ– ಅಧ್ಯಕ್ಷರಿಗೆ ಕೃತಜ್ಞತೆಯಿಂದ ನಮಸ್ಕಾರ.

ಎಂಬತ್ತೆರಡು ವಯಸ್ಸಿನ ಡಿ.ವಿ.ಜಿ ಮೇಲಿಂದಮೇಲೆ ಭಾವಪರವಶರಾದರು, ಚೇತರಿಸಿಕೊಂಡರು.

'ಇದೊಂದು ಸೇವಾವೃತ್ತಿ, ಸಮಾಜಸೇವಾ ಕಾರ್ಯ. ಸತ್ಯ, ಧರ್ಮ, ನಿರ್ಭೀತಿ, ಸರ್ವಸಮತಾ ಭಾವನೆ ಮರೆಯಬೇಡಿ' ಎಂದರು ಪತ್ರಕರ್ತರಿಗೆ.

ಸಂಗತ

ಕಾಳ್ಗಿಚ್ಚು: ಬದುಕನ್ನೂ ಸುಟ್ಟೀತು!

ಪಶ್ಚಿಮಘಟ್ಟದ ಕಾಡಿಗೆ ಬೆಂಕಿ ಬಿದ್ದರೆ, ಹೆಚ್ಚಿನ ಸಂದರ್ಭಗಳಲ್ಲಿ ಅದರ ಹಿಂದೆ ಅಗೋಚರವಾಗಿ ಒಬ್ಬ ಮನುಷ್ಯ ಇರುವುದು ವಿಷಾದಕರ

• ನಾಗರಾಜ ಕೂವೆ

ಫೆಬ್ರುವರಿ ಮೊದಲ ವಾರದಿಂದಲೇ ಈ ವರ್ಷ ಬಿಸಿಲಿನ ಬೇಗೆ ಕಂಡುಬಂದಿದೆ. ಈ ಬೇಸಿಗೆಯಲ್ಲಿ ಉಷ್ಣಾಂಶ ಸಾಮಾನ್ಯಕ್ಕಿಂತ ಹೆಚ್ಚಿರಲಿದೆ ಎಂದು ತಜ್ಞರು ಹೇಳಿದ್ದಾರೆ. ಈ ಮಧ್ಯೆ, ಗುಡ್ಡ-ಬೆಟ್ಟಗಳಲ್ಲಿನ ಹುಲ್ಲೆಲ್ಲಾ ಒಣಗಿ ನಿಂತಿದೆ. ಪಶ್ಚಿಮಘಟ್ಟದಲ್ಲಿ ಕಾಳ್ಗಿಚ್ಚಿನ ಆತಂಕ ಶುರುವಾಗಿದೆ.

ಮಲೆನಾಡಿನ ಶಾಲೆಯೊಂದರಲ್ಲಿ ಇತ್ತೀಚೆಗೆ ಪರಿಸರ ಸಂರಕ್ಷಣೆಯ ಬಗೆಗೆ ಸಂವಾದ ನಡೆಸುತ್ತಿದ್ದಾಗ, 'ಪಶ್ಚಿಮಘಟ್ಟದಲ್ಲಿ ಕಾಳ್ಗಿಚ್ಚಿಗೆ ಕಾರಣವೇನು?' ಎಂದು ಕೇಳಿದೆ. ತಕ್ಷಣ ವಿದ್ಯಾರ್ಥಿಯೊಬ್ಬ 'ಜಿಂಕೆಗಳು ಓಡುವಾಗ ಕಲ್ಲಿಗೆ ಕಲ್ಲು ತಾಗುವುದರಿಂದ, ಮರ-ಮರಗಳ ನಡುವಿನ ಘರ್ಷಣೆಯಿಂದ ಬೆಂಕಿ ಹೊತ್ತಿಕೊಳ್ಳುತ್ತದೆ' ಎಂದ. ನಾನು ಕೂಡ ಶಾಲಾ ಹಂತದಲ್ಲಿ ಹೀಗೆಯೇ ನಂಬಿದ್ದೆ. ಆದರೆ ಬಹುತೇಕ ಬಾರಿ ವಾಸ್ತವ ಬೇರೆಯೇ ಇರುತ್ತದೆ.

ಇಂದು ಹೆಚ್ಚಿನ ಸಂದರ್ಭಗಳಲ್ಲಿ, ಯಾವುದೇ ಕಾಡಿಗೆ ಬೆಂಕಿ ಬಿದ್ದರೂ ಅದರ ಹಿಂದೆ ಅಗೋಚರವಾಗಿ ಒಬ್ಬ ಮನುಷ್ಯ ಇರುತ್ತಾನೆ. ಪ್ರವಾಸಿಗರ ಸಿಗರೇಟು, ದನಗಾಹಿಗಳ ಬೀಡಿಯ ಕಿಡಿ, ಶಿಕಾರಿಯವರ ಬೆಂಕಿ, ರೆಸಾರ್ಟ್‌ಗಳ ಕ್ಯಾಂಪ್‌ಫೈರ್ ಕಾಡಿನಲ್ಲಿ ಬೆಂಕಿ ಹೊತ್ತಿಕೊಳ್ಳಲು ಕಾರಣವಾಗುತ್ತಿವೆ. ಅರಣ್ಯ ಇಲಾಖೆಯವರ ಮೇಲಿನ ದ್ವೇಷಕ್ಕೆ ಕಾಡಿಗೆ ಬೆಂಕಿ ಹಚ್ಚುವವರಿದ್ದರೆ, ಕಾಫಿ-ಟೀ ತೋಟಗಳನ್ನು ಒತ್ತುವರಿ ಮಾಡುವುದು ಸುಲಭವಾಗಲಿ ಎಂಬ ಕಾರಣಕ್ಕೆ ಕಿಡಿ ಹೊತ್ತಿಸುವವರೂ ಇದ್ದಾರೆ. ಸುಮ್ಮನೆ ಕಾಡಿಗೆ ಬೆಂಕಿ ಕೊಟ್ಟು ಖುಷಿಪಡುವ ವಿಕೃತ ಮನಸ್ಕರೂ ಇಲ್ಲದಿಲ್ಲ. ಒಮ್ಮೊಮ್ಮೆ ಯಾವುದೋ ಆಕಸ್ಮಿಕವು ಹಸಿರನ್ನು ಬಲಿ ತೆಗೆದುಕೊಳ್ಳುವುದೂ ಇದೆ.

'ಬೇಸಿಗೆಯಲ್ಲಿ ಗುಡ್ಡಕ್ಕೆ ಬೆಂಕಿ ಕೊಟ್ಟರೆ ಅಲ್ಲಿರುವ ಒಣಹುಲ್ಲೆಲ್ಲಾ ಸುಟ್ಟುಹೋಗಿ, ಮಳೆ ಬಂದಾಗ ಹೊಸ ಹುಲ್ಲು ಚಿಗುರುತ್ತದೆ. ಆಗ ಹಸಿರು ಹುಲ್ಲನ್ನು ತಿನ್ನುವ ಕಾಡುಕೋಣ, ಜಿಂಕೆಯಂತಹ ಪ್ರಾಣಿಗಳು ನಮ್ಮ ಕೃಷಿ ಭೂಮಿಗೆ ಬರುವುದಿಲ್ಲ' ಎಂಬ ನಂಬಿಕೆಯೊಂದು ಕಾಡಂಚಿನ ಹಳ್ಳಿಗಳ ರೈತರಲ್ಲಿದೆ. ಆದರೆ ಆ ಬೆಂಕಿ ಗುಡ್ಡದ ಮೇಲಿನ ಹುಲ್ಲನ್ನಷ್ಟೇ ಸುಡುವುದಿಲ್ಲ, ಜೊತೆಗಿರುವ ವಿವಿಧ ಜಾತಿಯ ಪೊದೆ ಸಸ್ಯಗಳು, ಕುರುಚಲು ಗಿಡಗಳು, ಗುಡ್ಡದ ಮೇಲೆ ಮಾತ್ರ ಬೆಳೆಯುವ ಮರಗಳನ್ನೂ ಆಹುತಿ ತೆಗೆದುಕೊಳ್ಳುತ್ತದೆ. ಪ್ರಾಣಿ ಪಕ್ಷಿಗಳು, ಅವುಗಳ ಮೊಟ್ಟೆ, ಮರಿಗಳು ಸಹ ಬಲಿಯಾಗುತ್ತವೆ. ಬೆಂಕಿಯು ಗುಡ್ಡದ ಶಿಖರವನ್ನು ತಲುಪಿದಾಗ, ರಭಸದಿಂದ ಬೀಸುವ ಗಾಳಿಯಿಂದ ಅದರ ವ್ಯಾಪ್ತಿ ಹೆಚ್ಚಾಗುತ್ತಾ ಪಕ್ಕದ ಕಣಿವೆಗೂ ಬೆಂಕಿ ವ್ಯಾಪಿಸಿಕೊಳ್ಳುತ್ತದೆ.

ಚಿಗುರುವ ಹುಲ್ಲನ್ನು ತಿಂದುಕೊಂಡು ಕಾಡುಕೋಣ ಗುಡ್ಡದಲ್ಲಿ ಇರುವುದಿಲ್ಲ! ಏಕೆಂದರೆ ಕಾಡುಕೋಣಗಳ ಎರಡನೇ ಆದ್ಯತೆ ಹುಲ್ಲು. ಅವುಗಳ ಮೊದಲ ಆದ್ಯತೆ ಏನಿದ್ದರೂ ಸೊಪ್ಪು. ವೈಜ್ಞಾನಿಕ ಅಧ್ಯಯನಗಳ ಪ್ರಕಾರ, ಕಾಟಿಗಳು 32 ವಿವಿಧ ಜಾತಿಯ ಸಸ್ಯಗಳನ್ನು ತಿನ್ನುತ್ತವೆ. ಅಲ್ಲದೆ ಅವುಗಳ ಆಹಾರ ಪದ್ಧತಿ ಜೌಗು ನೆಲವನ್ನು ಅವಲಂಬಿಸಿರುವುದರಿಂದ ಅವು ಕಣಿವೆಗೆ ಇಳಿದೇ ಇಳಿಯುತ್ತವೆ. ಇನ್ನು ಜಿಂಕೆ, ಕಡವೆಯಂತಹ ಸಸ್ಯಾಹಾರಿಗಳ ದಿನನಿತ್ಯದ ಓಡಾಟದ ವ್ಯಾಪ್ತಿ ಗುಡ್ಡದ ಬುಡದಿಂದ ತುದಿಯ ಹುಲ್ಲುಗಾವಲಿನವರೆಗೂ ವಿಸ್ತರಿಸಿರುತ್ತದೆ. ಕಾಲಕಾಲಕ್ಕೆ ಅವುಗಳ ಓಡಾಟದ ದಿಕ್ಕು ಅವುಗಳಿಗೆ ಅಗತ್ಯವಿರುವ ವಿವಿಧ ಮೇವುಗಳ ಹುಡುಕಾಟ, ನೀರಿಗಾಗಿ ಅಲೆದಾಟದಂತಹ ಹಲವು ಅಂಶಗಳನ್ನು ಒಳಗೊಂಡಿರುತ್ತದೆ. ಮನುಷ್ಯ ಏನೇ ಮಾಡಿದರೂ ಆ ಜೀವಿಗಳು ಹುಲ್ಲನ್ನು ಮಾತ್ರ ತಿಂದುಕೊಂಡು ಗುಡ್ಡದಲ್ಲೇ ಇರಲಾರವು. ಗುಡ್ಡದ ಹುಲ್ಲಿಗೆ ಬೆಂಕಿ ಕೊಡುವಾಗ ಪರಿಸರದ ಈ ಸತ್ಯ ನಮ್ಮ ವಿವೇಕವನ್ನು ಎಚ್ಚರಿಸಬೇಕು.

ಪಶ್ಚಿಮಘಟ್ಟದ ಹುಲ್ಲುಗಾವಲು, ಮಳೆಯ ನೀರನ್ನು ಹಿಡಿದಿಟ್ಟುಕೊಂಡು, ನಿರಂತರವಾಗಿ ಕೆಳಗಿನ ಶೋಲಾ ಅರಣ್ಯಕ್ಕೆ ಸರಬರಾಜು ಮಾಡುತ್ತದೆ. ಅಲ್ಲಿನ ಶಿಲಾಪದರಗಳಲ್ಲಿ ಸಂಗ್ರಹವಾಗುವ ಅದು ಮುಂದಿನ ಮಳೆಗಾಲದವರೆಗೂ ಕಣಿವೆಯಲ್ಲಿರುವ ಝರಿ-ತೊರೆಗಳನ್ನು ಜೀವಂತವಾಗಿಡುತ್ತದೆ. ಈ ಹುಲ್ಲುಗಾವಲಿಗೆ ಕೊಡುವ ಬೆಂಕಿ ಇಂತಹ ನೀರಿನ ಮೂಲಗಳನ್ನು ಬತ್ತಿಸಿಬಿಡುತ್ತದೆ. ಇದು ಜಲಚರಗಳು ಮತ್ತು ಮನುಷ್ಯನ ನೀರಿನ ಆಕರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಒಂದು ಗುಡ್ಡದಲ್ಲಿ ನಿರಂತರವಾಗಿ ಮೂರ್ನಾಲ್ಕು ಬಾರಿ ಕಾಳ್ಗಿಚ್ಚು ಕಾಣಿಸಿಕೊಂಡರೆ, ಅಲ್ಲಿನ ಹುಲ್ಲು ಮತ್ತು ಕುರುಚಲು ಗಿಡಗಳ ಬೇರು ಸಂಪೂರ್ಣ ಸುಟ್ಟುಹೋಗಿ, ಮತ್ತೆ ಚಿಗುರಲು ಅವಕಾಶವೇ ಇಲ್ಲದಂತಾಗುವ ಸಾಧ್ಯತೆಯೂ ಉಂಟು. ಅಂತಹ ಸಂದರ್ಭದಲ್ಲಿ ಮಳೆಗಾಲದಲ್ಲಿ ಮೇಘಸ್ಫೋಟದಂತಹ ವಿದ್ಯಮಾನಗಳು ಘಟಿಸಿದರೆ ಅಲ್ಲಿ ಭೂಕುಸಿತ ಆಗಬಹುದು. ಅದರಿಂದ ಶೋಲಾ ಅರಣ್ಯಕ್ಕೆ, ನೀರಿನ ಮೂಲಗಳಿಗೆ, ಕಣಿವೆಯಲ್ಲಿರುವ ಕೃಷಿ ಭೂಮಿಗೆ ಅಪಾರ ಹಾನಿ ಉಂಟಾಗುತ್ತದೆ. ಹೀಗೆ, ಕೃಷಿಯನ್ನು ಉಳಿಸಿಕೊಳ್ಳಬೇಕೆಂದು ಬೆಟ್ಟಕ್ಕೆ ಕೊಡುವ ಬೆಂಕಿ, ಕೊನೆಗೆ ರೈತರ ಜೀವನೋಪಾಯವನ್ನೇ ಕಸಿದುಬಿಡುತ್ತದೆ.

ಕಾಡಿಗೆ ಬೆಂಕಿ ಕೊಡುವುದರ ಬಗೆಗೆ ಜನರಿಗಿರುವ ತಪ್ಪುಕಲ್ಪನೆಗಳನ್ನು ದೂರ ಮಾಡಬೇಕಾದುದು ಇಂದಿನ ತುರ್ತು ಅಗತ್ಯ. ಹಾಗೆಯೇ ಬಿರು ಬೇಸಿಗೆಯಲ್ಲಿ ಚಾರಣಕ್ಕೆ ನಿರ್ಬಂಧ ಹೇರಿ, ಪ್ರವಾಸಿಗರಲ್ಲಿ ಅರಿವು ಮೂಡಿಸಬೇಕಾಗಿದೆ. ಕಾಳ್ಗಿಚ್ಚಿನ ಬಗೆಗೆ ಹಾಡು, ನಾಟಕ, ವಿಡಿಯೊ, ಸಾಕ್ಷ್ಯಚಿತ್ರ, ಕರಪತ್ರಗಳು ಸೇರಿದಂತೆ ವಿವಿಧ ಸ್ವರೂಪಗಳ ಮೂಲಕ ಜಾಗೃತಿ ಮೂಡಿಸುವ ಕಾರ್ಯ ಇಂದು ಆಗಬೇಕಿದೆ. ಪರಿಸರ ಸಂರಕ್ಷಣೆಯಲ್ಲಿ ಜನರನ್ನು ಒಳಗೊಳ್ಳುವುದರಿಂದ ಕಾಡಿಗೆ ಬೆಂಕಿ ಹಚ್ಚುವುದನ್ನು ತಡೆಯಬಹುದು. ವೈಜ್ಞಾನಿಕ ಸತ್ಯಗಳನ್ನು ನೆಲಮೂಲದ ಜನರಿಗೆ ಮನವರಿಕೆ ಮಾಡಿಕೊಡುವಂತಹ ರಚನಾತ್ಮಕ ಕೆಲಸಗಳು ನಮ್ಮ ಕಾಡುಗಳನ್ನು ಕಾಳ್ಗಿಚ್ಚಿನಿಂದ ಕಾಪಾಡಬಹುದು ಎಂಬುದು ಒಂದು ಭರವಸೆ.

ವಾಚಕರ ವಾಣಿ

ವಿದ್ಯಾರ್ಥಿಗಳನ್ನು ಅಸ್ತ್ರವಾಗಿ ಬಳಸುವುದು ಸಲ್ಲ

ಮಂಗಳೂರಿನ ಜೆರೋಸಾ ಶಾಲೆಯಲ್ಲಿ ಶಿಕ್ಷಕಿಯೊಬ್ಬರು ಧರ್ಮನಿಂದನೆಯ ಮಾತುಗಳನ್ನಾಡಿದ ಆರೋಪದಡಿ ಹಲವು ದಿನಗಳಿಂದ ಮಾಧ್ಯಮಗಳ ಕಣ್ಣು ಅತ್ತ ನೆಟ್ಟಿದೆ. ಶಿಕ್ಷಕಿಯ ಮಾತುಗಳ ಕುರಿತ ನಿಷ್ಕರ್ಷೆ, ಅವುಗಳ ಸಾಂವಿಧಾನಿಕತೆ ಬೇರೆಯದೇ ಆದ ಚರ್ಚೆಯ ವಿಷಯ. ಆದರೆ ತಮ್ಮ ಕ್ಷೇತ್ರವ್ಯಾಪ್ತಿಯ ಸಮಸ್ಯೆಯೊಂದನ್ನು ಜನಪ್ರತಿನಿಧಿಗಳು ನಿರ್ವಹಿಸಿದ ರೀತಿ ಆತಂಕಕಾರಿಯಾಗಿದೆ. ಪೋಷಕರ ಮನಸ್ಸಿನಲ್ಲಿ ಮೂಡುತ್ತಿರುವ ಬಿರುಕನ್ನು ಹೆಚ್ಚಿಸುವ ರೀತಿಯಲ್ಲಿ ಅಲ್ಲಿನ ಶಾಸಕರು ಹೇಳಿಕೆಯನ್ನು ನೀಡಿದ್ದಾರೆ.

ತರಗತಿಗಳು ನಡೆಯುತ್ತಿದ್ದ ಹೊತ್ತಿನಲ್ಲಿ ಜನಪ್ರತಿನಿಧಿಗಳು ಶಾಲೆಗೆ ಭೇಟಿ ನೀಡುವ ಮೂಲಕ, ಶಿಕ್ಷಕಿ ಹಾಗೂ ಆಡಳಿತ ಮಂಡಳಿಯನ್ನು ಬೆದರಿಸುವ ರೀತಿಯಲ್ಲಿ ಮಾತನಾಡುವ ಮೂಲಕ ಅವರು ಮಕ್ಕಳಿಗೆ ಯಾವ ರೀತಿಯ ಸಂದೇಶವನ್ನು ನೀಡಿದಂತಾಗಿದೆ? ಜನಪ್ರತಿನಿಧಿಗಳು, ನಾಯಕರು ಎಳೆಯ ವಿದ್ಯಾರ್ಥಿಗಳ ಮನದಲ್ಲಿ ವಿಷ ತುಂಬಿ ಅವರನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವುದು ಇಲ್ಲಿ ನಿಚ್ಚಳವಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ, ಮಾಧ್ಯಮಗಳು ವಿದ್ಯಾರ್ಥಿಗಳ ಹೇಳಿಕೆಯನ್ನು ಪಡೆದಿವೆ. ಮಕ್ಕಳು ದಬಾಯಿಸುವ ಧ್ವನಿಯಲ್ಲಿ ಹೇಳಿಕೆಗಳನ್ನು ನೀಡಿದ್ದಾರೆ. ಇನ್ನೂ ಹತ್ತನೇ ತರಗತಿಯನ್ನೂ ಮುಗಿಸದೇ ಇರುವ ಮಕ್ಕಳಿಂದ ಬಹಿರಂಗ ಹೇಳಿಕೆಗಳನ್ನು ಪಡೆಯಬಹುದೇ? 18 ವರ್ಷದೊಳಗಿನ ಮಕ್ಕಳ ಫೋಟೊಗಳ ಪ್ರಕಟಣೆಗೆ ಸಂಬಂಧಿಸಿದ ನಿಯಮ ಇಲ್ಲಿ ಅನ್ವಯವಾಗದೇ? ಮುಂದಿನ ದಿನಗಳಲ್ಲಿ ಒಟ್ಟು ಮಕ್ಕಳ, ಸಮಾಜದ ಆರೋಗ್ಯದ ದೃಷ್ಟಿಯಿಂದ ಇದು ಬೀರಬಹುದಾದ ಪರಿಣಾಮದ ಬಗ್ಗೆ ಯೋಚಿಸಬೇಡವೇ? ಶಿಕ್ಷಕಿಯನ್ನು ಅಮಾನತುಗೊಳಿಸಿದ ಸಂದರ್ಭದಲ್ಲಿ ವಿದ್ಯಾರ್ಥಿ ಸಮೂಹವು ನೃತ್ಯ ಮಾಡಿರುವ ವಿಡಿಯೊವಂತೂ ದಿಗ್ಭ್ರಮೆ ಉಂಟುಮಾಡುವಂತಿದೆ. ಒಂದಕ್ಷರವನ್ನು ಕಲಿಸಿದರೂ ಆತ ಗುರು ಎಂದು ಸಾರುತ್ತಾ ಬಂದಿರುವವರೇ ಇಂತಹವುಗಳನ್ನು ವಿಜೃಂಭಿಸುತ್ತಿರುವುದು ವ್ಯಂಗ್ಯವಾಗಿದೆ.

ಸರ್ಕಾರ, ಮಕ್ಕಳ ಹಕ್ಕುಗಳ ಆಯೋಗವು ಈ ಪ್ರಕರಣದತ್ತ ಗಮನಹರಿಸಬೇಕು. ಮಕ್ಕಳ ಹೇಳಿಕೆಗಳು, ನೃತ್ಯದ ವಿಡಿಯೊಗಳನ್ನು ತಕ್ಷಣವೇ ಆನ್‌ಲೈನ್‌ನಿಂದ ಕಿತ್ತು ಹಾಕಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ತರಗತಿಯಲ್ಲಿ, ಪಠ್ಯದಲ್ಲಿ ಅಥವಾ ಶಿಕ್ಷಕರ ಬೋಧನೆಯಲ್ಲಿ ಯಾವುದೇ ರೀತಿಯ ಧರ್ಮವಿರೋಧಿ ಸಂದೇಶ ಅಥವಾ ಯಾರ ಭಾವನೆಗಾದರೂ ಧಕ್ಕೆ ತರುವ ಅಂಶಗಳಿದ್ದರೆ ಅದನ್ನು ಪೋಷಕರು ಹಾಗೂ ಮಕ್ಕಳು ಮೊದಲಿಗೆ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತಂದು ಸಂವಿಧಾನಾತ್ಮಕವಾಗಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಬೇಕೇ ವಿನಾ ರಾಜಕೀಯ ಪಕ್ಷದ ಮುಖಂಡರನ್ನು ಕರೆದುಕೊಂಡು ಹೋಗಿ ಗಲಾಟೆ ಎಬ್ಬಿಸುವುದಲ್ಲ. ವಿದ್ಯಾರ್ಥಿಗಳನ್ನು ಅಸ್ತ್ರವಾಗಿ ಬಳಸಿಕೊಳ್ಳುವುದು ತರವಲ್ಲ. ಮಕ್ಕಳ ಮನಸ್ಸು ವಿಷವನ್ನು ಬಿತ್ತಿ ಬೆಳೆಯುವ ಕಾರ್ಖಾನೆಯಾಗದ ಹಾಗೆ ನೋಡಿಕೊಳ್ಳುವ ಹೊಣೆ ನಮ್ಮೆಲ್ಲರದು.

ಭಾರತಿ ದೇವಿ ಪಿ., ಅಕ್ಷತಾ ಹುಂಚದಕಟ್ಟೆ, ಆಸ್ಮಾ ಮೇಲಿನಮನಿ, ಶಿವಮೊಗ್ಗ, **ಬಿ.ಜಯಲಕ್ಷ್ಮಿ,** ಮೈಸೂರು

ಮಟ್ಕಾ, ಬೆಟ್ಟಿಂಗ್ ದಂಧೆಗೆ ಬೀಳಲಿ ಕಡಿವಾಣ

ಕ್ರಿಕೆಟ್ ಬೆಟ್ಟಿಂಗ್ ತಡೆಯಲು ಕಟ್ಟುನಿಟ್ಟಿನ ಕಾನೂನು ಜಾರಿಗೊಳಿಸುವಂತೆ ವಿಧಾನಸಭೆಯಲ್ಲಿ ಆಗ್ರಹಿಸಿರುವ ಶಾಸಕ ಗಣಿಗ ರವಿಕುಮಾರ್ ಅವರ ಕಳಕಳಿ ಮೆಚ್ಚುವಂಥದ್ದು. ಈ ಹಿಂದೆ ಅಂಕೋಲಾದಂತಹ ಚಿಕ್ಕ ಊರಿನಲ್ಲಿ ಕೂಡ ಮಟ್ಕಾ ಹಾವಳಿ ತೀವ್ರವಾಗಿತ್ತು. ಈ ಕುರಿತು ಮಾಧ್ಯಮಗಳಲ್ಲಿ ಗಮನಸೆಳೆದ ಬಳಿಕ, ಎರಡು ತಿಂಗಳವರೆಗೆ ಅಂಕೋಲಾದಲ್ಲಿ 'ಮಟ್ಕಾ' ಆಟ ಬಂದ್ ಆಗಿತ್ತು. ಆದರೆ ಈಗ ನಾಲ್ಕು ತಿಂಗಳುಗಳಿಂದ ಮತ್ತೆ ಯಥಾವತ್ತಾಗಿ ಹಿಂದಿನದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ರಾಜಕೀಯ ವ್ಯಕ್ತಿಗಳೇ ಇದರಲ್ಲಿ ಬುಕ್ಕಿಗಳಾಗಿ ಮೆರೆಯುತ್ತಿದ್ದಾರೆ. ಇದಕ್ಕೆ ಪೊಲೀಸ್ ಅಧಿಕಾರಿಗಳೂ ಕೈಜೋಡಿಸಿದ್ದಾರೆ ಎಂಬ ಆರೋಪಗಳಿವೆ. ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು ಈ ಆಟದ ದಾಸರಾಗಿ ಪಠ್ಯ ಚಟುವಟಿಕೆಗಳಿಂದ ವಿಮುಖರಾಗಿದ್ದಾರೆ. ಬಡ ಹೆಂಗಸರು ಅಭಿವೃದ್ಧಿ ಸಂಘಗಳಿಂದ ಪಡೆದ ಹಣವನ್ನು ಈ ಆಟಕ್ಕೆ ಉಪಯೋಗಿಸುತ್ತಿದ್ದಾರೆ. ಇಂತಹ ಮಟ್ಕಾ ಆಟ ಅಥವಾ ಕ್ರಿಕೆಟ್ ಬೆಟ್ಟಿಂಗ್ ತಡೆಯಲು ಪೊಲೀಸ್ ಪಡೆ ಅತ್ಯಂತ ಜಾಗರೂಕವಾಗಿರಬೇಕು. ಅವರಿಗೇ ಈ ಬಗ್ಗೆ ಕಾಳಜಿ ಇಲ್ಲವೆಂದ ಮೇಲೆ ಇದಕ್ಕೆ ತಡೆ ಒಡ್ಡುವವರು ಯಾರು?

ಚಂದ್ರಕಾಂತ ನಾಮಧಾರಿ, ಅಂಕೋಲಾ, ಉತ್ತರ ಕನ್ನಡ

ಸಂಚಾರ ಪೊಲೀಸರೊಂದಿಗೆ ಸಂಘರ್ಷ ತರವಲ್ಲ

ಸಂಚಾರ ನಿಯಮ ಉಲ್ಲಂಘಿಸಿದ್ದಕ್ಕಾಗಿ ಪ್ರಕರಣ ದಾಖಲಿಸಲು ಮುಂದಾದ ಕಾರಣಕ್ಕೆ ಯುವಕನೊಬ್ಬ ಹೆಡ್ ಕಾನ್‌ಸ್ಟೆಬಲ್ ಒಬ್ಬರ ಕೈ ಬೆರಳನ್ನು ಕಚ್ಚಿ ಗಾಯಗೊಳಿಸಿರುವುದು ಆತಂಕಕಾರಿ ಸಂಗತಿ. ಬೆಂಗಳೂರು ನಗರದಲ್ಲಿ ಈಗಾಗಲೇ ಸಂಚಾರದಟ್ಟಣೆಯಿಂದ ಸಾರ್ವಜನಿಕರು ಒದ್ದಾಡುತ್ತಿದ್ದಾರೆ. ಸಂಚಾರ ಪೊಲೀಸರು ಹಗಲಿರುಳೆನ್ನದೆ ಶ್ರಮಿಸುತ್ತಾ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಸಾಹಸಪಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಸಾರ್ವಜನಿಕರು ಪೊಲೀಸರಿಗೆ ಜೀವ ಬೆದರಿಕೆ ಒಡ್ಡುವುದು, ಅವಾಚ್ಯ ಮಾತುಗಳಿಂದ ನಿಂದಿಸುತ್ತಾ ನಡುರಸ್ತೆಯಲ್ಲಿ ವಿಕೃತವಾಗಿ ವರ್ತಿಸುವುದು ವಿಷಾದಕರ ಸಂಗತಿ. ಇಂದಿನ ಯುವಪೀಳಿಗೆ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಸಂಚಾರ ಪೊಲೀಸರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳಬೇಕಾಗಿದೆ.

ಮಲ್ಲಿಕಾರ್ಜುನ್ ತೇಲಿ, ಜಮಖಂಡಿ

ಚಿತ್ರ ಹಾಕಿದರಷ್ಟೇ ಸಾಲದು...

'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಿ, ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರ ಅಳವಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದಾರೆ. ಗಾಂಧಿ, ಅಂಬೇಡ್ಕರ್, ನೆಹರೂ, ಬಸವಣ್ಣನಂತಹವರ ಭಾವಚಿತ್ರಗಳನ್ನು ಬರೀ ಗೋಡೆಯ ಮೇಲೆ ನೇತುಹಾಕುವುದರಿಂದ ಉಪಯೋಗವಿಲ್ಲ. ಆ ಮಹನೀಯರ ತತ್ವ, ಆದರ್ಶಗಳನ್ನು ಪಾಲಿಸಬೇಕು. ದೂರದೃಷ್ಟಿಯುಳ್ಳ ಅವರ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕು. ಮಹಾತ್ಮ ಗಾಂಧಿ ಚಿತ್ರದ ಅಡಿಯಲ್ಲೇ ಲಂಚ ತೆಗೆದುಕೊಳ್ಳುವಂತಾದರೆ ಅದರಿಂದ ಪ್ರಯೋಜನವೇನು? 'ಇವ ನಮ್ಮವ ಇವ ನಮ್ಮವ' ಎನ್ನುತ್ತ ಎಲ್ಲರನ್ನೂ ಒಂದೇ ಭಾವದಿ ಕಂಡ ಮತ್ತು ಕಾಣುವಂತೆ ಸಾರಿದ ಬಸವಣ್ಣನವರ ಚಿತ್ರದಡಿ ಜಾತಿ ರಾಜಕೀಯ ಮಾಡಿದರೆ ಫಲವೇನು? ಜನಪ್ರತಿನಿಧಿಗಳು ಭಾವಚಿತ್ರಗಳನ್ನು ಅಳವಡಿಸುವುದಕ್ಕಿಂತ ಹೆಚ್ಚಾಗಿ ಸ್ವಂತ ಜೀವನದಲ್ಲಿ ಮತ್ತು ಸರ್ಕಾರಿ ಆಡಳಿತದಲ್ಲಿ ಅವರ ತತ್ವಗಳನ್ನು ಅಳವಡಿಸಿಕೊಳ್ಳಬೇಕಿದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಅಡುಗೆ ಎಣ್ಣೆಯ ಆಮದು ಭಾರಿ ಪ್ರಮಾಣದಲ್ಲಿ ಕುಸಿದಿದೆ. ದೇಶದಲ್ಲಿನ ಅಡುಗೆ ಎಣ್ಣೆಯ ಸಂಗ್ರಹದ ಮಟ್ಟವೂ ಭಾರಿ ಕುಸಿದಿದೆ. ಇದಕ್ಕೆ ಕಾರಣವೇನು ಎಂಬ ಪ್ರಶ್ನೆಗೆ ಭಾರತೀಯ ತೈಲ ಗಿರಣಿಗಳ ಸಂಘವು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಯ ಲಭ್ಯತೆ ಕಡಿಮೆಯಾಗುತ್ತಿದೆ ಎಂದು ಉತ್ತರಿಸಿದೆ. ಆಮದು ಮತ್ತು ಸಂಗ್ರಹದಲ್ಲಿ ಇಳಿಕೆಯು ಅಡುಗೆ ಎಣ್ಣೆಯ ಬಳಕೆ ಕುಸಿದಿದೆ ಎಂಬುದನ್ನು ಸೂಚಿಸುತ್ತಿದೆಯೇ? ಭಾರತದಲ್ಲಿ ಅಡುಗೆ ಎಣ್ಣೆಯ ಬಳಕೆಯ ಬಗ್ಗೆ ಕೇಳಿದ ಪ್ರಶ್ನೆಗೆ ಕೇಂದ್ರ ಸರ್ಕಾರವು ಉತ್ತರವನ್ನೇ ನೀಡಿಲ್ಲ. ಸರ್ಕಾರವು ಆ ದತ್ತಾಂಶವನ್ನು ಬಿಡುಗಡೆ ಮಾಡಿದರೆ ನೈಜ ಸ್ಥಿತಿಯ ಚಿತ್ರಣ ದೊರೆಯಲಿದೆ

ಅಡುಗೆ ಎಣ್ಣೆ ಬಳಕೆ ಕುಸಿಯುತ್ತಿದೆಯೇ?



ಪ್ರಜಾವಾಣಿ ವಾರ್ತೆ

ಭಾರತವು ಆಮದು ಮಾಡಿಕೊಳ್ಳುತ್ತಿರುವ ಅಡುಗೆ ಎಣ್ಣೆಯ ಪ್ರಮಾಣವು ಕಳೆದ ಒಂದು ವರ್ಷದಲ್ಲಿ ಇಳಿಕೆಯ ಹಾದಿಯಲ್ಲಿಯೇ ಇದೆ ಎಂಬುದನ್ನು ಅಧಿಕೃತ ದತ್ತಾಂಶಗಳು ಹೇಳುತ್ತವೆ. 2023 ಡಿಸೆಂಬರ್‌ನಲ್ಲಿ ನಡೆದಿದ್ದ ಸಂಸತ್ತಿನ ಅಧಿವೇಶನದಲ್ಲಿ ಕೇಂದ್ರ ವಾಣಿಜ್ಯ ಸಚಿವಾಲಯಕ್ಕೆ ಈ ಬಗ್ಗೆ ಪ್ರಶ್ನೆಯನ್ನು ಕೇಳಲಾಗಿತ್ತು. 'ದೇಶದಲ್ಲಿ ಎಣ್ಣೆಕಾಳುಗಳ ಉತ್ಪಾದನೆ ಮತ್ತು ಅಡುಗೆ ಎಣ್ಣೆಯ ಬಳಕೆಯ ಬಗ್ಗೆ ವಿವರ ನೀಡಿ' ಎಂದು ಸಂಸದ ಜಿ.ಸಿ. ಚಂದ್ರಶೇಖರ್ ಅವರು ವಾಣಿಜ್ಯ ಸಚಿವಾಲಯವನ್ನು ಕೋರಿದ್ದರು. ಅದಕ್ಕೆ ಲಿಖಿತ ಉತ್ತರ ನೀಡಿದ್ದ ಸಚಿವಾಲಯವು, 'ಎಣ್ಣೆಕಾಳುಗಳ ಉತ್ಪಾದನೆಯ ಅಂದಾಜು ವಿವರ'ವನ್ನು ಸಂಸತ್ತಿನ ಮುಂದೆ ಇರಿಸಿತ್ತು.

ಅದರ ಜತೆಗೆ, 'ದೇಶದಲ್ಲಿ ಅಡುಗೆ ಎಣ್ಣೆಯ ಬಳಕೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಇದು ಭಾರತೀಯ ಕುಟುಂಬಗಳ ಆದಾಯದಲ್ಲಿ ಏರಿಕೆಯಾಗಿರುವುದನ್ನು ಸೂಚಿಸುತ್ತದೆ. ದೇಶೀಯ ಉತ್ಪಾದನೆಯು ದೇಶದ ಅಡುಗೆ ಎಣ್ಣೆಯ ಬೇಡಿಕೆಯನ್ನು ಪೂರೈಸುವುದಿಲ್ಲ. ಹೀಗಾಗಿ ನಮ್ಮ ಅಡುಗೆ ಎಣ್ಣೆ ಆಮದು ಸಹ ಸತತ ಏರಿಕೆಯ ಹಾದಿಯಲ್ಲಿದೆ' ಎಂದು ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಲೋಕಸಭೆಗೆ ಲಿಖಿತ ಉತ್ತರ ನೀಡಿದ್ದರು.

ಆದರೆ ದೇಶದಲ್ಲಿ ಅಡುಗೆ ಎಣ್ಣೆಯ ವಾರ್ಷಿಕ ಬಳಕೆ ಪ್ರಮಾಣ ಮತ್ತು ತಿಂಗಳ ಬಳಕೆ ಪ್ರಮಾಣದ ನಿಖರ ಮಾಹಿತಿಯನ್ನು ಅವರು ಲೋಕಸಭೆಗೆ ಒದಗಿಸಿರಲಿಲ್ಲ. 2018ರಿಂದ 2023ರವರೆಗಿನ ಬಳಕೆಯ ಪ್ರಮಾಣದ ವಿವರವನ್ನು ಒದಗಿಸಿ ಎಂದು ಕೋರಿದ್ದರೂ ಆ ಪ್ರಶ್ನೆಗೆ ಲಿಖಿತ ಉತ್ತರದಲ್ಲಿ ವಿವರ ಒದಗಿಸಿರಲಿಲ್ಲ. ಅಧಿಕೃತ ದತ್ತಾಂಶದ ಪ್ರಕಾರ ಹಿಂದಿನ ಏಳು–ಎಂಟು ತಿಂಗಳಿನಲ್ಲಿ ದೇಶದಲ್ಲಿನ ಎಣ್ಣೆಯ ಸಂಗ್ರಹದ ಪ್ರಮಾಣ ಕುಸಿತದ ಹಾದಿಯಲ್ಲಿಯೇ ಇದೆ. ಹಿಂದಿನ ಮೂರು ತಿಂಗಳ ಆಮದು ಸಹ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಬೇಡಿಕೆ ಹೆಚ್ಚಾಗಿದ್ದರೆ ಮತ್ತು ದೇಶೀಯ ಉತ್ಪಾದನೆ ಕಡಿಮೆ ಇದ್ದರೆ ಆಮದು ಏರಿಕೆಯಾಗಬೇಕಿತ್ತಲ್ಲವೇ. ಈ ಅಂಶವನ್ನು ಸರ್ಕಾರವು ಸ್ಪಷ್ಟಪಡಿಸಿಲ್ಲ.

ಅಡುಗೆ ಎಣ್ಣೆ ಸಂಗ್ರಹ ಭಾರಿ ಕುಸಿತ

ಪ್ರತಿ ತಿಂಗಳ ಮೊದಲ ದಿನಕ್ಕೆ ಅನ್ವಯವಾಗುವಂತೆ ದೇಶದ ಬಂದರುಗಳು ಮತ್ತು ಸಾಗಣೆಯಲ್ಲಿರುವ ಅಡುಗೆ ಎಣ್ಣೆಯ ಪ್ರಮಾಣವನ್ನು ಲೆಕ್ಕ ಹಾಕಲಾಗುತ್ತದೆ. ಫೆಬ್ರುವರಿ 1ರ ಅಂತ್ಯಕ್ಕೆ ನಡೆಸಲಾದ ಲೆಕ್ಕಾಚಾರದಂತೆ ದೇಶದಲ್ಲಿ 26.49 ಲಕ್ಷ ಟನ್‌ಗಳಷ್ಟು ಅಡುಗೆ ಎಣ್ಣೆ ಸಂಗ್ರಹವಿತ್ತು. ಇದು ಈ ಹಿಂದಿನ 13 ತಿಂಗಳಲ್ಲೇ ಅತ್ಯಂತ ಕನಿಷ್ಠ ಸಂಗ್ರಹ.

ಇದು ಅಡುಗೆ ಎಣ್ಣೆಗೆ ಬೇಡಿಕೆ ಕುಸಿದಿರುವುದರ ಸೂಚನೆಯೇ? ಭಾರತೀಯರು ಅಡುಗೆ ಎಣ್ಣೆಯ ಬಳಕೆಯನ್ನು ಕಡಿಮೆ ಮಾಡಿದ್ದಾರೆಯೇ ಎಂಬ ಪ್ರಶ್ನೆಗಳನ್ನು ಎತ್ತುತ್ತದೆ. ಈ ಪ್ರಶ್ನೆಗಳನ್ನೇ ಲೋಕಸಭೆಯಲ್ಲಿ ಕೇಳಲಾಗಿತ್ತು. ಆದರೆ ಬಳಕೆಯಲ್ಲಿನ ಏರಿಳಿತದ ಬಗ್ಗೆ ಕೇಂದ್ರ ಸರ್ಕಾರವು ಯಾವುದೇ ಮಾಹಿತಿ ನೀಡಿಲ್ಲ.

ವಿವಿಧ ಋತುಗಳಲ್ಲಿ ಅಡುಗೆ ಎಣ್ಣೆಯ ಬಳಕೆ ಇಳಿಕೆಯಾಗುತ್ತದೆ ಮತ್ತು ಏರಿಕೆಯಾಗುತ್ತದೆ. ದೇಶದಲ್ಲಿನ ಅಡುಗೆ ಎಣ್ಣೆಯ ಸಂಗ್ರಹವೂ ಪರೋಕ್ಷವಾಗಿ ಬಳಕೆಯಲ್ಲಿನ ಏರಿಳಿತವನ್ನು ಸೂಚಿಸುತ್ತದೆ. ಯಾವುದೋ ಒಂದು ವರ್ಷದ ತಿಂಗಳೊಂದರಲ್ಲಿ ಇದ್ದ ಸಂಗ್ರಹ ಪ್ರಮಾಣವು, ಅದರ ಮುಂದಿನ ವರ್ಷದ ಅದೇ ತಿಂಗಳಿನಲ್ಲಿ ಸರಿಸುಮಾರು ಅಷ್ಟೇ ಇರುತ್ತದೆ. ಆದರೆ 2023ರ ಫೆಬ್ರುವರಿಯಲ್ಲಿ ದೇಶದ ವಿವಿಧ ಬಂದರುಗಳು ಮತ್ತು ಸಾಗಣೆಯಲ್ಲಿ ಇದ್ದ ಅಡುಗೆ ಎಣ್ಣೆಯ ಪ್ರಮಾಣಕ್ಕೆ ಹೋಲಿಸಿದರೆ, 2024ರ ಫೆಬ್ರುವರಿಯಲ್ಲಿ ಭಾರಿ ಪ್ರಮಾಣದ ಕುಸಿತ ಉಂಟಾಗಿದೆ. ಎರಡೂ ತಿಂಗಳಲ್ಲಿನ ಸಂಗ್ರಹದ ನಡುವಣ ವ್ಯತ್ಯಾಸ ಶೇ 22.5ರಷ್ಟಿದೆ. ಅಡುಗೆ ಎಣ್ಣೆಯ ಆಮದಿನಲ್ಲಿನ ಇಳಿಕೆಯೂ ಸರಿಸುಮಾರು ಇಷ್ಟೇ ಇದೆ. ಒಟ್ಟಾರೆ ಇದು ಬಳಕೆ ಪ್ರಮಾಣ ಕುಸಿದಿರುವುದನ್ನು ಸೂಚಿಸುತ್ತದೆ.

ಆಧಾರ: ಲೋಕಸಭೆಗೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ನೀಡಿದ ಲಿಖಿತ ಉತ್ತರಗಳು, ಭಾರತೀಯ ತೈಲ ಗಿರಣಿಗಳ ಸಂಘದ ಮಾಸಿಕ ಪ್ರಕಟಣೆಗಳು



ಸಸ್ಯಜನ್ಯ ತೈಲ ಆಮದು ಭಾರಿ ಇಳಿಕೆ

ಒಟ್ಟು ಆಮದು (ಲಕ್ಷ ಟನ್‌ಗಳಲ್ಲಿ)



ಭಾರತವು ಆಮದು ಮಾಡಿಕೊಳ್ಳುವ ಸಸ್ಯಜನ್ಯ ತೈಲದ ಪ್ರಮಾಣವು ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಇದು ಅಡುಗೆ ಎಣ್ಣೆ ಮತ್ತು ಕೈಗಾರಿಕೆಗಳಲ್ಲಿ ಬಳಸುವ ಸಸ್ಯಜನ್ಯ ಎಣ್ಣೆಯನ್ನೂ ಒಳಗೊಂಡಿದೆ. 2022–23ನೇ ಸಾಲಿನ ನವೆಂಬರ್, ಡಿಸೆಂಬರ್ ಮತ್ತು ಜನವರಿಯಲ್ಲಿ ದೇಶವು ಆಮದು ಮಾಡಿಕೊಂಡಿದ್ದ ಎಣ್ಣೆಯ ಪ್ರಮಾಣಕ್ಕೆ ಹೋಲಿಸಿದರೆ 2023–24ನೇ ಸಾಲಿನ ಇದೇ ಅವಧಿಯಲ್ಲಿ ಮಾಡಿಕೊಳ್ಳಲಾದ ಆಮದು ಭಾರಿ ಇಳಿಕೆಯಾಗಿದೆ.

ವಿಶ್ವದ ವಿವಿಧೆಡೆ ನಡೆಯುತ್ತಿರುವ ಯುದ್ಧ ಮತ್ತು ಸರಕು ಸಾಗಣೆ ಹಡಗುಗಳ ಮೇಲಿನ ದಾಳಿಗಳ ಕಾರಣದಿಂದ ಪೂರೈಕೆ ವಿಳಂಬವಾಗುತ್ತಿದೆ. ಹೀಗಾಗಿ ಆಮದು ಪ್ರಮಾಣವೂ ಕಡಿಮೆ ಆಗಿದೆ ಎಂದು ವಾಣಿಜ್ಯ ಸಚಿವಾಲಯವು ಹೇಳಿದೆ. ಆದರೆ ಭಾರತವು ಆಗ್ನೇಯ ಏಷ್ಯಾ ದೇಶಗಳಿಂದ ಈ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಆ ದೇಶಗಳಿಂದ ಭಾರತಕ್ಕೆ ಸಂಪರ್ಕ ಕಲ್ಪಿಸುವ ಸಮುದ್ರ ಮಾರ್ಗದಲ್ಲಿ ಈ ಅವಧಿಯಲ್ಲಿ ಯಾವುದೇ ತೊಡಕುಗಳು ಇರಲಿಲ್ಲ. ಭಾರತದಿಂದ ಖರೀದಿಯೇ

47.46 ಲಕ್ಷ ಟನ್

2022ರ ನವೆಂಬರ್‌ನಿಂದ 2023ರ ಜನವರಿವರೆಗೆ ದೇಶವು ಆಮದು ಮಾಡಿಕೊಂಡ ಅಡುಗೆ ಎಣ್ಣೆ

36.47 ಲಕ್ಷ ಟನ್

2023ರ ನವೆಂಬರ್‌ನಿಂದ 2024ರ ಜನವರಿವರೆಗೆ ದೇಶವು ಆಮದು ಮಾಡಿಕೊಂಡ ಅಡುಗೆ ಎಣ್ಣೆ

47.73 ಲಕ್ಷ ಟನ್

2023ರ ನವೆಂಬರ್‌ನಿಂದ 2024ರ ಜನವರಿವರೆಗೆ ದೇಶವು ಆಮದು ಮಾಡಿಕೊಂಡ ಒಟ್ಟು ಸಸ್ಯಜನ್ಯ ಎಣ್ಣೆ

36.73 ಲಕ್ಷ ಟನ್

2023ರ ನವೆಂಬರ್‌ನಿಂದ 2024ರ ಜನವರಿವರೆಗೆ ದೇಶವು ಆಮದು ಮಾಡಿಕೊಂಡ ಒಟ್ಟು ಸಸ್ಯಜನ್ಯ ಎಣ್ಣೆ

- ಈ ಅವಧಿಯಲ್ಲಿ ಅಡುಗೆ ಎಣ್ಣೆ ಆಮದಿನಲ್ಲಿ ಶೇ 23.15ರಷ್ಟು ಇಳಿಕೆಯಾಗಿದೆ
- ಇದೇ ಅವಧಿಯಲ್ಲಿ ಸಸ್ಯಜನ್ಯ ಎಣ್ಣೆಯ ಒಟ್ಟು ಆಮದಿನಲ್ಲಿ ಶೇ 23.04ರಷ್ಟು ಇಳಿಕೆಯಾಗಿದೆ
- ಒಟ್ಟು ಎಣ್ಣೆಯ ಆಮದಿನಲ್ಲಿ ಗರಿಷ್ಠ ಕುಸಿತ ಕಂಡಿರುವುದು 2024ರ ಜನವರಿಯಲ್ಲಿ. 2023ರ ಜನವರಿಗೆ ಹೋಲಿಸಿದರೆ, 2024ರ ಜನವರಿಯಲ್ಲಿ ಮಾಡಿಕೊಳ್ಳಲಾದ ಅಡುಗೆ ಎಣ್ಣೆ ಆಮದಿನಲ್ಲಿ

ಸಿನಿ ಬಿಟ್ಸ್

ಉತ್ತರ ಕರ್ನಾಟಕದ ಪ್ರೇಮ ಕಥೆ

ಧರ್ಮಕೀರ್ತಿರಾಜ್, ಕಾವ್ಯ ಭಗವಂತ

ನಟ ಧರ್ಮಕೀರ್ತಿರಾಜ್, ಕಾವ್ಯ ಭಗವಂತ ಜೋಡಿಯಾಗಿ ನಟಿಸುತ್ತಿರುವ 'ಯುಕೆ ಲವ್ ಸ್ಟೋರಿ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ನಟ ಅಜಯ್‌ರಾವ್ ಪ್ರಥಮ ದೃಶ್ಯಕ್ಕೆ ಚಾಲನೆ ನೀಡಿ ತಂಡಕ್ಕೆ ಶುಭ ಹಾರೈಸಿದರು. ವಿಜಯ್ ನಿರ್ದೇಶಿಸುತ್ತಿರುವ ಈ ಚಿತ್ರಕ್ಕೆ ರೋಮನಾಸ್ ಕ್ರಿಯೇಶನ್ಸ್ ಅಡಿಯಲ್ಲಿ ಎಸ್. ಜೆ.ಸುರೇಶ್ ಆರೋಕ್ಯರಾಜ್ ಬಂಡವಾಳ ಹೂಡುತ್ತಿದ್ದಾರೆ.

'ಯುಕೆ ಎಂದರೆ ಉತ್ತರ ಕರ್ನಾಟಕ. ಆ ಭಾಗದಲ್ಲಿ ನಡೆಯುವ ರಗಡ್ ಪ್ರೀತಿಯ ಕಥೆಯಿದು. ಅಲ್ಲಿನ ಜನರ ಒಡನಾಟ, ಭಾಷೆ ತಿಳಿದುಕೊಂಡು, ಸುಮಾರು ಆರು ತಿಂಗಳುಗಳ ಕಾಲ ಅವರೊಂದಿಗಿದ್ದು ಚಿತ್ರಕಥೆ ಸಿದ್ಧಪಡಿಸಿದ್ದೇನೆ. ಶಂಕರ್‌ನಾಗ್ ನನ್ನ ಸಿನಿಪಯಣಕ್ಕೆ ಆದರ್ಶ' ಎಂದರು ನಿರ್ದೇಶಕರು.

ಒರಟು ಸ್ವಭಾವದ ಹಳ್ಳಿ ಹುಡುಗನಾಗಿ ಧರ್ಮ ಕೀರ್ತಿರಾಜ್ ಕಾಣಿಸಿಕೊಂಡಿದ್ದಾರೆ. ಸಾಧು ಕೋಕಿಲ, ಬಲ ರಾಜವಾಡಿ, ಜಿ.ಜಿ. ಗೋವಿಂದೆಗೌಡ, ರವಿರೆಡ್ಡಿ, ಮಂಡ್ಯ ಸಿದ್ದು ಮುಂತಾದವರ ತಾರಾಬಳಗವಿದೆ. ಡಾ.ಕಿರಣ್ ತೋಟಂಬೈಲ್ ಸಂಗೀತ ಸಂಯೋಜಿಸುತ್ತಿದ್ದಾರೆ. ವಿ.ಪಳನಿವೇಲು ಛಾಯಾಚಿತ್ರಗ್ರಹಣ, ಸಿ.ಕೆ.ಕುಮಾರ್ ಸಂಕಲನ ಚಿತ್ರಕ್ಕಿದೆ. ಕಲಬುರಗಿ, ಕೊಳ್ಳೇಗಾಲ, ಯಾದಗಿರಿ, ಹುಬ್ಬಳ್ಳಿ, ಬೆಳಗಾವಿ ಮೊದಲಾದೆಡೆ ಚಿತ್ರೀಕರಣ ನಡೆಸಲು ತಂಡ ಆಲೋಚಿಸಿದೆ.

'ಕಲಿ ಕುಡುಕರ' ಲೋಕದಲ್ಲಿ...

ರಿತ್ಯಾ, ಮಹೇಶ್

ಬಹುತೇಕ ಹೊಸಬರೇ ಸೇರಿ ನಿರ್ಮಿಸಿರುವ 'ಕಲಿ ಕುಡುಕರು' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎ.ಎಂ ಕ್ರಿಯೇಷನ್ ಬ್ಯಾನರ್ ಅಡಿ ಮಹೇಶ್ ಎನ್. ನಿರ್ಮಾಣ ಮಾಡಿರುವ ಚಿತ್ರಕ್ಕೆ ಕರಣ್ ಸವ್ಯಸಾಚಿ ಆ್ಯಕ್ಷನ್ ಕಟ್ ಹೇಳಿದ್ದಾರೆ.

'ಚಿತ್ರದಲ್ಲಿ ನಾಲ್ಕು ಮುಖ್ಯ ಪಾತ್ರಗಳಿದ್ದು, ಓರ್ವ ಆಟೋ ಡ್ರೈವರ್. ಇನ್ನೊಬ್ಬ ಉಂಡಾಡಿ ಗುಂಡ, ಮತ್ತೊಬ್ಬ ರಿಯಲ್ ಎಸ್ಟೇಟ್ ಬ್ರೋಕರ್. ನಾಲ್ಕನೆಯವನು ನಿರುದ್ಯೋಗಿ. ಇವರ ಸುತ್ತ ಸಾಗುವ ಕಥೆ. ತಮ್ಮ ಕುಟುಂಬದಲ್ಲಿ ಆಗುವ ಸಮಸ್ಯೆಗಳಿಂದ ಇವರೆಲ್ಲ ಕುಡಿತದ ದಾಸರಾಗುತ್ತಾರೆ. ನಂತರ ಏನಾಗುತ್ತದೆ ಎಂಬುದನ್ನು ಚಿತ್ರದಲ್ಲೇ ನೋಡಬೇಕು' ಎನ್ನುತ್ತಾರೆ ನಿರ್ದೇಶಕ ಕರಣ್.

'ಚಿತ್ರದ ಮೂಲಕ ಕುಡಿಯುವುದರಿಂದ ಏನೆಲ್ಲ ಆಗಲಿದೆ ಎನ್ನುವುದನ್ನು ತೋರಿಸಿದ್ದೇವೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದ್ದು ಈ ತಿಂಗಳ ಅಂತ್ಯದಲ್ಲಿ ಚಿತ್ರ ಬಿಡುಗಡೆ ಮಾಡುವ ಉದ್ದೇಶವಿದೆ' ಎಂದು ನಿರ್ಮಾಪಕರು ತಿಳಿಸಿದರು.

ರಿತ್ಯಾ, ಸೋನು ದೀಪು, ನಾಗೇಂದ್ರ ಅರಸ್ ಮತ್ತಿತರರು ಚಿತ್ರದಲ್ಲಿದ್ದಾರೆ. ಚಿತ್ರಕ್ಕೆ ಸನ್ನಿ ಮಾಧವನ್ ಸಂಗೀತವಿದ್ದು ಎರಡು ಹಾಡುಗಳಿವೆ. ಚಿತ್ತೋರ್ ಸೂರಿ ಛಾಯಾಚಿತ್ರಗ್ರಹಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಿರಿಯರೊಂದಿಗೆ ಇರುವ, ಅವರೊಂದಿಗೆ ಮಾತನಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. 'ಭಾರತ ಸರಕಾರದ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ತಂದೆಯನ್ನು ಭೇಟಿಯಾಗಲು ಹೋದಾಗ ಅವರ ಮನೆಯ ಅವಸ್ಥೆ ನೋಡಿ. ನಮ್ಮ ಊರುಗಳ ನಗರ ಸೇವಕರ ಮನೆಗಳೂ ಉಚ್ಛ ಸ್ಥಿತಿಯಲ್ಲಿ ಇರುತ್ತವೆ. ಆದರೆ ದೇಶದ ಆರ್ಥಿಕ ಧೋರಣೆ ನಿರ್ಧರಿಸುವ ಮೋದಿ ಸರಕಾರದ ಈ ಮಹಿಳಾ ಮಂತ್ರಿಯ ಸಾದಾತನ, ಸಭ್ಯತೆ ಉಳಿದ ರಾಜಕಾರಣಿಗಳಿಗೆ ಮಾದರಿ ಆಗಬೇಕು' ಎಂಬ ಪೋಸ್ಟ್ ಅನ್ನು ಈ ವಿಡಿಯೊದೊಂದಿಗೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ತಪ್ಪುದಾರಿಗೆಳೆಯುವ ಸುದ್ದಿಯಾಗಿದೆ.

ವಿಡಿಯೊದಲ್ಲಿರುವ ದೃಶ್ಯಗಳ ರಿವರ್ಸ್ ಇಮೇಜ್ ಮಾಡಿದಾಗ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂಗಳಲ್ಲಿ ಹಂಚಿಕೆಯಾದ ಇದೇ ಮಾದರಿಯ ವಿಡಿಯೊ ದೊರಕಿತು. ಎರಡೂ ವಿಡಿಯೊಗಳಲ್ಲಿ ಇರುವ ದೃಶ್ಯಗಳನ್ನು ಗಮನಿಸಿದಾಗ, ಎರಡೂ ವಿಡಿಯೊಗಳು ಒಂದೇ ಆಗಿದೆ ಎಂದು ತಿಳಿದುಬಂದಿತು. ಈ ವಿಡಿಯೊವು 2022ರ ಡಿಸೆಂಬರ್ 3ರಂದು ಹಾಗೂ 4ರಂದು ನಿರ್ಮಲಾ ಅವರ ಅಧಿಕೃತ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಕ್ರಮವಾಗಿ ಹಂಚಿಕೆಯಾಗಿದೆ. 'ವಾರಾಣಸಿಯಲ್ಲಿರುವ ಸಿವ ಮಡಂಗೆ ನಿನ್ನೆ ಭೇಟಿ ನೀಡಿದೆ. ಮಹಾಕವಿ ಭಾರತೀಯಾರ್ ಅವರ ಕುಟುಂಬದೊಂದಿಗೆ ಮಾತುಕತೆ ನಡೆಸಿದೆ. ಭಾರತೀಯಾರ್ ಅವರ ಸೋದರಳಿಯನ ಮಗ 96 ವರ್ಷದ ಶ್ರೀ ಕೆ.ವಿ. ಕೃಷ್ಣನ್ ಅವರನ್ನೂ ಭೇಟಿ ಮಾಡಿದೆ' ಎಂದು ಬರೆದುಕೊಂಡಿದ್ದಾರೆ. ಆದ್ದರಿಂದ, ವಿಡಿಯೊದಲ್ಲಿರುವವರು ನಿರ್ಮಲಾ ಅವರ ತಂದೆ ಅಲ್ಲ, ಬದಲಿಗೆ ಖ್ಯಾತ ಕವಿ, ತಮಿಳುನಾಡಿನ ಭಾರತೀಯಾರ್ ಅವರ ಕುಂಟುಂಬಸ್ಥ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಫೆಬ್ರುವರಿ 15, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಷಷ್ಠಿ ಗಂ. 10-13 ನಕ್ಷತ್ರ: ಅಶ್ವಿನಿ ಗಂ. 09-26 ಯೋಗ: ಶುಕ್ಲ (ಶುಕ್ರ) ಗಂ. 17-22 ಕರಣ: ತೈತಿಲ ಗಂ. 10-13, ಕುಂಭ ಮಾಸದ 02 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 3.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-57 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 04 ಶಬನ್
ಅದೃಷ್ಟ ಸಂಖ್ಯೆ : 3, 7

ಮೇಷ: ಕಾನೂನು ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಹೆಚ್ಚಿನ ಪ್ರಗತಿ ಹೊಂದುವರು. ಹಣಕಾಸಿನ ವಿಚಾರದಲ್ಲಿ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿಯ ಪ್ರಸಂಗ ಇದ್ದೀತು. ಸುಬ್ರಹ್ಮಣ್ಯನನ್ನು ಪೂಜಿಸಿ.

ವೃಷಭ: ಉದ್ಯೋಗ ಸಿಗುವ ಸಮಯದಲ್ಲೇ ವೇತನದ ಬಗ್ಗೆ ಹೆಚ್ಚಿನ ಗಮನ ನೀಡುವುದು ಸರಿಯಲ್ಲ. ಋಣಬಾಧೆಯಿಂದ ಮುಕ್ತರಾಗಲು ಇರುವ ಮಾರ್ಗದ ಬಗ್ಗೆ ಗಮನನೀಡಿ. ಅನಿರೀಕ್ಷಿತ ಧನಲಾಭ ಉಂಟಾಗುವುದು.

ಮಿಥುನ: ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಕೂಡ ಅಗತ್ಯವಿರುತ್ತದೆ. ನೌಕರ ವರ್ಗದವರ ಕಠಿಣ ದುಡಿಮೆಗೆ ಸೂಕ್ತ ಪ್ರತಿಫಲ ದೊರೆಯುವುದು.

ಕರ್ಕಾಟಕ: ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಪ್ರಮುಖ ಸ್ಥಾನ ಪಡೆಯಲು ಹೆಚ್ಚಿನ ತಯಾರಿ ನಡೆಸುವಿರಿ. ಸಂಜೆಯ ಸಮಯದಲ್ಲಿ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ. ಜಾಗ್ರತೆ ವಹಿಸಿ.

ಸಿಂಹ: ಹಲವು ಬಗೆಯ ಅವಕಾಶಗಳು ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ಜಮೀನು ಅಥವಾ ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳುವಿರಿ. ತಂದೆಯಾಗಲಿರುವ ಸುದ್ದಿ ಕೇಳಿ ಸಂಭ್ರಮಿಸುವಿರಿ.

ಕನ್ಯಾ: ಹೊರ ದೇಶದಲ್ಲಿರುವ ಮಕ್ಕಳು ಮನೆಗೆ ಬರುವಂಥ ಸಂತಸದ ಸುದ್ದಿ ಕೇಳಿ ಬರುತ್ತದೆ. ಆತ್ಮಸ್ಥೈರ್ಯ ಹೆಚ್ಚಾಗಿ ಕೆಲಸ ಹುರುಪಿನಿಂದ ಸಾಗುವುದು. ವಿದ್ಯಾರ್ಥಿಗಳ ಮನೋಕಾಮನೆಗಳು ಪೂರ್ಣಗೊಳ್ಳುವುದು.

ತುಲಾ: ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವುದು ಸೂಕ್ತ. ನಿಮಗೆ ಸಂಬಂಧವಿಲ್ಲದ ವಿಚಾರಗಳಿಂದ, ವಿವಾದಗಳಿಂದ ದೂರ ಉಳಿಯುವುದು ಶೋಭೆ ತರಲಿದೆ.

ವೃಶ್ಚಿಕ: ಆದಾಯ ವೃದ್ಧಿಯೂ ವ್ಯಯಾಧಿಕ್ಯವೂ ಸಮತೋಲನವನ್ನು ಸಾಧಿಸುವುದು. ದೇಹದಲ್ಲಿ ಉಷ್ಣಾಂಶ ಅಧಿಕವಾಗುವುದರಿಂದ ಸಣ್ಣ-ಪುಟ್ಟ ಅನಾರೋಗ್ಯ ಎದುರಾಗಬಹುದು. ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯಿರಿ.

ಧನು: ಅನಾರೋಗ್ಯದ ಕಾರಣದಿಂದ ಹಣಕಾಸಿನ ಅನಿವಾರ್ಯತೆಯನ್ನು ಎದುರಿಸಬೇಕಾಗಲಿದೆ. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು. ಜಮೀನಿನ ಕೆಲಸಗಳು ಯಾವುದೇ ತೊಂದರೆ ಇಲ್ಲದೆ ನೆರವೇರಲಿವೆ.

ಮಕರ: ಕೆಲಸದ ಹೊರತಾಗಿ ಕೆಲ ಸಮಯ ಇತರೆ ಸಂಗತಿಗಳ ಬಗ್ಗೆ ಗಮನ ಕೊಡುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುವುದು. ದೇವತಾ ಕಾರ್ಯಗಳನ್ನು ನಡೆಸುವುರಿಂದ ಶುಭವಾಗಲಿದೆ.

ಕುಂಭ: ಮುಂಬಡ್ತಿಯ ವಿಚಾರವಾಗಿ ಹೋರಾಟ ನಡೆಸುವುದು ವ್ಯರ್ಥವಾಗು-ವುದು. ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಕಲೆಯನ್ನು ಕಲಿಯಬೇಕಾಗು-ವುದು. ಜವಳಿ ವ್ಯಾಪಾರಿಗಳಿಗೆ ವ್ಯಾಪಾರವಿರುವುದು.

ಮೀನ: ಕಾರ್ಯಕ್ಷೇತ್ರದಲ್ಲಿ ಶತ್ರುಗಳು ಹಿನ್ನಡೆ ಅನುಭವಿಸಿ ಮನಸ್ಸಿಗೆ ಸಮಾಧಾನ ದೊರಕಲಿದೆ. ಸಹಾಯಕರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮವೆಂದು ಅನಿಸಲಿದೆ.

ಪ್ರಯತ್ನದಿಂದ ಎಲ್ಲವೂ ಸಾಧ್ಯ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಆನಂದ್ ಕೃಷ್ಣನ್ ಮಲೇಷ್ಯಾದ ಮೂರನೇ ಅತ್ಯಂತ ದೊಡ್ಡ ಶ್ರೀಮಂತ. ಅವರ ಆಸ್ತಿಯ ಮೌಲ್ಯ ಸುಮಾರು ನಲವತ್ತೆಂಟು ಸಾವಿರ ಕೋಟಿ ರೂಪಾಯಿ. ಬೌದ್ಧ ಧರ್ಮೀಯರಾದ ಅವರು ದಾನ ಧರ್ಮಕ್ಕೂ ಹೆಸರಾದವರೇ. ಆದರೆ ಈ ಕೋಟ್ಯಧಿಪತಿಯ ಪುತ್ರ ವೆನ್ ಅಜನ್ ಸಿರಿಪನ್ನೋ ಆಯ್ಕೆ ಮಾಡಿಕೊಂಡಿದ್ದು ಮಾತ್ರ ವಿಶಿಷ್ಟ ಹಾದಿಯನ್ನು. ಇಂಗ್ಲೆಂಡಿನಲ್ಲಿ ಹುಟ್ಟಿ ಬೆಳೆದ, ಎಂಟು ಭಾಷೆಗಳನ್ನು ಬಲ್ಲ ಸಿರಿಪನ್ನೋ ಹದಿನೆಂಟು ವರ್ಷದವರಿರುವಾಗಲೇ ಸನ್ಯಾಸಿಯಾಗುವ ನಿರ್ಧಾರ ಮಾಡಿದ್ದರು. ಅವರು ಮೊದಲಿಗೆ ಈ ಯೋಚನೆ ಮಾಡಿದ್ದು ತಮಾಷೆಗಾಗಿಯಂತೆ. ಸನ್ಯಾಸದ ಬದುಕು ಹೇಗಿರುತ್ತದೆ ನೋಡೋಣ ಎಂಬ ಕುತೂಹಲದಿಂದಾಗಿ. ಆದರೆ ಕೆಲವು ವರ್ಷಗಳು ಕಳೆದಂತೆ ಸರಳ ಬದುಕು ಅವರಿಗೆ ಅಭ್ಯಾಸವಾಗಿ ಹೋಯಿತು. ಸುಖದ ಸುಪ್ಪತ್ತಿಗೆಗಿಂಥ ಪ್ರಕೃತಿಯ ಮಡಿಲಿನ ಶಾಂತ ಸರಳ ಜೀವನ ಶ್ರೇಷ್ಠವೆಂಬ ಅರಿವಾಯಿತು. ತಮಾಷೆಗೆಂದು ಹಿಡಿದ ದಾರಿ ಅವರ ಬದುಕೇ ಆಗಿಹೋಯಿತು.

ಕಳೆದ ನಾಲ್ಕು ದಶಕಗಳಿಂದ ಸನ್ಯಾಸಿಯಾಗಿರುವ ಅಜನ್ ಸಿರಿಪನ್ನೋ ಎಂಬ ವಿಶ್ವವಿಖ್ಯಾತ ಸನ್ಯಾಸಿ ಈಗ ಥಾಯ್ಲೆಂಡ್‌ನ ಆಶ್ರಮವೊಂದರ ಮುಖ್ಯಸ್ಥರಾಗಿ ಬುದ್ಧನ ಬೋಧನೆಗಳನ್ನು ಆಸಕ್ತರಿಗೆ ತಲುಪಿಸುತ್ತಿದ್ದಾರೆ. ಯಾವುದಾದರೂ ಅಭ್ಯಾಸ ಕಷ್ಟವೆನಿಸುವುದು ರೂಢಿಯಾಗುವವರೆಗೆ ಮಾತ್ರ. ನಂತರ ಅದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿಬಿಡುತ್ತದೆ. ಅದಕ್ಕೇ ಮಾಡಲು ಕಷ್ಟವೆನಿಸುವ ಯಾವುದಾದರೂ ಒಳ್ಳೆಯ ಕೆಲಸವನ್ನು ಇಪ್ಪತ್ತೊಂದು ದಿನಗಳ ಕಾಲ ಮಾಡಿಬಿಟ್ಟರೆ ಅದು ಅಭ್ಯಾಸವಾಗಿಬಿಡುತ್ತದೆ ಎನ್ನುತ್ತಾರೆ. ಕೋಟ್ಯಧಿಪತಿ ಆಗಿರುವ ವ್ಯಕ್ತಿ, ಬಯಸಿದ್ದನ್ನೆಲ್ಲ ಕ್ಷಣಾರ್ಧದಲ್ಲಿ ಪಡೆಯುವ ಸಾಮರ್ಥ್ಯವಿರುವ ವ್ಯಕ್ತಿಯೇ ಭಿಕ್ಷೆ ಬೇಡುವ, ದೇಹದಂಡನೆಯಂತಹ ಕಠಿಣ ಜೀವನಶೈಲಿಯನ್ನು ತಮ್ಮದಾಗಿಸಿಕೊಂಡರೆಂದರೆ ಬೇರೆ ಯಾವ ಕೆಲಸವೂ ಕಷ್ಟಕರವಾಗಲಾರದು.

ಇವರ ಸಂಗತಿಯನ್ನು ಏಕೆ ಬರೆದೆನೆಂದರೆ ನಾವು ಬದುಕಿನಲ್ಲಿ ಬಹಳ ನೆಪಗಳನ್ನು ಹೇಳುತ್ತೇವೆ. ನಮಗೆ ಇಷ್ಟವಿಲ್ಲದ ಆದರೆ ಬದುಕಿಗೆ ಅಗತ್ಯವಿರುವ ಸಂಗತಿಗಳನ್ನು ಮಾಡುವುದನ್ನು ಮುಂದೂಡುತ್ತೇವೆ. ಆದರೆ ಇಷ್ಟವಿಲ್ಲದಿದ್ದರೂ, ಕಷ್ಟವಾದರೂ ಒಮ್ಮೆ ಶುರು ಮಾಡಿದರೆ, ಹೇಗೂ ಆರಂಭಿಸಿದ್ದೇವೆಂದು ಮುನ್ನಡೆದರೆ ಎಂತಹ ಕೆಲಸವೂ ಸರಾಗವಾಗುತ್ತದೆ. ಬಂಡೆಗಲ್ಲಿನಷ್ಟು ಭಾರವಾಗಿದ್ದ ಕೆಲಸಗಳು ಹೂವೆತ್ತಿದಷ್ಟು ಹಗುರವೆನಿಸುತ್ತವೆ. ಮೊದಲ ಹೆಜ್ಜೆಯಿಡುವಾಗ ಅಸಾಧ್ಯ ಎನಿಸುತ್ತಿದ್ದ ಹಾದಿ ಗುರಿಯ ಹತ್ತಿರ ಬಂದಂತೆ ಸುಲಲಿತವಾಗಿ ಸಾಗುತ್ತದೆ. ಮನುಷ್ಯ ಮಾತ್ರರಿಂದ ಹೇಗೆ ಸಾಧ್ಯ ಎಂದು ಅನುಮಾನಿಸುತ್ತಿದ್ದ ಅದೆಷ್ಟೋ ಸಂಗತಿಗಳು ಮನುಷ್ಯನ ಎಡೆಬಿಡದ ಪರಿಶ್ರಮದಿಂದ ಮತ್ತು ಛಲದಿಂದ ಸಾಧ್ಯವಾಗಿವೆ. ವಾಹನ ಚಾಲನೆಯಾಗಲೀ, ಬೆಳಿಗ್ಗೆ ಏಳುವುದಿರಲಿ, ಕೆಟ್ಟ ಅಭ್ಯಾಸಗಳನ್ನು ಬಿಡುವುದಿರಲಿ ಎಲ್ಲವೂ ಪ್ರಯತ್ನದಿಂದ ಸಾಧ್ಯ. ಕಷ್ಟ ಎಂದುಕೊಂಡು ಪ್ರಯತ್ನ ಮಾಡದೇ ಇರುವುದೇ ದೊಡ್ಡ ಸಮಸ್ಯೆ.

ಪದಬಂಧ 5592

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜರಿಯದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
3.ಜಲದಲ್ಲಿರುವ ತೊಡಕು (3)
4.ವೇದೋಕ್ತ ವಿಧಿಗಳನ್ನು ಮಾಡಿಸುವವನು (4)
6.ಒಲುಮೆಯಿಂದ ಮಾಡಿರುವ ಒತ್ತಾಯ (3)
8.ಕಾರನ್ನೇರಿದ ಉದ್ದೇಶ ಇಲ್ಲಿದೆ (3)
9.ಬೆಂದಕ್ಕಿ ಕಾಳು (3)
10.ಬದಲಾಗತಕ್ಕ ಮನೋವೃತ್ತಿ (3)
12.ಸರ ಧರಿಸಿ ಮಾಡಿದ ವ್ಯಾಯಾಮ (4)
14.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
15.ಬಲು ಸೂಕ್ಷ್ಮ ಎಳೆಯಿದು (4)

ಮೇಲಿಂದ ಕೆಳಕ್ಕೆ

1.ಜಟಿಲತೆಯಿಂದ ಸಂಗ್ರಹಿಸಿದ ನೀರು (2)
2.ಪುರಿಯೊಳಗಡಗಿರುವ ಶತ್ರು (2)
3.ಹರಾಜು ನಡೆಯುವ ಜಾಗದಲ್ಲಿರುವ ಹಡಗು (3)
5.ತಾರುಣ್ಯವನ್ನು ಹೊಂದಿದವನು (3)
7.ಮಡಿಕೆಗಳನೊಳಗೊಂಡಿರುವ ಮಸ್ತಿಷ್ಕ (3)
8.ಕಾಲದಲ್ಲಿ ಇನಿಯನನ್ನು ಹುಡುಕಿ! (3)
9.ಸಡಿಲವಾದುದನ್ನು ಹೀಗೆನ್ನಿ (3)
11.ತಿರುಗಿದರೂ ಇದು ದುರಸ್ತಿ! (3)
13.ಉಲ್ಟಾಪಲ್ಟಾ ಕಾಣುತ್ತಿರುವ ಮೂಗಿನ ಆಭರಣ (2)
14.ಮುಖ್ಯ ಬೆಳೆಯ ನಡುವೆ ಬೆಳೆಯುವ ಹುಲ್ಲು (2)



5591ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕರ್ಣಧಾರ 2.ಸುಮಧುರ 5.ವ್ಯತ್ಯಾಸ 7.ಉಯಿಲು 8.ವಿರಹತಾಪ 11.ಸಾರಣೆ 12.ಧಿಮಾಕು 14.ಮನೋರಥ 15.ಖಡ್ಗಧಾರೆ

ಮೇಲಿಂದ ಕೆಳಕ್ಕೆ: 1.ಕರ್ತವ್ಯ 2.ಮಡಿಲು 3.ರಣಭೇರಿ 5.ಸರವಿ 7.ಉದಾಹರಣೆ 9.ಪರಿಧಿ 10.ಅನುಪಮ 11.ಸಾಧಾರ 13.ಕುದುರೆ

ಸುಡೊಕು 5977

7				5			9	
	2		1		9	6		5
6		5		3			1	
					4	1		9
9		1	5	8			4	
4				1		3		7
			3		7			1
	6					7	3	
				2			6	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5976 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟನೆ • 300ಕ್ಕೂ ಹೆಚ್ಚು ಹೈಟೆಕ್ ಸೆನ್ಸರ್‌ಗಳುಳ್ಳ ಕಲ್ಲಿನ ದೇಗುಲ

ಭಕ್ತರಿಗೆ ತೆರೆದ ಅಬುಧಾಬಿ ಮಂದಿರ

ಅಬುಧಾಬಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಬುಧಾಬಿಯಲ್ಲಿ ಬೋಚಾಸನವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆಯ (ಬಿಎಪಿಎಸ್) ಹಿಂದೂ ದೇವಾಲಯವನ್ನು ಸ್ವಾಮಿನಾರಾಯಣ ಪಂಥದ ಆಧ್ಯಾತ್ಮಿಕ ನಾಯಕರ ಸಮ್ಮುಖದಲ್ಲಿ ಬುಧವಾರ ಉದ್ಘಾಟಿಸಿದರು. ಇದು ಇಲ್ಲಿನ ಮೊದಲ ಕಲ್ಲಿನ ದೇವಾಲಯ ಹಾಗೂ ಮಧ್ಯಪ್ರಾಚ್ಯ ದೇಶಗಳಲ್ಲಿಯೇ ದೊಡ್ಡದಾದ ಮಂದಿರವಾಗಿದೆ.

ತಿಳಿ ಗುಲಾಬಿ ಬಣ್ಣದ ರೇಷ್ಮೆ ಧೋತಿ ಮತ್ತು ಕುರ್ತಾ ಧರಿಸಿದ್ದ ಪ್ರಧಾನಿ, ದೇವಾಲಯ ಉದ್ಘಾಟನಾ ಸಮಾರಂಭದ ಆಚರಣೆಗಳಲ್ಲಿ ಭಾಗಿಯಾದರು. ಅವರು ದೇವಾಲಯದಲ್ಲಿ ನಡೆದ 'ಗ್ಲೋಬಲ್ ಆರತಿ'ಯಲ್ಲಿ ಭಾಗವಹಿಸಿದರು. ಇದೇ ವೇಳೆ ವಿಶ್ವದಾದ್ಯಂತ ಬಿಎಪಿಎಸ್‌ನ 1,200ಕ್ಕೂ ಹೆಚ್ಚು ದೇವಾಲಯಗಳಲ್ಲಿ ಏಕಕಾಲದಲ್ಲಿ ಈ ಆರತಿ ನಡೆಯಿತು.

ಇದಕ್ಕೂ ಮುನ್ನ ಮೋದಿ ಅವರು ದೇವಾಲಯಕ್ಕೆ ಗಂಗಾ ಮತ್ತು ಯಮುನಾ ನದಿಯ ನೀರನ್ನು ಅರ್ಪಿಸಿದರು. ನಂತರ ಬಿಎಪಿಎಸ್ ಆಧ್ಯಾತ್ಮಿಕ ನಾಯಕ ಮಹಂತ್ ಸ್ವಾಮಿಮಹಾರಾಜ್ ಅವರ ಪಾದಗಳನ್ನು ಸ್ಪರ್ಶಿಸಿ ನಮಿಸಿದರು.

ದೇವಾಲಯದ ನಿರ್ಮಾಣ ಕಾರ್ಯಕ್ಕೆ ವಿವಿಧ ರೀತಿಯಲ್ಲಿ ಕೊಡುಗೆ ನೀಡಿದ ವಿವಿಧ ಧರ್ಮಗಳ ಜನರನ್ನು ಪ್ರಧಾನಿ ಭೇಟಿ ಮಾಡಿದರು.

ಹಲವು ವೈಶಿಷ್ಟ್ಯಗಳು: ವೈಜ್ಞಾನಿಕ ತಂತ್ರಗಳೊಂದಿಗೆ, ಪ್ರಾಚೀನ ವಾಸ್ತು ಶಿಲ್ಪದ ಶೈಲಿಗಳನ್ನು ಅಳವಡಿಸಿಕೊಂಡು ಇದನ್ನು ನಿರ್ಮಿಸಲಾಗಿದೆ. ದುಬೈ–ಅಬುಧಾಬಿ ಶೇಖ್ ಜಾಯೆದ್ ಹೆದ್ದಾರಿಯ ಅಬು ಮುರೇಖಾದಲ್ಲಿ 27 ಎಕರೆ ಪ್ರದೇಶದಲ್ಲಿ ಸುಮಾರು ₹ 700 ಕೋಟಿ ವೆಚ್ಚದಲ್ಲಿ ಭವ್ಯವಾದ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ.

ಈ ಮಂದಿರವನ್ನು 300ಕ್ಕೂ ಹೆಚ್ಚು ಹೈಟೆಕ್ ಸೆನ್ಸರ್‌ಗಳೊಂದಿಗೆ ನಿರ್ಮಿಸಲಾಗಿದೆ. ಇವು ಮಂದಿರದ ತಾಪಮಾನ ಅಳೆಯಲು ಮತ್ತು ಭೂಕಂಪನಗಳ ಮೇಲೆ ನಿಗಾವಹಿಸಲು ನೆರವಾಗುತ್ತವೆ. ದೇವಾಲಯದ ನಿರ್ಮಾಣಕ್ಕೆ ಯಾವುದೇ ಲೋಹವನ್ನು ಬಳಸಿಲ್ಲ.

ಹಿಂದೂ ಧರ್ಮ ಗ್ರಂಥಗಳು, ಶಿಲ್ಪ, ಮತ್ತು ಸ್ಥಾಪತ್ಯ ಶಾಸ್ತ್ರಗಳಲ್ಲಿ ಉಲ್ಲೇಖಿಸಿರುವಂತೆ ಪ್ರಾಚೀನ ಶೈಲಿಯಲ್ಲಿ ಮಂದಿರದ ವಿನ್ಯಾಸ ಮಾಡಲಾಗಿದೆ. ವಾಸ್ತು ವಿಧಾನಗಳನ್ನು ಇಲ್ಲಿ ವೈಜ್ಞಾನಿಕ ತಂತ್ರಗಳೊಂದಿಗೆ ಸಂಯೋಜಿಸಲಾಗಿದೆ ಎಂದು ಬಿಎಪಿಎಸ್‌ನ ಅಂತರ ರಾಷ್ಟ್ರೀಯ ಸಂಬಂಧಗಳ ಮುಖ್ಯಸ್ಥ ಸ್ವಾಮಿ ಬ್ರಹ್ಮವಿಹಾರಿದಾಸ್ ಹೇಳಿದರು.

'ದೇವಾಲಯದಲ್ಲಿ ಶಾಖ ನಿರೋಧಕ ನ್ಯಾನೊ ಟೈಲ್ಸ್ ಮತ್ತು ಭಾರಿ ಗಾಜಿನ ಫಲಕಗಳನ್ನು ಬಳಸಲಾಗಿದೆ' ಎಂದು ದೇವಾಲಯದ ನಿರ್ಮಾಣ ವ್ಯವಸ್ಥಾಪಕ ಮಧುಸೂದನ್ ಪಟೇಲ್ ತಿಳಿಸಿದರು.

ಮಂದಿರ ನಿರ್ಮಾಣಕ್ಕಾಗಿ ಯುಎಇ ಸರ್ಕಾರವು ಭೂಮಿಯನ್ನು ದಾನವಾಗಿ ನೀಡಿದೆ.

ಅಬುಧಾಬಿಯಲ್ಲಿನ ಬಿಎಪಿಎಸ್ ಹಿಂದೂ ಮಂದಿರ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಮೂರ್ತಿಗಳಿಗೆ ಪುಷ್ಪಾರ್ಚನೆ ಮಾಡಿದರು —ಪಿಟಿಐ ಚಿತ್ರ

ಯುಎಇ, ಮಡಗಾಸ್ಕರ್ ನಾಯಕರ ಜತೆ ಮಾತುಕತೆ

ದುಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮುಕ್ತೌಮ್ ಹಾಗೂ ಮಡಗಾಸ್ಕರ್ ಅಧ್ಯಕ್ಷ ಆಂಡ್ರಿ ರಾಜೋಲಿನಾ ಅವರೊಂದಿಗೆ ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಮಾತುಕತೆ ನಡೆಸಿದರು.

'ಭಾರತ– ಯುಎಇ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಬಲಪಡಿಸಲು ಪ್ರಧಾನಿ ಮೋದಿ ಅವರು ಯುಎಇ ಪ್ರಧಾನಿ ಅವರನ್ನು ಭೇಟಿಯಾದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಭಾರತೀಯರ ಸುರಕ್ಷತೆಗೆ ಒತ್ತು

ವಿದೇಶಗಳಲ್ಲಿರುವ ಭಾರತೀಯರ ಸುರಕ್ಷತೆ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಯಾವಾಗಲೂ ತಾವೇ ನೇತೃತ್ವ ವಹಿಸಿಕೊಂಡು, ಮಾತುಕತೆ ನಡೆಸುತ್ತಾರೆ ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಬುಧವಾರ ಶ್ಲಾಘಿಸಿದರು. ಕತಾರ್‌ನಲ್ಲಿ ಮರಣದಂಡನೆ ಶಿಕ್ಷೆ ಎದುರಿಸುತ್ತಿದ್ದ ಭಾರತೀಯ ನೌಕಾಪಡೆಯ ಎಂಟು ಮಾಜಿ ಅಧಿಕಾರಿಗಳ ಬಿಡುಗಡೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾ ಅವರು ಹೀಗೆ ಹೇಳಿದರು.

'ಭ್ರಷ್ಟಾಚಾರಮುಕ್ತ ಸರ್ಕಾರಗಳು ಅಗತ್ಯ'

ದುಬೈ (ಪಿಟಿಐ): ಜಗತ್ತಿಗೆ ಎಲ್ಲರನ್ನೂ ಒಳಗೊಳ್ಳುವ, ಸ್ವಚ್ಛ ಮತ್ತು ಭ್ರಷ್ಟಾಚಾರ ಮುಕ್ತ ಸರ್ಕಾರಗಳ ಅಗತ್ಯವಿದೆ ಎಂದು ಬುಧವಾರ ಪ್ರತಿಪಾದಿಸಿದ ಪ್ರಧಾನಿ ನರೇಂದ್ರ ಮೋದಿ, ಈ ನಿಟ್ಟಿನಲ್ಲಿ 'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ತಮ್ಮ ಮಂತ್ರವಾಗಿದೆ ಎಂದು ಹೇಳಿದರು.

ವಿಶ್ವ ಸರ್ಕಾರಗಳ ಶೃಂಗಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. 'ಜಾಗತಿಕ ಆರ್ಥಿಕ, ವಾಣಿಜ್ಯ ಮತ್ತು ತಂತ್ರಜ್ಞಾನ ಕೇಂದ್ರ ಬಿಂದುವಾಗಿ ದುಬೈ ಬೆಳೆದಿದೆ. ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ದೂರದೃಷ್ಟಿ ಹೊಂದಿರುವ ನಾಯಕ' ಎಂದು ಬಣ್ಣಿಸಿದರು.

ರಾಜ್ಯಸಭೆ: ಸಿಂಗ್‌ಗೆ ವಿದಾಯ, ಸೋನಿಯಾ ಹೊಸ ಅಧ್ಯಾಯ

ಮನಮೋಹನ ಸಿಂಗ್

ಸೋನಿಯಾ ಗಾಂಧಿ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಮತ್ತು ಕಾಂಗ್ರೆಸ್ ನಾಯಕ ಮನಮೋಹನ್ ಸಿಂಗ್ ಅವರು ರಾಜ್ಯಸಭೆಯ ಸದಸ್ಯರಾಗಿ 33 ವರ್ಷಗಳ ಸುದೀರ್ಘ ಅವಧಿಯನ್ನು ಏಪ್ರಿಲ್ ಮೊದಲ ವಾರದಲ್ಲಿ ಕೊನೆಗೊಳಿಸಲಿದ್ದಾರೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಇದೇ ಮೊದಲ ಬಾರಿ ರಾಜ್ಯಸಭೆ ಪ್ರವೇಶಿಸಲಿದ್ದಾರೆ.

ದೇಶದ ಆರ್ಥಿಕತೆಯ ಸುಧಾರಣೆಗೆ ಹಲವು ದಿಟ್ಟ ಕ್ರಮಗಳನ್ನು ತೆಗೆದುಕೊಂಡಿದ್ದ ಮನಮೋಹನ್, 1991ರ ಅಕ್ಟೋಬರ್‌ನಲ್ಲಿ ಮೊದಲ ಬಾರಿಗೆ ರಾಜ್ಯಸಭೆ ಸದಸ್ಯರಾಗಿದ್ದರು. ನರಸಿಂಹರಾವ್ ಅವರ ಸರ್ಕಾರದಲ್ಲಿ (1991 ರಿಂದ 1996) ಹಣಕಾಸು ಸಚಿವರಾಗಿದ್ದ ಅವರು 2004 ರಿಂದ 2014ರ ವರೆಗೆ ಪ್ರಧಾನಿಯಾಗಿದ್ದರು.

91 ವರ್ಷದ ಸಿಂಗ್ ಅವರ ರಾಜ್ಯಸಭೆ ಸದಸ್ಯತ್ವದ ಅವಧಿ ಏಪ್ರಿಲ್ 3ಕ್ಕೆ ಕೊನೆಗೊಳ್ಳಲಿದೆ. ಸೋನಿಯಾ ಅವರು ರಾಜಸ್ಥಾನದಿಂದ ರಾಜ್ಯಸಭೆಗೆ ಸ್ಪರ್ಧಿಸಿದ್ದು, ಬುಧವಾರ ನಾಮಪತ್ರ ಸಲ್ಲಿಸಿದ್ದಾರೆ.

2019ರಲ್ಲಿ ಎರಡು ತಿಂಗಳು ಹೊರತುಪಡಿಸಿ, ರಾಜ್ಯಸಭೆಯಲ್ಲಿ ಸಿಂಗ್ ಅವರ 33 ವರ್ಷಗಳ ಅವಧಿ ನಿರಂತರವಾಗಿತ್ತು. 1991ರ ಅಕ್ಟೋಬರ್ 1 ರಿಂದ 2019ರ ಜೂನ್ 14ರ ವರೆಗಿನ ಅವಧಿಯಲ್ಲಿ ಅವರು ಸತತ ಐದು ಸಲ ಅಸ್ಸಾಂನಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

ಆ ಬಳಿಕ ಅವರು ರಾಜಸ್ಥಾನದಿಂದ (2019ರ ಆಗಸ್ಟ್ 20 ರಂದು) ಆಯ್ಕೆಯಾಗಿದ್ದರು.

1999ರ ಲೋಕಸಭೆ ಚುನಾವಣೆಯಲ್ಲಿ ದಕ್ಷಿಣ ದೆಹಲಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಿಂಗ್, ಬಿಜೆಪಿಯ ವಿಜಯ್ ಕುಮಾರ್ ಮಲ್ಹೋತ್ರ ಎದುರು ಸೋತಿದ್ದರು. ಸೋನಿಯಾ ಅವರು ಗಾಂಧಿ ಕುಟುಂಬದಿಂದ ರಾಜ್ಯಸಭೆ ಪ್ರವೇಶಿಸಲಿರುವ ಎರಡನೇ ವ್ಯಕ್ತಿ ಎನಿಸಲಿದ್ದಾರೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಎರಡೂವರೆ ವರ್ಷ (1964ರ ಆಗಸ್ಟ್‌ನಿಂದ 1967ರ ಫೆಬ್ರುವರಿ) ರಾಜ್ಯಸಭೆ ಸದಸ್ಯರಾಗಿದ್ದರು.

ಕಾಂಗ್ರೆಸ್ ತೊರೆದ ಲಾಲ್ ಬಹದ್ದೂರ್ ಶಾಸ್ತ್ರಿ ಮೊಮ್ಮಗ: ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಮೊಮ್ಮಗ ವಿಭಾಕರ್ ಶಾಸ್ತ್ರಿ ಅವರು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದರು.

ಪಕ್ಷ ತೊರೆಯುತ್ತಿರುವ ವಿಚಾರವನ್ನು ಅವರು ಎಕ್ಸ್ ಮಾಧ್ಯಮದಲ್ಲಿ ಹೇಳಿಕೊಂಡಿದ್ದಾರೆ. ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಮಗ ಹರಿಕೃಷ್ಣ ಶಾಸ್ತ್ರಿ ಅವರ ಪುತ್ರರಾಗಿರುವ ವಿಭಾಕರ್ ಅವರು ಈ ಹಿಂದೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು.

'ಕನಿಷ್ಠ ಬೆಂಬಲ ಬೆಲೆಗೆ ಹಿಂದೇಟು ಏಕೆ?'

ನವದೆಹಲಿ (ಪಿಟಿಐ): ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಬಲ ನೀಡಲು ಕೇಂದ್ರ ಸರ್ಕಾರ ಹಿಂದೇಟು ಹಾಕುತ್ತಿರುವುದು ಏಕೆ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. ರೈತರು ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ವಿಶ್ವಾಸ ಕಳೆದು ಕೊಂಡಿದ್ದಾರೆ ಎಂದು ದೂರಿದೆ.

'2011ರಲ್ಲಿ ಗುಜರಾತ್ ಮುಖ್ಯಮಂತ್ರಿ ಹಾಗೂ ಕಾರ್ಯಕಾರಿ ಗುಂಪೊಂದರ ಅಧ್ಯಕ್ಷ ಆಗಿದ್ದ ನರೇಂದ್ರ ಮೋದಿ ಅವರು, ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ವರದಿಯೊಂದನ್ನು ಸಲ್ಲಿಸಿದ್ದರು. ರೈತರ ಹಿತವನ್ನು ಕಾಯುವ ನಿಟ್ಟಿನಲ್ಲಿ, ರೈತ ಹಾಗೂ ವರ್ತಕರ ನಡುವೆ ಯಾವ ವಹಿವಾಟು ಕೂಡ ಕನಿಷ್ಠ ಬೆಂಬಲ ಬೆಲೆಗಿಂತ ಕಡಿಮೆಗೆ ನಡೆಯದಂತೆ ಖಾತರಿಪಡಿಸುವ ಕ್ರಮವನ್ನು ನಾವು ಕಾನೂನಿನ ಮೂಲಕ ತೆಗೆದುಕೊಳ್ಳಬೇಕು ಎಂದು ಅದರಲ್ಲಿ ಹೇಳಿದ್ದರು' ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಎಲ್ಲ ಬೆಳೆಗಳನ್ನೂ ಕನಿಷ್ಠ ಬೆಂಬಲ ಬೆಲೆಗೆ ಖರೀದಿಸಲಾಗುವುದು, ಈ ಬೆಂಬಲ ಬೆಲೆಯು ಸ್ವಾಮಿನಾಥನ್ ಸಮಿತಿಯ ಸೂತ್ರವನ್ನು ಆಧರಿಸಿರಲಿದೆ ಎಂದು ಮೋದಿ ಅವರು 2014ರ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿದ್ದರು ಎಂದು ರಮೇಶ್ ತಿಳಿಸಿದ್ದಾರೆ.

ಆದರೆ ಇದುವರೆಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸಿಕ್ಕಿಲ್ಲ, ಸ್ವಾಮಿನಾಥನ್ ಸಮಿತಿಯ ಸೂತ್ರದ ಪ್ರಕಾರ ನಿಗದಿ ಕೂಡ ಆಗಿಲ್ಲ ಎಂದು ರಮೇಶ್ ಹೇಳಿದ್ದಾರೆ.

'ಮೋದಿಯವರೇ, ನೀವು ನಿಮ್ಮದೇ ಸಮಿತಿಯ 2011ರ ವರದಿಯನ್ನು ಅನುಷ್ಠಾನಕ್ಕೆ ಏಕೆ ತಂದಿಲ್ಲ? ಕನಿಷ್ಠ ಬೆಂಬಲ ಬೆಲೆ ನೀಡಲಾಗುತ್ತದೆ ಎಂದು ಮತ್ತೆ ಮತ್ತೆ ಭರವಸೆ ನೀಡಿ ರೈತರಿಗೆ ಸುಳ್ಳು ಹೇಳಿದ್ದು ಏಕೆ?' ಎಂದು ಅವರು ಪ್ರಶ್ನಿಸಿದ್ದಾರೆ. ಸ್ವಾಮಿನಾಥನ್ ಆಯೋಗದ ವರದಿಯ ಲೆಕ್ಕಾಚಾರದ ಅನುಗುಣವಾಗಿ ಗೋಧಿಗೆ ಕನಿಷ್ಠ ಬೆಂಬಲ ಬೆಲೆಯು ಕ್ವಿಂಟಲ್‌ಗೆ ₹2,478 ಇರಬೇಕಿತ್ತು. ಆದರೆ ಅದು ₹2,275 ಮಾತ್ರ ಇದೆ. ಹಾಗೆಯೇ, ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆಯು ಕ್ವಿಂಟಲ್‌ಗೆ ₹2,866 ಇರಬೇಕಿತ್ತು. ಅದು ₹2,183 ಮಾತ್ರವೇ ಇದೆ ಎಂದು ರಮೇಶ್ ಅವರು ಹೇಳಿದ್ದಾರೆ.

ಕುಟಿಲ ತಂತ್ರ ನಿಲ್ಲಲಿ: ಬಿಕೆಎಸ್

'ದೆಹಲಿ ಚಲೋ' ಹೋರಾಟವು ರಾಜಕೀಯ ಪ್ರೇರಿತವಾಗಿರುವಂತೆ ಕಾಣುತ್ತಿದೆ ಎಂದು ಹೇಳಿರುವ ಭಾರತೀಯ ಕಿಸಾನ್ ಸಂಘ (ಬಿಕೆಎಸ್), ಈ ಹೋರಾಟಕ್ಕೆ ತನ್ನ ಬೆಂಬಲ ಇಲ್ಲ ಎಂದು ತಿಳಿಸಿದೆ. ಭಾರತೀಯ ಕಿಸಾನ್ ಸಂಘವು ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂಗಸಂಸ್ಥೆ.

ಎಂಎಸ್‌ಪಿ ಬೇಡಿಕೆ: ರಾಷ್ಟ್ರ ರಾಜಧಾನಿ ಪ್ರವೇಶಿಸಲು ನಿಶ್ಚಯಿಸಿರುವುದಾಗಿ ಹೇಳಿದ ರೈತರು

ಗಡಿಯಲ್ಲಿ ರೈತರ ಮೇಲೆ ಅಶ್ರುವಾಯು ಶೆಲ್

ಚಂಡೀಗಢ (ಪಿಟಿಐ): ಪಂಜಾಬ್‌ನ ರೈತರ ಮೇಲೆ ಹರಿಯಾಣದ ಭದ್ರತಾ ಸಿಬ್ಬಂದಿ ಶಂಭು ಗಡಿಯಲ್ಲಿ ಅಶ್ರುವಾಯು ಶೆಲ್ ಸಿಡಿಸಿದ್ದಾರೆ. ಪಂಜಾಬ್ ಮತ್ತು ಹರಿಯಾಣದ ನಡುವಿನ ಗಡಿ ಪ್ರದೇಶ ಇದು. 'ದೆಹಲಿ ಚಲೋ' ಪ್ರತಿಭಟನೆಯಲ್ಲಿ ಭಾಗಿಯಾಗಿರುವ ರೈತರು ಬುಧವಾರವೂ ಈ ಗಡಿಯಲ್ಲಿಯೇ ಉಳಿದುಕೊಂಡಿದ್ದಾರೆ.

ಪ್ರತಿಭಟನೆಯಲ್ಲಿ ತೊಡಗಿರುವ ರೈತರು ಬ್ಯಾರಿಕೇಡ್ ಕಡೆ ಸಾಗಲು ಯತ್ನಿಸಿದಾಗಲೆಲ್ಲ ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿದ್ದಾರೆ. ಕೆಲವು ರೈತರು ಭದ್ರತಾ ಸಿಬ್ಬಂದಿ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ರೈತರ ಮೇಲೆ ಕಣ್ಣಿಡಲು ಪೊಲೀಸರು ಡ್ರೋನ್ ಮೊರೆ ಹೋಗಿದ್ದಾರೆ.

ಡ್ರೋನ್‌ಗಳನ್ನು ಕೆಳಕ್ಕೆ ಉರುಳಿಸುವ ಉದ್ದೇಶದಿಂದ ಕೆಲವು ಯುವಕರು ಗಾಳಿಪಟ ಹಾರಿಸಿದರು. ಗಾಳಿಪಟದ ಸೂತ್ರಕ್ಕೆ ಡ್ರೋನ್ ಸಿಲುಕಬೇಕು, ಅದು ಕೆಳಕ್ಕೆ ಉರುಳಬೇಕು ಎಂಬುದು ಅವರ ಉದ್ದೇಶವಾಗಿತ್ತು.

ಹರಿಯಾಣದ ಜಿಂದ್ ಜಿಲ್ಲೆಯ ದಾತಾ ಸಿಂಹವಾಲಾ – ಖನೌರಿ ಗಡಿಯಲ್ಲಿ ಕೂಡ ರೈತರು ಕುಳಿತಿದ್ದಾರೆ. ರೈತರು ಟ್ರ್ಯಾಕ್ಟರ್‌ಗಳಲ್ಲಿ ದೆಹಲಿಗೆ ತೆರಳುವುದನ್ನು ತಡೆಯಲು ಈ ಗಡಿಯಲ್ಲಿ ಹರಿಯಾಣ ಪೊಲೀಸರು ಬ್ಯಾರಿಕೇಡ್ ಅಳವಡಿಸಿದ್ದಾರೆ.

ದೆಹಲಿ ಚಲೋ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಪಂಜಾಬ್‌ನ ಹಲವು ಕಡೆಗಳಿಂದ ರೈತರು ಶಂಭು ಗಡಿಗೆ ಬಂದಿದ್ದಾರೆ. ಪಂಜಾಬ್‌ನ ಬದಿಯಲ್ಲಿ ರಾಷ್ಟ್ರೀಯ ಹೆದ್ದಾರಿಯ ಎರಡೂ ಕಡೆಗಳಲ್ಲಿ ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಲಾಗಿದೆ. ಬೇಡಿಕೆಗಳ ವಿಚಾರವಾಗಿ ಕೇಂದ್ರ ಸರ್ಕಾರದ ಜೊತೆ ಮಾತುಕತೆ ನಡೆಸಲು ಸಿದ್ಧ ಎಂದು ರೈತ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ಹೇಳಿದ್ದಾರೆ.

ರಾಷ್ಟ್ರ ರಾಜಧಾನಿಯನ್ನು ತಾವು ಪ್ರವೇಶಿಸುವುದಾಗಿ ರೈತರು ದೃಢವಾಗಿ ಹೇಳಿದ್ದಾರೆ. ಅಶ್ರುವಾಯು ಶೆಲ್‌ನ ಪ್ರಭಾವವನ್ನು ತಗ್ಗಿಸುವುದಕ್ಕಾಗಿ ರೈತರು ನೀರಿನ ಟ್ಯಾಂಕರ್‌ಗಳ ವ್ಯವಸ್ಥೆ ಮಾಡಿಕೊಂಡಿದ್ದಾರೆ, ಒದ್ದೆ ಬಟ್ಟೆ ಹಾಗೂ ನೀರಿನ ಬಾಟಲಿಗಳನ್ನು ಇಟ್ಟುಕೊಂಡಿದ್ದಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕಾರ್ಪೊರೇಟ್ ಕಂಪನಿಗಳ ಸಾಲವನ್ನು ಮನ್ನಾ ಮಾಡುತ್ತದೆ. ಆದರೆ ರೈತರಿಗೆ ಅವರಿಗೆ ಬೇಕಿರುವುದನ್ನು ಕೊಡುವುದಿಲ್ಲ. ರೈತರು ಕೇಳುತ್ತಿರುವುದು ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿಯನ್ನು ಮಾತ್ರ ಎಂದು ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವ ರೈತರೊಬ್ಬರು ಹೇಳಿದರು.

ಪೊಲೀಸರು ರೈತರ ಮೇಲೆ ಅಶ್ರುವಾಯು ಸೆಲ್ ಸಿಡಿಸಿದ ಪರಿಣಾಮವಾಗಿ ಹಲವು ರೈತರು ಗಾಯಗೊಂಡಿದ್ದಾರೆ. ಸರ್ಕಾರವು ಇಂತಹ ಕೆಲಸಗಳನ್ನು ನಿಲ್ಲಿಸಬೇಕು. ಮಾತುಕತೆಗೆ ರೈತರು ಸಿದ್ಧರಿದ್ದಾರೆ ಎಂದು ರೈತ ಮುಖಂಡ ಸರವಣ್ ಸಿಂಗ್ ಪಂಡೇರ್ ಹೇಳಿದರು.

ಅಶ್ರುವಾಯು ಶೆಲ್ ಹಾರಿಸಲು ಡ್ರೋನ್ ಬಳಸಲಾಗಿದೆ ಎಂದಾದರೆ ಅದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸನ್ನದಿಗೆ ವಿರುದ್ಧವಾದ ನಡೆ ಎಂದು ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ 'ಎಕ್ಸ್' ವೇದಿಕೆಯಲ್ಲಿ ಹೇಳಿದ್ದಾರೆ.

ಪ್ರತಿಭಟನೆ ನಿರತ ರೈತರು ಪಂಜಾಬ್–ಹರಿಯಾಣ ಗಡಿಯ ಶಂಭುವಿನಿಂದ ನವದೆಹಲಿಯತ್ತ ಟ್ರ್ಯಾಕ್ಟರ್‌ಗಳಲ್ಲಿ ಸಾಗಿದರು —ಎಎಫ್‌ಪಿ ಚಿತ್ರ

ಪಂಜಾಬ್ ಆಕ್ಷೇಪ

ಪಂಜಾಬ್‌ನ ಗಡಿಯ ಒಳಗೆ ಅಶ್ರುವಾಯು ಶೆಲ್ ಹಾರಿಸಲು ಡ್ರೋನ್ ಬಳಕೆ ಮಾಡಿದ ಹರಿಯಾಣ ಸರ್ಕಾರದ ಕ್ರಮಕ್ಕೆ ಪಂಜಾಬ್ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

> **ಕೇಂದ್ರ ಸರ್ಕಾರವು ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳುತ್ತಲೂ ಇಲ್ಲ, ರೈತರಿಗೆ ದೆಹಲಿ ತಲುಪಲು ಅವಕಾಶವನ್ನೂ ನೀಡುತ್ತಿಲ್ಲ**
> **ಸರವಣ ಸಿಂಗ್ ಪಂಡೇರ್,** ರೈತ ಮುಖಂಡ

ರೈತನ ಜೊತೆ ರಾಹುಲ್ ಮಾತುಕತೆ

ಚಂಡೀಗಢ (ಪಿಟಿಐ): 'ದೆಹಲಿ ಚಲೋ' ಹೆಸರಿನಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಮೇಲೆ ಪೊಲೀಸರು ಕ್ರಮ ಕೈಗೊಂಡ ಸಂದರ್ಭದಲ್ಲಿ ಗಾಯಗೊಂಡಿರುವ ರೈತ ಗುರ್ಮೀತ್ ಸಿಂಗ್ ಜೊತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೂರವಾಣಿ ಮೂಲಕ ಮಾತುಕತೆ ನಡೆಸಿದರು.

ಅಲ್ಲದೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ದೇಶಕ್ಕೆ ಅನ್ನ ಕೊಡುವವರ ವಿಚಾರದಲ್ಲಿ 'ಸರ್ವಾಧಿಕಾರಿ ಧೋರಣೆ' ತಳೆದಿದೆ ಎಂದು ದೂರಿದರು.

ರೈತರು ಮತ್ತು ಹರಿಯಾಣ ಪೊಲೀಸರ ನಡುವೆ ಉಂಟಾದ ಘರ್ಷಣೆಯಲ್ಲಿ ಗುರ್ಮೀತ್ ಸಿಂಗ್ ಅವರಿಗೆ ಗಾಯಗಳಾಗಿವೆ. 'ಮಾಜಿ ಯೋಧ ಗುರ್ಮೀತ್ ಸಿಂಗ್ ಅವರ ಜೊತೆ ಮಾತನಾಡಿದ್ದೇನೆ. ಪೊಲೀಸರು ದೌರ್ಜನ್ಯ ನಡೆಸಿದ ಪರಿಣಾಮವಾಗಿ ಅವರಿಗೆ ಗಂಭೀರ ಗಾಯಗಳಾಗಿವೆ' ಎಂದು ರಾಹುಲ್ ಅವರು ತಮ್ಮ ವಾಟ್ಸ್‌ಆ್ಯಪ್ ಚಾನೆಲ್ ಮೂಲಕ ತಿಳಿಸಿದ್ದಾರೆ.

ಸಮಸ್ಯೆ ಪರಿಹರಿಸಲು ರಾಜನಾಥ್ ಸಿಂಗ್

ನವದೆಹಲಿ (ಪಿಟಿಐ): ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ನೆರವು ಪಡೆಯಲಾಗಿದೆ. ರಾಜನಾಥ್ ಸಿಂಗ್ ಅವರು ಈ ಹಿಂದೆ ಕೃಷಿ ಸಚಿವರಾಗಿ ಕೆಲಸ ಮಾಡಿದ್ದಾರೆ. ಅಲ್ಲದೆ, ಅವರು ಉತ್ತರ ಪ್ರದೇಶದಲ್ಲಿ ರೈತ ನಾಯಕರಾಗಿಯೂ ಗುರುತಿಸಿಕೊಂಡಿದ್ದಾರೆ. ರೈತರ ಜೊತೆಗೆ ಎರಡು ಬಾರಿ ಈ ಹಿಂದೆ ಮಾತುಕತೆಗಳು ನಡೆದಿವೆ. ಆದರೆ ಯಾವ ಮಾತುಕತೆಯೂ ಫಲ ನೀಡಿಲ್ಲ. ಹೀಗಾಗಿ, ಪರಿಹಾರದ ಮಾರ್ಗ ಯಾವುದು ಎಂಬುದನ್ನು ಕಂಡುಕೊಳ್ಳಲು ರಾಜನಾಥ್ ಅವರ ನೆರವು ಪಡೆಯಲಾಗಿದೆ ಎನ್ನಲಾಗಿದೆ.

ರೈತರ ಪ್ರತಿಭಟನೆಯ ವಿಚಾರವಾಗಿ ರಾಜನಾಥ್ ಸಿಂಗ್ ಮತ್ತು ಕೇಂದ್ರ ಕೃಷಿ ಸಚಿವ ಅರ್ಜುನ್ ಮುಂಡಾ ಬುಧವಾರ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ. ಅಧಿಕಾರಕ್ಕೆ ಬಂದಲ್ಲಿ, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿಯನ್ನು ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿರುವುದರ ಬಗ್ಗೆ ಬಿಜೆಪಿ ಕಿಡಿಕಾರಿದೆ. '2010ರಲ್ಲಿ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್, ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೆ ತರುವುದಕ್ಕೆ ಒಪ್ಪಿರಲಿಲ್ಲ' ಎಂದು ಬಿಜೆಪಿ ನಾಯಕರೊಬ್ಬರು ಆರೋಪಿಸಿದರು. ಕನಿಷ್ಠ ಬೆಂಬಲ ಬೆಲೆಯು, ಕೃಷಿ ಬೆಳೆಗೆ ಆಗುವ ಸರಾಸರಿ ವೆಚ್ಚಕ್ಕಿಂತ ಶೇಕಡ 50ರಷ್ಟು ಹೆಚ್ಚಿರಬೇಕು ಎಂದು ಸ್ವಾಮಿನಾಥನ್ ಆಯೋಗ ನೀಡಿದ್ದ ಶಿಫಾರಸನ್ನು ಕೇಂದ್ರವು ಒಪ್ಪಿಲ್ಲ ಎಂಬ ಉತ್ತರವನ್ನು ಕೆ.ವಿ. ಥಾಮಸ್ ಅವರು ಕೃಷಿ ಖಾತೆ ರಾಜ್ಯ ಸಚಿವರಾಗಿದ್ದಾಗ ರಾಜ್ಯಸಭೆಯಲ್ಲಿ 2010ರಲ್ಲಿ ನೀಡಿದ್ದರು ಎಂದು ಅವರು ಹೇಳಿದರು.

ಗುರುವಾರ 3ನೇ ಸುತ್ತಿನ ಮಾತುಕತೆ

ಚಂಡೀಗಢ(ಪಿಟಿಐ): ರೈತರ ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದಂತೆ ಕೇಂದ್ರದ ಮೂವರು ಸಚಿವರು ರೈತ ಮುಖಂಡರ ಜೊತೆ ಚಂಡೀಗಢದಲ್ಲಿ ಗುರುವಾರ ಮಾತುಕತೆ ನಡೆಸಲಿದ್ದಾರೆ.

ಕೇಂದ್ರ ಸಚಿವರಾದ ಅರ್ಜುನ್ ಮುಂಡಾ, ಪೀಯೂಷ್ ಗೋಯಲ್ ಮತ್ತು ನಿತ್ಯಾನಂದ ರಾಯ್ ಅವರ ಜೊತೆ ಮಾತುಕತೆ ಸಂಜೆ 5ಕ್ಕೆ ನಿಗದಿಯಾಗಿದೆ ಎಂದು ರೈತ ಮುಖಂಡ ಸರವಣ್ ಸಿಂಗ್ ಪಂಡೇರ್ ತಿಳಿಸಿದ್ದಾರೆ.

ಇದು ರೈತರ ಪ್ರತಿನಿಧಿಗಳು ಹಾಗೂ ಸರ್ಕಾರದ ಪ್ರತಿನಿಧಿಗಳ ನಡುವಿನ ಮೂರನೆಯ ಸಭೆ ಆಗಲಿದೆ.

ಜಾರ್ಖಂಡ್‌ನಲ್ಲಿ ನ್ಯಾಯ ಯಾತ್ರೆ ರದ್ದು

ರಾಂಚಿ (ಪಿಟಿಐ): ಜಾರ್ಖಂಡ್‌ನಲ್ಲಿ ಬುಧವಾರದಿಂದ ಆರಂಭವಾಗಬೇಕಿದ್ದ, ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯ ಎರಡನೆಯ ಹಂತವನ್ನು ರದ್ದುಮಾಡಲಾಗಿದೆ.

ರಾಹುಲ್ ಅವರು ರೈತರ ಹೋರಾಟದಲ್ಲಿ ಪಾಲ್ಗೊಳ್ಳಲು ದೆಹಲಿಗೆ ತೆರಳಿದ ಕಾರಣಕ್ಕೆ ಯಾತ್ರೆಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ರದ್ದು ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ನರೇಗಾ ಕಾರ್ಮಿಕರ ಜೊತೆ ರಾಹುಲ್ ಅವರು ನಡೆಸಬೇಕಿದ್ದ ಮಾತುಕತೆಯನ್ನು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಮತ್ತು ಪಕ್ಷದ ಇತರ ಮುಖಂಡರು ನಡೆಸಿಕೊಡಲಿದ್ದಾರೆ. ರಾಹುಲ್ ಅವರ ಯಾತ್ರೆಯು ಛತ್ತೀಸಗಢ ರಾಜ್ಯದಿಂದ ಜಾರ್ಖಂಡ್ ರಾಜ್ಯಕ್ಕೆ ಬುಧವಾರ ಮರುಪ್ರವೇಶ ಮಾಡಬೇಕಿತ್ತು.

'ಮಂಗಳವಾರ ತಡರಾತ್ರಿ ಕೈಗೊಂಡ ತೀರ್ಮಾನದ ಪ್ರಕಾರ, ಜಾರ್ಖಂಡ್‌ನಲ್ಲಿ ನಡೆಯಬೇಕಿದ್ದ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯ ಎಲ್ಲ ಕಾರ್ಯಕ್ರಮಗಳನ್ನು ರದ್ದು ಮಾಡಲಾಗಿದೆ' ಎಂದು ಪಕ್ಷದ ವಕ್ತಾರೆ ಸೋನಲ್ ಶಾಂತಿ ಹೇಳಿದ್ದಾರೆ. ಯಾತ್ರೆಯು ಜಾರ್ಖಂಡ್‌ನಿಂದ ಮತ್ತೆ ಆರಂಭವಾಗುವ ಸಾಧ್ಯತೆ ಕಡಿಮೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Part-Time Jobs

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9035482999/ 6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Multiple Vacancy

REQUIRED EXPERIENCED Telecaller & Loan Recovery Supervisor for BankLoan collection. Salary 30,000+ Incentive. 9620206756.

Wanted

ವಿಕೇರ್ ಹೋಂನರ್ಸಿಂಗ್ ಮೈಸೂರು: ಮೈಸೂರಿನಲ್ಲಿ ರೋಗಿಯ ಆರೈಕೆಗೆ ಮಹಿಳಾ ಹೋಂನರ್ಸ್ ಬೇಕಾಗಿದ್ದಾರೆ. ವೇತನ 16,000–23,000/: ಸಂಪರ್ಕಿಸಿ: 9380043696, 6364481333

ವೈಯಕ್ತಿಕ

Lost

ದಾಖಲಾತಿ ಕಳೆದಿದೆ
ಆರ್. ಸತೀಶ್, ಬಿನ್ ಲೇ॥ ರಾಮಲಿಂಗೇಗೌಡ ನಂ.2. 2ನೇ ಮುಖ್ಯರಸ್ತೆ, ಮುನೇಶ್ವರ ಲೇಔಟ್ ಮನೋರಾಯನಪಾಳ್ಯ, ಆರ್.ಟಿ.ನಗರ, ಬೆಂಗಳೂರು–560032. ಆರ್. ಚಂದ್ರೇಗೌಡ ಬಿನ್ ಲೇ॥ರಾಮಲಿಂಗೇಗೌಡ ಎಂಬುವವರು ದಿನಾಂಕ: 6.6.1994 ರಂದು ಜಿ.ಪಿ.ಎ ಪತ್ರ ನೀಡಿರುತ್ತಾರೆ. ಜಿ.ಪಿ.ಎ ಪತ್ರದ ಮೂಲ ಪ್ರತಿಯನ್ನು ದಿನಾಂಕ: 27.1.2024 ರಂದು ಕಳೆದು ಹೋಗಿದ್ದು, ದಯವಿಟ್ಟು ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಮೇಲೆ ತಿಳಿಸಿರುವ ವಿಳಾಸ ಅಥವಾ ಫೋನ್ ನಂಬರಿಗೆ ಕರೆಮಾಡಿ: 9448584611

ಪ್ರವಾಸ

Travel

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೊದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವೆಲ್ಸ್' 080- 22429289 9448119290 9019301300 8088826815

Pilgrimage Tours

ಸುವರ್ಣ ಯಾತ್ರ 22/3/24 ಕಾಶಿ, ಅಯೋಧ್ಯ, ಬಾಬಾ ವೈದ್ಯನಾಥ್ ಪ್ರವಾಸ 7ದಿನಗಳು ಅಯೋಧ್ಯ, ನೇಪಾಳ, ಮುಕ್ತಿನಾಥ್, ಪಶುಪತಿನಾಥ ಪ್ರವಾಸ 14/04/24 9ದಿನಗಳು 8660233673/9019462508

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳಿಗೆ ಸೂಕ್ತ ವೇದಿಕೆ!
ಇಂದೇ ನಿಮ್ಮ ಜಾಹೀರಾತು ಬುಕ್ ಮಾಡಿರಿ.
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಮತ್ತೆ ರೈತಸ್ನೇಹಿ ಎಪಿಎಂಸಿ

ಒಂದನೇ ಪುಟದಿಂದ

ಆಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ, ಇಲ್ಲಿಯೂ ತಿದ್ದುಪಡಿ ಮಾಡಿತ್ತು. ಈಗ ಆರಂಭವಾಗಿರುವ ಹೋರಾಟದ ಮಾದರಿಯಲ್ಲಿ ದೆಹಲಿಯನ್ನೇ ನಡುಗಿಸುವ ರೀತಿಯಲ್ಲಿ ರೈತರು ಹೋರಾಟ ನಡೆಸಿದ್ದರಿಂದ ಮೂರೂ ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಸ್ ಪಡೆದಿತ್ತು. ಆದರೆ, ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ವಾಪಸ್ ಪಡೆದಿರಲಿಲ್ಲ.

'ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ' (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಗೆ ತಂದಿದ್ದ ತಿದ್ದುಪಡಿಯಿಂದಾಗಿ ಖಾಸಗಿಯವರಿಗೆ ಅವಕಾಶ ಹಾಗೂ ಮಾರುಕಟ್ಟೆ ಹೊರಗೆ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಅವಕಾಶ ದೊರಕಿತ್ತು. ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಈ ಕಾಯ್ದೆಗೆ ತಿದ್ದುಪಡಿ ಮಾಡಲಾಗುವುದು ಎಂದು ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಹೇಳಿತ್ತು.

ಅಧಿಕಾರಕ್ಕೆ ಬಂದ ಬಳಿಕ ನಡೆದ ಮೊದಲ ಅಧಿವೇಶನದಲ್ಲೇ (2023 ಜೂನ್) ತಿದ್ದುಪಡಿ ಮಸೂದೆಯನ್ನು ರಾಜ್ಯ ಸರ್ಕಾರ ಮಂಡಿಸಿತ್ತು. ವಿಧಾನಸಭೆ ಯಲ್ಲಿ ಅಂಗೀಕಾರಗೊಂಡಿದ್ದ ಈ ಮಸೂದೆಯಲ್ಲಿನ ಹಲವು ಅಂಶಗಳ ಕುರಿತು ವಿಧಾನ ಪರಿಷತ್ತಿನಲ್ಲಿ ಬಿಜೆಪಿ–ಜೆಡಿಎಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಅಲ್ಲಿ ಬಹುಮತ ಇಲ್ಲದೇ ಇದ್ದುದರಿಂದ ಮಸೂದೆಗೆ ಅಂಗೀಕಾರ ದೊರೆತಿರಲಿಲ್ಲ. 'ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಯ ಹೊರಗೂ ಮಾರಾಟ ಮಾಡಬಹುದು ಎನ್ನುವುದು ಹಿಂದಿನ ಕಾಯ್ದೆಯಲ್ಲಿದ್ದ ಪ್ರಮುಖ ಅಂಶ. ರೈತಸ್ನೇಹಿಯಾದ ಇಂತಹ ಅಂಶಗಳನ್ನು ಕೈಬಿಡಬಾರದು' ಎಂದು ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದ್ದರು. ಮನವಿ

ಪುರಸ್ಕರಿಸಿದ್ದ ಸಭಾಪತಿ ಬಸವರಾಜ ಹೊರಟ್ಟಿ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆಯಲ್ಲಿ ಮೂರು ಪಕ್ಷಗಳ 8 ಸದಸ್ಯರನ್ನು ಒಳಗೊಂಡ ಪರಿಶೀಲನಾ ಸಮಿತಿಯನ್ನು ಕಳೆದ ಸೆಪ್ಟೆಂಬರ್‌ನಲ್ಲಿ ರಚಿಸಿದ್ದರು.

ಉತ್ಪನ್ನ ಆಧರಿಸಿ ಮಾರುಕಟ್ಟೆ

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಒಂದು ಜಿಲ್ಲೆ ಒಂದು ಉತ್ಪನ್ನ ಪರಿಕಲ್ಪನೆಯ ಜತೆಗೆ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಗೆ ಅನುವಾಗುವಂತೆ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸಬೇಕು ಎಂದೂ ಶಿಫಾರಸು ಮಾಡಲಾಗಿದೆ.

ಕೈಗಾರಿಕೆಗಳು, ಸಂಸ್ಕರಣಾ ಘಟಕಗಳಿಗೆ ಉತ್ತೇಜನ ನೀಡಲು, ಅದಕ್ಕೆ ಪೂರಕವಾಗಿರುವಂತೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಸಮಿತಿ ಶಿಫಾರಸು ಮಾಡಿದೆ. ಕೋಲಾರದಲ್ಲಿ ಟೊಮೊಟೊ, ವಿಜಯಪುರದಲ್ಲಿ ಒಣದ್ರಾಕ್ಷಿ–ನಿಂಬೆ ಹಣ್ಣು, ಹಾವೇರಿಯಲ್ಲಿ ಬ್ಯಾಡಗಿ ಮೆಣಸಿನಕಾಯಿ, ದಾವಣಗೆರೆ ಅಡಿಕೆ, ಕಲಬುರಗಿ ತೊಗರಿ ಬೇಳೆ, ತಿಪಟೂರಿನಲ್ಲಿ ತೆಂಗು, ಶಿವಮೊಗ್ಗದಲ್ಲಿ ಅನಾನಸ್ ಇಂತಹ ಉತ್ಪನ್ನ ಆಧಾರಿತ ಕೈಗಾರಿಕೆಗಳಿಗೆ ಪೂರಕವಾಗುವಂತೆ ಎಪಿಎಂಸಿಗಳ ಮೂಲಸೌಕರ್ಯ ಹೆಚ್ಚಿಸಬೇಕು ಎಂದು ವರದಿ ಹೇಳಿದೆ.

ಆದಾಯವೃದ್ಧಿಗೆ ಆಸ್ತಿ ಬಾಡಿಗೆಗೆ ಕೊಡಿ

ಮಾರುಕಟ್ಟೆ ಹಾಗೂ ಎಪಿಎಂಸಿ ವಶದಲ್ಲಿರುವ ಆಸ್ತಿಗಳನ್ನು ಬಾಡಿಗೆಗೆ ನೀಡುವ ಮೂಲಕ ಆದಾಯವೃದ್ಧಿಗೆ ಕ್ರಮವಹಿಸಲು ಸಮಿತಿ ಶಿಫಾರಸು ಮಾಡಿದೆ.

ಗೋದಾಮುಗಳು, ಆಸ್ತಿ, ಕಟ್ಟಡ, ನಿವೇಶಗಳನ್ನು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ ರೈತ ಉತ್ಪಾದಕ ಸಂಸ್ಥೆ, ಸಹಕಾರ ಮಾರುಕಟ್ಟೆ ವ್ಯವಹಾರ ಸಂಘಗಳಿಗೆ ದೀರ್ಘಾವಧಿ ಬಾಡಿಗೆ ನೀಡಬಹುದು. ಶೇ 50ರಿಂದ 60ರ ರಿಯಾಯಿತಿ ದರದಲ್ಲಿ ನೀಡಲು ಕಾನೂನಿಗೆ ತಿದ್ದುಪಡಿ ತರಬಹುದು ಎಂದು ವರದಿ ಹೇಳಿದೆ.

ಸೀಟು ಹಂಚಿಕೆ: ರಾಹುಲ್ ಮಧ್ಯಪ್ರವೇಶ

ಪ್ರಜಾವಾಣಿ ವಾರ್ತೆ

ರಾಹುಲ್ ಗಾಂಧಿ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಗೆ ಸೀಟು ಹಂಚಿಕೆ ಸಂಬಂಧ 'ಇಂಡಿಯಾ' ಮೈತ್ರಿಕೂಟದಲ್ಲಿ ಆಗಿರುವ ಗೊಂದಲಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಜತೆ ಬುಧವಾರ ಮಾತುಕತೆ ನಡೆಸಿದರು.

ಸೀಟು ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್ ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಎಎಪಿ ಮಂಗಳವಾರ ಆರೋಪಿಸಿತ್ತು. ಮಾತ್ರವಲ್ಲ, ದೆಹಲಿಯ ಏಳು ಕ್ಷೇತ್ರಗಳ ಪೈಕಿ ಆರರಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುವುದಾಗಿಯೂ ಘೋಷಿಸಿತ್ತು. ಕಾಂಗ್ರೆಸ್‌ಗೆ ಕೇವಲ ಒಂದು ಕ್ಷೇತ್ರ ಬಿಟ್ಟುಕೊಡುವುದಾಗಿ ತಿಳಿಸಿತ್ತು. ಈ ಬೆಳವಣಿಗೆಯಿಂದ ಮೈತ್ರಿಕೂಟಕ್ಕೆ ಹಿನ್ನಡೆ ಉಂಟಾಗಬಹುದು ಎಂಬ ಕಾರಣ ರಾಹುಲ್ ಅವರು ಮಧ್ಯಪ್ರವೇಶಿಸಿದ್ದಾರೆ ಎಂದು ಮೂಲಗಳು ಹೇಳಿವೆ. ಜೆಡಿಯು ಮತ್ತು ಆರ್‌ಎಲ್‌ಡಿ ಮೈತ್ರಿಕೂಟದಿಂದ ಹೊರನಡೆದಿರುವುದು ಹಾಗೂ ಪಶ್ಚಿಮ ಬಂಗಾಳದ ಎಲ್ಲ 42 ಕ್ಷೇತ್ರಗಳಲ್ಲೂ ಟಿಎಂಸಿ ಸ್ಪರ್ಧಿಸಲಿದೆ ಎಂದು ಮಮತಾ ಬ್ಯಾನರ್ಜಿ ಘೋಷಿಸಿರುವುದು ವಿರೋಧ ಪಕ್ಷಗಳ ಒಗ್ಗಟ್ಟಿಗೆ ಧಕ್ಕೆ ಉಂಟುಮಾಡಿದೆ.

ಸೀಟು ಹಂಚಿಕೆ ವಿಚಾರವಾಗಿ ಮಾತುಕತೆ ಮುಂದುವರಿಯಬೇಕು ಹಾಗೂ ಎರಡೂ ಪಕ್ಷಗಳ ನಡುವೆ ಹೊಂದಾಣಿಕೆ ಅಗತ್ಯ ಎಂದು ರಾಹುಲ್ ಅವರು ದೂರವಾಣಿ ಮೂಲಕ ನಡೆದ ಸಂಭಾಷಣೆಯಲ್ಲಿ ಕೇಜ್ರಿವಾಲ್‌ಗೆ ತಿಳಿಸಿದ್ದಾರೆ ಎನ್ನಲಾಗಿದೆ. ಒಗ್ಗಟ್ಟಿನಿಂದ ಇದ್ದರೆ ಮಾತ್ರ ಬಿಜೆಪಿಯನ್ನು ಸಮರ್ಥವಾಗಿ ಎದುರಿಸಬಹುದು. ಆದ್ದರಿಂದ ಒಗ್ಗಟ್ಟಿನಿಂದ ಉಳಿಯಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಇಬ್ಬರು ಚರ್ಚಿಸಿದ್ದಾರೆ.

ಸೀಟು ಹಂಚಿಕೆ ಪ್ರಕ್ರಿಯೆ ವಿಳಂಬದ ಬಗ್ಗೆ ಕೇಜ್ರಿವಾಲ್, ಕಾಂಗ್ರೆಸ್ ನಾಯಕನಲ್ಲಿ ತಮ್ಮ ಅಸಮಾಧಾನ ಹೊರಹಾಕಿದ್ದಾರೆ ಎಂದು ಮೂಲಗಳು ಹೇಳಿವೆ. ಅದೇ ರೀತಿ, ಗುಜರಾತ್‌ನ ಭರೂಚ್ ಕ್ಷೇತ್ರದಿಂದ ಸ್ಪರ್ಧಿಸುವ ಗಂಭೀರ ಚಿಂತನೆಯನ್ನು ಎಎಪಿ ಮಾಡಿದೆ ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ.

'ಇನ್ನೂ ಬಗೆಹರಿಯದೇ ಇರುವ ವಿಚಾರಗಳನ್ನು ಮಾತುಕತೆ ಮೂಲಕ ಬಗೆಹರಿಸಬಹುದು' ಎಂದು ರಾಹುಲ್ ಅವರು ದೆಹಲಿ ಮುಖ್ಯಮಂತ್ರಿಗೆ ತಿಳಿಸಿದ್ದಾರೆ.

'ಸೀಟು ಹಂಚಿಕೆ ವಿಚಾರದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರಿಗೂ ಸರಿಯಾದ ಮಾಹಿತಿ ಇಲ್ಲ' ಎಂದು ಎಎಪಿ ಪ್ರಧಾನ ಕಾರ್ಯದರ್ಶಿ ಸಂದೀಪ್ ಪಾಠಕ್ ಮಂಗಳವಾರ ದೂರಿದ್ದರು. ವಿಳಂಬ ಧೋರಣೆ ಮುಂದುವರಿದರೆ ದೆಹಲಿಯ ಆರು ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸುವುದಾಗಿಯೂ ತಿಳಿಸಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,743
ಇಂದಿನ ಅಂತ್ಯ	21,840
▲	96
ದಿನದ ಗರಿಷ್ಠ	21,870

ವಿನಿಮಯ ದರ

$ ಡಾಲರ್	83.02
£ ಪೌಂಡ್	104.11
€ ಯುರೊ	88.83
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹597

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1440 (1450)
ಸೋಯಾ (ರಿಫೈನ್ಡ್)	₹895 (895)
ಸೂರ್ಯಕಾಂತಿ (ರಿಫೈನ್ಡ್)	₹910 (905)
ಪಾಮೋಲಿನ್	₹862 (859)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹159-438
ದ್ವಿತಳಿ (ಬಿ.ವಿ)	₹335-542

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹160.50
ಆರ್‌ಎಸ್‌ಎಸ್-5	₹155.50
ಗುಡ್ ಲಾಟ್	₹139

ಈರುಳ್ಳಿ

(ಕ್ವಿಂಟಲ್‌ಗೆ)

ದಪ್ಪ	₹1600-2200
ಮಧ್ಯಮ	₹1400-1600
ಸಣ್ಣ	₹800-1200

ಮೂರು ತಿಂಗಳ ಕನಿಷ್ಠ ಮಟ್ಟದಲ್ಲಿ ದಾಖಲು

ಸಗಟು ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ಪ್ರಸಕ್ತ ವರ್ಷದ ಜನವರಿಯಲ್ಲಿ ಶೇ 0.27ಕ್ಕೆ ಇಳಿಕೆಯಾಗಿದ್ದು, ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ತಲುಪಿದೆ.

ತರಕಾರಿಗಳು ಸೇರಿದಂತೆ ಆಹಾರ ಪದಾರ್ಥಗಳ ಬೆಲೆಯಲ್ಲಿ ಇಳಿಕೆಯಾಗಿರುವುದೇ ಇದಕ್ಕೆ ಕಾರಣವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

2023ರ ಜನವರಿಯಲ್ಲಿ ಸಗಟು ಹಣದುಬ್ಬರವು ಶೇ 4.8ರಷ್ಟು ಗರಿಷ್ಠ ಮಟ್ಟದಲ್ಲಿ ದಾಖಲಾಗಿತ್ತು. ಬಳಿಕ ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ಸ್ಥಿರವಾಗಿದ್ದ ಹಣದುಬ್ಬರವು ನವೆಂಬರ್‌ನಲ್ಲಿ ಶೇ0.39ಕ್ಕೆ ಏರಿಕೆ ಆಗಿತ್ತು. ಡಿಸೆಂಬರ್‌ನಲ್ಲಿ ಶೇ 0.73ರಷ್ಟು ಏರಿಕೆಯಾಗಿ, ಒಂಬತ್ತು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

ಅಕ್ಟೋಬರ್‌ನಲ್ಲಿ ಶೇ (-) 0.26ರಷ್ಟು ಕನಿಷ್ಠ ಮಟ್ಟದಲ್ಲಿ ದಾಖಲಾಗಿತ್ತು.

ಡಿಸೆಂಬರ್‌ನಲ್ಲಿ ಶೇ 9.38ರಷ್ಟಿದ್ದ ಆಹಾರ ಹಣದುಬ್ಬರವು ಜನವರಿಯಲ್ಲಿ ಶೇ 6.85ಕ್ಕೆ ಇಳಿಕೆಯಾಗಿದೆ. ತರಕಾರಿಗಳ ದರವು ಶೇ 26.3ರಿಂದ ಶೇ 19.71ಕ್ಕೆ ಕುಗ್ಗಿದೆ. ಹಣ್ಣುಗಳು, ಮೊಟ್ಟೆ, ಮೀನು, ಹಾಲಿನ ದರ ಇಳಿಕೆಯಾಗಿದೆ. ಆಲೂಗೆಡ್ಡೆ ದರವು ಇಳಿಕೆಯ ಹಾದಿಯಲ್ಲಿಯೇ ಇದೆ.

ಸರಕು	ಡಿಸೆಂಬರ್ (2023)	ಜನವರಿ (2024)
	(ಶೇಕಡಾವಾರು)	
ಧಾನ್ಯಗಳು	5.92	4.07
ಭತ್ತ	10.54	9.56
ಗೋಧಿ	-0.40	-3.14
ಬೇಳೆಕಾಳು	19.60	16.06
ತರಕಾರಿ	26.30	19.71
ಆಲೂಗೆಡ್ಡೆ	-24.08	-8.40
ಈರುಳ್ಳಿ	91.77	29.18
ಹಣ್ಣುಗಳು	4.58	1.01
ಹಾಲು	6.95	5.38
ಮೊಟ್ಟೆ, ಮಾಂಸ, ಮೀನು	-0.84	-0.88

ಇಂಧನ ಮತ್ತು ವಿದ್ಯುತ್ ಸೂಚ್ಯಂಕದಲ್ಲಿಯೂ ಇಳಿಕೆಯಾಗಿದೆ. ಡಿಸೆಂಬರ್‌ನಲ್ಲಿ ಶೇ (-) 2.41ರಷ್ಟು ಇದ್ದಿದ್ದು, ಜನವರಿಯಲ್ಲಿ ಶೇ (-) 0.51ಕ್ಕೆ ಇಳಿಕೆ ಆಗಿದೆ. ಆದರೆ, ತಯಾರಿಕಾ ಉತ್ಪನ್ನಗಳ ಬೆಲೆಯು ಶೇ (-) 0.71ರಿಂದ ಶೇ (-) 1.13ರಷ್ಟು ಏರಿಕೆಯಾಗಿದೆ.

ಡಿಸೆಂಬರ್‌ಗೆ ಹೋಲಿಸಿದರೆ ಜನವರಿಯಲ್ಲಿ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಶೇ (-) 0.33, ಆಹಾರೇತರ ಪದಾರ್ಥಗಳು ಶೇ (-) 0.49 ಮತ್ತು ಆಹಾರ ಪದಾರ್ಥಗಳ ದರ ಶೇ (-) ಶೇ 1.36ರಷ್ಟು ಇಳಿಕೆಯಾಗಿದೆ.

ಗ್ರಾಹಕರ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ಶೇ 5ಕ್ಕಿಂತಲೂ ಹೆಚ್ಚಿದೆ. ಇದನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಂಡು ಬೆಲೆಯಲ್ಲಿ ಸ್ಥಿರತೆ ಕಾಪಾಡಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ. ಹಾಗಾಗಿ, ಇತ್ತೀಚೆಗೆ ನಡೆದ ಆರ್‌ಬಿಐ ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡಿದೆ.

ಚಿನ್ನದ ದರ ₹750, ಬೆಳ್ಳಿ ₹1,400 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿದೆ. ಚಿನ್ನದ ದರ 10 ಗ್ರಾಂ.ಗೆ ₹750 ಇಳಿಕೆಯಾಗಿ, ₹62,350ಕ್ಕೆ ಮಾರಾಟವಾಯಿತು.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,400 ಕಡಿಮೆಯಾಗಿ, ₹74,000ಕ್ಕೆ ಮುಟ್ಟಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆಯಾಗಿದೆ. ಇದು ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ ಅಂದಾಜು 1,995 ಡಾಲರ್ ಮತ್ತು 21.97 ಡಾಲರ್‌ನಂತೆ ಮಾರಾಟವಾಗಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-9500
ತಿಪಟೂರು	₹8500-9000

ಪ್ರಯಾಣಿಕ ವಾಹನ ಮಾರಾಟ ಶೇ 14ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಯುಟಿಲಿಟಿ ವಾಹನಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ದೇಶೀಯ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಜನವರಿಯಲ್ಲಿ ಶೇ 14ರಷ್ಟು ಏರಿಕೆಯಾಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ತಿಳಿಸಿದೆ.

ಜನವರಿಯಲ್ಲಿ ಒಟ್ಟು 3,93,074 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ತಿಂಗಳಲ್ಲಿ 3,46,080 ವಾಹನಗಳು ಮಾರಾಟವಾಗಿದ್ದವು ಎಂದು ಬುಧವಾರ ತಿಳಿಸಿದೆ.

ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 26ರಷ್ಟು ಹೆಚ್ಚಾಗಿದೆ. ಒಟ್ಟು 14,95,183 ದ್ವಿಚಕ್ರ ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 11,84,376 ದ್ವಿಚಕ್ರ ವಾಹನಗಳು ಮಾರಾಟವಾಗಿದ್ದವು.

ತ್ರಿಚಕ್ರ ವಾಹನಗಳ ಮಾರಾಟವು ಶೇ 9ರಷ್ಟು ಹೆಚ್ಚಾಗಿದ್ದು, ಒಟ್ಟು 53,537 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 48,903 ವಾಹನ ಮಾರಾಟವಾಗಿದ್ದವು ಎಂದು ಒಕ್ಕೂಟ ತಿಳಿಸಿದೆ.

ಜನವರಿಯಲ್ಲಿ ಮಾರುತಿ ಸುಜುಕಿ ಇಂಡಿಯಾದ 1,66,802, ಹುಂಡೈ ಮೋಟರ್ ಇಂಡಿಯಾದ 57,115 ವಾಹನಗಳು ಮಾರಾಟವಾಗಿವೆ.

ದ್ವಿಚಕ್ರ ವಾಹನ ವಿಭಾಗದಲ್ಲಿ ಹೀರೊ ಮೋಟೊಕಾರ್ಪ್ 3,89,752, ಹೋಂಡಾ ಮೋಟರ್ ಸೈಕಲ್ ಆ್ಯಂಡ್ ಸ್ಕೂಟರ್ ಇಂಡಿಯಾ 1,83,638, ಬಜಾಜ್ ಆಟೊ 1,78,056, ಟಿವಿಎಸ್ 1,24,664 ಹಾಗೂ ಸುಜುಕಿ ಮೋಟರ್ ಸೈಕಲ್ ಇಂಡಿಯಾದ 78,477 ದ್ವಿಚಕ್ರ ವಾಹನ ಮಾರಾಟವಾಗಿವೆ.

ಮಹೀಂದ್ರಾಗೆ ₹2,658 ಕೋಟಿ ಲಾಭ

ಮುಂಬೈ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ತೆರಿಗೆ ನಂತರದ ನಿವ್ವಳ ಲಾಭವು ₹2,658 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹1,984 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 34ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ವರಮಾನವು ₹30,621 ಕೋಟಿಯಿಂದ ₹35,299 ಕೋಟಿಗೆ ಏರಿಕೆಯಾಗಿದೆ. ಒಟ್ಟಾರೆ ವರಮಾನವು ಶೇ 15ರಷ್ಟು ಹೆಚ್ಚಾಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವಾಹನಗಳ ಮಾರಾಟವು ಶೇ 20ರಷ್ಟು ಹೆಚ್ಚಾಗಿದೆ. ಒಟ್ಟು 2,11,443 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 1,76,094 ವಾಹನಗಳು ಮಾರಾಟವಾಗಿದ್ದವು.

ಮುಂಬೈ ಧಾರಣೆ

ಶೇಂಗಾ

14-02-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1460)
ಒಂದು ವಾರದ ಡೆಲಿವರಿ	1445 (1455)
ಸೋಯಾ ಕಚ್ಚಾ	855 (858)
ಪಾಮ್ ವಾರದ ಡೆಲಿವರಿ	860 (857)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹61,300 (62,000)
ಬೆಳ್ಳಿ ಕೆ.ಜಿ ₹69,200 (70,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಿಮಾಚಲ ಪ್ರದೇಶದ ಕುಲ್ಲು ನಗರದಲ್ಲಿ ಬುಧವಾರ ವಸಂತ ಪಂಚಮಿ ಅಂಗವಾಗಿ ನಡೆದ ರಘುನಾಥ ರಥಯಾತ್ರೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಎನ್‌ಎಂಡಿಸಿ ಲಾಭ ಶೇ 62 ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮವು (ಎನ್‌ಎಂಡಿಸಿ) 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹1,469 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹903 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಮೂರನೇ ತ್ರೈಮಾಸಿಕದ ಲಾಭದಲ್ಲಿ ಶೇ 62ರಷ್ಟು ಹೆಚ್ಚಳವಾಗಿದೆ. ವರಮಾನದಲ್ಲಿನ ಏರಿಕೆಯೇ ಲಾಭ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ನಿಗಮವು, ಷೇರುಪೇಟೆಗೆ ಬುಧವಾರ ತಿಳಿಸಿದೆ.

ನಿಗಮದ ಒಟ್ಟು ವರಮಾನವು ₹3,924 ಕೋಟಿಯಿಂದ ₹5,746 ಕೋಟಿಗೆ ಏರಿಕೆಯಾಗಿದೆ. ವೆಚ್ಚವು ₹2,693 ಕೋಟಿಯಿಂದ ₹3,516 ಕೋಟಿಗೆ ಹೆಚ್ಚಳವಾಗಿದೆ.

2023–24ನೇ ಹಣಕಾಸು ವರ್ಷದಲ್ಲಿ ಪ್ರತಿ ಈಕ್ವಿಟಿ ಷೇರಿಗೆ ₹5.75 ಮಧ್ಯಂತರ ಲಾಭಾಂಶ ನೀಡಲು ಆಡಳಿತ ಮಂಡಳಿಯು ಅನುಮೋದನೆ ನೀಡಿದೆ.

16ನೇ ಹಣಕಾಸು ಆಯೋಗದ ಪ್ರಥಮ ಸಭೆ

ನವದೆಹಲಿ (ಪಿಟಿಐ): 16ನೇ ಹಣಕಾಸು ಆಯೋಗದ ಪ್ರಥಮ ಸಭೆಯು ಅಧ್ಯಕ್ಷ ಅರವಿಂದ್ ಪನಗಡಿಯಾ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

ಆಯೋಗದ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ ಅವರು, ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ಸ್ವಾಗತಿಸಿದರು. ಕಳೆದ ವರ್ಷದ ಡಿಸೆಂಬರ್‌ನಲ್ಲಿ ರಾಷ್ಟ್ರಪತಿ ಅವರ ಆದೇಶದ ಮೇರೆಗೆ ಕೇಂದ್ರ ಹಣಕಾಸು ಸಚಿವಾಲಯವು ಸೂಚಿಸಿರುವ ನಿಯಮಾವಳಿಗಳ ಬಗ್ಗೆ ಚರ್ಚಿಸಲಾಯಿತು. ಕೇಂದ್ರ ಹಾಗೂ ರಾಜ್ಯಗಳ ನಡುವಿನ ತೆರಿಗೆ ಹಂಚಿಕೆ, ರಾಜ್ಯದಲ್ಲಿ ಸಂಚಿತ ನಿಧಿಯನ್ನು ಹೆಚ್ಚಿಸಿ ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಶಿಫಾರಸು ಕುರಿತಂತೆ ಚರ್ಚೆ ನಡೆಯಿತು.

ರಾಜ್ಯಗಳಿಗೆ ತೆರಿಗೆ ಹಂಚಿಕೆ ಮತ್ತು ವರಮಾನ ವೃದ್ಧಿಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಆಯೋಗವು, ರಾಷ್ಟ್ರಪತಿ ಅವರಿಗೆ 2025ರ ಅಕ್ಟೋಬರ್ 31ರೊಳಗೆ ವರದಿ ಸಲ್ಲಿಸಲಿದೆ. 2026ರ ಏಪ್ರಿಲ್ 1ರಿಂದ ಈ ಶಿಫಾರಸುಗಳು ಜಾರಿಗೆ ಬರುತ್ತವೆ. ಕೇಂದ್ರದ ನಿವೃತ್ತ ಅಧಿಕಾರಿಗಳಾದ ಅಜಯ್ ನಾರಾಯಣ್ ಝಾ, ಅನ್ನಿ ಜಾರ್ಜ್ ಮ್ಯಾಥ್ಯೂ ಹಾಗೂ ಅರ್ಥಾ ಗ್ಲೋಬಲ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ನಿರಂಜನ್ ರಾಜಾಧ್ಯಕ್ಷ ಅವರು ಪೂರ್ಣಕಾಲಿಕ ಸದಸ್ಯರಾಗಿ ದ್ದಾರೆ. ಎಸ್‌ಬಿಐ ಗ್ರೂಪ್‌ನ ಮುಖ್ಯ ಹಣಕಾಸು ಸಲಹೆಗಾರರಾದ ಸೌಮ್ಯ ಕಾಂತಿ ಘೋಷ್ ಅವರು ಅರೆಕಾಲಿಕ ಸದಸ್ಯರಾಗಿದ್ದಾರೆ.

ಕೊಬ್ಬರಿ ಖರೀದಿ ಪ್ರಕ್ರಿಯೆ ಒಂದು ವಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಬ್ಬರಿ ಖರೀದಿಗಾಗಿ ರೈತರ ನೋಂದಣಿಯಲ್ಲಿ ಅಕ್ರಮ ನಡೆದಿರುವುದರಿಂದ ಒಂದು ವಾರ ಖರೀದಿ ತಡೆ ಹಿಡಿದಿದ್ದು, ಬಳಿಕ ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಎಚ್.ಡಿ.ರೇವಣ್ಣ ಮತ್ತು ಇತರರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಸಚಿವರು, ರೈತರ ನೋಂದಣಿ ಪ್ರಕ್ರಿಯೆಯಲ್ಲಿ ಲೋಪಗಳು ಕಂಡು ಬಂದಿವೆ. ದಲ್ಲಾಳಿಗಳೂ ರೈತರ ಹೆಸರಿನಲ್ಲಿ ನೋಂದಣಿ ಮಾಡಿಸಿದ್ದಾರೆ ಎಂದು ಹೇಳಿದರು.

ಅಲ್ಲದೇ, ಇಲಾಖೆಯಿಂದ ಖರೀದಿಸಲಾಗಿದ್ದ ಕಂಪ್ಯೂಟರ್ ಬದಲಿಗೆ ಅಧಿಕಾರಿಗಳು ಮತ್ತು ಹೊರಗುತ್ತಿಗೆ ಸಿಬ್ಬಂದಿ ತಾವೇ ಪ್ರತ್ಯೇಕ ಕಂಪ್ಯೂಟರ್ ಖರೀದಿಸಿ ಅದನ್ನು ರೈತರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಿ ನೋಂದಣಿ ಮಾಡಿಸಿದ್ದಾರೆ. ಹಾಸನ ಜಿಲ್ಲೆಯಲ್ಲಿ ಇದು ವ್ಯಾಪಕವಾಗಿ ಕಂಡು ಬಂದಿದೆ. ಬೇರೆ ಜಿಲ್ಲೆಗಳ 3,500 ರೈತರನ್ನು ಹಾಸನದಲ್ಲಿ ನೋಂದಣಿ ಮಾಡಲಾಗಿದೆ. ತೆಂಗು ಅತಿ ಹೆಚ್ಚು ಬೆಳೆಯುವ ತುಮಕೂರು ಜಿಲ್ಲೆಯಲ್ಲಿ ನೋಂದಣಿ ಕಡಿಮೆಯಾಗಿದೆ. ಆದ್ದರಿಂದ ಖರೀದಿ ಪ್ರಕ್ರಿಯೆ ಸ್ಥಗಿತಗೊಳಿಸಿ, 9 ಮಂದಿ ಅಧಿಕಾರಿಗಳ ವಿರುದ್ಧ ತನಿಖೆಗೆ ಆದೇಶಿಸಲಾಗಿದೆ ಎಂದು ಸಚಿವರು ತಿಳಿಸಿದರು.

ವಂಚಿಸಿರುವವರ ವಿರುದ್ಧ ಮೊಕದ್ದಮೆ ಕೂಡ ದಾಖಲಿಸಲಾಗುತ್ತಿದೆ. ನೋಂದಣಿ ಪ್ರಕ್ರಿಯೆಯನ್ನು ಪರಿಷ್ಕರಣೆಗೊಳಪಡಿಸಲಾಗುತ್ತಿದ್ದು, ಅಲ್ಲಿಯವರೆಗೆ ತಾತ್ಕಾಲಿಕವಾಗಿ ಖರೀದಿ ಪ್ರಕ್ರಿಯೆ ಸ್ಥಗಿತಗೊಳಿಸಲಾಗುತ್ತದೆ ಎಂದರು.

ಈ ಮೊದಲು ಕೇಂದ್ರ ಸರ್ಕಾರ ಏಳು ತಿಂಗಳವರೆಗೂ ಕೊಬ್ಬರಿ ಖರೀದಿಗೆ ಅವಕಾಶ ನೀಡಿತ್ತು. ಪ್ರಸ್ತುತ 3 ತಿಂಗಳಿನಂತೆ ಎರಡು ಅವಧಿಗೆ ಖರೀದಿಗೆ ಅವಕಾಶ ನೀಡಲಾಗಿದೆ. ಕಳೆದ ಬಾರಿ ಖರೀದಿಯಲ್ಲಿ ನಾಫೆಡ್ ₹200 ಕೋಟಿ ನಷ್ಟ ಅನುಭವಿಸಿದ್ದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದೂ ಶಿವಾನಂದ ಪಾಟೀಲ ತಿಳಿಸಿದರು.

‘ಎಂಎಸ್‌ಪಿಗೆ ₹6 ಲಕ್ಷ ಕೋಟಿ ಬೇಕು’

ಸರ್ಕಾರಕ್ಕೆ ₹21,000 ಕೋಟಿಯಷ್ಟೇ ಹೊರೆ: ತಜ್ಞರ ಹೇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ಕೃಷಿ ಉತ್ಪನ್ನಗಳ ದರ ಕುಸಿತವಾದರೆ ರೈತರಿಂದ ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) ಖರೀದಿಗೆ ಕೇಂದ್ರ ಸರ್ಕಾರವು ಸುಮಾರು ₹6 ಲಕ್ಷ ಕೋಟಿಯನ್ನು ಮೀಸಲಿಡಬೇಕಾಗುತ್ತದೆ ಎಂದು ಮಾರುಕಟ್ಟೆ ತಜ್ಞರು ಅಂದಾಜಿಸಿದ್ದಾರೆ.

ಮಂಡಿಯಲ್ಲಿ ಖರೀದಿಯಾಗುವ ಬೆಲೆ ಮತ್ತು ಎಂಎಸ್‌ಪಿ ನಡುವಿನ ಅಂತರದ ಮೊತ್ತವಷ್ಟೇ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗಬಹುದು ಎಂದು ಪರಿಗಣಿಸಲಾಗಿದೆ. ಹಾಗಾಗಿ, 2023–24ನೇ ಮಾರುಕಟ್ಟೆ ಋತುವಿನಲ್ಲಿ ಈ ಮೊತ್ತವು ₹21 ಸಾವಿರ ಕೋಟಿ ಆಗಬಹುದೆಂದು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದಾರೆ.

‘ಕನಿಷ್ಠ ಬೆಂಬಲ ಬೆಲೆಯಡಿ 23 ಉತ್ಪನ್ನಗಳ ಖರೀದಿಗೆ ಅವಕಾಶವಿದೆ. ಇಷ್ಟು ಉತ್ಪನ್ನಗಳನ್ನು ಖರೀದಿಸಿದರೆ ಸರ್ಕಾರದ ಖಜಾನೆಗೆ ಹೆಚ್ಚಿನ ಹೊರೆಯಾಗುತ್ತದೆ. ಆದರೆ, ವಿವಿಧ ಬೆಳೆಗಳ ಉತ್ಪಾದನೆಗಾಗಿ ರೈತರಿಗೆ ಪ್ರೋತ್ಸಾಹ ನೀಡಲು ಇದರಿಂದ ನೆರವಾಗಲಿದೆ’ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಕ್ರಿಸಿಲ್‌ನ ಸಂಶೋಧನಾ ವಿಭಾಗದ ನಿರ್ದೇಶಕ ಪೂಶನ್ ಶರ್ಮಾ ಹೇಳಿದ್ದಾರೆ.

ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸ್ಸಿನ ಅನ್ವಯ ಕೇಂದ್ರ ಸರ್ಕಾರವು ಎಂಎಸ್‌ಪಿ ನಿಗದಿಪಡಿಸುತ್ತದೆ. ಸದ್ಯ 22 ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿಪಡಿಸಿದೆ. ಇವುಗಳ ಪೈಕಿ ಭತ್ತ ಮತ್ತು ಗೋಧಿಯನ್ನಷ್ಟೇ ಹೆಚ್ಚಾಗಿ ಖರೀದಿಸುತ್ತದೆ.

ದೇಶದಲ್ಲಿ 2022ರ ಖಾರೀಫ್ ಅವಧಿಯಲ್ಲಿ ರೈತರಿಂದ ಕನಿಷ್ಠ ಬೆಂಬಲ ಬೆಲೆಯಡಿ ಶೇ 41ರಷ್ಟು ಭತ್ತ ಖರೀದಿಸಲಾಗಿದೆ. 2023ರ ರಾಬಿ ಅವಧಿಯಲ್ಲಿ ಶೇ 24ರಷ್ಟು ಗೋಧಿ ಹಾಗೂ ಶೇ 9ರಷ್ಟು ಸಾಸಿವೆಯನ್ನು ಖರೀದಿಸಿದೆ. ಉಳಿದಂತೆ 8 ಉತ್ಪನ್ನಗಳ ಬೆಲೆಯು ಎಂಎಸ್‌ಪಿಗಿಂತಲೂ ಹೆಚ್ಚಿದೆ. ಹಾಗಾಗಿ, ಸರ್ಕಾರವು ಅವುಗಳನ್ನು ಖರೀದಿಸಿಲ್ಲ. ‘ಸರ್ಕಾರವು ಎಲ್ಲಾ ಉತ್ಪನ್ನಗಳಿಗೆ ಎಂಎಸ್‌ಪಿ ಖಾತರಿ ಪಡಿಸುವುದರಿಂದ ರೈತರು ಭತ್ತ ಮತ್ತು ಗೋಧಿ ಹೊರತುಪಡಿಸಿ ಇತರೆ ಉತ್ಪನ್ನಗಳನ್ನು ಬೆಳೆಯಲು ಉತ್ಸಾಹ ತೋರಬಹುದು’ ಎನ್ನುತ್ತಾರೆ ಪೂಶನ್ ಶರ್ಮಾ. ಸದ್ಯ ದೆಹಲಿ ಚಲೋ ಹಮ್ಮಿಕೊಂಡಿ ರುವ ರೈತರು ಕನಿಷ್ಠ ಬೆಂಬಲ ಬೆಲೆ ಕಾನೂನಿನ ಖಾತರಿಗೆ ಪಟ್ಟು ಹಿಡಿದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	530

ಅಡಿಕೆ

ಬಂಟ್ವಾಳ

ಕೋಕ	18000-28500
ಹೊಸತು	28500-34500
ಹಳತು	34500-44000

ಕಾರ್ಕಳ

ಹೊಸತು	25000-34500
ಹಳತು	30000-44500

ಕುಮಟ

ಬೆಟ್ಟೆ	33409-41709
ಚಿಪ್ಪು	26069-31009
ಕೋಕ	16019-27019
ಫ್ಯಾಕ್ಟರಿ	11019-21299

ಹಳೆಚಾಲಿ	36019-37299
ಹೊಸಚಾಲಿ	30019-33799

ಪುತ್ತೂರು

ಹೊಸತು	26500-34500

ಶಿವಮೊಗ್ಗ

ಬೆಟ್ಟೆ	42609-54569
ಗೊರಬಲು	14119-36099
ರಾಶಿ	28200-48399
ಸರಕು	52200-79110

ಸಿದ್ದಾಪುರ

ಬಿಳಿಗೋಟು	26899-30569
ಚಾಲಿ	35239-36739

ಕೋಕ	26099-29699
ಹೊಸಚಾಲಿ	31679-35669
ಕೆಂಪುಗೋಟು	31199-35499
ರಾಶಿ	42869-46889
ತಟ್ಟಿಬೆಟ್ಟೆ	39009-46099

ಶಿರಸಿ

ಬೆಟ್ಟೆ	38018-43599
ಬಿಳಿಗೋಟು	25099-33399
ಚಾಲಿ	35108-38612
ಕೆಂಪುಗೋಟು	30200-36298
ರಾಶಿ	42208-47661

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14,350	-	193 ಸೆಂಟ್ಸ್
ಎಸಿ	-	7,800	-	
ಆರ್‌ಪಿ	-	13,400	-	ಲಂಡನ್
ಆರ್‌ಸಿ	-	7,400	-	3,284 ಡಾಲರ್ಸ್

ಅವಳಿ ಮಕ್ಕಳು ಸೇರಿ ನಾಲ್ವರು ಭಾರತೀಯರ ಸಾವು

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ನಿವಾಸವೊಂದರಲ್ಲಿ ಭಾರತ ಮೂಲದ ಕುಟುಂಬದ ನಾಲ್ವರ ಶವಗಳು ಪತ್ತೆಯಾಗಿವೆ. ಈ ಕುರಿತು ಆತ್ಮಹತ್ಯೆ–ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಇಲ್ಲಿನ ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಕೇರಳ ಮೂಲದ ದಂಪತಿ ಆನಂದ್ ಸುಜಿತ್ ಹೆನ್ರಿ (42), ಅವರ ಪತ್ನಿ ಅಲೈಸ್ ಪ್ರಿಯಾಂಕಾ (40) ಹಾಗೂ ಅವರ ನಾಲ್ಕು ವರ್ಷದ ಅವಳಿ ಮಕ್ಕಳು ಎಂದು ಗುರುತಿಸಲಾಗಿದೆ.

ಈ ದಂಪತಿ ಎರಡು ವರ್ಷಗಳ ಹಿಂದಷ್ಟೇ ಸ್ಯಾನ್‌ಮಾಟಿಯೊ ಕೌಂಟಿಯಲ್ಲಿ ಐಶಾರಾಮಿ ಮನೆ ಖರೀದಿಸಿ, ಅಲ್ಲಿಯೇ ನೆಲೆಸಿದ್ದರು. ಇದೇ ಮನೆಯಲ್ಲಿ ದಂಪತಿಯನ್ನು ಗುಂಡಿಟ್ಟು ಕೊಲ್ಲಲಾಗಿದ್ದು, ಅವರ ಮೃತದೇಹಗಳು ಹಾಗೂ ಪಿಸ್ತೂಲ್ ಮತ್ತು ಗುಂಡುಗಳು ಶೌಚಾಲಯದಲ್ಲಿ ಪತ್ತೆಯಾಗಿವೆ. ಆದರೆ, ಮಲಗುವ ಕೋಣೆಯಲ್ಲಿ ಪತ್ತೆಯಾಗಿರುವ ಮಕ್ಕಳ ದೇಹದ ಮೇಲೆ ಯಾವುದೇ ಗಾಯದ ಗುರುತುಗಳಿಲ್ಲ. ಹೀಗಾಗಿ ಈ ಇಬ್ಬರು ಮಕ್ಕಳನ್ನು ಉಸಿರುಗಟ್ಟಿಸಿ, ಕತ್ತು ಹಿಸುಕಿ ಅಥವಾ ಲೀಥಲ್ ಓವರ್‌ಡೋಸ್ ನೀಡಿ ಕೊಂದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಈ ಕುರಿತು ಮಾಹಿತಿ ಪಡೆದ ತಕ್ಷಣವೇ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಸರಳ ಬಹುಮತ ಸಾಬೀತುಪಡಿಸಲು ಸಜ್ಜಾದ ಪಿಎಂಎಲ್–ಎನ್

ಪಾಕಿಸ್ತಾನದ ನೂತನ ಪ್ರಧಾನಿ ಶೆಹಬಾಜ್?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ನೇತೃತ್ವದ ಮೈತ್ರಿಕೂಟವು ಸರಳ ಬಹುಮತ ಸಾಬೀತುಪಡಿಸಲು ಸಜ್ಜಾಗಿದ್ದು, ಅವರ ತಮ್ಮ ಶೆಹಬಾಜ್ ಷರೀಫ್ ಅವರು ನೂತನ ಪ್ರಧಾನಿಯಾಗುವ ಸಾಧ್ಯತೆ ಇದೆ ಎಂದು ಮೂಲಗಳು ಬುಧವಾರ ಹೇಳಿವೆ.

ಅಚ್ಚರಿಯ ಬೆಳವಣಿಗೆಯಲ್ಲಿ ಪಾಕಿಸ್ತಾನ ಮುಸ್ಲಿಂ ಲೀಗ್ -ನವಾಜ್ (ಪಿಎಂಎಲ್-ಎನ್) ಪಕ್ಷವು ಪ್ರಧಾನಿ ಅಭ್ಯರ್ಥಿಯಾಗಿ ನವಾಜ್ ಅವರ ಬದಲಿಗೆ ಶೆಹಬಾಜ್ ಅವರನ್ನು ಮಂಗಳವಾರ ರಾತ್ರಿ ನಾಮನಿರ್ದೇಶನ ಮಾಡಿತ್ತು.

ಇದಕ್ಕೂ ಮುನ್ನ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಆಸಿಫ್ ಅಲಿ ಜರ್ದಾರಿ, ಮುತ್ತಹಿದಾ ಕ್ವಾಮಿ ಮೂವ್‌ಮೆಂಟ್ ಪಾಕಿಸ್ತಾನದ (ಎಂಒಎಂ-ಪಿ) ಮುಖಂಡ ಖಾಲಿದ್ ಮಖ್ಬೂಲ್ ಸಿದ್ದಿಕಿ ಅವರೊಂದಿಗೆ ಶೆಹಬಾಜ್ ಅವರು ಸರ್ಕಾರ ರಚನೆಯ ಕುರಿತು ಚರ್ಚೆ ನಡೆಸಿದ್ದರು. ಪಾಕಿಸ್ತಾನ ಮುಸ್ಲಿಂ ಲೀಗ್ ಕ್ವಾಯಿದ್ (ಪಿಎಂಎಲ್-ಕ್ಯು) ನಾಯಕ ಶುಜಾತ್ ಹುಸೇನ್ ಅವರ ಮನೆಯಲ್ಲಿ ಈ ಚರ್ಚೆ ನಡೆದಿತ್ತು.



ಶೆಹಬಾಜ್ ಷರೀಫ್

‘ಇಂದು ನಾವೆಲ್ಲಾ ಒಗ್ಗಟ್ಟಿನಿಂದ ಇದ್ದೇವೆ ಮತ್ತು ಅತಂತ್ರ ಫಲಿತಾಂಶವನ್ನು ಒಪ್ಪಿಕೊಂಡಿದ್ದೇವೆ. ಪಿಎಂಎಲ್–ಎನ್‌ಗೆ ಬೆಂಬಲ ನೀಡಿದ್ದಕ್ಕೆ ಜರ್ದಾರಿ ಮತ್ತು ಬಿಲಾವಲ್ ಭುಟ್ಟೊ ಅವರಿಗೆ ವಂದನೆಗಳು’ ಎಂದು ಶೆಹಬಾಜ್ ಹೇಳಿದರು.

ಪಿಎಂಎಲ್-ಎನ್ ಪಕ್ಷದ ಉಪಾಧ್ಯಕ್ಷೆ ಮರಿಯಂ ನವಾಜ್ ಅವರನ್ನು ಪಂಜಾಬ್ ಪ್ರಾಂತ್ಯದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಜನಾದೇಶವನ್ನು ಕಸಿದುಕೊಳ್ಳಲಾಗಿದೆ: ಪಿಎಂಎಲ್-ಎನ್ ಅಧ್ಯಕ್ಷ ಶೆಹಬಾಜ್ ಷರೀಫ್ ನೇತೃತ್ವದಲ್ಲಿ ಮೈತ್ರಿ ಸರ್ಕಾರ ರಚಿಸಲು ಪಾಕಿಸ್ತಾನದ ಪ್ರಮುಖ ಪಕ್ಷಗಳು ತೀರ್ಮಾನಿಸಿರುವುದಕ್ಕೆ ಪ್ರತಿಕ್ರಿಯಿಸಿರುವ ಪಾಕಿಸ್ತಾನ್ ತೆಹ್ರೀಕ್-ಇ-ಇನ್ಸಾಫ್ (ಪಿಟಿಐ) ಪಕ್ಷದ ವಕ್ತಾರ ರಾವೂಫ್ ಹಸನ್, ‘ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಲಭಿಸಿರುವ ಜನಾದೇಶವನ್ನು ರಾತ್ರೋರಾತ್ರಿ ಕಸಿಯಲಾಗಿದೆ’ ಎಂದಿದ್ದಾರೆ.

‘ಜನರು ತಿರಸ್ಕರಿಸಿರುವ ಅಪರಾಧಿಗಳ ಗುಂಪು ಸರ್ಕಾರ ರಚನೆಗೆ ಮುಂದಾಗಿದ್ದು, ದೇಶವನ್ನು ಮತ್ತಷ್ಟು ಅಸ್ಥಿರಗೊಳಿಸುವ ನಡೆ ಇದಾಗಿದೆ’ ಎಂದೂ ಎಕ್ಸ್ ಮಾಧ್ಯಮದಲ್ಲಿ ಅವರು ಪ್ರತಿಕ್ರಿಯಿಸಿದ್ದಾರೆ.

ಚುನಾವಣೆಯಲ್ಲಿ ಮೋಸ: ಫೆಬ್ರುವರಿ 8ರ ಚುನಾವಣೆಯಲ್ಲಿ ಮೋಸ ನಡೆದಿದೆ ಎಂದಿರುವ ಪಾಕಿಸ್ತಾನದ ಬಲಪಂಥೀಯ ಧಾರ್ಮಿಕ ಮುಖಂಡ ಹಾಗೂ ಜಮೀಯತ್ ಉಲೆಮಾ–ಎ–ಇಸ್ಲಾಂ ಫಜ್ಲ್ (ಜೆಯುಐ–ಎಫ್) ಪಕ್ಷದ ಮೌಲಾನಾ ಫಜಲುರ್ ರೆಹಮಾನ್, ಮೈತ್ರಿ ಸರ್ಕಾರಕ್ಕೆ ತಮ್ಮ ಪಕ್ಷವು ಬೆಂಬಲ ನೀಡುವುದಿಲ್ಲ ಎಂದಿದ್ದಾರೆ.

ಡಚ್ ತಂಡಕ್ಕೆ ಮಣಿದ ಭಾರತ

ರೂರ್ಕೆಲಾ (ಪಿಟಿಐ): ಭಾರತ ಮಹಿಳಾ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಬುಧವಾರ ಪ್ರಬಲ ನೆದರ್ಲೆಂಡ್ಸ್ ಎದುರು ರಕ್ಷಣೆಯ ಆಟದಲ್ಲಿ ಸುಧಾರಿತ ಪ್ರದರ್ಶನ ನೀಡಿತು. ಆದರೆ ವಿಶ್ವದ ಅಗ್ರ ಕ್ರಮಾಂಕದ ತಂಡದ ಎದುರು 0–1 ಅಂತರದ ಸೋಲು ತಪ್ಪಿಸಿಕೊಳ್ಳಲು ಆಗಲಿಲ್ಲ.

27ನೇ ನಿಮಿಷ ಅಲ್ಬರ್ಸ್ ಫೆಲಿಸ್ ಅವರು ಹಾಲಿ ವಿಶ್ವ ಚಾಂಪಿಯನ್ ತಂಡದ ಪರ ನಿರ್ಣಾಯಕ ಗೋಲು ಗಳಿಸಿದರು. ಇದು ಸವಿತಾ ಪೂನಿಯಾ ತಂಡಕ್ಕೆ ಪ್ರೊ ಲೀಗ್‌ನಲ್ಲಿ ಡಚ್ ತಂಡದ ಎದುರಾದ ಎರಡನೇ ಸೋಲು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದ ಕನ್ನಡಿಗ ರೋಹನ್ ಬೋಪಣ್ಣ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಅಭಿನಂದಿಸಿ ₹ 50 ಲಕ್ಷ ಬಹುಮಾನ ಘೋಷಿಸಿದರು. (ಬಲದಿಂದ) ಸಚಿವರಾದ ಶಿವರಾಜ ತಂಗಡಗಿ, ಪ್ರಿಯಾಂಕ ಖರ್ಗೆ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ರೋಹನ್ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಜೈಂಟ್ಸ್‌ಗೆ ಮೂನಿ ನಾಯಕಿ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಬೆತ್ ಮೂನಿ, ಇದೇ 23ರಂದು ಆರಂಭವಾಗುವ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಗುಜರಾತ್ ಜೈಂಟ್ಸ್ ತಂಡಕ್ಕೆ ನಾಯಕಿಯಾಗಿ ನೇಮಕಗೊಂಡಿದ್ದಾರೆ ಎಂದು ಫ್ರಾಂಚೈಸಿ ಬುಧವಾರ ತಿಳಿಸಿದೆ.

ಮೊದಲ ವರ್ಷವೂ ಅವರು ನಾಯಕಿ ಆಗಿದ್ದರು. ಆದರೆ ಮೊದಲ ಪಂದ್ಯದಲ್ಲಿ ಗಾಯಾಳಾದ ಬಳಿಕ ಭಾರತದ ಆಲ್‌ರೌಂಡರ್ ಸ್ನೇಹ ರಾಣಾ ತಂಡವನ್ನು ಮುನ್ನಡೆಸಿದ್ದರು. ಅವರು ಈ ಬಾರಿ ಉಪನಾಯಕಿ ಆಗಿದ್ದಾರೆ. ಕಳೆದ ಸಾಲಿನಲ್ಲಿ ಗುಜರಾತ್, ಐದು ತಂಡಗಳ ಲೀಗ್‌ನಲ್ಲಿ ಕೊನೆಯ ಸ್ಥಾನ ಗಳಿಸಿತ್ತು.

ರ‍್ಯಾಂಕಿಂಗ್: ಅಗ್ರಸ್ಥಾನಕ್ಕೇರಿದ ನಬಿ

ದುಬೈ (ಪಿಟಿಐ): ಅಫ್ಗಾನಿಸ್ತಾನದ ಮೊಹಮ್ಮದ್ ನಬಿ ಅವರು ಐಸಿಸಿ ಆಲ್‌ರೌಂಡರ್‌ಗಳ ಏಕದಿನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಮೊದಲ ಬಾರಿ ಅಗ್ರಸ್ಥಾನಕ್ಕೇರಿದರು. ದೀರ್ಘಕಾಲ ಅಗ್ರಸ್ಥಾನದಲ್ಲಿದ್ದ ಶಕಿಬ್ ಅಲ್ ಹಸನ್ ಅವರನ್ನು ನಬಿ ಹಿಂದೆಹಾಕಿದರಲ್ಲದೇ, ಈ ಸ್ಥಾನಕ್ಕೇರಿದ ಅತಿ ಹಿರಿಯ ಕ್ರಿಕೆಟಿಗ ಎಂಬ ಗೌರವಕ್ಕೂ ಪಾತ್ರರಾದರು.

ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಬೌಲರ್‌ಗಳ ಪಟ್ಟಿಯಲ್ಲಿ ಜಸ್‌ಪ್ರೀತ್ ಬೂಮ್ರಾ ಅಗ್ರಸ್ಥಾನದಲ್ಲೇ ಉಳಿದುಕೊಂಡಿದ್ದಾರೆ.

ಇಂಗ್ಲೆಂಡ್ ವಿರುದ್ಧ ಗುರುವಾರ ಆರಂಭವಾಗಲಿರುವ ಮೂರನೇ ಟೆಸ್ಟ್‌ಗೆ ಪುನರಾಗಮನ ಮಾಡಲಿರುವ ರವೀಂದ್ರ ಜಡೇಜ ಅವರು ಟೆಸ್ಟ್ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಏಕದಿನ ಬೌಲರ್‌ಗಳ ಪಟ್ಟಿಯಲ್ಲಿ ದಕ್ಷಿಣ ಆಫ್ರಿಕಾದ ಸ್ಪಿನ್ನರ್ ಕೇಶವ ಮಹಾರಾಜ್ ಅವರು ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ.

ಭಾರತಕ್ಕೆ ಇಂದು ಆಸ್ಟ್ರೇಲಿಯಾ ಸವಾಲು

ಭುವನೇಶ್ವರ (ಪಿಟಿಐ): ಬೆನ್ನುಬೆನ್ನಿಗೆ ಎರಡು ಪಂದ್ಯಗಳಲ್ಲಿ ಜಯ ಗಳಿಸಿರುವ ಭಾರತ ಪುರುಷರ ತಂಡವು ಕಳಿಂಗ ಕ್ರೀಡಾಂಗಣದಲ್ಲಿ ಗುರುವಾರ ನಡೆಯುವ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಪಂದ್ಯದಲ್ಲಿ ಪ್ರಬಲ ಆಸ್ಟ್ರೇಲಿಯಾ ತಂಡವನ್ನು ಹೆಚ್ಚಿನ ವಿಶ್ವಾಸದಿಂದ ಎದುರಿಸಲಿದೆ.

ಮೊದಲ ಪಂದ್ಯದಲ್ಲಿ 4–1 ಗೋಲುಗಳಿಂದ ಸ್ಪೇನ್ ತಂಡವನ್ನು ಸೋಲಿಸಿದ್ದ ಭಾರತ, ನಂತರ ಹಾಲಿ ಚಾಂಪಿಯನ್ ಹಾಗೂ ವಿಶ್ವದ ಅಗ್ರಮಾನ್ಯ ತಂಡ ನೆದರ್ಲೆಂಡ್ಸ್ ವಿರುದ್ಧ ಶೂಟೌಟ್‌ನಲ್ಲಿ 4–2 ಗೋಲುಗಳಿಂದ (ನಿಗದಿ ಅವಧಿಯ ಆಟದಲ್ಲಿ 2–2) ಜಯಗಳಿಸಿತ್ತು.

ಇನಿಂಗ್ಸ್‌ನಲ್ಲಿ 8 ಕ್ಯಾಚ್ ಹಿಡಿದ ಅಲೆಕ್ಸ್

ಅಡಿಲೇಡ್ (ಎಪಿ): ಆಸ್ಟ್ರೇಲಿಯಾದ ಟೆಸ್ಟ್ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಅವರು ದೇಶಿಯ ಏಕದಿನ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ ಎಂಟು ಕ್ಯಾಚ್‌ಗಳನ್ನು ಹಿಡಿದು ಬುಧವಾರ ಅಂತರರಾಷ್ಟ್ರೀಯ ದಾಖಲೆ ಸರಿಗಟ್ಟಿದ್ದಾರೆ.

ಭಾರತ ಮಧ್ಯಮ ಕ್ರಮಾಂಕಕ್ಕೆ 'ಟೆಸ್ಟ್'

3ನೇ ಟೆಸ್ಟ್ ಇಂದಿನಿಂದ • ರೋಹಿತ್ ಪಡೆಗೆ ಇಂಗ್ಲೆಂಡ್ ಸವಾಲು • ಬೆನ್ ಸ್ಟೋಕ್ಸ್‌ಗೆ 100ನೇ ಪಂದ್ಯ

ರಾಜ್‌ಕೋಟ್ (ಪಿಟಿಐ): ಆತಿಥೇಯ ಭಾರತ ತಂಡಕ್ಕೆ ಗುರುವಾರ ಆರಂಭವಾಗಲಿರುವ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಕಟ್ಟುನಿಟ್ಟಾದ ಮತ್ತು ಜಾಣ್ಮೆಯನ್ನು ಸಮನಾಗಿ ಬೆರೆಸಿದ ತಂತ್ರಗಾರಿಕೆಯೊಂದಿಗೆ ಆಡಬೇಕಾದ ಅವಶ್ಯಕತೆ ಇದೆ.

ಇಂಗ್ಲೆಂಡ್ ತಂಡದ ಎದುರಿನ ಐದು ಪಂದ್ಯಗಳ ಸರಣಿಯಲ್ಲಿ ಉಭಯ ತಂಡಗಳು 1-1ರಿಂದ ಸಮಬಲ ಸಾಧಿಸಿವೆ. ಆದರೆ ಆತಿಥೇಯ ಬಳಗಕ್ಕೆ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ದುರ್ಬಲವಾಗಿರುವುದೇ ಚಿಂತೆಯ ವಿಷಯವಾಗಿದೆ.

ಆರಂಭಿಕ ಬ್ಯಾಟರ್, ನಾಯಕ ರೋಹಿತ್ ಶರ್ಮಾ ಕೂಡ ರನ್‌ಗಳನ್ನು ಗಳಿಸುವಲ್ಲಿ ಹಿಂದಿದ್ದಾರೆ. ಅವರ ಆಕ್ರಮಣಶೈಲಿಯು ಬೌಲರ್‌ಗಳಿಗೆ ತುಸು ಹೊತ್ತು ಸವಾಲಾಗಬಹುದು. ಆದರೆ ದೊಡ್ಡ ಸ್ಕೋರ್ ಗಳಿಸಲು ಸಹಾಯಕವಾಗುತ್ತಿಲ್ಲ. ಅದರಿಂದಾಗಿ ಇನಿಂಗ್ಸ್‌ಗೆ ಬಲ ತುಂಬುವ ಹೊಣೆ ಮಧ್ಯಮ ಕ್ರಮಾಂಕದ ಮೇಲೆ ಹೆಚ್ಚಿದೆ.

ಅನುಭವಿಗಳಾದ ವಿರಾಟ್ ಕೊಹ್ಲಿ ಮತ್ತು ಕೆ.ಎಲ್. ರಾಹುಲ್ ಅವರ ಅನುಪಸ್ಥಿತಿಯು ಗಾಢವಾಗಿ ಕಾಡುತ್ತಿದೆ. ಮುಂಬೈನ ಸರ್ಫರಾಜ್ ಖಾನ್ ಅವರಿಗೆ ಪದಾರ್ಪಣೆಯ ಅವಕಾಶ ಸಿಗುವ ಸಾಧ್ಯತೆ ಇದೆ.

ಕಳೆದ ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ್ದ ರಜತ್ ಪಾಟೀದಾರ್ ಅವರಿಗೂ ತಮ್ಮ ಸಾಮರ್ಥ್ಯ ತೋರಲು ಇನ್ನೊಂದು ಅವಕಾಶ ಲಭಿಸಬಹುದು. ಯುವ ವಿಕೆಟ್‌ಕೀಪರ್ ಧ್ರುವ ಜುರೇಲ್ ಅವರೂ ಚೊಚ್ಚಲ ಟೆಸ್ಟ್ ಆಡುವ ಸಾಧ್ಯತೆ ಇದೆ. ಕೆ.ಎಸ್. ಭರತ್ ಅವರು ನಿರೀಕ್ಷೆಗೆ ತಕ್ಕಂತೆ ಆಡದಿರುವುದರಿಂದ ಅವರಿಗೆ ವಿಶ್ರಾಂತಿ ಕೊಟ್ಟು ಜುರೇಲ್‌ಗೆ ಸ್ಥಾನ ನೀಡಬಹುದು.

ಆದರೆ ಇವರಿಬ್ಬರೂ ತಮ್ಮ ಆಯ್ಕೆಯನ್ನು ಸಮರ್ಥಿಸುವಂತೆ ಆಡುವ ಸವಾಲು ಇದೆ. ಏಕೆಂದರೆ; ಅವರು ಇಂಗ್ಲೆಂಡ್ ತಂಡದ ಅನುಭವಿ ವೇಗಿ ಜೇಮ್ಸ್ ಆ್ಯಂಡರ್ಸನ್, ಮಾರ್ಕ್ ವುಡ್, ಪರಿಣಾಮಕಾರಿ ಸ್ಪಿನ್ನರ್ ಟಾಮ್ ಹಾರ್ಟ್ಲಿ ಅವರನ್ನು ಎದುರಿಸುವ ದಿಟ್ಟತನ ತೋರಬೇಕಿದೆ.

ಮುಖ್ಯಾಂಶಗಳು

- ಸರಣಿಯಲ್ಲಿ 1-1ರ ಸಮಬಲ ಸಾಧಿಸಿರುವ ಉಭಯ ತಂಡಗಳು
- ಸರ್ಫರಾಜ್ ಖಾನ್, ಧ್ರುವ ಜುರೇಲ್‌ಗೆ ಅವಕಾಶ ಸಾಧ್ಯತೆ
- ಜಸ್‌ಪ್ರೀತ್ ಬೂಮ್ರಾ, ಆರ್. ಅಶ್ವಿನ್ ಮೇಲೆ ಕಣ್ಣು

ಹೈದರಾಬಾದಿನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಭಾರತಕ್ಕೆ ಆಘಾತ ನೀಡಿತ್ತು. ವಿಶಾಖಪಟ್ಟಣದಲ್ಲಿ ನಡೆದಿದ್ದ ಎರಡನೇ ಪಂದ್ಯದಲ್ಲಿ ಭಾರತವು ತಿರುಗೇಟು ನೀಡಿತು.

ತಂಡದ ಯಶಸ್ವಿ ಜೈಸ್ವಾಲ್ ದ್ವಿಶತಕ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಬಿರುಗಾಳಿ ವೇಗದ ಬೌಲಿಂಗ್ ಮುಂದೆ ಇಂಗ್ಲೆಂಡ್ ತಂಡವು ತತ್ತರಿಸಿತ್ತು. ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳಲು ಇಂಗ್ಲೆಂಡ್ ತುದಿಗಾಲಿನಲ್ಲಿ ನಿಂತಿದೆ.

ಬೆನ್ ಸ್ಟೋಕ್ಸ್ ಅವರು ತಮ್ಮ 100ನೇ ಟೆಸ್ಟ್ ಪಂದ್ಯವನ್ನು ಗೆದ್ದು ಅವಿಸ್ಮರಣೀಯ ಗೊಳಿಸಿಕೊಳ್ಳುವ ಛಲದಲ್ಲಿದ್ದಾರೆ.

'ಬಾಝ್‌ಬಾಲ್' ತಂತ್ರವನ್ನು ಮುಂದುವರಿಸುವ ಯೋಚನೆಯಲ್ಲಿಯೂ ಪ್ರವಾಸಿ ತಂಡವಿದೆ. ಆದ್ದರಿಂದ ರೋಹಿತ್ ಬಳಗವು ಎಲ್ಲ ವಿಭಾಗಗಳಲ್ಲಿಯೂ ಉತ್ತಮ ಸಾಮರ್ಥ್ಯ ತೋರಬೇಕಾದ ಅನಿವಾರ್ಯತೆ ಇದೆ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ಧ್ರುವ ಜುರೇಲ್, ಕೆ.ಎಸ್. ಭರತ್ (ಇಬ್ಬರೂ ವಿಕೆಟ್‌ಕೀಪರ್), ಆರ್. ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಆಕಾಶ್ ದೀಪ್, ದೇವದತ್ತ ಪಡಿಕ್ಕಲ್.

ಇಂಗ್ಲೆಂಡ್: ಬೆನ್ ಸ್ಟೋಕ್ಸ್ (ನಾಯಕ), ರೆಹಾನ್ ಅಹಮದ್, ಜೇಮ್ಸ್ ಆ್ಯಂಡರ್ಸನ್, ಗಸ್ ಅಟ್ಕಿನ್ಸನ್, ಜಾನಿ ಬೆಸ್ಟೊ (ವಿಕೆಟ್‌ಕೀಪರ್), ಶೋಯಬ್ ಬಶೀರ್, ಡ್ಯಾನ್ ಲಾರೆನ್ಸ್, ಜ್ಯಾಕ್ ಕ್ರಾಲಿ, ಬೆನ್ ಡಕೆಟ್, ಬೆನ್ ಫೋಕ್ಸ್ (ವಿಕೆಟ್‌ಕೀಪರ್), ಟಾಮ್ ಹಾರ್ಟ್ಲಿ, ಓಲಿ ಪೋಪ್, ಓಲಿ ರಾಬಿನ್ಸನ್, ಜೋ ರೂಟ್, ಮಾರ್ಕ್ ವುಡ್.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ತವರಿನಂಗಳದಲ್ಲಿ ಪೂಜಾರ ಇಲ್ಲ

ಟೆಸ್ಟ್ ಕ್ರಿಕೆಟ್ ಪರಿಣತ ಚೇತೇಶ್ವರ್ ಪೂಜಾರ ಅವರು ತಂಡದಲ್ಲಿ ಇರದಿರುವುದು ರಾಜ್‌ಕೋಟ್ ಅಭಿಮಾನಿಗಳನ್ನು ಕಾಡಲಿದೆ. ತವರಿನಂಗಳದಲ್ಲಿ ಪೂಜಾರ ಅವರು ಆಡುತ್ತಿಲ್ಲ. ಕಳೆದ ಕೆಲವು ತಿಂಗಳುಗಳಿಂದ ಅವರು ಉತ್ತಮ ಲಯದಲ್ಲಿ ಇಲ್ಲದ ಕಾರಣಕ್ಕೆ ಭಾರತ ತಂಡದಲ್ಲಿ ಸ್ಥಾನ ಪಡೆದಿಲ್ಲ. ಅವರು ಸದ್ಯ ರಣಜಿ ಟ್ರೋಫಿ ಟೂರ್ನಿಯಲ್ಲಿ ಸೌರಾಷ್ಟ್ರ ತಂಡದಲ್ಲಿ ಆಡುತ್ತಿದ್ದಾರೆ. ಆದರೆ ಸೌರಾಷ್ಟ್ರದವರೇ ಆದ ಆಲ್‌ರೌಂಡರ್ ರವೀಂದ್ರ ಜಡೇಜ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ರೆಹಾನ್ ವೀಸಾ ಸಮಸ್ಯೆ ಪರಿಹಾರ: ಸ್ಟೋಕ್ಸ್ ಮೆಚ್ಚುಗೆ

ಇಂಗ್ಲೆಂಡ್ ತಂಡದ ಲೆಗ್‌ಸ್ಪಿನ್ನರ್ ರೆಹಾನ್ ಅಹಮದ್ ಅವರಿಗೆ ವೀಸಾ ನೀಡುವಲ್ಲಿ ಮೂಡಿದ್ದ ಗೊಂದಲವನ್ನು ಪರಿಹರಿಸಿದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮತ್ತು ಭಾರತ ಸರ್ಕಾರದ ಕ್ರಮಕ್ಕೆ ನಾಯಕ ಬೆನ್ ಸ್ಟೋಕ್ಸ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನ ಮೂಲದ ಯುವ ಆಟಗಾರ ರೆಹಾನ್ ಅವರುಇಂಗ್ಲೆಂಡ್ ತಂಡದಲ್ಲಿದ್ದಾರೆ. ಅವರಿಗೆ ಸಿಂಗಲ್ ಎಂಟ್ರಿ ವೀಸಾ ಇದ್ದ ಕಾರಣ ರಾಜ್‌ಕೋಟ್‌ಗೆ ಬರಲು ತೊಂದರೆಯಾಗಿತ್ತು. ಅದಕ್ಕಾಗಿ ಕೆಲವು ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಪೂರೈಸಬೇಕಿತ್ತು.

'ಎಲ್ಲ ಪ್ರಕ್ರಿಯೆಗಳು ಸಾಂಗವಾಗಿ ಮತ್ತು ವೇಗವಾಗಿ ನಡೆದವು. ಇಂದು ಬೆಳಿಗ್ಗೆ ಅವರಿಗೆ ವೀಸಾ ಲಭಿಸಿದೆ. ಇದು ನಮಗೆ ನಿರಾಳತೆ ತಂದಿದೆ. ಬಿಸಿಸಿಐ ಮತ್ತು ಭಾರತ ಸರ್ಕಾರ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿ ನೆರವು ನೀಡಿವೆ' ಎಂದು ಸ್ಟೋಕ್ಸ್ ಹೇಳಿದ್ದಾರೆ.

500ರ ಕ್ಲಬ್‌ನತ್ತ ಅಶ್ವಿನ್

ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರಿಗೆ ಟೆಸ್ಟ್ ಕ್ರಿಕೆಟ್‌ನಲ್ಲಿ 500 ವಿಕೆಟ್‌ಗಳ ಕ್ಲಬ್ ಸೇರಲು ಇನ್ನೊಂದು ಹೆಜ್ಜೆ ಮಾತ್ರ ಬಾಕಿ ಇದೆ.

97 ಟೆಸ್ಟ್‌ಗಳನ್ನು ಆಡಿರುವ 37 ವರ್ಷದ ಅಶ್ವಿನ್ ಅವರು ಐದನೂರರ ಗಡಿ ದಾಟಿದ ವಿಶ್ವದ ಒಂಬತ್ತನೇ ಬೌಲರ್ ಆಗಲಿದ್ದಾರೆ.

ಅನಿಲ್ ಕುಂಬ್ಳೆ ಅವರ ನಂತರ ಈ ಸಾಧನೆ ಮಾಡಿದ ಭಾರತದ ಸ್ಪಿನ್ನರ್ ಆಗಲಿದ್ದಾರೆ.


ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ —ಎಎಫ್‌ಪಿ ಚಿತ್ರಗಳು

'ಟಿ20 ವಿಶ್ವಕಪ್: ಭಾರತ ತಂಡಕ್ಕೆ ರೋಹಿತ್ ಶರ್ಮಾ ನಾಯಕ'

ರಾಜ್‌ಕೋಟ್ (ಪಿಟಿಐ): 'ಇದೇ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡಕ್ಕೆ ರೋಹಿತ್ ಶರ್ಮಾ ಅವರೇ ನಾಯಕರಾಗಿರುತ್ತಾರೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ. ಜೂನ್ ತಿಂಗಳಲ್ಲಿ ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ವಿಶ್ವಕಪ್ ಟೂರ್ನಿಯು ನಡೆಯಲಿದೆ.

'2023ರ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ನಮ್ಮ ತಂಡವು ಸೋತಿತ್ತು. ಎಲ್ಲ ಹತ್ತು ಪಂದ್ಯಗಳನ್ನು ಗೆದ್ದು ಫೈನಲ್ ತಲುಪಿದ್ದೆವು. ಕಪ್ ಗೆಲ್ಲದಿದ್ದರೂ ನಮ್ಮ ತಂಡವು ಅಭಿಮಾನಿಗಳ ಹೃದಯ ಜಯಿಸಿತ್ತು. 2024ರ ಟಿ20 ವಿಶ್ವಕಪ್ ಫೈನಲ್ ನಡೆಯಲಿರುವ ಬಾರ್ಬಡೋಸ್‌ನಲ್ಲಿ ನಾವು ಭಾರತದ ಕೀರ್ತಿಪತಾಕೆಯನ್ನು ಹಾರಿಸುತ್ತೇವೆಂದು ಇವತ್ತು ವಾಗ್ದಾನ ಮಾಡುತ್ತೇನೆ' ಎಂದು ಶಾ ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ಬುಧವಾರ ಸೌರಾಷ್ಟ್ರ ಕ್ರಿಕೆಟ್ ಕ್ರೀಡಾಂಗಣಕ್ಕೆ ನಿರಂಜನ್ ಶಾ ಅವರ ನಾಮಕರಣ ಮಾಡುವ ಕಾರ್ಯಕ್ರಮದಲ್ಲಿ ಜಯ್ ಶಾ ಮಾತನಾಡಿದರು. ಭಾರತದ ಕ್ರಿಕೆಟ್ ದಿಗ್ಗಜರಾದ ಸುನಿಲ್ ಗಾವಸ್ಕರ್, ಅನಿಲ್ ಕುಂಬ್ಳೆ, ಐಪಿಎಲ್ ಮುಖ್ಯಸ್ಥ ಅರುಣ್ ಧುಮಾಲ್, ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಆಗರಕರ್, ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ರೋಹಿತ್, ಮೊಹಮ್ಮದ್ ಸಿರಾಜ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್ ಹಾಜರಿದ್ದರು. ಈ ಹಿಂದೆ ಟಿ20 ಕ್ರಿಕೆಟ್ ತಂಡಕ್ಕೆ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿತ್ತು.

'ಬಿಸಿಸಿಐ ಕೇಂದ್ರೀಯ ಗುತ್ತಿಗೆ ಪಟ್ಟಿಯಲ್ಲಿರುವ ಆಟಗಾರರು ರಣಜಿ ಸೇರಿದಂತೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಕಡ್ಡಾಯವಾಗಿ ಆಡಬೇಕು. ಈ ವಿಚಾರದಲ್ಲಿ ವಿನಾಯಿತಿ ಇಲ್ಲ' ಎಂದು ಇದೇ ವೇಳೆ ಜಯ್ ಶಾ ತಿಳಿಸಿದರು.

ಭಾರತಕ್ಕೆ 2 ಚಿನ್ನ

ನವದೆಹಲಿ (ಪಿಟಿಐ): ಭಾರತದ ತಂಡಗಳು, ಸ್ಪೇನ್‌ನ ಗ್ರೆನೆಡಾದಲ್ಲಿ ನಡೆದ ಐಎಸ್‌ಎಸ್‌ಎಫ್ 10 ಮೀ. ವಿಶ್ವಕಪ್ ಟೂರ್ನಿಯ 10 ಮೀ. ಏರ್ ರೈಫಲ್ ಸ್ಪರ್ಧೆಯ ಮಿಶ್ರ ತಂಡ ವಿಭಾಗದಲ್ಲಿ ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಗೆದ್ದುಕೊಂಡವು.

ಮಹಿಳೆಯರ ಮತ್ತು ಪುರುಷರ ವೈಯಕ್ತಿಕ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದುಕೊಂಡಿದ್ದ ಇಶಾ ಅನಿಲ್ ತಕ್ಸಾಲೆ ಮತ್ತು ಉಮಾಮಹೇಶ ಮದ್ದಿನೇನಿ ಅವರನ್ನೊಳಗೊಂಡ ಮಿಶ್ರ ಡಬಲ್ಸ್ ತಂಡ ಮಂಗಳವಾರ ನಡೆದ ಫೈನಲ್‌ನಲ್ಲಿ ಸ್ವದೇಶದ ಅವನಿ ರಾಥೋಡ್ ಮತ್ತು ಅಭಿನವ್ ಶಾ ಜೋಡಿಯನ್ನು 16–8 ರಿಂದ ಸೋಲಿಸಿತು.

ದಿನದ ಕೊನೆಯಲ್ಲಿ ಭಾರತದ ದೇವಾನ್ಶಿ ಧಾಮಾ ಮತ್ತು ಲಕ್ಷಿತಾ, ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಜೂನಿಯರ್ ಸ್ಪರ್ಧೆಯಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿಯ ಪದಕ ಗೆದ್ದುಕೊಂಡರು.

ಭಾರತ ಈ ಕೂಟದಲ್ಲಿ ನಾಲ್ಕು ಚಿನ್ನ ಸೇರಿದಂತೆ 9 ಪದಕಗಳನ್ನು ಗೆದ್ದುಕೊಂಡಂತೆ ಆಗಿದೆ. ಈ ವಿಶ್ವಕಪ್‌ನಲ್ಲಿ 34 ಸದಸ್ಯರ ಭಾರತ ತಂಡ ಭಾಗವಹಿಸಿದೆ. ಜೂನಿಯರ್ ಮತ್ತು ಸೀನಿಯರ್ ವಿಭಾಗದ 10 ಮೀ. ಏರ್ ಗನ್ ಸ್ಪರ್ಧೆಗಳು ಮಾತ್ರ ಇಲ್ಲಿ ನಡೆಯುತ್ತಿದೆ.

ಚೆಸ್ ಒಲಿಂಪಿಯಾಡ್ ಜ್ಯೋತಿ ಹಸ್ತಾಂತರ

ನವದೆಹಲಿ (ಪಿಟಿಐ): ಮುಂದಿನ ಚೆಸ್ ಒಲಿಂಪಿಯಾಡ್ ಬುಡಾಪೆಸ್ಟ್‌ನಲ್ಲಿ (ಹಂಗೆರಿ) ನಡೆಯಲಿದ್ದು, ಈ ಪ್ರಕ್ರಿಯೆಯ ಭಾಗವಾಗಿ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರು ಇಲ್ಲಿ ಧ್ಯಾನ್‌ಚಂದ್ ಕ್ರೀಡಾಂಗಣದಲ್ಲಿ ಚೆಸ್ ಒಲಿಂಪಿಯಾಡ್ ಕ್ರೀಡಾ ಜ್ಯೋತಿಯನ್ನು ಬುಧವಾರ ಫಿಡೆ ಅಧ್ಯಕ್ಷ ಅರ್ಕಾಡಿ ಡ್ವೊರ್ಕೊವಿಚ್ ಮತ್ತು ಆತಿಥ್ಯ ವಹಿಸಲಿರುವ ನಗರದ ಪ್ರತಿನಿಧಿಗಳಿಗೆ ಹಸ್ತಾಂತರಿಸಿದರು.

ಚೆನ್ನೈನಲ್ಲಿ ಕಳೆದ ಜುಲೈ–ಆಗಸ್ಟ್‌ನಲ್ಲಿ 44ನೇ ಚೆಸ್ ಒಲಿಂಪಿಯಾಡ್ ನಡೆದಿತ್ತು. ಒಲಿಂಪಿಯಾಡ್‌ಗೆ ಪೂರ್ವಭಾವಿಯಾಗಿ ಮೊದಲ ಸಲ ಜ್ಯೋತಿ ಯಾತ್ರೆಯ ಸಂಪ್ರದಾಯ ನಡೆಸಲಾಗಿತ್ತು.

ಭಾರತದ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ಮತ್ತು ಹಂಗೆರಿಯ ಗ್ರ್ಯಾಂಡ್‌ಮಾಸ್ಟರ್ ಜುಡಿತ್ ಪೋಲ್ಗಾರ್ ಈ ಸಂದರ್ಭದಲ್ಲಿ ಹಾಜರಿದ್ದರು.





ಬೆಂಗಳೂರು ಓಪನ್ ಟೆನಿಸ್: ಅಗ್ರ ಶ್ರೇಯಾಂಕದ ನಾರ್ಡಿ ನಿರ್ಗಮನ

ಕ್ವಾರ್ಟರ್‌ಫೈನಲ್‌ಗೆ ರಾಮಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ರಾಮಕುಮಾರ್ ರಾಮನಾಥನ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕದ ಲೂಕಾ ನಾರ್ಡಿ ಅವರನ್ನು ಹಿಮ್ಮೆಟ್ಟಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನಗರದ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ ರಾಮಕುಮಾರ್ 1-6, 6-4, 6-4 ರಿಂದ ಇಟಲಿಯ 20 ವರ್ಷದ ಆಟಗಾರನಿಗೆ ಆಘಾತ ನೀಡಿದರು.

ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ 29 ವರ್ಷದ ರಾಮಕುಮಾರ್ ಒಂದು ಗಂಟೆ 33 ನಿಮಿಷ ನಡೆದ ಹೋರಾಟದ ಆರಂಭದಲ್ಲಿ ಸರ್ವ್‌ನಲ್ಲಿ ಲಯ ಕಂಡುಕೊಳ್ಳಲು ಪರದಾಡಿದರು. ಇದರ ಲಾಭವನ್ನು ಪಡೆದ ಎದುರಾಳಿ ಆಟಗಾರ ಮೊದಲ ಸೆಟ್ ಅನ್ನು ನಿರಾಯಾಸವಾಗಿ ಕೈವಶ ಮಾಡಿಕೊಂಡರು.

ಎರಡನೇ ಸೆಟ್‌ನಲ್ಲಿ ಪುಟಿದೆದ್ದ ರಾಮಕುಮಾರ್ ಶೇ 93ರಷ್ಟು ಮೊದಲ ಸರ್ವ್ ಪಾಯಿಂಟ್‌ಗಳನ್ನು ಗೆದ್ದು ಪಂದ್ಯದ ಮೇಲೆ ಹಿಡಿತ ಸಾಧಿಸಿ ಸಮಬಲ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲೂ ನಿಖರ ಆಟ ಪ್ರದರ್ಶಿಸಿದ ಭಾರತದ ಆಟಗಾರ ಎಂಟರ ಘಟ್ಟಕ್ಕೆ ಮುನ್ನಡೆದರು. ಮುಂದಿನ ಸುತ್ತಿನಲ್ಲಿ ಅವರು 9ನೇ ಶ್ರೇಯಾಂಕದ ಸಿಯೊಂಗ್‌ಚಾನ್ ಹಾಂಗ್ (ದಕ್ಷಿಣ ಕೊರಿಯಾ) ಅವರನ್ನು ಶುಕ್ರವಾರ ಎದುರಿಸಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ ಪೋಲೆಂಡ್‌ನ ಮಾಕ್ಸ್ ಕಸ್ನಿಕೋವ್ಸ್ಕಿ 6–3, 6–4ರಿಂದ ನಾಲ್ಕನೇ ಶ್ರೇಯಾಂಕದ ಬೆಂಜಮಿನ್ ಬೊಂಜಿ (ಫ್ರಾನ್ಸ್) ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಭಾರತದ ಮತ್ತೊಬ್ಬ ಆಟಗಾರ ಎಸ್.ಡಿ. ಪ್ರಜ್ವಲ್ ದೇವ್ ಅವರು ಮೊದಲ ಸುತ್ತಿನಲ್ಲಿ 3-6, 0-6 ರಿಂದ ಐದನೇ ಶ್ರೇಯಾಂಕದ ಆಡಮ್ ವಾಲ್ಟನ್ (ಆಸ್ಟ್ರೇಲಿಯಾ) ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನಲ್ಲಿ ರಾಮಕುಮಾರ್ ಮತ್ತು ಸಾಕೇತ್ ಮೈನೇನಿ ಜೋಡಿಯು ಎಂಟರ ಘಟ್ಟ ಪ್ರವೇಶಿಸಿತು. ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಈ ಜೋಡಿಯು 6-0, 7-6 (2) ಸ್ವದೇಶದ ಸಿದ್ಧಾಂತ್ ಬಂಥಿಯಾ ಮತ್ತು ಎಸ್.ಡಿ. ಪ್ರಜ್ವಲ್ ದೇವ್ ಅವರನ್ನು ಸೋಲಿಸಿತು.

ನಾಲ್ಕನೇ ಶ್ರೇಯಾಂಕದ ಭಾರತದ ರಿತ್ವಿಕ್ ಚೌಧರಿ ಮತ್ತು ನಿಕ್ಕಿ ಪೂಣಚ್ಚ ಜೋಡಿಯು 4-6, 4-6 ರಿಂದ ಮೊಯೆಜ್ ಎಚಾರ್ಗುಯಿ (ಟುನೀಶಿಯಾ) ಮತ್ತು ಓರಿಯೊಲ್ ರೋಕಾ (ಸ್ಪೇನ್) ಜೋಡಿಗೆ ಶರಣಾಯಿತು.

ಭಾರತದ ರಾಮಕುಮಾರ್ ರಾಮನಾಥನ್ —ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಪ್ರತಿಭಟನೆಯ ಎಚ್ಚರಿಕೆ ನೀಡಿದ ಸಾಕ್ಷಿ, ಪೂನಿಯಾ

ನವದೆಹಲಿ (ಪಿಟಿಐ): ವಿಶ್ವ ಕುಸ್ತಿ ಸಂಸ್ಥೆಯು (ಯುನೈಟೆಡ್ ವರ್ಲ್ಡ್ ರೆಸ್ಲಿಂಗ್) ಭಾರತ ಕುಸ್ತಿ ಫೆಡರೇಷನ್‌ನ ಮೇಲಿನ ಅಮಾನತು ವಾಪಸು ಪಡೆಯುವಲ್ಲಿ ಅಧ್ಯಕ್ಷ ಸಂಜಯ್ ಸಿಂಗ್ ಕುಟಿಲ ಮಾರ್ಗ ಅನುಸರಿಸಿದ್ದಾರೆ ಎಂದು ಒಲಿಂಪಿಕ್ ಪದಕ ವಿಜೇತ ಪೈಲ್ವಾನರಾದ ಸಾಕ್ಷಿ ಮಲಿಕ್ ಮತ್ತು ಬಜರಂಗ್ ಪೂನಿಯಾ ಬುಧವಾರ ಆರೋಪಿಸಿದ್ದಾರೆ.

ಕುಸ್ತಿ ಫೆಡರೇಷನ್ ವಿರುದ್ಧ ಪ್ರತಿಭಟನೆಯನ್ನು ಮತ್ತೆ ಆರಂಭಿಸುವುದಾಗಿ ಅವರು ಎಚ್ಚರಿಕೆ ನೀಡಿದ್ದಾರೆ. ಮಂಗಳವಾರವಷ್ಟೇ ಯುಡಬ್ಲ್ಯುಡಬ್ಲ್ಯು, ಭಾರತ ಕುಸ್ತಿ ಫೆಡರೇಷನ್ ಮೇಲಿನ ಅಮಾನತನ್ನು ವಾಪಸು ಪಡೆದಿತ್ತು. ಜೊತೆಗೆ, ಬ್ರಿಜಭೂಷಣ್ ಶರಣ್ ಸಿಂಗ್ ವಿರುದ್ಧ ದೀರ್ಘ ಹೋರಾಟ ನಡೆಸಿದ್ದ ಪೂನಿಯಾ, ಸಾಕ್ಷಿ ಮತ್ತು ವಿನೇಶಾ ವಿರುದ್ಧ ಯಾವುದೇ ರೀತಿಯಲ್ಲಿ ತಾರತಮ್ಯ ತೋರಿಸುವುದಿಲ್ಲ ಎಂದು ಲಿಖಿತವಾಗಿ ಖಾತರಿ ನೀಡಬೇಕೆಂದೂ ಸೂಚಿಸಿತ್ತು. ಫೆಡರೇಷನ್ ಚುನಾವಣೆ ನಡೆಸಲು ವಿಳಂಬ ಮಾಡಿದ್ದಕ್ಕೆ ಅಮಾನತು ಹೇರಲಾಗಿತ್ತು.

'ಅಮಾನತು ಹಿಂಪಡೆಯಲು ಸಂಜಯ್ ಸಿಂಗ್ ವಾಮಮಾರ್ಗ ಅನುಸರಿಸಿದ್ದಾರೆ' ಎಂದು ಸಾಕ್ಷಿ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ತಿಳಿಸಿದ್ದಾರೆ.

ಕಬಡ್ಡಿ: ಡೆಲ್ಲಿಗೆ ರೋಚಕ ಜಯ

ಕೋಲ್ಕತ್ತ: ಪ್ರಮುಖ ರೇಡರ್ ಅಶು ಮಲಿಕ್ (18 ಅಂಕ) ಅವರ ಚಾಣಾಕ್ಷ ಆಟದಿಂದ ದಬಾಂಗ್ ಡೆಲ್ಲಿ ತಂಡ, ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ತಮಿಳ್ ತಲೈವಾಸ್ ವಿರುದ್ಧ 45–43ರಲ್ಲಿ ಎರಡು ಅಂಕಗಳ ರೋಚಕ ಗೆಲುವು ದಾಖಲಿಸಿತು.

ಇದರೊಂದಿಗೆ ಒಟ್ಟಾರೆ 74 ಅಂಕಗಳಿಸಿದ ದಬಾಂಗ್ ಅಂಕಪಟ್ಟಿಯಲ್ಲಿ 3ನೇ ಸ್ಥಾನಕ್ಕೆ ಜಿಗಿಯಿತು. ಈ ಸೋಲಿನಿಂದ ತಲೈವಾಸ್ ಪ್ಲೇಆಫ್ ಅವಕಾಶ ಕ್ಷೀಣವಾಗಿದೆ. ತಲೈವಾಸ್ ಪರ ನರೇಂದರ್ 18 ಅಂಕ ಗಳಿಸಿದ ತಂಡದ ಹೋರಾಟದಲ್ಲಿ ಮಿಂಚಿದರು.

ಅಲ್ಪ ಸ್ಕೋರುಗಳ ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ 29–26 ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಗಳಿಸಿತು. ಪುಣೇರಿ ಪರ ಆಕಾಶ್ ಶಿಂಧೆ 10 ಪಾಯಿಂಟ್ಸ್ ಗಳಿಸಿದರು.

ಪಾಕ್ ಟೆನಿಸ್ ಆಟಗಾರ್ತಿ ಸಾವು

ಝೈನಾಬ್ ಅಲಿ ನಖ್ವಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಯುವ ಟೆನಿಸ್ ಆಟಗಾರ್ತಿ ಝೈನಾಬ್ ಅಲಿ ನಖ್ವಿ ಅಭ್ಯಾಸ ಮಾಡುವಾಗ ಕುಸಿದು ಸಾವನ್ನಪ್ಪಿದರು.

17 ವರ್ಷದ ಆಟಗಾರ್ತಿಗೆ ಹೃದಯಾಘಾತವಾಗಿರುವ ಬಗ್ಗೆ ಶಂಕೆ ವ್ಯಕ್ತಪಡಿಸಲಾಗಿದೆ. ಸೋಮವಾರ ರಾತ್ರಿ ಈ ಘಟನೆ ನಡೆದಿದೆ. ಮುಂಬರುವ ಐಟಿಎಫ್ ಜೂನಿಯರ್ ಟೂರ್ನಿಯಲ್ಲಿ ಆಡಲು ಅವರು ಸಿದ್ಧತೆ ನಡೆಸಿದ್ದರು. ಈ ಸಂದರ್ಭದಲ್ಲಿ ತಮ್ಮ ಕೋಣೆಯಲ್ಲಿದ್ದ ಅವರು ಸಾವಿಗೀಡಾದರು. ಪ್ರಜ್ಞಾಹೀನರಾದ ಝೈನಾಬ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಷ್ಟರಲ್ಲಿ ಅವರು ಕೊನೆಯುಸಿರೆಳೆದಿದ್ದರು. ಝೈನಾಬ್ ಜೊತೆಗೆ ಅವರ ಅಜ್ಜಿ ಕೂಡ ಕೋಣೆಯಲ್ಲಿದ್ದರು.

ಬ್ಯಾಡ್ಮಿಂಟನ್: ಭಾರತಕ್ಕೆ ಮಣಿದ ಚೀನಾ

ಶಾ ಆಲಂ (ಮಲೇಷ್ಯಾ): ಪಿ.ವಿ.ಸಿಂಧು ದೀರ್ಘಕಾಲದ ವಿರಾಮದ ನಂತರ ಅಂಕಣಕ್ಕೆ ಮರಳಿದರಲ್ಲದೇ ಗೆಲುವಿನ ಆರಂಭ ಮಾಡಿದರು. ಬ್ಯಾಡ್ಮಿಂಟನ್ ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಭಾರತ 3–2 ರಿಂದ ಪ್ರಬಲ ಚೀನಾ ತಂಡವನ್ನು ಸೋಲಿಸಿ ಅಚ್ಚರಿಯ ಫಲಿತಾಂಶ ನೀಡಿತು. ಭಾರತ ಪುರುಷರ ತಂಡ 4–1 ರಿಂದ ಹಾಂಗ್‌ಕಾಂಗ್ ಮೇಲೆ ಜಯಗಳಿಸಿತು.

ಡಬ್ಲ್ಯು ಗುಂಪಿನಲ್ಲಿ ಎರಡೇ ತಂಡಗಳಿದ್ದು ಭಾರತ ನಾಕೌಟ್‌ಗೆ ಅರ್ಹತೆ ಪಡೆಯುವುದು ಖಚಿತವಾಗಿತ್ತು. ಆದರೆ ಅಗ್ರ ಶ್ರೇಯಾಂಕದ ಚೀನಾ ಮೇಲೆ ಅಚ್ಚರಿಯ ಜಯಗಳಿಸಿ ಗುಂಪಿನಲ್ಲಿ ಅಗ್ರಸ್ಥಾನ ಪಡೆಯಿತು. ಗಾಯಾಳಾದ ಕಾರಣ ಕಳೆದ ಅಕ್ಟೋಬರ್‌ನಿಂದ ಸಿಂಧು ಪ್ರಮುಖ ಟೂರ್ನಿಗಳಲ್ಲಿ ಆಡಿರಲಿಲ್ಲ. ಬುಧವಾರ ಅವರು 21–17, 21–15 ರಿಂದ ತಮಗಿಂತ ಮೇಲಿನ ಕ್ರಮಾಂಕದ ಹಾನ್ ಯು ಅವರನ್ನು 40 ನಿಮಿಷಗಳಲ್ಲಿ ಮಣಿಸಿದರು. ಸಿಂಧು ಪ್ರಸ್ತುತ 11ನೇ ಕ್ರಮಾಂಕ ಪಡೆದಿದ್ದಾರೆ. ಯು ಎಂಟನೇ ಕ್ರಮಾಂಕ ಪಡೆದಿದ್ದಾರೆ.

ಪಿ.ವಿ. ಸಿಂಧು

ತನಿಶಾ ಕ್ರಾಸ್ಟೊ- ಅಶ್ವಿನಿ ಪೊನ್ನಪ್ಪ ಜೋಡಿ ನಂತರ 19–21, 16–21 ರಲ್ಲಿ ಲಿಯು ಶೆಂಗ್ ಶು- ತಾನ್ ನಿಂಗ್ ಅವರಿಗೆ ಮಣಿಯಿತು. ಅಶ್ಮಿತಾ ಚಾಲಿಹಾ 13–21, 15–21ರಲ್ಲಿ ವಿಶ್ವದ 9ನೇ ಕ್ರಮಾಂಕದ ಆಟಗಾರ್ತಿ ವಾಂಗ್ ಝಿ ಯಿ ಅವರಿಗೆ ಮಣಿದ ಕಾರಣ ಚೀನಾ 2–1 ರಲ್ಲಿ ಮುನ್ನಡೆ ಸಾಧಿಸಿತು. ಆದರೆ ಟ್ರೀಸಾ ಜೋಳಿ- ಗಾಯತ್ರಿ ಗೋಪಿಚಂದ್ ಜೋಡಿ 10–21, 21–18, 21–17 ರಿಂದ ಚೀನಾದ ಲಿ ಯಿ ಜಿಂಗ್- ಲುವೊ ಷು ಮಿನ್ ಅವರನ್ನು ಸೋಲಿಸಿದ್ದರಿಂದ ಸ್ಕೋರ್ ಸಮನಾಯಿತು. ನಿರ್ಣಾಯಕ ಸಿಂಗಲ್ಸ್ ಪಂದ್ಯದಲ್ಲಿ ಅನ್ಮೋಲ್ ಖಾರ್ಬ್ 22–20, 14–21, 21–18 ರಿಂದ ವು ಉವೊ ಯು ಅವರನ್ನು ಹಿಮ್ಮೆಟ್ಟಿಸಿದ್ದರಿಂದ ಭಾರತ 3–2ರಲ್ಲಿ ರೋಚಕ ಜಯ ಪಡೆಯಿತು.

ಪುರುಷರ ವಿಭಾಗದಲ್ಲಿ ಭಾರತ ತಂಡ 4–1 ರಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿ 'ಎ' ಗುಂಪಿನಿಂದ ನಾಕ್‌ಔಟ್‌ಗೆ ಅರ್ಹತೆ ಪಡೆಯಿತು. ಮೊದಲ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ನೇರ ಆಟಗಳಿಂದ ಎನ್ಜಿ ಕಾ ಲಾಂಗ್ ಅವರಿಗೆ ಸೋತರು. ಆದರೆ ನಂತರದ ಎಲ್ಲಾ ನಾಲ್ಕು ಪಂದ್ಯಗಳಲ್ಲಿ ಭಾರತದ ಆಟಗಾರರು ಜಯಭೇರಿ ಭಾರಿಸಿದರು. ಭಾರತ ಗುರುವಾರ ಅಗ್ರ ಶ್ರೇಯಾಂಕದ ಚೀನಾ ತಂಡವನ್ನು ಎದುರಿಸಲಿದ್ದು, ಗುಂಪಿನ ವಿಜೇತರ ನಿರ್ಧಾರವಾಗಲಿದೆ. ಮಂಗಳವಾರ ಹಾಂಗ್‌ಕಾಂಗ್ 0–5 ರಿಂದ ಚೀನಾ ತಂಡಕ್ಕೆ ಮಣಿದಿತ್ತು.